ಕವಿ ಅಲಭ್ಯೆರಿ : ಜೀವನ ಮತ್ತು ಸಾಹಿತ್ಯ

ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ಸಂಶೋಧಕರು :

ಶ್ರೀ ಆರ್. ಆರ್. ಕಮತಗಿ

ಕನ್ನಡ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು ತೇರದಾಳ
ತಾ: ಜಮಖಂಡಿ ಜಿ: ಬಾಗಲಕೋಟ

ನೋಂದಣಿ ಸಂಖ್ಯೆ : BRDSH-0010

ಮಾರ್ಗದರ್ಶಕರು :

ಡಾ. ಆರ್. ಬಿ. ಚಿಲಮಿ

ಕನ್ನಡ ಪ್ರಾಧ್ಯಾಪಕರು,
ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹಾರೂಗೇರಿ
ತಾ: ರಾಯಬಾಗ ಜಿ: ಬೆಳಗಾವಿ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ
ತಾ: ರಾಯಬಾಗ ಜಿ: ಬೆಳಗಾವಿ

ಮಾನ್ಯತೆ :
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೨

ಕವಿ ಅಲಬ್ಬೈರಿ : ಜೀವನ ಮತ್ತು ಸಾಹಿತ್ಯ

ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ಸಂಶೋಧಕರು :

ಶ್ರೀ ಆರ್. ಆರ್. ಕಮತಗಿ

ಕನ್ನಡ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು ತೇರದಾಳ
ತಾ: ಜಮಖಂಡಿ ಜಿ: ಬಾಗಲಕೋಟ

ನೋಂದಣಿ ಸಂಖ್ಯೆ : BRDSH-00100

ಮಾರ್ಗದರ್ಶಕರು :

ಡಾ. ಆರ್. ಬಿ. ಚಿಲಮಿ

ಕನ್ನಡ ಪ್ರಾಧ್ಯಾಪಕರು,
ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹಾರೂಗೇರಿ
ತಾ: ರಾಯಬಾಗ ಜಿ: ಬೆಳಗಾವಿ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ
ತಾ: ರಾಯಬಾಗ ಜಿ: ಬೆಳಗಾವಿ

ಮಾನ್ಯತೆ :
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೨

ಪ್ರಮಾಣ ಪತ್ರ

ಕವಿ ಅಲಖೈರಿ; ಜೀವನ ಮತ್ತು ಸಾಹಿತ್ಯ ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು **ಡಾ. ಆರ್. ಬಿ. ಚಿಲಮಿ** ಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 13-12-2012

ಆರ್.ಆರ್.ಕಮತಗಿ

ಕನ್ನಡ ಉಪನ್ಯಾಸಕರು

ಸರಕಾರಿ ಪ್ರಥಮ ದರ್ಜೆ ಕಾಲೇಜು ತೇರದಾಳ

ದೃಢೀಕರಣ ಪತ್ರ

ಆರ್.ಆರ್.ಕಮತಗಿ ಇವರು ಕವಿ ಅಲಖ್ಯೈರಿ; ಜೀವನ ಮತ್ತು ಸಾಹಿತ್ಯ ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವರು. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 12-12-2012

(ಸಹಿ)

ಡಾ.ಆರ್.ಬಿ.ಬಿಲಮಿ

ಕನ್ನಡ ಪ್ರಾಧ್ಯಾಪಕರು (ನಿವೃತ್ತ),
ಎಸ್.ವಿ.ಇ.ಎಸ್. ಕಲಾ ಮತ್ತು
ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ

ಅರಿಕೆ

ಸ್ನಾತಕೋತ್ತರ ಪದವಿ ಪಡೆದ ನಂತರ ಸಂಶೋಧನೆಯಲ್ಲಿ ತೊಡಗಬೇಕೆಂಬುದು ನನ್ನಾಸೆಯಾಗಿತ್ತು. ಸುಯೋಗ ಒದಗಿ ಬಂದಿರಲಿಲ್ಲ. ವಿದ್ಯಾ ಗುರು ಡಾ. ವ್ಹಿ. ಎಸ್ ಮಾಳಿಯವರ ಜೊತೆಗೆ ಚರ್ಚಿಸಿದಾಗ ನನ್ನನ್ನು ಪ್ರೋತ್ಸಾಹಿಸಿ ನನ್ನಾಸೆಗೆ ನೀರೆರೆದು ಪ್ರೋತ್ಸಾಹಿಸಿದರು. ಡಾ. ವ್ಹಿ. ಎಸ್ ಮಾಳಿ ಗುರುಗಳ ನಿರ್ದೆಶಕತ್ವದಲ್ಲಿ; ಡಾ: ಆರ್. ಬಿ. ಚಿಲಮಿ ಗುರುಗಳ ಮಾರ್ಗದರ್ಶನದಲ್ಲಿ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಮಾಡುವ ಸುವರ್ಣ ಅವಕಾಶ ಲಭಿಸಿತು.

ವಿಷಯ ಆಯ್ಕೆ ಗೊಂದಲದಲ್ಲಿದ್ದಾಗ ಮಾರ್ಗದರ್ಶಕರಾದ ಡಾ. ಆರ್.ಬಿ ಚಿಲಮಿಯವರು ಈ ನಾಡಿನ ಜನಪದ ಕವಿ ಅಲಬ್ಯೆರಿಯ ಹೆಸರನ್ನು ಸೂಚಿಸಿ ಅಧ್ಯಯನದಲ್ಲಿ ತೊಡಗಿಸಿದರು. ಮಹಾಪ್ರಬಂಧದ ರಚನೆಯಲ್ಲಿ ನನ್ನದೆ ಮೇಲುಗೈ ಅಲ್ಲ. ಒಂದು ಅದ್ಭುತ ಸಾಧನೆಯ ಹಿಂದೆ ಅನೇಕರ, ಅನೇಕ ಬಗೆಯ ಸಹಾಯ ಸಹಕಾರಗಳಿರುತ್ತವೆ. ಅವರನ್ನು ಈ ಸಂದರ್ಭದಲ್ಲಿ ನೆನೆಯುವುದು ಅವಶ್ಯ

ಆಧ್ಯಯನಕ್ಕೆ ಅನುವು ಮಾಡಿಕೊಟ್ಟು ನನ್ನನ್ನು ಅಧ್ಯಯನದಲ್ಲಿ ತೊಡಗಿಸಿದ ಶ್ರೀ ವೃಷಬೇಂಧ್ರ ಶಿಕ್ಷಣ ಸಂಸ್ಥೆಯ ಚೇರಮನರಾದ ಶ್ರೀ ಬಿ.ಆರ್. ದರೂರ (ಸಾಹೇಬರು) ಗಿರೀಶ ದರೂರ, ಹಾಗೂ ವಿಠ್ಠಲ ಉಪ್ಪಾರ ಅವರಿಗೂ ಚಿರಋಣಿ.

ಸಂಗ್ರಹಿತ ಅಲಬ್ಯೆರಿಯ ಸಾಹಿತ್ಯವನ್ನು ನೀಡಿ ಅಧ್ಯಯನಕ್ಕೆ ಸಹಕರಿಸಿದ ಅಲಭ್ಯೆರಿಯ ಮೊಮ್ಮಕ್ಕಳಾದ ದಯಾನಂದ ಸುಬ್ಬಣ್ಣವರ, ಅಣ್ಣಪ್ಪ ಸುಬ್ಬಣ್ಣವರ ಹಾಗೂ ಅವರ ಕುಟುಂಬದವರಿಗೂ ಅಭಿನಂದನೆಗಳು.

ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಿಗೂ, ಅಧ್ಯಯನಾಂಗದ ನಿರ್ದೇಶಕರಿಗೂ ಹಾಗೂ ಸಿಬ್ಬಂದಿ ಬಳಗಕ್ಕೂ ಕೃತಜ್ಞತೆಗಳು.

ಅಧ್ಯಯನದ ಉದ್ದಕ್ಕೂ ಮೌಲಿಕವಾದ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಮಾರ್ಗದರ್ಶಕರಾದ ಡಾ. ಆರ್. ಬಿ. ಚಿಲಮಿಯವರಿಗೆ ಅನಂತ ಪ್ರಣಾಮಗಳು. ನನ್ನ

ಪ್ರಬಂಧದ ಕುರಿತು ಕೇಳಿ ಪ್ರೋತ್ಸಾಹಿಸುತ್ತಿದ್ದ ಮಾರ್ಗದರ್ಶಕರ ಪತ್ನಿ ಸುವರ್ಣಾ ತಾಯಿಯವರಿಗೂ ನಮಸ್ಕಾರಗಳು.

ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಮಿತ್ರರಾದ ಸುರೇಶ ರಬಕವಿ, ಟಿ. ಎಸ್ ವಂಟಗೂಡಿ, ಎ.ಕೆ ಜಯವೀರ, ಶಂಭಾಜಿ ನಿಂಬಾಳ್ಕರ, ಜಿ. ಜಿ. ಕುಲಗೋಡ, ಮುರಗೇಶ ವಿಭೂತಿ, ಮಾಯಪ್ಪ ಪೂಜೇರಿ, ಮುಂತಾದ ಗೆಳೆಯರ ಸಹಾಯ ಹೇಳತೀರದು.

ಅಧ್ಯಯನದಲ್ಲಿ ಅನೇಕ ಸೂಕ್ತ ಸಲಹೆಗಳನ್ನು ನೀಡಿ ಪ್ರಬಂಧದ ರಚನೆಗೆ ಸಹಾಯ ಮಾಡಿದ ವಿದ್ವಾಂಸರಾದ ಡಾ. ವ್ಹಿ. ಎಸ್. ಮಾಳಿ, ಡಾ. ಅಶೋಕ ನರೋಡೆ, ಡಾ. ಗುರುಪಾದ ಮರೆಗುದ್ದಿ, ಡಾ. ಸಿ. ಮಂಜುನಾಥ, ಡಾ. ಜಿ ಕೆಂಪಣ್ಣವರ, ಪ್ರೊ॥ ಜ್ಯೋತಿ ಹೊಸೂರ ಹಾಗೂ ಸುರೇಶ ಹನಗಂಡಿ ಅವರಿಗೆ ಅನಂತ ನಮನಗಳು.

ಅಲಭ್ಯೆರಿಯ ಸಾಹಿತ್ಯವನ್ನು ನೀಡಿದ ಸಿದ್ದಪ್ಪ ನಾಗನೂರ, ರಾಮು ಒಡ್ಡೋಡಗಿ, ಸಿದ್ದಪ್ಪ ಹುಲಗಬಾಳಿ. ಅಪ್ಪಾಸಾಬ ಆಲಗೂರ, ಗುಲಾಬಸಾಬ ಜಮಾದಾರ, ಅವ್ವಣ್ಣ ಹಳ್ಳೂರ, ರಾಮು ರಬಕವಿ, ಸಿದ್ದಪ್ಪ ರಬಕವಿ, ಸತ್ಯಪ್ಪ ಮಾದರ, ಸಂಗಪ್ಪ ಗಾಳಿ ಹಾಗೂ ಪ್ರಶಾಂತ ಗೌಡರ ಇವರೆಲ್ಲರಿಗೂ ಅನಂತ ಅಭಿನಂದನೆಗಳು.

ಮಹಾಪ್ರಬಂಧದ ಸಿದ್ಧತೆಗೆ ಸಹಾಯ ಮಾಡಿದ ಭಾರತೀಯ ಜೀವ ವಿಮಾ ನಿಗಮ ಸಂಸ್ಥೆ, ರಾಯಬಾಗ ಶಾಖೆಯ ವ್ಯವಸ್ಥಾಪಕರಾದ ಶ್ರೀ ದುರ್ಗಣ್ಣವರ, ಅಧ್ಯಯನದ ಪ್ರಗತಿಯ ಬಗ್ಗೆ ಆಗಾಗ ಕೇಳಿ ಪ್ರೋತ್ಸಾಹಿಸಿದ ಅಭಿವೃದ್ಧಿ ಅಧಿಕಾರಿಗಳಾದ ಜಯಂತ ಬಗಲಿ ಹಾಗೂ ಅವರ ಕುಟುಂಬದವರನ್ನು ಮನವಾರೆ ಸ್ಮರಿಸುವೆ.

ಎಸ್. ವ್ಹಿ. ಇ. ಎಸ್ ಕಾಲೇಜಿನ ಗ್ರಂಥಪಾಲಕರಿಗೂ, ಸಿಬ್ಬಂದಿ ಬಳಗಕ್ಕೂ ಹಾಗೂ ಪ್ರೋತ್ಸಾಹಿಸಿ ಉತ್ಸಾಹ ತುಂಬಿದ ಈ ಸಂಸ್ಥೆಯ ಎಲ್ಲ ವಿದ್ಯಾಗುರುಗಳಿಗೂ ಅನಂತ ಕೃತಜ್ಞತೆಗಳು.

ಸರಕಾರಿ ಪ್ರಥಮ ದರ್ಜೆ ಕಾಲೇಜು ತೇರದಾಳ ಹಾಗೂ ಶ್ರೀ ಸಿದ್ಧೇಶ್ವರ ಪದವಿ ಮಹಾವಿದ್ಯಾಲಯ ಹಾರೂಗೇರಿ ಈ ಎಲ್ಲ ನನ್ನ ಸಹೋದ್ಯೋಗಿ ಬಳಗಕ್ಕೂ, ಪ್ರಾಚಾರ್ಯರಿಗೂ, ಚೇರಮನರ್‌ರಿಗೂ ಹಾಗೂ ವಿದ್ಯಾರ್ಥಿ ಸಮೂಹಕ್ಕೂ ಉಪಕೃತನಾಗಿದ್ದೇನೆ.

ಪ್ರೀತಿ ವಾತ್ಸಲ್ಯಗಳನ್ನು ಧಾರೆಯೆರೆಯುತ್ತಿರುವ ತಂದೆ ರಾಮಕೃಷ್ಣ ಹಾಗೂ ತಾಯಿ ಮುಕ್ತಾಬಾಯಿಯವರಿಗೂ, ಸಹೋದರರಾದ ಸುರೇಶ, ಚಂದ್ರಶೇಖರ, ಮಹಾದೇವ, ಸಹೋದರಿ

ಸುಶೀಲಾ, ಅತ್ತಿಗೆಯರಿಗೂ, ಪುಟ್ಟ – ಪುಟಾಣಿಗಳಿಗೂ ಹೃತ್ಪೂರ್ವಕ ನಮನಗಳು. ಚಿಕ್ಕವರಾದರೂ ಪ್ರಬಂಧದ ಬಗ್ಗೆ ಆಗಾಗ ಕೇಳಿ ಅಧ್ಯಯನದಲ್ಲಿ ತೊಡಗಿಸುತ್ತಿದ್ದ ಮಕ್ಕಳಾದ ವಿಶಾಲ, ಆಕಾಶ, ಹಾಗೂ ನನ್ನನ್ನು ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಹಕರಿಸಿ ಪತ್ನಿ ಪದ್ಮಾವತಿ ಅವರನ್ನು ಅದ್ಹೇಗೆ ಮರೆಯಲಾದೀತು.

ಮಹಾಪ್ರಬಂಧದ ರಚನೆಯ ಬಗ್ಗೆ ಆಗಾಗ ಕೇಳಿ ಪ್ರೋತ್ಸಾಹಿಸುತ್ತಿದ್ದ ಜಿನ್ನಪ್ಪಣ್ಣ ಅಸ್ಕಿ, ಸಿ.ಎಸ್. ಬೋಸ್ಲೆ, (ಇಂಜಿನಿಯರ್) ಡಾ॥ ಜಯಪಾಲ ಶಿರಹಟ್ಟಿ, ಬಾಪು ಜಮಾದಾರ, ಭುಜಪ್ಪಾ ಸುಬ್ಬಣ್ಣವರ, ಶ್ರೀರಾಮ ದರೂರ, ಪುಂಡಲೀಕ. ವೆಂ. ದಾಸರ, ಬಿ.ಅರ್. ಅರಕೇರಿ, ಚಿದಾನಂದ ಉಮರಾಣಿ, ಮಹಾವೀರ ತಮದಡ್ಡಿ, ಸುರೇಶ ಅಸ್ಕಿ, ದರ್ಮಣ್ಣಾ ನಡಟ್ಟಿ, ಸಂಜು ಪಾಟೀಲ, ಭರಮು ನಾಗನೂರ, ಆರ್.ಎಮ್ ಪಾಟೀಲ, ಕಲ್ಲೇಶ ಕುಂಬಾರ, ಹಾಗೂ ರವಿ ಕೊಕಟನೂರ ಇವರೆಲ್ಲರನ್ನು ನೆನೆಯುವೆ.

ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟ ಭವಾನಿ ಝುರಾಕ್ಸ್ ಸೆಂಟರ್ ಬೆಳಗಾವಿ, ಗಣೇಶ ಡಿ.ಟಿ.ಪಿ ಸೆಂಟರ್ ಹಾರೂಗೇರಿ ಮತ್ತು ಆಕರ್ಷಕವಾಗಿ ಪುಸ್ತಕವನ್ನು ಬೈಂಡ್ ಮಾಡಿದ ಸಾಯಿ ಡಿ.ಟಿ.ಪಿ. ಸೆಂಟರ್ ಬೆಳಗಾವಿ ಇವರೆಲ್ಲರ ಸಹಕಾರವನ್ನು ಸದಾ ಸ್ಮರಿಸುವೆ.

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವೈಧಾನಿಕತೆ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವೈಧಾನಿಕತೆ

ಬೆಳಗಾವಿ ಜಿಲ್ಲೆಯಲ್ಲಿ ಶಿಷ್ಟಪದ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯವೇ ಹೆಚ್ಚು ಶ್ರೀಮಂತವಾದದ್ದು. ಈ ಜನಪದ ಸಾಹಿತ್ಯಕ್ಕೊಂದು ಅಖಂಡ ಪರಂಪರೆಯಿದೆ. ಒಂದು ಅರ್ಥದಲ್ಲಿ ಕನ್ನಡ ಸಾಹಿತ್ಯ ಪರಂಪರೆಗೆ ಶ್ರೀಕಾರ ಹಾಕಿದ ಶ್ರೇಯಸ್ಸು ಜನಪದ ಸಾಹಿತ್ಯಕ್ಕೆ ಸಲ್ಲುವುದು. ಕ್ರಿ ಶ. ೭ ನೆಯ ಶತಮಾನದ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ಆ ಮೂರು ತ್ರಿಪದಿಗಳು ಜನಪದ ಸಾಹಿತ್ಯ ಚರಿತ್ರೆಯ ಅತ್ಯಂತ ಪ್ರಾಚೀನ ದಾಖಲೆಗಳು. ಜನಪದ ಸಾಹಿತ್ಯ ದಾಖಲೆಗೆ ಒಳಪಡದ ಮೌಖಿಕ ಪರಂಪರೆಯಲ್ಲಿ ಇರುವುದರಿಂದ ನಮಗೆ ಅದರ ಚರಿತ್ರೆ ತಿಳಿಯದು. ನಮ್ಮಲ್ಲಿ ಜನಪದ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಕೆಲಸ ನಡೆಯಲಿಲ್ಲ. ತೀರ ಹಿಂದಿನದನ್ನು ಬಿಡಿ, ಎಂ.ಎಸ್. ಲಠ್ಠೆಯವರ ತರುವಾಯವೂ ಅಂಥ ಪ್ರಯತ್ನಗಳು ಅಷ್ಟಾಗಿ ನಡೆಯಲಿಲ್ಲ. ಈಗ ಜನಪದ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಅಗತ್ಯವಿದೆ. ಹಿಂದಿನ ಶತಮಾನದಲ್ಲಿ ಅದನ್ನು ದಾಖಲಿಸುವ ಕಾರ್ಯ ಭರದಿಂದ ನಡೆಯಿತು. ಆಗ ಜನಪದ ಕವಿಗಳು, ಕಲಾವಿದರು, ಸಹೃದಯರು, ಸಾಕಷ್ಟು ಪ್ರಮಾಣದಲ್ಲಿದ್ದರು. ಕೈಗಾರೀಕರಣ, ಆರಂಭವಾದ ಮೇಲೆ ಕೃಷಿ ಚಟುವಟಿಕೆಗಳು ಯಾಂತ್ರಿಕವಾಗತೊಡಗಿದವು. ಜನಪದ ಸಾಹಿತ್ಯಕ್ಕೆ ಯಾಂತ್ರೀಕರಣ ಬಹುದೊಡ್ಡ ಹಿನ್ನಡೆ. ಅನಂತರದ ಜಾಗತೀಕರಣದ ಬಿರುಗಾಳಿಯಲ್ಲಿ ಜನಪದ ಸಾಹಿತ್ಯ ನೆಲಕಚ್ಚುವಷ್ಟು ತತ್ತರಿಸಿತು.

ಜನಪದ ಸಾಹಿತ್ಯ ರೂಪಗಳು ನೂರಾರು. ಕಾಲಕಾಲಕ್ಕೆ ಹೊಸ ಹೊಸ ರೂಪಗಳು ಹುಟ್ಟಿಕೊಂಡು ಜನರ ಬದುಕಿಗೆ ಸ್ಪಂದಿಸುತ್ತ ಬಂದಿವೆ. ಓವನಿಗೆ, ಒನಕೆವಾಡುಗಳಿಂದ ಮೊದಲುಗೊಂಡು ಇಂದಿನ ಧ್ವನಿ ತಟ್ಟೆ ಸಾಹಿತ್ಯದ ವರೆಗೆ ಹಲವು ರೂಮು, ಹಲವು ಗಂಧ. ಜನಪದ ಸಾಹಿತ್ಯ "ಹೆಸರಿಲ್ಲದವರ ಸಾಹಿತ್ಯವೆಂದು" ನಾವು ಹೆಮ್ಮೆಯಿಂದ ಹೇಳುತ್ತ ಆ ಕವಿಗಳನ್ನು ಅಜ್ಞಾತಗೊಳಿಸುತ್ತ ಬಂದೆವು. ಕ್ರಿ ಶ. ಸುಮಾರು ೧೮೦೦-೧೯೫೦ ರ ಅವಧಿಯ ನಡುವೆ ಅನೇಕ ಜನಪದ ಕವಿಗಳು ಇಲ್ಲಿದ್ದರು. ಲಾವಣಿ, ಭಜನೆ, ಕರ್ಬಲ್, ಕೋಲಾಟ ಪದ, ಹೋಳಿಪದ, ಹಂತೀಪದ, ಜೋಗುಳಪದ, ಸೋಬಾನಪದ, ತತ್ವಪದಗಳೊಂದಿಗೆ, ಬಯಲಾಟಗಳನ್ನು ರಚಿಸಿದ ಜನಪದ ಸಾಹಿತಿಗಳಿದ್ದರು. ಆದರೆ ಆ ಪ್ರತಿಭಾಶಾಲಿ ಕವಿಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಾಗಲಿಲ್ಲ. ಬೆಳಗಾವಿ ಕವಿ

ದ್ವಾರಪಾಲ, ಈತ ಕನ್ನಡ ಮತ್ತು ಮರಾಠಿ ಭಾಷಾ ಬಲ್ಲಿದ. ಶಮನೆವಾಡಿಯ ದೇವೇಂದ್ರತನಯ, ಅಲರವಾಡಿಯ ಬಾಹುಬಲಿ ಬುಡವಿ, ಬೈಲಹೊಂಗಲ ತಾಲೂಕಿನ ತಿಗಡೊಳ್ಳಿ ಗ್ರಾಮದ ಕವಿ ಭಿಷ್ಟಪ್ಪ ಹಾಗೂ ಕವಿ ಮಲಶೆಟ್ಟಿ...... ಇದೇ ಕಾಲಾವಧಿಯಲ್ಲಿ ರಾಯಬಾಗ ತಾಲೂಕಿನ ಹಾರೂಗೇರಿಯ ಅಲಭೈರಿ, ಅನಂತರ ಶಿರಗೂರಿನ ಕಲಸಿದ್ದ, ಮುಗಳಖೋಡದ ರಾಚಯ್ಯ, ಪರಮಾನಂದವಾಡಿಯ ಮೀರಾಸಾಬ ಮುಲ್ಲಾ, ಜಲಾಲಪುರದ ರಾಚೋಟಿ, ಶಿರಗೂರದ ಸಿದ್ಧಲಿಂಗ ವಸ್ತಾದ, ಕುಡಚಿಯ ಶಂಭೈರಿ, ಸವದತ್ತಿಯ ಸಿದ್ದಪ್ಪ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ನಿಡಗುಂದಿಯ ಯಮನಪ್ಪ ಛಲವಾದಿ, ಅಲಖನೂರಿನ ರಾಮು ಪೂಜೇರಿ ಮುಂತಾದ ಜನಪದ ಕವಿಗಳು ಜೀವಿಸಿದ್ದರು. ಇವರಲ್ಲಿ ಹಾರೂಗೇರಿ ಅಲಭೈರಿ, ಜಲಾಲಪುರದ ರಾಚೋಟಿ, ಶಿರಗೂರದ ಕಲಸಿದ್ದ ಮೊದಲ ದರ್ಜೆಯ ಜನಪದ ಕವಿಗಳು. ರಾಚೋಟಿ ಲಾವಣಿಕವಿ, ಕಲಸಿದ್ದ ಅನುಭಾವ ಕವಿ, ಅಲಭೈರಿ ಲಾವಣಿ, ಚೌಡಕಿ, ಕರ್ಬಲ್, ಅಭಂಗ, ಡೊಳ್ಳಿನ ಹಾಡು, ತತ್ವಪದ (ಭಜನೆ) ಹಾಗೂ ಬಯಲಾಟಗಳನ್ನು ರಚಿಸಿದ ವರಕವಿ. ಆತನ ಕಾವ್ಯ ಶಕ್ತಿಯ ಬಗ್ಗೆ ಅನೇಕ ದಂತಕಥೆಗಳು ಬಾಗೆನಾಡಿನಲ್ಲಿ ಪ್ರಚಲಿತದಲ್ಲಿವೆ.

೧.೧ ಅಧ್ಯಯನದ ಉದ್ದೇಶ:

ಅಲಭೈರಿ ಸಾಹಿತ್ಯ ನಾಡಿನ ತುಂಬ ಚದುರಿ ಹೋಗಿದೆ. ಅದೆಲ್ಲವನ್ನು ಸಂಕಲಿಸುವುದು, ವರ್ಗೀಕರಿಸುವುದು ಅಧ್ಯಯನಕ್ಕೊಂದು ಸವಾಲು. ಆತನ ಸಾಹಿತ್ಯದ ಶೋಧನೆಯೇ ಒಂದು ಸಂಶೋಧನೆ. ಎಲ್ಲೊ ಕೆಲವರ ನಾಲಿಗೆಯ ಮೇಲೆ ನಿಕ್ಷಿಪ್ತಗೊಂಡಿರುವ ಆ ಸಾಹಿತ್ಯವನ್ನು ಹುಡುಕುವದು ಸುಲಭವಲ್ಲ. ಡೊಳ್ಳಿನ ಹಾಡುಗಾರರು, ಕರ್ಬಲ್ ಮೇಳದವರು, ಚೌಡಕಿಯವರು, ಭಜನೆಯವರನ್ನು ಬೆನ್ನು ಹತ್ತಿ ಅಲಭೈರಿಯ ಸಾಹಿತ್ಯ ಶೋಧಿಸಿ ಅಲಭೈರಿಯ ಅದ್ವೈತದ ನವನೀತವನ್ನು ಗುರುತಿಸುವ ಒಂದು ಪ್ರಯತ್ನ ಈ ಮಹಾಪ್ರಬಂಧ. ಅವನ ಸಾಹಿತ್ಯವನ್ನು ಒತ್ತಟ್ಟಿಗೆ ತಂದು ವಿಮರ್ಶೆಗೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶ.

೧.೨ ಅಧ್ಯಯನದ ಅಗತ್ಯ :

ರಾಯಬಾಗದ ಕವಿ ರಾಜಾದಿತ್ಯ ಬೆಳಗಾವಿ ಜಿಲ್ಲೆಯ ಮೊದಲ ಪ್ರಾಚೀನ ಕವಿ. ಆತನ ವ್ಯವಹಾರಗಣಿತ ಈ ಜಿಲ್ಲೆಯ ಸಾಹಿತ್ಯ ಪರಂಪರೆಯ ಮೊದಲ ಕೃತಿ. ಈತನ ಕಾಲವನ್ನು ಕ್ರಿಶ ೧೧೯೦ ವೆಂದು "ಕರ್ನಾಟಕ ಕವಿ ಚರಿತೆ"ಕಾರರು ಗುರುತಿಸುತ್ತಾರೆ. ಈತ

ಜೈನಧರ್ಮಿ. ಗಣಿತಶಾಸ್ತ್ರದ ಕೋವಿದ. ವ್ಯವಹಾರ ಗಣಿತ, ಕ್ಷೇತ್ರ ಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರ ಹಸುಗೆ, ಜೈನ ಗಣಿತಸೂತ್ರ, ಟೀಕೋದಾರ ಹರಣ, ಇವು ಈತನ ಪ್ರಸಿದ್ಧ ಗಣಿತ ಗ್ರಂಥಗಳು. ಈತನಿಗೆ ಹಲವಾರು ಹೆಸರುಗಳುಂಟು. ಈತನನ್ನು ರಾಜವರ್ಮ, ಭಾಸ್ಕರ, ಬಾಚ, ಬಾಚಯ, ಬಾಚಿರಾಜ ಎಂದು ಕರೆಯುತ್ತಿದ್ದರು.

ಈತನ ಹೆಂಡತಿ ಕನಕಮಾಲೆ "ಕೊಂಡಿಮಂಡಲಕ್ಕನುಪಮರತ್ನಮಂಡನಮೆನಿಪ್ಪ ಪೂವಿನ ಬಾಗೆ"[೧] ಎಂಬ ಹೇಳಿಕೆಯಿಂದ ರಾಜಾದಿತ್ಯ ಹೂವಿನಬಾಗೆ (ರಾಯಬಾಗ)ಯ ಮೂಲ ನಿವಾಸಿ ಎಂದು ತಿಳಿಯುತ್ತದೆ.

> "ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ।
> ವನಿಪಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ॥
> ತನುಮತ್ತಾ ಭೋಗಮಂ(?) ಬಾಹುಬಲಿಭರತಾತ್ಮೇಶ್ವರರ್ ತಾಮೆನಲ್ ಬಾ।
> ಪೆನೆ ರಾಜಾದಿತ್ಯನೇಂ ಧನ್ಯನೋ ವಿಶದಯಶಂ ಸದ್ಗುಣಾಂಭೋಧಿಚಂದ್ರಂ।"[೨]

ರಾಜಾದಿತ್ಯನನ್ನು ಹೊರತು ಪಡಿಸಿದರೆ ೧೨ ನೇ ಶತಮಾನದಿಂದ ಮೊದಲುಗೊಂಡು ೧೯ ನೆಯ ಶತಮಾನದ ವರೆಗೆ ಯಾವ ಕವಿ ಅಥವಾ ಕೃತಿಯ ಉಲ್ಲೇಖ ಬಾಗೆನಾಡಿನ ಚರಿತ್ರೆಯಲ್ಲಿ ಸಿಗುವುದಿಲ್ಲ. ಆದರೆ ನೂರಾರು ಜನಪದ ಕವಿಗಳು ಕಳೆದು ಹೋಗಿರಬಹುದು. ಅವರು ಚರಿತ್ರೆಯಲ್ಲಿ ದಾಖಲಿತಗೊಳ್ಳದೆ ಹೋದವರು. ಅಕ್ಷರ ಚರಿತ್ರೆಯನ್ನು ಕಟ್ಟಿದರೆ ಧ್ವನಿ ವರ್ತಮಾನವನ್ನು ರೂಪಿಸುತ್ತದೆ. ಜನಪದ ಕವಿಗಳು ಅಕ್ಷರಗಳ ಮೂಲಕ ಚರಿತ್ರೆಯನ್ನು ಕಟ್ಟಲಿಲ್ಲ. ಧ್ವನಿಯ ಮೂಲಕ ವರ್ತಮಾನವನ್ನು ರೂಪಿಸಿದವರು. ಅವರಿಗೆ ಚರಿತ್ರೆಯನ್ನು ಕಟ್ಟುವ ಅಗತ್ಯವಿರಲಿಲ್ಲ. ಅವರು ಅಕ್ಷರಗಳಿಂದ ವಂಚಿತಗೊಂಡ ನಿರಕ್ಷರಿಗಳು. ಬದುಕು ಹಾಗೂ ಸಾಹಿತ್ಯವನ್ನು ಸಮನ್ವಯಗೊಳಿಸಿದವರು. ಹೀಗಾಗಿ ಅವರೆಲ್ಲ ಇತಿಹಾಸಕ್ಕೆ ದಕ್ಕದೆ ಹೋದವರು. ಇತಿಹಾಸಕ್ಕೆ ದಕ್ಕದೆ ಹೋದ ಆ ಜನಪದ ಕಾವ್ಯ ಪ್ರತಿಭೆಗಳ ಪರಂಪರೆಯನ್ನು ಕಟ್ಟಿಕೊಡುವುದು ಈ ಕಾಲದ ಅಗತ್ಯಗಳಲ್ಲಿ ಒಂದು. ಆ ಪ್ರಜ್ಞೆಯ ಒಂದು ಮುಖ ಈ ಅಧ್ಯಯನದ ಅಗತ್ಯವನ್ನು ರೂಪಿಸುತ್ತದೆ.

೧.೩. ಅಧ್ಯಯನದ ಸಮೀಕ್ಷೆ :

ಬಾಗೆನಾಡು ಜಾನಪದದ ಕನ್ನೆಲ. ಇಲ್ಲಿ ಹಲವಾರು ಜಾನಪದ ಚಟುವಟಿಕೆಗಳು ನಡೆದಿರುವುದನ್ನು ಕಾಣುತ್ತೇವೆ. ಈ ಅಧ್ಯಯನದ ಸಮೀಕ್ಷೆಯನ್ನು ೨ ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ. ಅವು

೧] ಬಾಗೆನಾಡಿನ ಜಾನಪದದ ಅಧ್ಯಯನ.

೨] ಕವಿ ಅಲಭೈರಿ ಹಾಗೂ ಅವನ ಸಾಹಿತ್ಯದ ಅಧ್ಯಯನ.

ಬಾಗೆನಾಡಿನ ಜಾನಪದ ಸಾಹಿತ್ಯದ ಕುರಿತು ಮೊದಲು ಅಧ್ಯಯನ ಆರಂಭಿಸಿದವರು ಪ್ರೊ॥ ಜ್ಯೋತಿ ಹೊಸೂರ. ಅವರು ಜನಪದ ವಿದ್ವಾಂಸರು. ರಾಯಬಾಗ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಪ್ರಿನ್ಸಿಪಾಲರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಜನಪದ ಸಾಹಿತ್ಯದ ಮೇಲೆ ಅವರದು ಅನನ್ಯ ಪ್ರೀತಿ. ಬಾಗೆನಾಡಿನ ಶ್ರೀಮಂತ ಜನಪದ ಕ್ಷೇತ್ರ ಕಂಡು ಮನಸೋತವರು. ಜ್ಯೋತಿ ಹೊಸೂರ ಎರಡು ಜನಪದ ಸಾಹಿತ್ಯ ಸಂಗ್ರಹವನ್ನು ಹೊರತಂದಿದ್ದಾರೆ.

೧] "ಹೆಸರು ಹೇಳತೀನಿ ಒಡಪಕಟ್ಟಿ" – ಒಡಪುಗಳ ಸಂಗ್ರಹ. ಇದು ಒಡಪುಗಳ ವಿಷಯಕ್ಕೆ ಸಂಬಂಧಿಸಿ ಪ್ರಕಟಗೊಂಡ ಮೊದಲ ಕೃತಿ.

೨] "ಬೆರಸಿ ಇಟ್ಟೇನ ಬೆಲ್ಲ ನೆನೆಗಡಲಿ" ಇದು ಜನಪದ ತ್ರಿಪದಿ ಸಂಗ್ರಹ. ಈ ಎರಡು ಕೃತಿಗಳ ಮೂಲಕ ಬಾಗೆನಾಡಿನ ಶ್ರೀಮಂತ ಜನಪದ ಸಾಹಿತ್ಯದ ಅಧ್ಯಯನಕ್ಕೆ ಪ್ರೊ॥ ಜ್ಯೋತಿ ಹೊಸೂರ ಶ್ರೀಕಾರ ಹಾಕಿದಂತಾಯಿತು. ಹೊಸೂರರ ತ್ರಿಪದಿ ಸಂಗ್ರಹ ಒಟ್ಟು ೩೮೩ ತ್ರಿಪದಿಗಳನ್ನು ಒಳಗೊಂಡಿದೆ. ಇದು ಹೊಸೂರರ ಪ್ರಥಮ ಸಂಗ್ರಹ ಕೃತಿ. ಇದರಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳ ನೋವು, ನಲಿವು, ಅಂತಃಕರಣಗಳ ಮಿಡಿತ ಹಾಸುಹೊಕ್ಕಾಗಿದೆ.

"ಹೆಸರ ಹೇಳ್ತಿನಿ ಒಡಪಕಟ್ಟಿ" ಇದು ಹೊಸೂರರ ಎರಡನೆಯ ಸಂಪಾದನಾ ಕೃತಿ. ಇದರಲ್ಲಿ ಹೆಣ್ಣು ಮಕ್ಕಳ ಒಡಪು ಹಾಗೂ ಗಂಡು ಮಕ್ಕಳ ಒಡಪು ಎಂದು ವಿಂಗಡಿಸಲಾಗಿದೆ. ಇದರಲ್ಲಿ ಒಟ್ಟು ೧೯೯ ಒಡಪುಗಳಿದ್ದು ಹಳ್ಳಿಗರು ದಾಂಪತ್ಯ ಪ್ರೇಮವನ್ನು ಹೇಗೆ ವಿಭಿನ್ನ ರೀತಿಯಲ್ಲಿ ಅನುಸರಿಸುತ್ತಿದ್ದರು ಎಂಬುದಕ್ಕೆ ಈ ಕೃತಿ ಪ್ರಮುಖ ಆಕರ.

ಅನಂತರ ಪ್ರೊ॥ ಜ್ಯೋತಿ ಹೊಸೂರ "ಡೊಳ್ಳಿನ ಹಾಡುಗಳ ಸಮೀಕ್ಷೆ" ಎಂಬ ವಿಮರ್ಶಾ ಕೃತಿಯನ್ನು ೧೯೯೦ ರಲ್ಲಿ ಪ್ರಕಟಿಸಿದ್ದಾರೆ. ಇದು ೫ ಮೌಖಿಕ ಲೇಖನಗಳನ್ನು ಒಳಗೊಂಡಿದ್ದು ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಹಿನ್ನಲೆ, ಅದರ ಜಾನಪದ ನೆಲೆ, ಜನಪದ ಹಾಡುಗಳೊಂದಿಗೆ ಡೊಳ್ಳಿನ ಹಾಡುಗಳುಳ್ಳ ಪ್ರಕಟಣೆಗಳು, ಸಂಪೂರ್ಣ ಡೊಳ್ಳಿನ ಹಾಡುಗಳುಳ್ಳ ಪ್ರಕಟಣೆಗಳು ಹಾಗೂ ಡೊಳ್ಳಿನ ಹಾಡುಗಳ ಕುರಿತು ಬರಹಗಳ ಪರಿಶೀಲನೆ ಹೀಗೆ ಲೇಖನಗಳಿವೆ.

'ಜಾತಿಗಾರರ ಜಾತಕ' ಇದೊಂದು ಸಂಶೋಧನಾ ಕೃತಿ. ಹೊಸೂರರು ಒಂದು ಜನಾಂಗದ ಜೀವನದ ಸ್ಥಿತಿಗತಿಯನ್ನು ಚಿತ್ರಿಸಿರುವ ಈ ಕೃತಿ ಚಿಕ್ಕದಾದರೂ ಒಂದು ಜನಾಂಗದ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಹೊಸೂರರ ಮತ್ತೊಂದು ಸಂಶೋಧನಾ ಕೃತಿ "ಕನಕದಾಸರ ಜೀವನ ವಿಚಾರ" ಇದು ೧೯೮೩ ರಲ್ಲಿ ಪ್ರಕಟಗೊಂಡಿದ್ದು, ಕನಕದಾಸರ ಉತ್ಕೃಷ್ಟವಾದ ಕೃತಿಗಳಲ್ಲಿಯೇ ಇದು ಒಂದಾಗಿದೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯದು ಕನಕದಾಸರ ಬರಹ, ಅನಂತರದ್ದು ಆತನ ಬದುಕಿನ ವಿವಿಧ ಸ್ತರಗಳನ್ನು ಒಳಗೊಂಡಿದೆ.

ಹೀಗೆ ಪ್ರೊ॥ ಹೊಸೂರರು ಜಾನಪದ ವಿದ್ವಾಂಸರಾಗಿ, ವಿಮರ್ಶೆ, ಸಂಶೋಧನೆ, ವೈಚಾರಿಕ ಚಿಂತನೆ, ಸಂಪಾದನಕಾರರಾಗಿ ವಿಭಿನ್ನ ರೀತಿಯ ಸಾಹಿತ್ಯ ಕೃಷಿಗೈದಿದ್ದಾರೆ.

ಬಿ. ಎ. ಜಂಬಗಿಯವರು ಸಹ ಜನಪದ ಸಾಹಿತ್ಯ ಪ್ರೇಮಿಗಳು. ಪ್ರೊ॥ ಜ್ಯೋತಿ ಹೊಸೂರರ ಸಹದ್ಯೋಗಿ ಹಾಗೂ ಒಡನಾಡಿಗಳು. ಇವರ ಪ್ರೇರಣೆಯಿಂದ 'ಗೆಜ್ಜಿ ನುಡಿದಾವ' ಎಂಬ ತ್ರಿಪದಿ ಸಂಗ್ರಹವನ್ನು ಸಂಪಾದಿಸಿದ್ದಾರೆ. ಇದರಲ್ಲಿ ೪೪೯ ತ್ರಿಪದಿಗಳಿದ್ದು ಬಾಗೆನಾಡಿನಲ್ಲಿ ಪ್ರಕಟಗೊಂಡ ದ್ವಿತೀಯ ತ್ರಿಪದಿ ಸಂಗ್ರಹ. ಇದು ೧೫ ಭಾಗಗಳಲ್ಲಿ ವಿಂಗಡಣೆಗೊಂಡಿರುತ್ತದೆ. ಬಾಲಕೃಷ್ಣ ಜಂಬಗಿ ಅವರ ೧೫ ವರ್ಷದ ಫಲಶ್ರುತಿ ಈ ಕೃತಿ. ಈ ಸಂಗ್ರಹದಿಂದ ರಾಯಬಾಗ ತಾಲೂಕಿನ ಶ್ರೀಮಂತ ಜನಪದ ಸಾಹಿತ್ಯ ಪರಿಚಯವಾಗುತ್ತದೆ.

ಡಾ. ಶ್ರೀರಾಮ ಇಟ್ಟಣ್ಣವರ 'ಹಾಲುಕೆನೆ' ಎಂಬ ಕೃತಿಯಲ್ಲಿ ಡಾ. ವ್ಹಿ. ಎಸ್. ಮಾಳಿಯವರ ಅಲಖನೂರ ಗ್ರಾಮದ ಶ್ರೀ ಕರೆಸಿದ್ದೇಶ್ವರ ದೇವಾಲಯ ಕುರಿತು ಒಂದು ಲೇಖನವಿದೆ. ಹಾಲುಮತದವರು ತಮ್ಮ ಅಧಿದೈವವಾಗಿ ಕರಸಿದ್ದನನ್ನು ಆರಾಧಿಸುತ್ತ ಬಂದಿರುವುದನ್ನು ಕಾಣುತ್ತೇವೆ.

ಶಿರಗೂರಿನ ಗುರುಪಾದ ಬಾಬು ವಾಳಕಿಯವರು ಕಲ್ಮೇಶನ ಶಿಷ್ಯರು. ಇವರು ಸಂಗ್ರಹಿಸಿದ ಕಲ್ಮೇಶನ ತತ್ವಪದಗಳನ್ನು ಡಾ. ಪಿ. ಜಿ. ಕೆಂಪಣ್ಣವರ "ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ" ಎಂಬ ಶೀರ್ಷಿಕೆ ಅಡಿಯಲ್ಲಿ ತತ್ವಪದಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ವಿಷ್ಣು ಶಿಂಧೆಯವರು "ಚಿಂಚಲಿ ಮಾಯವ್ವ"ನ ಕುರಿತು ಅಧ್ಯಯನ ಮಾಡಿದ್ದಾರೆ. ತುಕಾರಾಮ ಶಂಕರ ವಂಟಗೂಡಿ ಅವರು "ರಾಯಬಾಗ ತಾಲೂಕಿನ ಹಾಲುಮತ ದೈವಗಳು" ಹಾಗೂ ಶೋಭಾ ಕೊಕಟನೂರ "ಬಾಗೆ ಪರಿಸರದ ಸಾಹಿತ್ಯ" ಎಂಬ ವಿಷಯವನ್ನು ಆಯ್ದುಕೊಂಡು ಕ್ರಮವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿ ಪಡೆದುಕೊಂಡಿದ್ದಾರೆ.

ಡಾ. ಸಿದ್ದು ಹುಲ್ಲೋಳಿ ಇವರು "ಬಾಗೆನಾಡಿನ ಜನಪದ ಕಲಾವಿದರು" ಎಂಬ ವಿಷಯ ಕುರಿತು ಇತ್ತೀಚೆಗೆ ಹಂಪಿ ಕನ್ನಡ ವಿದ್ಯಾಲಯಕ್ಕೆ ಮಹಾ ಪ್ರಬಂಧವನ್ನು ಮಂಡಿಸುವುದರ ಮೂಲಕ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ಇಲ್ಲಿ ಹುಲ್ಲೋಳಿಯವರು '೮' ಅಧ್ಯಾಯಗಳನ್ನು ಮಾಡಿಕೊಂಡು ಅಧ್ಯಯನದ ಉದ್ದೇಶ, ವ್ಯಾಪ್ತಿ, ಹೇಳುತ್ತ ಬಾಗೆನಾಡಿನ ಸಾಂಸ್ಕೃತಿಕ ವೈವಿಧ್ಯತೆ, ಬಾಗೆನಾಡಿನ ಜನಪದ ಕಲೆಗಳು, ಕಲಾವಿದರು, ಕಲಾವಿದರ ಸಾಮಾಜಿಕ ಸ್ಥಾನ – ಮಾನಗಳು, ಆರ್ಥಿಕ ಸ್ಥಿತಿ–ಗತಿಗಳು ಹಾಗೂ ಅವರ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ.

ಡಾ. ಬಿ. ಎಂ. ನೇಗಿನಾಳರು ಹಂಪಿ ಕನ್ನಡ ವಿಶ್ವ ವಿದ್ಯಾಲಯದಿಂದ ಪ್ರಕಟಿಸಿದ "ನೇಗಿನಹಾಳರ ಪ್ರಬಂಧಗಳು" ಕೃತಿಯಲ್ಲಿ "ತತ್ವಪದಕಾರ ಅಲಭ್ಯೆರಿ" ಎಂಬ ಲೇಖನವಿದೆ. ಈ ಲೇಖನದಲ್ಲಿ ನೇಗಿನಹಾಳರು ಕವಿ ಅಲಭ್ಯೆರಿ ಕುರಿತು ಮಾಹಿತಿಯನ್ನು ಕಲೆಹಾಕಿದ್ದಾರೆ. ಇದು ಅಲಭ್ಯೆರಿ ಕುರಿತು ಪ್ರಕಟಗೊಂಡ ಪ್ರಥಮ ಲೇಖನವಾಗಿದೆ.

ಶಿವಾನಂದ ಭಾರತಿ ಸ್ವಾಮೀಜಿ ಅವರು ೧೯೮೧ ರಲ್ಲಿ "ಶ್ರೀ. ಚನ್ನವೃಷಭೇಂದ್ರ ಸ್ತೋತ್ರ ಮಾಲಾ" ಗ್ರಂಥವನ್ನು ಸಂಪಾದಿಸಿದ್ದಾರೆ. ಇಲ್ಲಿ ಕವಿ ಅಲಭ್ಯೆರಿ ಚನ್ನವೃಷಭೇಂದ್ರನನ್ನು ಸ್ತುತಿಸಿದ ಪದಗಳಿವೆ.

ಅಲಭ್ಯೆರಿ ವಿರಚಿತ "ಜನಭಕ್ತಿಗೀತೆಗಳು" ಎಂಬ ಕೃತಿಯನ್ನು ರಾಮು ಅಲ್ಲಪ್ಪ ಸುಬ್ಬಣ್ಣವರ ೧೯೮೯ ರಲ್ಲಿ ಸಂಪಾದಿಸಿದ್ದಾರೆ. ಪ್ರಕಾಶಕರು, ಸಿದ್ದಪ್ಪ ವೆಂಕಪ್ಪ ನಾಗನೂರ. ಹೆಸರೆ ಸೂಚಿಸುವಂತೆ ಇಲ್ಲಿ ಜನಸ್ತುತಿ ಹಾಸುಹೊಕ್ಕಾಗಿದ್ದು; ಮಂಗಳಾರತಿ, ಜೋಗುಳ, ಲಾವಣಿ ಹಾಗೂ ಸಖಿ ಪದಗಳು ಮಿಶ್ರಣಗೊಂಡಿವೆ. ಇದು ಅಲಭ್ಯೆರಿಯ ಪ್ರಕಟಿತ ದ್ವಿತೀಯ ಕೃತಿ.

೨೦೦೨ ರಲ್ಲಿ ಶ್ರೀ ವೀತರಾಗ ಪ್ರಭಾಕಿರಣ ಗ್ರಂಥಮಾಲೆಯ ಜೀವನ ಗೀತಾಂಜಲಿ ಪುಷ್ಪ ಒಂದು (ಕವನಸಂಕಲನ) ಕರ್ತೃ ರಾಮು ಸುಬ್ಬಣ್ಣವರ. ಈ ಕೃತಿಯ ಮುನ್ನುಡಿಯಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಅಲಭ್ಯೆರಿಯನ್ನು ಈ ನೆಲದ ಒಬ್ಬ ಶ್ರೇಷ್ಠ ಜನಪದ ಕವಿಯೆಂದು ಪರಿಚಯಿಸುತ್ತಾರೆ.

ಡಾ. ಆರ್. ಬಿ. ಚಿಲಮಿಯವರು ಹಾರೂಗೇರಿಯ ಸುಬ್ಬಣ್ಣವರ ಮನೆಯಲ್ಲಿ ದೊರೆತ ಹಸ್ತಪ್ರತಿಗಳಿಂದ ೨೦೦೭ ರಲ್ಲಿ "ಅಲಭ್ಯೆರಿ ವಿರಚಿತ ತತ್ವಪದಗಳು" ಎಂಬ ಕೃತಿಯನ್ನು ಸಂಕಲಿಸಿ ಪ್ರಕಟಿಸಿದ್ದಾರೆ.

ಡಾ. ಎಸ್. ಎಚ್. ಜಕಬಾಳರು ಸಂಪಾದಿಸಿದ ಶ್ರೀಯುತ ಎಚ್. ಬಿ. ಕಟಿಗೆನ್ನವರ ಅಭಿನಂದನಾ ಗ್ರಂಥ "ನುಡಿನಮನ" ದಲ್ಲಿ ಡಾ. ಆರ್. ಬಿ. ಚಿಲಮಿಯರ "ಡೊಳ್ಳಿನ ಹಾಡುಗಳು ವರಕವಿ ಅಲಭ್ಯೆರಿ" ಎಂಬ ಲೇಖನವಿದೆ.

ಧಾರವಾಡ ಆಕಾಶವಾಣಿ ಕೇಂದ್ರವು, ಹಾರೂಗೇರಿ ಗುಲಾಬ ಜಮಾದರ ಕರ್ಬಲ್ ಮೇಳದವರು ಹಾಡಿರುವ ಅಲಭ್ಯೆರಿಯ ಕರ್ಬಲ್ ಹಾಡುಗಳನ್ನು ಪ್ರಸಾರ ಮಾಡುತ್ತದೆ.

ಇಲ್ಲಿಯವರೆಗೆ ದೊರೆತ ಬಿಡಿ ಬಿಡಿ ಮಾಹಿತಿಗಳು, ಲೇಖನಗಳು, ಕೆಲಕೃತಿಗಳು ಹಾಗೂ ಸಂಶೋಧನಾ ಗ್ರಂಥಗಳಿಂದ ಬಾಗಿ ಪರಿಸರದ ಜನಪದ ಸಾಹಿತ್ಯ, ಕವಿ ಅಲಭ್ಯೆರಿ ಹಾಗೂ ಅವನ ಸಾಹಿತ್ಯದ ಮೇಲೆ ಬೆಳಕು ಚೆಲ್ಲುತ್ತವೆ. ಅಷ್ಟೆ ಅಲ್ಲದೆ ಈ ಮಹಾಪ್ರಬಂಧದ ರಚನೆಗೆ ಇಂಬು ನೀಡುತ್ತವೆ. ಪ್ರಸ್ತುತ ಮಹಾಪ್ರಬಂಧವು ಅಲಭ್ಯೆರಿಯನ್ನು ಪರಿಚಯಿಸುತ್ತ ಕವಿಯ ಸಮಗ್ರ ಸಾಹಿತ್ಯವನ್ನು ಪರೀಕ್ಷರಿಸಿ, ವಿಶ್ಲೇಷಿಸಿ, ವಿಮರ್ಶೆಗೆ ಒಳಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

೧.೪ ಅಧ್ಯಯನದ ಸ್ವರೂಪ :

ಬಾಗೆನಾಡು (ರಾಯಬಾಗ) ತಾಲೂಕು ಅಸಂಖ್ಯಾತ ಜನಪದ ಸಾಹಿತ್ಯದ ನೆಲೆವೀಡು. ಇಲ್ಲಿ ಅನೇಕ ಜನಪದ ಕವಿಗಳು, ಕಲಾವಿದರು ಸಾಹಿತ್ಯ ಸೇವೆ ಮಾಡಿರುವರು. ಅವರೆಲ್ಲರದು ವೈವಿಧ್ಯಮಯ ಸಾಹಿತ್ಯ ಕೃಷಿ. ಇಂದು ಅವರ ಸಾಹಿತ್ಯ ಕೇವಲ ಕೆಲವೆ ಕೆಲವು ಜನರ ನಾಲಿಗೆಯ ಮೇಲೆ ಧ್ವನಿಸುತ್ತದೆ. ಈ ನಾಡಿನ ಜನಪದ ಕವಿಗಳೆಲ್ಲರ ಸಾಹಿತ್ಯ ಭಕ್ತಿ, ಜ್ಞಾನ, ಹಾಗೂ ಪರಮಾರ್ಥ ಚಿಂತೆಯಿಂದ ಕೂಡಿದೆ. ಪರಮಾರ್ಥವು ಮುಕ್ತಿಯ ಸೋಪಾನ ಎಂದು ನಂಬಿದ್ದರು." ಪರಮಾರ್ಥವು ಅತ್ಯಂತ ಶ್ರೇಷ್ಠವು, ಪರಮಾರ್ಥ ಮಾಡುವುದೇ ಮಾನವನ ಪರಮ ಕರ್ತವ್ಯಗಳಲ್ಲಿ ಒಂದು".

ಪ್ರಸ್ತುತ ಅಧ್ಯಯನವು ಒಟ್ಟು ೭ ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಾಯಗಳಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯದ ಪ್ರಭಾವ, ಬಾಗೆ ಪರಿಸರದ ಜನಪದ ಕಾವ್ಯ ಪರಂಪರೆ, ಕವಿ ಅಲಭ್ಯೆರಿ ಅವನ ಪ್ರಕಟಿತ ಹಾಗೂ ಅಪ್ರಕಟಿತ ಸಾಹಿತ್ಯದ ವಿಶ್ಲೇಷಣೆ ಹಾಗೂ ಮೌಲ್ಯ ವಿವೇಚನೆ ಈ ಎಲ್ಲ ಅಂಶಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಜನಪದ ಸಾಹಿತ್ಯ ಅದರ ಕೊಡುಗೆ, ಕೈಗಾರೀಕರಣ, ಯಾಂತ್ರಿಕರಣದಿಂದ ಜನಪದ ಸಾಹಿತ್ಯದ ಮೇಲಾದ ಪ್ರಭಾವ ಕೈಗೊಂಡ ಕಾರ್ಯ ಮುಂತಾದ ವಿಷಯಗಳನ್ನು ಪ್ರವೇಶಿಕೆ ಹಂತದಲ್ಲಿ ಚರ್ಚಿಸಲಾಗಿದೆ. ಅಧ್ಯಯನದ ಅಗತ್ಯ, ಸಮೀಕ್ಷೆ, ಸ್ವರೂಪ ಹಾಗೂ ಆಕರಗಳನ್ನು ಕುರಿತು ದಾಖಲಿಸಲಾಗಿದೆ. ಅಧ್ಯಯನಕ್ಕೆ ಅಳವಡಿಸಿಕೊಂಡ ವಿಧಾನವನ್ನು ಪ್ರಸ್ತುತ ಪಡಿಸಲಾಗಿದೆ.

ಎರಡನೆಯ ಅಧ್ಯಾಯವು ಬಾಗೆನಾಡಿನ ಜನಪದ ಕಾವ್ಯ ಪರಂಪರೆ, ಬಾಗೆನಾಡಿನ ಜನಪದ ಕಾವ್ಯ ಪರಿಸರ ಈ ನಾಡಿನಲ್ಲಿ ಆಗಿಹೋದ ಸುಮಾರು ೧೨ ಜನಪದ ಕವಿಗಳನ್ನು ಅಳವಡಿಸಿಕೊಂಡು ಅವರ ಸಂಕ್ಷಿಪ್ತ ಪರಿಚಯದೊಂದಿಗೆ ಸಾಹಿತ್ಯ ಕೊಡುಗೆಗಳನ್ನು ಉಲ್ಲೇಖಿಸುವುದು.

ಅಲಭ್ಯೆರಿ ಜೀವನ ದರ್ಶನವನ್ನು ಮೂರನೆಯ ಅಧ್ಯಾಯ ತಿಳಿಸುತ್ತದೆ. ಜೊತೆಗೆ ಕರ್ನಾಟಕದಲ್ಲಿ ಆಗಿಹೋದ ಸಿದ್ಧಾಂತ ಪರಂಪರೆಗಳನ್ನು ಗಮನಿಸುತ್ತ ಕವಿಯ ಅವಧೂತ ಪರಂಪರೆಯನ್ನು ಚರ್ಚಿಸಲಾಗಿದೆ. ಸುಬ್ಬಣ್ಣನವರ ಮನೆತನದ ಹಿನ್ನೆಲೆ, ಕವಿಯ ಬಾಲ್ಯ, ಯೌವನ, ಶಿಕ್ಷಣ, ಅಧ್ಯಾತ್ಮದ ಅನುಸಂಧಾನ, ಕೌಟುಂಬಿಕ ಜೀವನ, ಸ್ನೇಹಿತ ಪಾಂಡುರಂಗ ಕಟ್ಟಿಯೊಂದಗಿನ ಒಡನಾಟ ಹಾಗೂ ಅಲಭ್ಯೆರಿಯ ಕೊನೆಯ ದಿನಗಳನ್ನು ಪರಿಚಯಿಸಲಾಗಿದೆ.

ಮಹಾಪ್ರಬಂಧದ ನಾಲ್ಕನೆಯ ಅಧ್ಯಾಯ ಕವಿಯ ಪ್ರಕಟಿತ ಸಾಹಿತ್ಯ. ಇಲ್ಲಿ ಅಲಭ್ಯೆರಿಯ ಪ್ರಕಟಿತ ಸಾಹಿತ್ಯ, ಕೃತಿಗಳಾದ ಶ್ರೀ ಚನ್ನವೃಷಭೇಂದ್ರ ಸ್ತೋತ್ರಮಾಲಾ, ಶ್ರೀ ಜಿನ ಭಕ್ತಿ ಗೀತೆಗಳು ಹಾಗೂ ತತ್ವಪದಗಳ ಸಂಗ್ರಹ ಈ ಮೂರು ಕೃತಿಗಳನ್ನು ಕುರಿತು ವಿಮರ್ಶಿಸುವ ಕಾರ್ಯವನ್ನು ಮಾಡಲಾಗಿದೆ.

ಐದನೆಯ ಅಧ್ಯಾಯವು ಕವಿಯ ಅಪ್ರಕಟಿತ ಸಾಹಿತ್ಯವನ್ನು ಪರಿಚಯಿಸುತ್ತದೆ. ಇಲ್ಲಿ ಈ ಕವಿಯ ಜನಪದ ಸಾಹಿತ್ಯದ ವಿವಿಧ ಕಾವ್ಯರೂಪಗಳ ಕುರಿತು ಅಭ್ಯಸಿಸಲಾಗಿದೆ. ಈ ಅಧ್ಯಾಯ ಮಹಾಪ್ರಬಂಧದ ಪ್ರಮುಖ ಭಾಗ. ಇದು ಕ್ಷೇತ್ರಕಾರ್ಯ ಆಧಾರಿತ ಅಧ್ಯಾಯ. ದೊರೆತ ಸಾಹಿತ್ಯವನ್ನು ವಿಮರ್ಶಿಸಲಾಗಿದೆ. ಕವಿ ರಚಿಸಿದ ಜನಪದ ಬಯಲಾಟ "ವೈರಾಗ್ಯ ವಿಜಯ"ದ ಕುರಿತು ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಅಲಭ್ಯೆರಿ ಸಾಹಿತ್ಯದ ಮೌಲ್ಯ ವಿವೇಚನೆ ಇದೆ. ಸಾಹಿತ್ಯದ ನೆಲೆ, ಬೆಲೆ ಗುರುತಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ತಾತ್ವಿಕವಾಗಿ ಹಾಗೂ ಸಾಹಿತ್ಯಿಕವಾಗಿ ಕವಿಯ ಸಾಧನೆಯನ್ನು ವಿವರಿಸಿದೆ.

ಮಹಾಪ್ರಬಂಧದ ಕೊನೆಯ ಅಧ್ಯಾಯ ಸಮಾರೋಪ. ಒಟ್ಟು ಅಧ್ಯಯನದ ಫಲಶ್ರುತಿಯನ್ನು ತಿಳಿಸುತ್ತದೆ.

ಹೀಗೆ ಈ ಮಹಾಪ್ರಬಂಧವು ಒಟ್ಟು ೭ ಅಧ್ಯಾಯಗಳಲ್ಲಿ ಅಧ್ಯಯನದ ಚೌಕಟ್ಟನ್ನು ಒಳಗೊಂಡಿರುತ್ತದೆ. ಅವಶ್ಯವಿರುವ ಕೆಲ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

೧.೫ ಅಧ್ಯಯನದ ಆಕರಗಳು (Sources)

ಅಲಭೈರಿ ಒಬ್ಬ ಪ್ರತಿಭಾವಂತ ಆಶು ಕವಿಯಾಗಿದ್ದು, ಕಾವ್ಯವನ್ನು ಕಟ್ಟುವ ಕಲಾವಂತನಾಗಿದ್ದನು. ವರಕವಿಯೆಂದು ನಾಮ ಧರಿಸಿದ ಈತ ಕುಂತಲ್ಲಿ ನಿಂತಲ್ಲಿ ಹತ್ತಾರು ಪದಗಳನ್ನು ಹೇಳುವ ಸಾಮರ್ಥ್ಯ ಪಡೆದಿದ್ದನು. ನಿತ್ಯ ಸಮಾಜದಲ್ಲಿ ನಡೆಯುವ ಘಟನೆಗಳೇ ಈತನ ಕಾವ್ಯಶಕ್ತಿ. ಮೂಢನಂಬಿಕೆ, ಡಾಂಬಿಕತೆ, ದಲಿತರ, ಸ್ತ್ರೀಯರ ಹಾಗೂ ನಾಡಿನ ಮೇಲಿನ ಅಭಿಮಾನ ಕಾಳಜಿಗಳು ಈತನ ಕಾವ್ಯದ ವಸ್ತುವಾಗಿದ್ದವು. ಇಂತಹ ಅಪರೂಪದ ವ್ಯಕ್ತಿತ್ವ ಹೊಂದಿದ ಕವಿಯ ಸಾಹಿತ್ಯ ಕ್ಷೇತ್ರ ವಿಶಾಲ. ಈ ಅಪರೂಪ ಕವಿಯ ಸಾಹಿತ್ಯದ ಎಲ್ಲ ಕ್ಷೇತ್ರಗಳನ್ನು ಪರಾಮರ್ಶಿಸುವುದು ಅವಶ್ಯ

ಕವಿಯ ಮಾತೃ ಭಾಷೆ ಕನ್ನಡ. ಕವಿಯ ಪರಿಸರ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಇರುವುದರಿಂದ ಕವಿ ಮರಾಠಿ ಭಾಷೆಯಲ್ಲಿಯೂ ಪ್ರಭುತ್ವ ಸಾಧಿಸಿದ್ದನು. ತೆಲಗು, ಹಿಂದಿ ಹಾಗೂ ಅಲ್ಪ ಸ್ವಲ್ಪ ಇಂಗ್ಲೀಷ ಭಾಷೆಯ ಜ್ಞಾನವು ಕವಿಗಿತ್ತೆಂದು ಭಾಸ್ಕರ ಪತ್ತಾರ ಹೇಳುತ್ತಾರೆ. ಮೋಡಿಲಿಪಿಯನ್ನು ಕವಿ ಬಳಸುತ್ತಿದ್ದನೆಂದು ಅವನ ಸಾಹಿತ್ಯ ಬಲ್ಲ ಹಿರಿಯರು ಹೇಳುತ್ತಾರೆ. ಕವಿಯ ಒಟ್ಟು ಸಾಹಿತ್ಯ ಹಲವಾರು ಪ್ರಕಾರಗಳಲ್ಲಿ ಧ್ವನಿಸುವುದನ್ನು ಕಾಣುತ್ತೇವೆ. ಕವಿಯ ಒಟ್ಟು ಸಾಹಿತ್ಯದಲ್ಲಿ ಅಧ್ಯಾತ್ಮದ ತುಡಿತವೇ ಹೆಚ್ಚು. ಅಲಭೈರಿ ಕವಿಯು ಕರ್ಬಲ್ / ರಿವಾಯತ್, ಡೊಳ್ಳಿನ ಪದ, ತತ್ವಪದ, ಲಾವಣಿ ಪದ, ಹಂತೀ ಪದ, ಅಭಂಗ, ಚೌಡಕಿ ಪದ, ಮಂಗಳಾರತಿ ಪದ ಹೀಗೆ ಇನ್ನೂ ಅನೇಕ ಪ್ರಕಾರದ ಪದಗಳನ್ನು ರಚಿಸಿದ್ದಾನೆ. ಗೊಂದಲಿಗರ ಪದಗಳನ್ನು ರಚಿಸಿರುವುದಾಗಿ ಡಾ. ಎಂ. ಬಿ. ನೇಗಿನಹಾಳರು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರ ಕಾರ್ಯದಲ್ಲಿ ಗೊಂದಲಿಗರ ಒಂದೂ ಪದ ಸಿಕ್ಕಿಲ್ಲ.

ಸಾಮಾನ್ಯವಾಗಿ ಎಲ್ಲ ಕವಿಗಳು ಕನ್ನಡ ಸಾಹಿತ್ಯದ ಸಾರಸ್ವತ ಲೋಕವನ್ನು ಪ್ರವೇಶಿಸುವುದು ಕಾವ್ಯಗಳ ಮೂಲಕವೇ, ಅಲಭೈರಿಯೂ ಸಹ ಕಾವ್ಯದ ಮೂಲಕವೇ ತಮ್ಮನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡ, ಅನಂತರದಲ್ಲಿ "ವೈರಾಗ್ಯವಿಜಯ" (ಜಾನಪದ) ಆಟ "ಸತ್ಯ ಹರಿಶ್ಚಂದ್ರ" ಹಾಗೂ "ಹೇಮರೆಡ್ಡಿ ಮಲ್ಲಮ್ಮ" ಎಂಬೆರಡು ಬಯಲಾಟಗಳನ್ನು ರಚಿಸಿದ್ದಾನೆ. ಆದರೆ ಸಂಪೂರ್ಣ ಲಭ್ಯವಾಗಿಲ್ಲ.

ಅಧ್ಯಯನದ ಅವಧಿಯಲ್ಲಿ ಕವಿಯ ಹಲವಾರು ಅಪ್ರಕಟಿತ ಸಾಹಿತ್ಯವನ್ನು ಸಂಗ್ರಹಿಲಾಗಿದೆ. ಮನೆ ಮನೆಗೆ ಹೋಗಿ ಕವಿಯ ಹಾಡುಗಳನ್ನು ಕಲೆ ಹಾಕಲಾಗಿದೆ. ಈ ಸಂದರ್ಭದಲ್ಲಿ ಡೊಳ್ಳಿನ ಹಾಡುಗಾರರನ್ನು, ಭಜನಾ ಮೇಳಗಳನ್ನು, ಚೌಡಕಿ ಹಾಡುಗಾರರನ್ನು, ಕರ್ಬಲ್ ತಂಡಗಳನ್ನು ಹಾಗೂ ಅಲಭೈರಿ ಸಾಹಿತ್ಯ ಆಸಕ್ತರಿಂದ ಸಾಹಿತ್ಯ ಸಂಗ್ರಹಿಸಿ ಮಹಾಪ್ರಬಂಧಕ್ಕೆ ಪ್ರಮುಖ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ದೊರೆತ ದಾಖಲೆಗಳಿಂದ ಅಲಭೈರಿ ಸಾಹಿತ್ಯ ಇಷ್ಟೇ ಅಂತ ಹೇಳಲಿಕ್ಕೆ ಆಗದು. ಏಕೆಂದರೆ ಶೋಧನೆ ಅನ್ನುವುದು

ನಿರಂತರ. ಈ ಅವಧಿಯಲ್ಲಿ ನನಗೆ ದೊರೆತ ಆಧಾರಗಳನ್ನು ಕ್ರೋಢೀಕರಿಸಿ, ವಿಶ್ಲೇಷಿಸಿ ಫಲಿತದಲ್ಲಿ ದಾಖಲಿಸಿದ್ದೇನೆ.

೧.೬ ಅಧ್ಯಯನ ವಿಧಾನ

ಇದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನ. ಇದಕ್ಕೆ ಬೆರಳೆಣಿಕೆಯಷ್ಟು ಇರುವ ಲಿಖಿತ ಆಕರಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಮೌಖಿಕ ಆಕರಗಳನ್ನು ಶೋಧಿಸಿ ಸಂಗ್ರಹಿಸಿದ್ದು, ಆದ್ದರಿಂದ ಈ ಅಧ್ಯಯನದ ಆಕರಗಳ ಶೋಧ ಎಂದರೆ ಅಲಭ್ಯರಿ ಸಾಹಿತ್ಯದ ಶೋಧ ಮತ್ತು ಸಂಕಲನ ಕಾರ್ಯ ಎಂದರ್ಥ. ಜನಪದ ಕ್ಷೇತ್ರದಲ್ಲಿ ಕವಿ ಮಾಡಿದ ಸಾಧನೆ ಅಮೋಘವಾದದ್ದು. ಆದರೆ ಅಚ್ಚುಗಾಣದೆ ಕತ್ತಲಲ್ಲಿಯೆ ಉಳಿದದ್ದು ದುರದೃಷ್ಟಕರ. ಇಂತಹ ಅಪ್ರಕಟಿತ ಸಾಹಿತ್ಯವನ್ನು ಜನರ ಬಾಯಿಂದ ಸಂಗ್ರಹಿಸುವುದು ಸುಲಭ ಕಾರ್ಯವಲ್ಲ. ಅದೆಷ್ಟು ಎಚ್ಚರದಿಂದ ಕ್ಷೇತ್ರ ಕಾರ್ಯದಲ್ಲಿ ತೊಡಗಿ ಅಲಭ್ಯರಿ ಸಾಹಿತ್ಯ ಸಂಗ್ರಹಿಸಲು ತೊಡಗಿದರೂ ಕೆಲ ಸಾಹಿತ್ಯ ಹೊರಗುಳಿದಿರಬಹುದು. ಏಕೆಂದರೆ ಅಲಭ್ಯರಿ ಸಾಹಿತ್ಯ ರಾಶಿಯೇ ಹಿರಿದು. ಅದಕ್ಕಾಗಿ ಈ ಮಹಾಪ್ರಬಂಧದಲ್ಲಿ ಕವಿಯ ಪ್ರಕಟಿತ ಹಾಗೂ ಅಪ್ರಕಟಿತ ಸಾಹಿತ್ಯ ಎಂಬ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಆತನ ಸಾಹಿತ್ಯವನ್ನು ಸಮೀಕ್ಷಿಸಲಾಗಿದೆ.

ವೈಜ್ಞಾನಿಕ ಯುಗದ ಇಂದಿನ ಸಂದರ್ಭದಲ್ಲಿ ಇಂತಹ ಒಬ್ಬ ಜನಪದ ಕವಿಯನ್ನು ಹಾಗೂ ಅವನ ಸಾಹಿತ್ಯವನ್ನು ನಾಡಿಗೆ ಪರಿಚಯಿಸುವುದು ಅನಿವಾರ್ಯ ಮತ್ತು ಅವಶ್ಯ. ಅಂತಹದೊಂದು ಚಿಕ್ಕ ಪ್ರಯತ್ನವೇ ಈ ಮಹಾಪ್ರಬಂಧ. ಇಂಥ ಹಲವು ಇತಿ ಮಿತಿಗಳ ಮಧ್ಯದಲ್ಲಿ ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲು ಯತ್ನಿಸಲಾಗಿದೆ.

ಟಿಪ್ಪಣಿಗಳು :

೧. ಆರ್. ನರಸಿಂಹಚಾರ್ಯ : ಕರ್ನಾಟಕ ಕವಿ ಚರಿತೆ. ಪುಟ – ೩೩೧

೨. ಅದೇ, ಪುಟ – ೩೩೨

ಅಧ್ಯಾಯ: ಎರಡು

ಅಲಭೈರಿ ಮತ್ತು ಬಾಗೆ ಪರಿಸರದ ಜನಪದ ಕಾವ್ಯ ಪರಂಪರೆ

ಅಧ್ಯಾಯ: ಎರಡು

ಅಲಭೈರಿ ಮತ್ತು ಬಾಗೆ ಪರಿಸರದ ಜನಪದ ಕಾವ್ಯ ಪರಂಪರೆ

ಕನ್ನಡ ಜನಪದ ಕಾವ್ಯ ಪರಂಪರೆ ಶ್ರೀಮಂತ. ಅದು ಶಿಷ್ಟ ಸಾಹಿತ್ಯಕ್ಕೆ ಮೂಲ ಪ್ರೇರಕ. ಕನ್ನಡದಲ್ಲಿ ದೊರೆತ ಪ್ರಥಮ ತ್ರಿಪದಿ ಶಾಸನ ಕಪ್ಪೆ ಅರಭಟ್ಟನ ಶಾಸನ. ಇದಕ್ಕೆ ಬಾದಾಮಿ ಶಾಸನವೆಂದೂ ಹೆಸರು. ಇದೂ ಸಹ ಜನಪದ ಸೊಗಡನ್ನು ಒಳಗೊಂಡ ಶಾಸನ. ಅಷ್ಟೆ ಅಲ್ಲದೆ ಒಂದು ಕಾವ್ಯ [ತ್ರಿಪದಿ] ಪರಂಪರೆಯನ್ನೇ ತಿಳಿಸುತ್ತದೆ. ಜನಪದ ಕಾವ್ಯ ಜನಮಾನಸದ ಧ್ವನಿ. ಇದು ಅರಳುವುದೇ ಜನ ಸಮುದಾಯದಲ್ಲಿ. ಜನಪದ ಕೇವಲ ಮುಕಕ್ತದಂತಹ ತ್ರಿಪದಿಗಳನ್ನು ಒಳಗೊಳ್ಳದೆ ಅದು ಮಹಾಕಾವ್ಯದ ವರೆಗೂ ತನ್ನ ವ್ಯಾಪ್ತಿಯನ್ನು ಚಾಚಿಕೊಂಡಿದೆ. ಕನ್ನಡದಲ್ಲಿ "ಮಂಟೇಸ್ವಾಮಿ ಕಥಾ ಪ್ರಸಂಗ, ಮಲೇ ಮಾದೇಶ್ವರ, ಹಾಲುಮತ ಪುರಾಣ, ಜುಂಜಪ್ಪ, ಚೌಡಕಿ ಎಲ್ಲಮ್ಮ , ಮೈಲಾರಲಿಂಗ, ಮೊದಲಾದ ಜನಪದ ಮಹಾಕಾವ್ಯಗಳಿವೆ. ಕರ್ನಾಟಕದ ಗುಡ್ಡಗಾಡಿನ ಬುಡಕಟ್ಟು ಜನಾಂಗದಲ್ಲೂ ಜನಪದ ಮಹಾಕಾವ್ಯ ಇರುವುದು ಕಂಡು ಬಂದಿದೆ. ಕನ್ನಡದ ಜಾನಪದ ಮಹಾಕಾವ್ಯಗಳನ್ನು ಕಂಸಾಳೆ ಗುಡ್ಡರು, ನೀಲಗಾರರು, ಗಣೆಯವರು ಚೌಡಕಿಯವರು, ಗೊರವರು ಮುಂತಾದ ವೃತ್ತಿಗಾಯಕರು ಉಳಿಸಿಕೊಂಡು ಬಂದಿದ್ದಾರೆ."[೧]

ಜನಪದ ಕಾವ್ಯ ಅರಳಿರುವುದೆ ಬೇಟೆಗಾರರು, ಪಶುಪಾಲಕರು ಹಾಗೂ ಕೃಷಿಕರಲ್ಲಿ. ಕೃಷಿಕರು ತಮ್ಮ ದುಡಿಮೆಯ ಆಯಾಸವನ್ನು ಕಳೆಯಲು ಈ ಜಾನಪದ ಕಲೆಯನ್ನು ರೂಢಿಸಿಕೊಂಡಿರುವರು. ಬಾಗೆನಾಡಿನ ಪರಿಸರವು ಸಹ ಕೃಷಿ ಪ್ರಧಾನವಾದ ಸ್ಥಳ. ಈ ಪರಿಸರವು ಕೃಷಿಗೆ ಯೋಗ್ಯವಾಗುವುದಕ್ಕಿಂತ ಪೂರ್ವದಲ್ಲಿ ಬೆಟ್ಟ ಗುಡ್ಡಗಳು, ಹೇರಳವಾಗಿದ್ದವು . ಇಂತಹ ಸಮಯದಲ್ಲಿ ಜನಪದರು ತಮ್ಮ ಕೃಷಿ ಕೆಲಸದ ಜೊತೆಗೆ ಬಿಡುವಿನ ವೇಳೆಯಲ್ಲಿ ಈ ಕಲೆಯನ್ನು ರೂಢಿಸಿಕೊಂಡಿದ್ದರು. ಕೃಷಿಕರು, ಕೂಲಿಕಾರರು ಹಾಗೂ ದಲಿತರು ಈ ನಿಟ್ಟಿನಲ್ಲಿ ಅತಿ ಹೆಚ್ಚು ಜನಪದ ಕಾವ್ಯವನ್ನು ಅರಳಿಸಿದವರು ಹಾಗೂ ಉಳಿಸಿದವರು. ಬಾಗೆನಾಡಿನ ಜನಪದರು ಕಲೆ ಹಾಗೂ ಸಾಹಿತ್ಯ ಆರಾಧಕರು. ಈ ಮಾತಿಗೆ ಇಲ್ಲಿಯ ಹಾಡಿನ ಮೇಳಗಳೇ ಸಾಕ್ಷಿ.

ಆದ್ದರಿಂದ ಇಂದು ಹಲವಾರು ಡೊಳ್ಳಿನ ಮೇಳಗಳು, ಚೌಡಕಿ ಮೇಳಗಳು, ಭಜನೆಯ ತಂಡಗಳು, ಕರ್ಬಲ್ ತಂಡಗಳು, ಗೀಗೀ ಮೇಳಗಳು ಈ ರೀತಿಯಾಗಿ ಇನ್ನೂ ಅನೇಕ ಪ್ರಕಾರದ ಮೇಳಗಳು ಈ ಪರಿಸರದಲ್ಲಿ ಹುಟ್ಟಿಕೊಂಡಿವೆ. ಈ ಎಲ್ಲ ಮೇಳಗಳಲ್ಲಿ ಈ ಪರಿಸರದ ಜನಪದ ಕವಿಗಳ ಹಾಡುಗಳೇ ಧ್ವನಿಸುತ್ತವೆ. ಅವರೆಲ್ಲರಲ್ಲಿಯೇ ಕವಿ ಅಲಭೈರಿಯ ಪದಗಳೇ ಅಧಿಕ ಹಾಗೂ ವೈವಿಧ್ಯ ಸ್ವರೂಪದಿಂದ ಮಾರ್ದನಿಸುತ್ತವೆ. ಜೊತೆಗೆ ಅವನ

ಸಮಕಾಲೀನ ಹಲವು ಕವಿಗಳು ಸಮೃದ್ಧ ಕಾವ್ಯಗಳನ್ನು ರಚಿಸಿದ್ದು, ಆ ಕವಿಗಳನ್ನು ಈ ಅಧ್ಯಯನದ ಹಿನ್ನಲೆಯಲ್ಲಿ ಅವಲೋಕಿಸುವುದು ಅಗತ್ಯವೆನಿಸುತ್ತದೆ.

ಯಮನಪ್ಪ ಛಲವಾದಿ

ಈತ ರಾಯಬಾಗ ತಾಲ್ಲೂಕಿನ ನಿಡಗುಂದಿ ಗ್ರಾಮದವ. ಈತನ ಮೂಲ ಸ್ಥಳ ಮುಗಳಖೋಡ. ಉದ್ಯೋಗ ಬಡಿಗತನ. ತಂದೆ ಗಿರಮಲ್ಲ. ಅನುಸೂಯಾ ಇವನ ಧರ್ಮಪತ್ನಿ. ೨ನೇ ತರಗತಿಯ ವರೆಗೆ ರಬಕವಿಯಲ್ಲಿ ಶಿಕ್ಷಣ. ೨ ಜನಗಂಡು ಮಕ್ಕಳು ಹಾಗೂ ೪ ಜನ ಹೆಣ್ಣು ಮಕ್ಕಳ ತುಂಬು ಸಂಸಾರ. ಈತನ ಮೊದಲ ಹೆಸರು ಪರಶುರಾಮ. ಕವಿ ಯಮನಪ್ಪ ಕರ್ಬಲ್ ಹಾಗೂ ಲಾವಣಿಗಳನ್ನು ರಚಿಸುತ್ತಿದ್ದನು. ಕವಿ ಸ್ವಂತ ಹಾಡುಗಾರನಾಗಿದ್ದು, ತಂಡ ಕಟ್ಟಿಕೊಂಡು ಊರಿಂದ ಊರಿಗೆ ಹೋಗಿ ಹಾಡುತ್ತಿದ್ದನು. ಕವಿ ಭಜನಾ ಪದಗಳನ್ನು ಕಟ್ಟುತ್ತಿದ್ದನೆಂದು ಈತನ ಸಹೋದರ ಸಂಗಪ್ಪ ಈಗಲೂ ಹೇಳುತ್ತಾರೆ. ಈತನ ಹಾಡುಗಳೆಲ್ಲದರ ಸಾರ ಅಧ್ಯಾತ್ಮ ಚಿಂತನೆ. ಯಮನಪ್ಪ ಮನೆ ಕಟ್ಟುವ ಕೆಲಸದಲ್ಲಿಯೂ ನಿಪುಣ. ಬಸ್ತವಾಡ, ಅಲಖನೂರ ದಿಗ್ಗೇವಾಡಿ, ಕಡಕಬಾವಿ ಹಾಗೂ ಇನ್ನಿತರ ಸುತ್ತ-ಮುತ್ತಲಿನ ಊರುಗಳಿಗೆ ಕೆಲಸಕ್ಕೆ ಹೋಗುತ್ತಿದ್ದನು. ತುಂಬ ಬಡತನವಿತ್ತು. ಮನೆ ಕಡೆಗೆ ಕಾಳಜಿ ಕಡಿಮೆ. ದಿನಂಪ್ರತಿ ಅಧ್ಯಾತ್ಮದ ಗುಂಗಿನಲ್ಲಿಯೇ ಕಾಲ ಕಳೆಯುತ್ತಿದ್ದನು. ಈತನ ಕೊನೆಯ ದಿನಗಳು ಅಷ್ಟೊಂದು ಹಿತಕರವಾಗಿರಲಿಲ್ಲ. ಬಡತನದಿಂದ ನೊಂದ ಯಮನಪ್ಪ ಹೊಟ್ಟೆ ನೋವಿನಿಂದ ತೀರಿಕೊಂಡನೆಂದು ಸಹೋದರ ಸಂಗಪ್ಪ ಹೇಳುತ್ತಾರೆ. ಕವಿಯ ಮಕ್ಕಳು ಈಗ ಮೊರಬದ ಬಸವ ನಗರದಲ್ಲಿ ವಾಸವಾಗಿದ್ದು ಮೂಲ ಕಸಬು ಮನೆಕಟ್ಟುವ ಹಾಗೂ ಬಡಿಗತನವನ್ನು ಮುಂದುವರೆಯಿಸಿಕೊಂಡು ಹೋಗುತ್ತಿದ್ದಾರೆ.

ಕವಿ ಸಾಹಿತ್ಯವೆಲ್ಲ ಅಪ್ರಕಟಿತವಾಗಿದ್ದು, ಕೆಲವೇ ಜನರ ಬಾಯಲ್ಲಿ ಹಾಗೂ ಹಸ್ತಪ್ರತಿ ರೂಪದಲ್ಲಿ ಸಿಗುತ್ತವೆ. ಪ್ರತಿಯೊಂದು ತನ್ನ ಪದ್ಯದಲ್ಲಿ ಆರಾಧ್ಯದೈವ ಸಿದ್ಧನನ್ನು ನೆನೆಯುತ್ತಾನೆ. ಪರಶುರಾಮ ಈತನ ಅಗಾಮ [ಅಂಕಿತ]

'ನರಸಿಂಹ ಅವತಾರ' ಈ ಪದ್ಯದಲ್ಲಿ ಕವಿ ಯಮನಪ್ಪ ಹಿರಣ್ಯಾ ಕಶ್ಯಪನನ್ನು ಹರಿ ಹೇಗೆ ಸಂಹರಿಸಿದನೆಂಬುದನ್ನು ಅತಿ ಮಾರ್ಮಿಕವಾಗಿ ತಿಳಿಸುತ್ತಾನೆ.

"ಹಿರಣ್ಯಕಶೆಪ್ಪ ಹರನ ಭಕ್ತ ಇದ್ದನೋಡ
ಆಂವ ನಿತ್ಯ ತಪಾ ಮಾಡಿ ಶಿವನ ಒಲಿಸಿಕೊಂಡ ॥ಪ॥
ಶಂಭ ತಪಕ ಮೆಚ್ಚಿ ಬಂದಾನ ಆಗ
ಶಂಭ ಓಡಿ ಬಂದೋ ಆಗ ।
ಏನ ಬೇಡತಿ ಬೇಡ ಅಂತಾನೋ ಶಂಭ ಅವಗ ।

ಬೇಡಿದ ವರಾ ಕುಡತಿನೋ ನಿನಗ ॥೧॥
ಹಿರಣ್ಯಕಶೆಪ್ಪ ಮನದಾಗ ತಿಳಿದ ವರಾ ಬೇಡಿದೊ ಆಗ ।
ಕತ್ತಿ ಕಠಾರ ಬಾಣ ಮದ್ದು-ಗುಂಡು ತಳವಾರದ ಒಳಗ ।
ಅದರ ಒಳಗ ಮರಣ ಬ್ಯಾಡೊ ಎನಗ ।
ಒಳಗ ಮರಣ ಬ್ಯಾಡ ಹೊರಗ ಮರಣ ಬ್ಯಾಡ ಅಂತರಲಿ ಮ್ಯಾಗ ।
ರಾತ್ರಿ ಮರಣ ಬ್ಯಾಡ ಹಗಲಿ ಮರಣ ಬ್ಯಾಡ ವರಾ ಕುಡರಿ ನಮಗ ॥೨॥
ವರಾ ಕೊಟ್ಟ ಶಂಭ ಹೋದ ಹೊರಗ ।
ಪ್ರೇಮದ ಹರಿಭಕ್ತ ಪ್ರಲ್ಹಾದ ಜನಿಸ್ಯಾನ ಹಿರಣ್ಯಕಸೆಪ್ಪಗ ।
ಹಿರಣ್ಯಕಶೆಪ್ಪ ಪ್ರಲ್ಹಾದಗ ಹೇಳತಾನ ಹರಾ ಅನ್ನೊ ಈಗ ।
ಹರಿಹರಾ ಬೇದ ಮಾಡಬೇಡ ಕೇಳೋ ತಂದೆ ಈಗ ॥೩॥
ಸಿಟ್ಟ ಬಂತೋ ಹಿರಣ್ಯಕಶೆಪ್ಪಗ ।
ಭಕ್ತ ಪ್ರಲ್ಹಾದನ ಓದ ಬಿಟ್ಟಾನೋ ಆರ್ಯಾಣದ ಒಳಗ ।
ಹರಿಸ್ಮರಣೆ ಮಾಡುತ್ತಿದ್ದ ಮನದಾಗ ।
ಮರುದಿನ ಹೋಗಿ ಪ್ರಲ್ಹಾದನ ತಂದಾನ ಹಿರಣ್ಯಕಸೆಪ್ಪಾಗ ॥೪॥
ಕಾಜಿನ ಕಂಬಕ ಕಟ್ಟಿ ಬಡಿಯತೀನ ಬಿಡಸವರಯಾರ ನಿನಗ ।
ನಾರಾಯಣ ಅದಾನ ಏನೋ ಕಂಬದಾಗ ।
ನರಸಿಂಹ ಅವತಾರ ತಾಳಿ ಹೊರಗ ಬಂದ ಕಂಬದ ಒಳಗಿಂದ
ಭಕ್ತ ಪ್ರಲ್ಹಾದಗ ನಾರಾಯಣನೊಲಿದಾನ ಈಗ ॥೫॥
ಹಿರಣ್ಯ ಕಶೆಪ್ಪಿಗ ಹೋಗಿ ಕುಂತ ಹೊರಸಲು ಮ್ಯಾಗ ।
ಹರಿ ಕೇಳತಾನ ಹತಾರ ಐತಿಯಾನ ನನ್ನ ಕೈಯಾಗ ।
ರಾತ್ರಿ ಐತಿಯಾನ ಹಗಲ ಐತಿಯಾನ ಹೇಳಬೇಕ ಎನಗ ।
ಒಳಗ ಐತಿಯಾನ ಹೊರಗ ಐತಿಯಾನ ನೋಡಿ ಹೇಳ ಈಗ ॥೬॥
ತನ್ನ ಉಗರೀಲಿ ಸೀಳಿ ವಗಿದಾನೋ ಹಿರಣ್ಯಕಸೆಪ್ಪಗ ।
ಸಿದ್ಧಶೂರನ ದಯ ನಮ್ಮ ಮ್ಯಾಲ ನಿಡಗುಂದಿ ಊರಾಗ ।
ಪರಶುರಾಮ ಕವಿಯ ಹೇಳಿದೊ ಹಿಂಗ ॥೭॥

ಕವಿಯ ಒಂದು ಅನುಭಾವ ಪದದಲ್ಲಿ ಶರೀರ ಕುರಿತು ಈ ರೀತಿ ಹೇಳುತ್ತಾನೆ.

"ನಾನು-ನೀನು ಅನ್ನುದ ಸುಳ್ಳೈತಿ ತಮ್ಮಾ ತಿಳಿಯ ಮನಕ ಪೂರಾ ।
ಮೂರು ದಿನದ ಈ ಸಂತಿ ಕುಡೇತಿ ಮಾಡಿಕೊ ವ್ಯಾಪಾರಾ ।
ಬಿಟ್ಟ ಹೋಗುದ ಒಂದಿನಾ ಯಮಪೂರಾ
ಸತ್ಯ ಶರಣರು ಸಭಾ ಕೂಡಿದೇರಿ ಮಾಡಿರಿ ವಿಚಾರಾ ।

ಕಾಯಾಪೂರ , ಪಟ್ಟಣದ ವಿಕಾರಾ ಬಿಟ್ಟ ಹೋದ ಪೂರಾ,

ಕಾಯಾಪೂರ ಹಾಳಬಿತ್ತ ನಗರ, ಪರಶುರಾಮ ಹೇಳಿದ ವಿಸ್ತಾರಾ"[೩]

ರಾಮು ಪೂಜೇರಿ [ರಾಗಿರಾಮ]

ಈತನ ಊರು ಅಲಖನೂರ. ಉದ್ಯೋಗ ಒಕ್ಕಲುತನ ಮತ್ತು ಕುರಿಗಾರಿಕೆ. ಪಾರವ್ವ ಈತನ ಹೆಂಡತಿ. ತುಂಬು ಸಂಸಾರ. ಆರಾಧ್ಯದೈವ ಅಲಖನೂರಿನ ಕರಿಸಿದ್ಧ. ಹಾರೂಗೇರಿಯ ಅಲಭೈರಿಯನ್ನು ತನ್ನ ಗುರುವಾಗಿ ಸ್ವೀಕರಿಸಿಕೊಂಡಿದ್ದ. ಅಲಭೈರಿ ತನ್ನ ಶಿಷ್ಯನ ಮನೆಯಲ್ಲಿ ತಿಂಗಳ ಪರ್ಯಂತ ಇರುತ್ತಿದ್ದನು. ಈತ ತನ್ನ ಗುರುವಿನಿಂದ ಹಲವಾರು ಗಂಭೀರ ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದನು. ಮೊದ ಮೊದಲು ಅಲಭೈರಿಯ ಪದಗಳನ್ನು ಆಲಿಸುತ್ತಿದ್ದ ರಾಮು ನಂತರದ ದಿನಗಳಲ್ಲಿ ತಾನೆ ಸ್ವತಃ ಪದ ಕಟ್ಟಲು ಪ್ರಾರಂಭಿಸಿದ.

ತನ್ನ ಗುರು ಅಲಭೈರಿಗೆ ಭಯಂಕರ ಬೇನೆ ತಗುಲಿದಾಗ ಅತಿ ಹೆಚ್ಚು ಗುರು ಸೇವೆ ಮಾಡಿದವನು ರಾಮು ಪೂಜೇರಿ. ಹೆಗಲ ಮೇಲೆ ಹೊತ್ತುಕೊಂಡು ಗುರುಸೇವೆ ಮಾಡಿದ್ದಾನೆ. ಅಷ್ಟು ಗುರು-ಶಿಷ್ಯರ ಸಂಬಂಧ ಗಾಢವಾಗಿತ್ತು. ಡೊಳ್ಳಿನ ಹಾಡುಗಳು ರಾಮು ಪೂಜೇರಿಯ ಆಸಕ್ತಿಯ ಕ್ಷೇತ್ರ. ಈತ ರಚಿಸಿದ ಡೊಳ್ಳಿನ ಹಾಡುಗಳು ಅಪಾರ. ಸ್ವತಃ ರಚನಕಾರ ಹಾಗೂ ಹಾಡುಗಾರನೂ ಆಗಿದ್ದನು. ದೇವರ ಲೀಲೆ ಮತ್ತು ಅಧ್ಯಾತ್ಮಿಕ ಚರ್ಚೆಯಲ್ಲಿ ವಿಶೇಷ ಆಸಕ್ತಿ. ಹಾಲುಮತ ಇತಿಹಾಸ, ಬೀರದೇವ, ಮಹಾಲಿಂಗರಾಯ, ಪಾಂಡುಪ್ರತಾಪ, ಮಹಾಭಾರತ ಹಾಗೂ ರಾಮಾಯಣದ ಬಗ್ಗೆ ವಿಷಯಗಳನ್ನು ಮಂಡಿಸುತ್ತಿದ್ದನು.

ಅನುಭಾವ ಪದಗಳು ಕರ್ಬಲ್ ಪದಗಳನ್ನು ರಚಿಸುತ್ತಿದ್ದನೆಂದು ಶಿವಪ್ಪ ಲಕ್ಷ್ಮಣ ಪೂಜೇರಿ ಹೇಳುತ್ತಾರೆ. ಆದರೆ ಕವಿಯ ಕರ್ಬಲ್ ಪದ ಲಭ್ಯವಾಗಿಲ್ಲ. ಗವನಾಳ, ಹೆಬ್ಬಾಳ, ಕ್ಯಾಸ್ತಿ, ಅರ್ಜುನವಾಡ, ನಿಪನಾಳ, ಸವಸುದ್ಧಿ, ಕಾರದಗಾ, ಕಡೊಳಿ, ಹುಲಜಂತಿ, [ಮಹಾರಾಷ್ಟ್ರ] ಹಿಡಕಲ್ ಮುಂಡಗನೂರ, ಜಮಖಂಡಿ, ಮಧುರಖಂಡಿ, ಕೊಣ್ಣೂರ, ಕಂಕನವಾಡಿ ಮುಂತಾದ ಸ್ಥಳಗಳಲ್ಲಿ ರಾಮು ಪೂಜೇರಿ ಮೇಳ ಕಟ್ಟಿಕೊಂಡು ಅಲೆದಿದ್ದಾನೆ. ಅನಕ್ಷರಸ್ಥರಾದ ರಾಮು ಪೂಜೇರಿಗೆ ಅಪಾರ ಶಿಷ್ಯ ಬಳಗವೂ ಇದೆ. ಅವರಲ್ಲಿ ಮಾರುತಿ ಭರಮಪ್ಪಾ ಪೂಜೇರಿ, ಮಹಾದೇವ ಪಡಚಿ, [ಅಳಗವಾಡಿ] ಯಲ್ಲಪ್ಪ ನಿಪನಾಳ, ಪ್ರಸಿದ್ಧ ಶಿಷ್ಯರು. ಕವಿ ಭಾವ ಪರವಶನಾಗಿ ಹಾಡುತ್ತಿದ್ದನು. ಕ್ಯಾಸ್ತಿಯಲ್ಲಿ ಕವಿ ಭಾವಪರವಶನಾಗಿ ಹಾಡುವಾಗ ಹೆಣ್ಣುಮಗಳೊಬ್ಬಳು ತನ್ನ ಕೈಯಲ್ಲಿಯ ಕೂಸನ್ನೇ ಕೆಳಗೆ ಬಿಟ್ಟಿದ್ದಳಂತೆ. ಮದಬಾವಿಯಲ್ಲಿ ಅಪ್ಪಾಲಾಲನ ಪಾರಿಜಾತವನ್ನೇ ನಿಲ್ಲಿಸಿದ ಶ್ರೇಯಸ್ಸು ರಾಮು ಪೂಜೇರಿಯದು. ಮೇಲಿನ ಈ ಎರಡು ನಿದರ್ಶನದಿಂದ ರಾಮು ಒಳ್ಳೆಯ ಕಂಠಸ್ಥನಾಗಿದ್ದು, ರಾಗಬದ್ಧವಾಗಿ ಹಾಡುತ್ತಿದ್ದನೆಂದು ತಿಳಿಯುತ್ತದೆ. ಇದರಿಂದಲೇ ರಾಮು ಪೂಜೇರಿಯನ್ನು "ರಾಗಿರಾಮು" ಎಂದು ಗುರುತಿಸುತ್ತಿದ್ದರೆಂದು ಕಲ್ಪಿಸಿಕೊಳ್ಳಲು ಸಾಧ್ಯವಿದೆ.

ರಾಮು ಪೂಜೇರಿಯ ಶಿಷ್ಯ ರಾಮಪ್ಪ ಭೀಮಪ್ಪಾ ಚೌಗಲಾ. ಅವರು ಕವಿಯ ಪ್ರೇರಣೆಯಿಂದ ತಾನು "ಭರತಖಂಡದ ಕರ್ನಾಟಕದಲ್ಲಿ ಹಾಲುಮತದ ಇತಿಹಾಸ" [೧೭೩ ಪುಟ], ಎಂಬ ಕೃತಿ ರಚಿಸಿದ್ದಾಗಿ ಹೇಳುತ್ತಾರೆ. ಕವಿಯ ಕೊನೆಯ ದಿನಗಳು ತೃಪ್ತಿಕರವಾಗಿರಲಿಲ್ಲ. ಮಾನಸಿಕ ತೊಂದರೆಗೆ ಒಳಗಾಗಿ ತೀರಿ ಹೋದನೆಂದು ಹೇಳುವರು. ಕವಿಯ ಡೊಳ್ಳಿನ ಹಾಡುಗಳೆಲ್ಲವೂ ಅಪ್ರಕಟಿತ. ದೊರೆತ ಕೆಲ ಅಪ್ರಕಟಿತ ಹಾಡುಗಳನ್ನೆ ಇಲ್ಲಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಕವಿ ರಾಮು ಪೂಜೇರಿ ಹಲವು ರೂಪಗಳನ್ನು ಕೊಟ್ಟು ಬೀರದೇವನ ಗುಣಗಾಣ ಮಾಡಿದ್ದನ್ನು "ಕರಿಸಿದ್ಧನಮಹಿಮೆ" ಎಂಬ ಡೊಳ್ಳಿನ ಹಾಡಿನಿಂದ ಕಾಣಬಹುದು.

ರಾಯಬಾಗ ತಾಲ್ಲೂಕಿನ ಅಲಖನೂರ ಹಾಲುಮತದ ಬೀರದೇವನ ಆದಿಸ್ಥಳ. ಇಲ್ಲಿ ಕುರುಬ ಜನಾಂಗ ಅಪಾರ. ಇಲ್ಲಿ ಪ್ರತಿದಿನ ದೇಶದ ನಾನಾ ಕಡೆಯಿಂದ ಭಕ್ತಾದಿಗಳು ಆಗಮಿಸುತ್ತಾರೆ. ಅವರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಹಲವು ತೆರನಾದ ಪೂಜೆ ಹರಕೆಗಳನ್ನು ನಡೆಸುತ್ತಾರೆ. ತಮ್ಮ ಆರಾಧ್ಯದೈವ ಕರಿಸಿದ್ಧನಲ್ಲಿ ಅಚಲವಾದ ನಂಬಿಕೆಯಿದೆ.

"ಸಿದ್ಧರಾಮ ಶಿವ ಸಿದ್ದಾನ ಇಂವ । ಕರೇಸಿದ್ಧ ಮಹಾದೇವನೋ ।
ವಿದ್ಯಾ ವಿದ್ಯೆಗೆ ಸಾಕ್ಷಿವಂತ । ಬುದ್ಧಿವಂತರ ಮಗನಿವನೋ । ಪ ।
ಜಗದಾದಿ ಭಕ್ತರ ಮನಸ್ಸಿನ ಮನೆಯೊಳಗೆ । ಭಜನೆಯ ಮಾಡಿಸಿಕೊಂಡವನೋ । ಭಜನೆಯ ಮಾಡಿಸಿಕೊಂಡವನಯ್ಯಾ । ಶಿಶುನಾಳ ದೇವರ ದೇವಾನೋ ।
ಭಕ್ತ ಭವಾಹಾರ ಭಾವನಿರ್ಮಳ । ಮುಕ್ತಿಯ ಮನೋಹರ ಕಾಣತಾನೋ ।
ಹಿಂಡದೈತರನೆಲ್ಲ ಬಂಡ ಮಾಡತಾ ಪುಂಡ ಎನಿಸಿಕೊಂಡವನಿವನೋ ।
ಪುಂಡಅನಸಿಕೊಂಡ ಅಖಂಡ ಮೂರುತಿ । ಮಂಡಲ ಗಡೀಶ್ವರ ಮಹಿಮಾನೋ ।
ಮಂಡಲ ಗಡೀಶ್ವರ ಮಹಿಮನ ಸೇವಾ । ಧರೆಯೊಳು ಕಂಡವರಾರಿಲ್ಲಪ್ಪನೋ ।
ಕಣ್ಣಲ್ಲಿ ಕಂಡವರಾರಿಲ್ಲಪ್ಪನೋ । ಕೈಮುಟ್ಟಿ ಇಟ್ಟವರಾರಿಲ್ಲಪ್ಪನೋ ।
ಕಣ್ಣಲ್ಲಿ ಕಂಡವರು ಕೈಮುಟ್ಟಿ ಇಟ್ಟವರೋ । ಗಂಗಿಯ ನಾಡಾಗ್ಯೆದಾರೋ ।
ಅವರು ಗೌರಿಯ ನಾಡಗ್ಯೆದಾರೋ । ಅವರು ಗೌರಿಯ ನಾಡಾಗ್ಯೆದಾರೋ ।
ಗುರು ಅಲಭೈರಿ ಶಿಷ್ಯರಾಮು ಪೂಜೇರಿ । ಇದನು ಕಂಡು ಹೇಳಿದವರೋ।"[೪]

ಈ ರೀತಿಯಾಗಿ ಕವಿ ರಾಮು ಬೀರದೇವನನ್ನು ವಿದ್ಯೆ-ಬುದ್ಧಿಗೆ ಸಾಕ್ಷಿವಂತ ಹಿಂಡ ದೈತರ ಪುಂಡ ಅಡಗಿಸಿದ ಪುಂಡರೀಕ ಅಂತ ನಾನಾ ರೀತಿಯಲ್ಲಿ ಸಿದ್ಧರಾಮ ಶಿವನನ್ನು ಸ್ತುತಿಸುತ್ತಾನೆ.

ರಾಮು ಪೂಜೇರಿ ರಾಮಾಯಣ-ಮಹಾಭಾರತವನ್ನು ಕುರಿತು ಸಾಕಷ್ಟು ಅಭ್ಯಾಸ ಮಾಡಿದ್ದಾನೆ. "ಸೀತಾ ಸ್ವಯಂವರ" ಎಂಬ ಡೊಳ್ಳಿನ ಹಾಡಿನಲ್ಲಿ ಜನಕ ಮಹಾರಾಜನು ಸೀತೆಯ ಸ್ವಯಂವರ" ಏರ್ಪಡಿಸಿದ ವಸ್ತು ಇದೆ. ಮೊದಲು ರಾವಣ ಬಂದು ಧನಸ್ಸು ಎತ್ತದೆ ಮರುಕಳಿಸಿ ನೆಲಕ್ಕೆ ಅಪ್ಪಳಿಸುತ್ತಾನೆ.

"ಜನಕ ರಾಜಾ ಹಿಂಗ ಶ್ರುತಿಯ ಸಾರುತ್ತಿದ್ದ । ಕಾಗಿನ ಒಗದಂವಗ
ಸೀತಾನ ಕೊಡತೀನ ಗೆದ್ದ ಒಯ್ಯರಿ ನೀಂವು ಪಂಡಿತರಾ ॥ಪಲ್ಲ॥
ಕಾಗಿನಂದರ ಏನ ಬಿಸಾಟಾಬಿರಿರಿ ಒಗದೀನ ಬಿಸಕಾಸಿ ।
ರೆಕ್ಕ ಮುರಿದಿನಪ್ಪಾ ಗಣ ಏರಿಸಿ ।
ಜನಕ ರಾಜನ ಸದರಿನೊಳಗೆ ರಾವಳ ಬಂದಾನೋ ದುಮಕಾಸಿ ।
ಅಂವ ಏನ ಹೇಳಿ ಹೋದಾ ಸಮ್ಮೋಸಿ ।
ಪಂಚಾಮೃತದ ಅಡಿಗೆ ಮಾಡಲಾಕ ರಾವಳ ಹೇಳ್ಯಾನ ಕರೆಕಳುಸಿ ।
ನೀವು ಎಲೆ ಹಾಸರೆಪ್ಪರೋ ಭಲೆ ಬೇಸಿ ।
ನಾ ತುಗೋತಿನಾಗ ಧನ್ನೋಸ್ಸಿ । ಮರ್ತ್ಯಲೋಕ ಸುದ್ದಿ
ಕೈಲಾಸಕ್ಕೆ ಅರು ಉಂಟಾಗಿ । ಕಾಗಿಯ ಬಂದಿತ ಬರಕಾಸಿ ।
ಆಗ ಅನ್ನ ಮುಟ್ಟಿ ಹೋತ ಎಲಿ ಕೆಡಸಿ ।
ರಾವಳ ಕೆಳಗ ಎದಿ ಮ್ಯಾಲ ಬಾಣ । ಹಿಂದಕ ಬಿದ್ದಾಗ ಮರುಕಳಸಿ ।
ಬುಡಕ್ಕೆ ಸಿಕ್ಕ ರಾವಳ ಆದಾನೋ ಗಾಸಿ ।"

ಈ ಸಂದರ್ಭದಲ್ಲಿ ಸೀತೆಯು ತನ್ನ ತಲೆಯ ಮೇಲಿನ ಸೆರಗನ್ನು ತೆಗೆದು ನನ್ನ ಆಳುವಂತಹ ಪುರುಷರಿಲ್ಲೋ ಈ ಸದರಿಗೆ ಎಂದಾಗ ರಾಮ-ಲಕ್ಷ್ಮಣರಿಗೆ ಪತ್ರ ಬರೆಯುತ್ತಾರೆ.

"ರಾಮ ಲಕ್ಷ್ಮಣ ವನದಾಗ ಇದ್ದಾಗ ಪತ್ರರ ಬರೆದಾರ ಪುರಮಾನಸಿ ।
ರಾಮ ಓದಿ ಹೇಳಿದ ಸಮಜಾಸಿ । ತಮ್ಮ ಲಕ್ಷ್ಮಣ ಅಣ್ಣನ ಕೇಳತಾನ ।
ಪತ್ರರ ಬರೆದಾರ ಪುರಮಾನಸಿ। ಅಣ್ಣ ರಾಮದೇವರ ತಮ್ಮಗ ಹೇಳುತ್ತಾನ ।
ಹನ್ನೆರಡು ವರ್ಷ ಉಪವಾಸ ಇದ್ದಾಂಗ ಬಾಣ ಆಗತದ ಕೈವಸಿ।
ಆಗ ಕಾಗಿ ಆಗತೈತಿ ನಾಪಾಸಿ ।
ತಮ್ಮ ಲಕ್ಷ್ಮಣ ಅಣ್ಣಗ ಹೇಳತಾನ । ನಾ ಅದೀನಿ ಸದಾ ಉಪವಾಸಿ ।
ಅಣ್ಣ ರಾಮದೇವರ ತಮ್ಮಗ ಹೇಳತಾನ । ಹಿಂದಕಲೆ ಕೊಟ್ಟೀನಿ
ಒಂದು ಹಣ್ಣಾ । ನಿನ್ನ ಜಡತಿ ತುಗೋತಿನಿ ವನದಾಗ।
ತಮ್ಮ ಲಕ್ಷ್ಮಣ ಅಣ್ಣಗ ಹೇಳತಾನ ಹಣ್ಣ ಸೀಳಿ ಕೊಟ್ಟದಿ ನನಗ ।
ಅದನ ಒಳ ತೊಡಿಯಾಗ ಇಟ್ಟೀನಿ । ಭ್ಯಾಗಾತಗದ ತೋರಿಸಲೇನು

ವನದಾಗ । ಹಣ್ಣ ನೋಡಿ ಅಣ್ಣ ರಾಮದೇವ ದು:ಖನಾದ
ಮನದಾಗ । ಇನ್ನು ಹೋಗುನು ನಡಿ ಅಂದ ಜನದಾಗ ।
ಗುರು ಅಲಭೈರಿ ಶಿಷ್ಯ ರಾಮ ಪೂಜೇರಿ– ತಿಳಿಸಿ ಹೇಳಿದಾರ
ರಾಮಾಯಣ ಭಾಗ ಕುಂತ ಕೇಳರಿ ಸಭಾದಾಗ" ।[೬]

ರಾಮು ಪೂಜೇರಿ ಪೌರಾಣಿಕ ವಸ್ತುಗಳನ್ನು ಆಯ್ದುಕೊಂಡು ಸ್ಪಷ್ಟವಾಗಿ ಒಂದೊಂದು ವಿಷಯವನ್ನು ಹೇಳುತ್ತ ಹೋಗುತ್ತಾನೆ. ಇಡೀ ರಾಮಾಯಣ ಕಥೆಯನ್ನು ಕವಿ ಡೊಳ್ಳಿನ ಹಾಡಿನ ಮೂಲಕ ಸಹೃದಯರಿಗೆ ಹೇಳಿದ್ದಾನೆ.

ರಾಮಾಯಣದ ಕಥೆಯನ್ನು ಸಂಪೂರ್ಣವಾಗಿ ಯಾರೊಬ್ಬರಿಂದಲೂ ಹೇಳಿ ಮುಗಿಸಲು ಸಾಧ್ಯವಿಲ್ಲ ಅದನ್ನು ಒಬ್ಬ ಕುರುಬನ ಮಾತಿನಿಂದ ಮುಗಿಸುತ್ತೇನೆ ಎಂದು ಸಂಕ್ಷಿಪ್ತವಾಗಿ ರಾಮಾಯಣ ಕಥೆಯನ್ನು ತಮ್ಮ ಡೊಳ್ಳಿನ ಹಾಡಿನ ಮೂಲಕ ಹೇಳಿದ್ದಾನೆ.

"ರಾಮರಾಮನಂತೆ ರಾಮಾಯಣ ಮುಗಿಸುವವನೋ ।
ಕಲಿಯೊಳಗ ಇಲ್ಲ ಯಾವ ಯಾವನೋ ।
ಒಬ್ಬ ಕುರುಬನ ಮಾತಿನಿಂದ ಮುಗಿಸುವೆನೋ" ॥ ಪ ॥[೭]

ಈ ಪದ್ಯದಲ್ಲಿ ಕವಿ ರಾಗಿರಾಮ ಸಂಕ್ಷಿಪ್ತವಾಗಿ ಇಡೀ ರಾಮಾಯಣದ ಭಾಗವನ್ನೇ ಎಳೆ ಎಳೆಯಾಗಿ ಬಿಡಿಸುತ್ತ ಕುರುಬನ ಜನಪದ ರಾಮಾಯಣವನ್ನೇ ಹೇಳುತ್ತಾನೆ. ಈ ರೀತಿ ಕವಿ ಅನಂತ ವಿಷಯಗಳನ್ನು ತನ್ನ ಹಾಡಿನಲ್ಲಿ ವ್ಯಕ್ತಪಡಿಸಿದ್ದಾನೆ. ಪ್ರತಿಯೊಂದು ಹಾಡಿನ ಕೊನೆಗೆ ತನ್ನ ಗುರು ಅಲಭೈರಿಯನ್ನು ಸ್ಮರಿಸುತ್ತ ತನ್ನ ಹೆಸರನ್ನು ಗುರುತಿಸಿದ್ದಾನೆ.

ಮೀರಾಸಾಬ ವಸ್ತಾದ

ಕವಿಯ ಪೂರ್ಣ ಹೆಸರು ಮೀರಾಸಾಬ ಸೀರಾಜಸಾಬ ಮುಲ್ಲಾ. ಈತನ ಮೂಲಸ್ಥಳ ಪರಮಾನಂದವಾಡಿ. ಉದ್ಯೋಗ ಒಕ್ಕಲುತನ. ಹತ್ತಿ ತುಂಬುವುದು ಮತ್ತು ಎಣ್ಣೆ ತೆಗೆದು ವ್ಯಾಪಾರವನ್ನು ಮಾಡುತ್ತಿದ್ದನು. ತಾಯಿ – ಮಾಸಾಭಿ. ೨ ನೆಯ ತರಗತಿ ಓದಿದವನು. ರೀವಾಯತ್, ಗೀಗೀಪದ, ಡೊಳ್ಳಿನ ಪದಗಳು ಹಾಗೂ ಭಜನಾ ಪದಗಳನ್ನು ರಚಿಸುತ್ತಿದ್ದನೆಂದು ಈತನ ಶಿಷ್ಯರು ಹೇಳುವರು. ಬಹುಮುಖ ಪ್ರತಿಭಾವಂತ ಕವಿ. ಕೆಲವು ನಾಟಕಗಳಲ್ಲಿಯೂ ಅಭಿನಯಿಸಿದ್ದಾನೆ. ಹರಿಶ್ಚಂದ್ರ ನಾಟಕದಲ್ಲಿ ಕುಲಕರ್ಣಿ ಪಾತ್ರ, ಸಂಗೊಳ್ಳಿರಾಯಣ್ಣ ನಾಟಕದಲ್ಲಿ – ಶಾಂತಾನಂದ ಗುರು ಪಾತ್ರ ಹಾಗೂ ಶ್ರೀ ನೀಲಕಂಠ ನಾಟಕದಲ್ಲಿಯೂ ಭಾಗವಹಿಸಿದ್ದಾನೆ. ಶ್ರೀ. ಗುರು ಬ್ರಹ್ಮಾನಂದ ಶಿವಯೋಗಿಗಳು ಕವಿಯ ಗುರುಗಳು. ಸ್ವತಃ ಹಾಡುಗಾರನಾಗಿಯೂ ರಾಯಬಾಗ, ಅಥಣಿ, ಚಿಕ್ಕೋಡಿ ತಾಲ್ಲೂಕ, ಹಿರೇಕೇರೂರು, ಮಹಾರಾಷ್ಟ್ರ, ಮಿರಜ, ಕಾಗಲ ಮುಂತಾದ ಕಡೆಗೆ ಸಂಚರಿಸಿ ತನ್ನ

ಕಲೆಯನ್ನು ಪ್ರದರ್ಶಿಸಿರುವನು. ಅನುಭಾವ ಮತ್ತು ಸತ್ಸಂಗದಲ್ಲಿ ಆಸಕ್ತಿ, ಶಾಸ್ತ್ರಕಾರನೂ ಹೌದು. ಸಮಾಜಸೇವೆ ಅವನ ಇನ್ನೊಂದು ಕ್ಷೇತ್ರ. ಪಂಚಾಯತ್ ಸದಸ್ಯನಾಗಿದ್ದ. ತುಂಬ ಬಡತನ. ಆದರೆ ಆತನ ಸಾಹಿತ್ಯ ಮಾತ್ರ ಶ್ರೀಮಂತ. ಮನೆಯ ಕಡೆಗೆ ಆಸಕ್ತಿ ಕಡಿಮೆ. ಕವಿಯು ತನ್ನ ೮೩ನೆಯ ವಯಸ್ಸಿನಲ್ಲಿ ಅಸ್ತಮಾ ಕಾಯಿಲೆಯಿಂದ ಕೊನೆಯುಸಿರೆಳೆದನೆಂದು ಹೇಳುವರು.

ಈತ ರಚಿಸಿದ ಸಾಹಿತ್ಯವೆಲ್ಲ ಅಪ್ರಕಟಿತ. ನನಗೆ ದೊರೆತ ಕೆಲವು ತತ್ವ ಪದಗಳನ್ನು ಇಲ್ಲಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

"ಗುರುವಿನ ಮಹತ್ವ" ಎಂಬ ಶೀರ್ಷಿಕೆಯಡಿಯಲ್ಲಿರುವ ಈ ತತ್ವ ಪದದಲ್ಲಿ ಕವಿ 'ಆ ದೇವರು ಈ ದೇವರು ಅಂತ ಏಕೆ ಕಾಲ ಕಳೆಯುತ್ತಿರುವಿರಿ. ಯಾವ ದೇವರು ನಮ್ಮ ಸಂಕಷ್ಟವನ್ನು ದೂರ ಮಾಡುವುದಿಲ್ಲ. ಕಾಶಿಗೆ ಹೋದರೆ, ವೆಂಕಟಗಿರಿಗೆ ಹೋದರೆ, ಕಾಡಿನಲ್ಲಿ ಗಡ್ಡೆ ಗೆಣಸು ತಿಂದರೂ ನಮ್ಮ ಮನಸ್ಸಿನ ತೊಂದರೆ ಹೋಗಲಾಡಿಸಲು ಸಾಧ್ಯವಿಲ್ಲ, ನಮ್ಮ ಮನಸ್ಸು ಯಾವಾಗಲೂ ಗುರು ಪಾದದಲ್ಲಿ ಇದ್ದರೆ ಸಾಕು ಭವದ ರೋಗವನ್ನೇ ಹೋಗಲಾಡಿಸುತ್ತಾನೆ' ಎನ್ನುತ್ತಾನೆ.

"ಶಿವಶಿವ ಅಂತ ಹಲುಬುದ ಯಾತಕೋ ।
ಶಿವ ಬೇಕಾದರೆ ಗುರುವಿನ ಹುಡುಕೋ।
ಅಂವ ಇಂವ ದೇವರು ನಿನಗ್ಯಾತಕೋ ।
ಗುರು ಪಾದದಲ್ಲಿ ಇದ್ದರೆ ಸಾಕೋ ॥ಪ॥
ಶಿವಶಿವ ಎಂದರೆ ನೀ ಶರಣ ಆಗಲಿಲ್ಲ ।
ಗೋವಿಂದನ ಭಜಿಸಿದರೆ ಭಕ್ತ ಆಗಲಿಲ್ಲ ।
ಭವಮಾಲಿ ಹರದ ಚೆಲ್ಲಬೇಕೋ ।
ಗುರು ಪಾದದಲ್ಲಿ ಇದ್ದರೆ ಸಾಕೋ ।
ವೆಂಕಟಗಿರಿಗೆ ಹೋದರೆ ಸಂಕಷ್ಟ ಆಗುವುದಿಲ್ಲ ।
ಬಿಕ್ಕಟ್ಟ ಪ್ರಸಂಗ ಜನನ ಮರಣ ದೂರ ಆಗುವುದಿಲ್ಲ ।
ಒಕ್ಕಟ ಮಾಡಿ ಮರಣ ಇಂದ್ರಿ ಇದ್ದರೆ ಕೂಡಿಕೋ।
ವಾಕ್ಯಗುರು ಹೇಳಿದಾಂಗ ನೀ ಕೇಳಿಕೋ।" ೮

ಮನುಷ್ಯ ಪರಿಪೂರ್ಣ ವ್ಯಕ್ತಿ ಆಗಬೇಕಾದರೆ ಮೊದಲು ಅವನು ಭವಬಂಧನದಿಂದ ಮುಕ್ತಿ ಪಡಿಯಬೇಕು. ಅದಕ್ಕಾಗಿ ಶ್ರೇಷ್ಠ ಗುರುವಿನ ಅವಶ್ಯಕತೆಯನ್ನು ಒತ್ತಿ ಹೇಳುತ್ತಾನೆ. ಕವಿ ಮತ್ತೆ ಡಾಂಬಿಕತನವನ್ನು ಖಂಡಿಸುತ್ತಾನೆ.

"ಕಾಶಿಗೆ ಹೋದರೆ ಪಾಶೆ ತಪ್ಪುವುದಿಲ್ಲ ।
ದೇಶದೇಶ ತಿರುಗಿದರೆ ದೋಷ ಹೋಗುವುದಿಲ್ಲ।
ಭಾಷಣ ಇಲ್ಲದೆ ಮೌನ ಇರುವುದು ಯಾತಕೋ ।
ಗುರು ದ್ಯಾಸದಲ್ಲಿ ಇದ್ದರೆ ಸಾಕೋ ।
ಗಡ್ಡಾ ಜಟಾ ಬಿಟ್ಟ ಗುಡ್ಡಾ ಸೇರಬೇಡಾ ।
ಗೆಡ್ಡಿ ಗೆಣಸು ತಿಂದ ಈ ಶರೀರ ಒಣಗಿಸಬೇಡಾ॥
ಕಡಿ ಜನ್ಮ ತಿರುಗಿ ಹುಟ್ಟುವುದು ಯಾತಕೋ।
ದ್ಯಾಸಗುರು ಪಾದದಲ್ಲಿದ್ದರೆ ಸಾಕೋ।
ಮನಿಬಿಟ್ಟು ಹೋದರೆ ಮನಾ ನಿಲ್ಲುವುದಿಲ್ಲ।
ವನಾ ವನಾ ತಿರುಗಿದರೆ ಜ್ಞಾನ ಆಗುವುದಿಲ್ಲ ।
ಕಣ್ಣಮುಚ್ಚಿ ಕರಿಮಣಿ ಎಣಿಸುವುದು ಯಾತಕೋ।
ದ್ಯಾಸ ಗುರು ಪಾದದಲ್ಲಿ ಇದ್ದರೆ ಸಾಕೋ।
ಹಜ್ಜೆ ಮಾಡಿ ಬಂದಿ ಮಕ್ಕಾ ಮದೀನಾ ।
ಪಚ್ಚೆಕ ಮುಟ್ಟಿ ನಿನಗ ಆಗಲಿಲ್ಲ ಜ್ಞಾನಾ ।
ಗಜಿ ಬಿಜಿ ಗದ್ದಲ ಬಿಡಬೇಕೋ ।
ಗುರುವಿನ ಭಜನೆ ಮಾಡತಿರಬೇಕೋ।
ಅವ ಇವ ದೇವರ ಯಾತಕೋ ।
ಭವರೋಗ ಹೋಗುವುದು ಬಂದು ನೋಡಿಕೋ।
ಅಲ್ಲಿ ಇಲ್ಲಿ ಇಲ್ಲ ಎಲ್ಲೆಲ್ಲಿ ಹೋಗಬೇಡಾ ನೋಡಿಕೋ ।
ಬಾಲ ಮೀರಾ ಮುಲ್ಲಾ ಹೇಳಿದ ತಿಳಿದುಕೋ ।
ಪರಮಾನಂದನ ಕೂಡಿಕೋ ।
ಅವ ಇವ ದೇವರ ನಿನಗ್ಯಾತಕೋ।"[೯]

"ಮಾಸಾಪ್ತಿ ದರ್ಗಾ ಚರಿತ್ರೆ" ಈ ತತ್ವ ಪದದಲ್ಲಿ ಮಾಸಾಭಿ ಅಥವಾ ಮಾಸಾಪ್ತಿಯ ಮಹಿಮೆಯನ್ನು ಕೊಂಡಾಡಿದ್ದಾನೆ. ಕುಡಚಿ ಮಾಸಾಪ್ತಿ ದರ್ಗಾ ಇದು ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಸಂಕೇತ. ಇಲ್ಲಿ ಹಿಂದೂ-ಮುಸ್ಲಿಂರೆಲ್ಲರೂ ಯಾವುದೇ ಭೇದ ಭಾವವಿಲ್ಲದೆ ತಾಯಿ ಮಾಸಾಭಿಯನ್ನು ಪೂಜಿಸುತ್ತಾರೆ. ಹಿಂದುಗಳು ತಮ್ಮ ಮನೆಯಲ್ಲಿ ಏನೇ ಹೊಸ ಕಾರ್ಯ ನಡೆದರೆ ಮೊದಲು ಮಾಸಾಭಿಗೆ ನೈವೇದ್ಯವನ್ನು ಅರ್ಪಿಸುತ್ತಾರೆ. ಮನೆಯಲ್ಲಿ ಹೊಸ ವಾಹನ ತರಲಿ, ಮದುವೆ ಕಾರ್ಯ ನಡೆಯಲಿ ಮೊದಲು ತಾಯಿ ಮಾಸಾಭಿ ದರ್ಶನ ಅನಂತರ ಮುಂದಿನ ಕಾರ್ಯ. ತಾಯಿ ನಿನ್ನ ಮಹಿಮೆ ದೊಡ್ಡದು. ಬಡವರ ಅಮ್ಮಾ ನಿನ್ನ ಬಣ್ಣಿಸಲು ನನ್ನಿಂದ ಅಸಾಧ್ಯವೆ ಎಂದು ಕವಿ ಮೀರಾಮುಲ್ಲಾ ಭಕ್ತಿಯನ್ನು ಮೆರೆಯುವನು.

ಕೃಷ್ಣಾ ನದಿ ತೀರದಲ್ಲಿ ತಾಯಿ ಮಾಸಾಬಿ ಭಕ್ತಿಯಿಂದ ತಾಯಿಯ ನೆನೆದರೆ ಬೇಡಿದ್ದನ್ನು ನೀಡುವಳು ಎಂಬ ದೃಢ ನಂಬಿಕೆ.

"ಕುಡಚಿ ಗ್ರಾಮದಲಿ ಹಡದವ್ವ ಮಾಸಾಬಲಿ ।
ದೃಢ ಭಕ್ತಿ ಇಡರಿ ಅವರ ಮ್ಯಾಲಿ ।
ಬೇಡಿದ ಸಿಗತೈತಿ ಆಗುವುದಿಲ್ಲ ಖಾಲಿ ॥ ಪ ॥
ದೊಡ್ಡಸ್ಥಾನ ಪುಣ್ಯಕ ನೆಲಿ ।
ಕುಡಚಿ ಸ್ಥಾನದ ಮಹಿಮಾ ಆಗಲಿ ।
ಎಡಕ ಕೃಷ್ಣಾನದಿ । ದಂಡಿಲೀ ಊರ ಗರದಿ ।
ದೃಢ ಭಕ್ತರದ ನೋಡುತ ಹಾದಿ ।
ನಡು ಕುಂತಾಳ ನಮ್ಮ ಶಹಾಜಾದಿ ।
ಬಲಕ್ಕೆ ಬಾಷಾನ ಮಗಳ ಮಾಸಾಬತಿ ।
ಬಾಲ ವಸತಿಯೊಳಗೆ ಬಂತು ಉಪರತಿ ।
ಅಲ್ಲಾ ಅಲ್ಲಾ ಅಂತಾ ನಾಮ ನುಡಿಯುತ ।
ತಾಯಿನ ಆಗ ದೀಪರ ಕುರಾನ್ ಓದುತ ।
ಒಲಿದ ಭಕ್ತಿಗೆ ಮೆಚ್ಚಿ ಭಗವಂತ ।
ದೇಶ ತಿರುಗುತ ಬಂದರು ಕುಡಚಿ ಗ್ರಾಮ ।
ಬೇಷ ಸಿಕ್ಕಿತ್ರಿ ಜಾಗ ಭಾಳ ಆರಾಮ ।
ವಾಸ ಮಾಡ್ಯಾರಲ್ಲಿ ದ್ಯಾಸ ಶಿವನ ಮ್ಯಾಲಿ ।
ಮಾಸಾಬರ ಕುಂತಾರ ಜಪ ತಪದಲಿ ।
ಹಸನ ಮಾಡ್ಯಾರ ಮನಸ್ಸಿನ ಖಲಿ ।
ಕರುಣಾ ಮಾಡಿದ್ದ ಶಿವ ಅವರ ಮ್ಯಾಲಿ ।
ಗುರುವಿನ ಕಳಿಸ್ಯಾರ ಮಾಸಾಬರ ಬಲಿ।
ವ್ಯಕ್ತಿ ಪುರುಷವಲಿ ಬರದಿ ಬಂದಾರಲಿ ।
ಶರಣೆರ ಶಿಸ್ತಿ ಮನೆತನದ ವಂಶಾವಳಿ ।
ಫೀರ ಮಹಮ್ಮದ ಶಿರಾಜ ವಲಿ ।
ನೇಮ ತಿಳಿಸ್ಯಾರ ಮಾಸಾಬರಿಗಲಿ" ।೧೦

ಎಡಕ ಕೃಷ್ಣಾನದಿ ದಂಡೀಲಿ ಊರ ಬಹಳ ಗರದಿ ನಡುವೆ ಮಾಸಾಬಲಿ ಕಂಗೊಳಿಸುತ್ತಾಳೆ. ದೇಶ ತಿರುಗುತ್ತ ಕುಡಚಿ ಗ್ರಾಮದಲ್ಲಿ ನದಿಯ ಪಕ್ಕದಲ್ಲಿ ನೆಲೆಸುತ್ತಾಳೆ. ತಪಸ್ಸಿಗೆ ಮೆಚ್ಚಿ ಭಗವಂತ ಅವಳಿಗೆ ಉಪದೇಶ ಮಾಡಿ ಅವಳಲ್ಲಿಯ ಕಾಮ-ಕ್ರೋಧವನ್ನು ಹೋಗಲಾಡಿಸುತ್ತಾನೆ.

ಬಡ ಜನರಿಗೆ ಭಾಗ್ಯದ ಅಮ್ಮಾ ।
ದೊಡ್ಡ ಸಣ್ಣವರ ಮೇಲೆ ತಾಯಿ ಪ್ರೇಮಾ ।
ಎಡಬಲ ಇಲ್ಲ ಏನ । ನೋಡತಾಳ ತಾಯಿ ಒಂದ ಸವನ ।
ಪಂಡಿತ ಲಿಂಗಾಯತ ಬ್ರಾಹ್ಮಣ ಮುಸಲ್ಮಾನ ।
ನೋಡುವುದು ತಾಯಿ ಒಂದೇ ಸವನ ।
ಮಾಸಾಬತಿ ಕುರಿ ಕೋಳಿ ಬೇಡುವವಳಲ್ಲಾ ।
ತುಸು ಪಲ್ಲೆ ರೊಟ್ಟಿ ಸಲ್ಲಿಸಿದರೂ ತಪ್ಪೇನಿಲ್ಲಾ ।
ಮನಸ ಇಡರಿ ಹಸನ । ಗುರುವಾರ ಶುಕ್ರವಾರ ದಿನ।
ಮಾಸಾಬರದು ತಗೋರಿ ದರ್ಶನ ।
ತುಸು ಕೊಡ ಬೇಕ್ರಿ ಭಾವಾ ಜನರಿಗೆ ದಾನ।
ಹಿಡಿಯಿರಿ ಮುರಿಯುವ ಮಾತಲ್ಲಾ ।
ಸತ್ಯ ಶರಣೆ ಮಾಸಾಬರ ಲೀಲಾ ।
ಗೊತ್ತು ಇದ್ದಷ್ಟು ಹೇಳತಿನ್ರಿ ಎಲ್ಲಾ ।
ಕ್ಷಿತಿಯೊಳು ಪರಮಾನಂದವಾಡಿ ಸ್ತುತಿಯ ಮಾಡಿದರು ಮೀರಾಮುಲ್ಲಾ" ।[೧೧]

ಬಡ ಜನರಿಗೆ ಭಾಗ್ಯದ ಅಮ್ಮಾ ಎಂದೇ ಪ್ರಸಿದ್ಧಿಯಾದ ತಾಯಿ ಎಲ್ಲರನ್ನು ಒಂದೇ ದೃಷ್ಟಿಯಿಂದ ಕಾಣುತ್ತಾಳೆ . ಗುರುವಾರ-ಶುಕ್ರವಾರ ಅವಳ ವಾರದ ದಿನಗಳು. ದುಡಿಮೆಯ ತುಸು ಭಾಗವನ್ನು ಭಾವಾ ಜನರಿಗೆ ದಾನ ನೀಡಬೇಕು ಎಂದು ತಿಳಿಸುತ್ತಾಳೆ. ಮುಸ್ಲಿಂ ಧರ್ಮಿಯರು ಈಗಲೂ ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇಂತಹ ಮಹಾನ್ ತಾಯಿ ಜನಿಸಿದ [ವಾಸಿಸಿದ] ಕುಡಚಿ ಗ್ರಾಮ ಧನ್ಯವೆಂದು ಕವಿ ಹಾಡಿ ಹೊಗಳಿದ್ದಾನೆ. ಈಗಲೂ ಪ್ರತಿ ವರ್ಷ ರಜ್ಜಬ [ಜುಲೈ] ತಿಂಗಳಲ್ಲಿ ಹಿಂದೂ ಮುಸಲ್ಮಾನ ಜನರು ಈ ಮಾಸಾಬಲಿ ಜಾತ್ರೆಯನ್ನು ಆಚರಿಸುತ್ತಾರೆ.

ಸಿದ್ದಲಿಂಗ ವಸ್ತಾದ

ಈತನ ಸ್ಥಳ ಶಿರಗೂರ. ಉದ್ಯೋಗ ಒಕ್ಕಲುತನ. ಅನಕ್ಷರಸ್ಥನಾಗಿದ್ದರೂ ಸಹ ಸಾಕಷ್ಟು ಕರ್ಬಲ್ ರಿವಾಯಲ್ ಪದಗಳನ್ನು ರಚಿಸಿದ್ದಾನೆ. ಗುರುಸಿದ್ದ ನಿಂಗಪ್ಪ ದಳವಾಯಿ ಕವಿಯ ಶಿಷ್ಯರಲ್ಲಿಯೆ ಒಬ್ಬ. ಕವಿಯ ಕುರಿತು ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಅಧ್ಯಯನದ ಸಂದರ್ಭದಲ್ಲಿ ದೊರೆತ ಕರ್ಬಲ್ ಪದಗಳನ್ನು ಇಲ್ಲಿ ಕೊಡಲಾಗಿದೆ.

"ಗುರುಮಂತ್ರ" ಎಂಬ ಕರ್ಬಲ್ ಪದದಲ್ಲಿ ಕವಿ ಜ್ಞಾನದ ಶ್ರೇಷ್ಠತೆಯನ್ನು ಹೇಳುತ್ತಾನೆ. ಸೂರ್ಯಚಂದಿರ ಮುಳುಗುತ್ತಾರೆ, ಮತ್ತೇ ಏಳುತ್ತಾರೆ. ಆದರೆ ಜ್ಞಾನ ಮಾತ್ರ ಎಂದೂ

ಮುಳಗಿಲ್ಲ. ಅದು ಶಾಶ್ವತ ಅದನ್ನು ಪಡಿಯಬೇಕಾದರೆ ಗುರುಧ್ಯಾನದ ಅವಶ್ಯಕತೆ ಇದೆಯೆಂದು ತಿಳಿಸುತ್ತಾನೆ.

"। ಕೂಡ । ಗುಪ್ತ ಇಲ್ಲ ಗುರುನಾಮ ತಿಳಿ ಈಗಾ ।
। ಇಳು । ಮನುಷ್ಯಾರ ಮನದೊಳು ಜಪಿಸಿದಾರಾ ।
। ಕೂಡ । ಧ್ಯಾನ ಮಂತ್ರ ಗುರುವಿಂದಾ ।
। ಎರ । ಜಪಿಸಿದಾಗ ಧ್ಯಾನ ಮಂತ್ರ ಗುರುವಿಂದಾ ।
। ಕೂಡ । ಇದು ಮುನಿಗಳ ವಾಕ್ಯ ಸುಳ್ಳೆಂಗಾ ।
। ಇಳು । ಸೂರ್ಯ ಮುಳಗಿ ಉದಯ ಆಗತಾನ ।
। ಎರ । ಧ್ಯಾನ ಮುಳಗಿಲ್ಲೋ ಎಂದೆಂದಾ।
। ಕೂಡ। ಸಿದ್ಧಲಿಂಗ ವಸ್ತಾದ ಹೇಳ್ಯಾನ ಹಿಂಗ।"[೧]

ಮತ್ತೇ ಕವಿ ಮನುಷ್ಯ ಮುಕ್ತಿ ಹೊಂದಬೇಕಾದರೆ ಪರಮಾತ್ಮನ ಸನ್ನಿಧಾನವಾಗಬೇಕಾದರೆ ಗರ್ವ, ಗಮಜ ಬಿಟ್ಟು ಅರುವು ಪಡೆಯಬೇಕು. ಆಗ ಮಾತ್ರ ಸಾಧ್ಯ ಎಂದು ಸಾರುತ್ತಾನೆ. ಮತ್ತೆ ಕವಿ ಕಲಿಯುಗದ ಕೆಟ್ಟ ದಿನಮಾನಗಳನ್ನು ತಿಳಿಸುತ್ತ ಎಚ್ಚರದಿಂದ ಇರಬೇಕೆನ್ನುತ್ತಾನೆ.

"ನೀವು ತಿಳಿಯಿರೆಣ್ಣಾ ಎಂದ ಏನ ಅನ್ನಬ್ಯಾಡರೆಣ್ಣಾ ।
ಬಂದಾವ ನೋಡರಿ ದಿನಮಾನ ಅಣ್ಣಾ । ಪ ॥
ತಿಳಿಯಾದ ಈ ಮಾತು ನೀವು ಕೇಳಿರಣ್ಣಾ ।
ಮಳಿಗಾಲ ಅಡಗಿ ಬೆಳೆಗಳ ನಿಂತಾವು ನೋಡಿರಣ್ಣಾ । ೧ ।
ಚಳಿಗಾಲ ಹ್ವಾದು ನೋಡಿರಣ್ಣಾ ।
ಗಡ ಬಡಿ ಮಾಡಿ ಒಬ್ಬರ ಗಂಟಾ ಎಬ್ಬಿಸಿ ಹೋದರಣ್ಣಾ । ೨ ।
ಕಳಕೊಂಡದ ಸಿಗುವುದಿಲ್ಲ ಇನ್ನಾ ।
ಸಿದ್ಧಲಿಂಗ ವಸ್ತಾದ ಮಾಡರೆಂದ ವತನಾ । ೩ ।"[೧೩]

ಪ್ರಸ್ತುತ ಪದಗಳಿಂದ ಕವಿಯ ಅನುಭಾವದ ಗಾಢ ಚಿಂತನೆ ಕಾಣುತ್ತದೆ. ಅಷ್ಟೇ ಅಲ್ಲದೇ ತನ್ನ ಗುರು ಅಣ್ಣಾ ರಾಮನನ್ನು ಸ್ತುತಿಸುತ್ತಾನೆ. ಈ ಕವಿಯ ಪ್ರತಿಯೊಂದು ಪದದ ಕೊನೆಗೆ ತನ್ನ ಹೆಸರು ಸೇರಿಸಿದ್ದು ಕಂಡು ಬರುತ್ತದೆ.

ಶರಣ ಗುಂಡಪ್ಪ

ಈತನ ಮೂಲಸ್ಥಳ ಚಿಂಚಲಿ. ಈತನು ಭಜನಾ ಪದಗಳು, ಶಾಹೀರ್ ಪದಗಳು, ಡೊಳ್ಳಿನ ಹಾಡುಗಳು ಹಾಗೂ ಕರ್ಬಲ್/ರಿಯಾಯತ್ ಪದಗಳನ್ನು ರಚಿಸುತ್ತದ್ದನು. ರಾಯಬಾಗ ತಾಲ್ಲೂಕಿನ ನಿಡಗುಂದಿ ಅಂದು ಶಿಂಧಿ ಬೆಳೆಯ ಪ್ರಮುಖ ಸ್ಥಳ.

ಪ್ರತಿದಿನ ನಿಡಗುಂದಿಯಿಂದ ಶಿಂಧಿ ಬೇರೆ ಕಡೆಗೆ ಸಾಗಿಸಲಾಗುತ್ತಿತ್ತು. ಈ ಶಿಂಧಿಗೆ ಮೆಚ್ಚಿ ಶರಣಗುಂಡಪ್ಪ ಚಿಂಚಲಿಯನ್ನು ತೊರೆದು ನಿಡಗುಂದಿಯಲ್ಲಿಯೇ ವಾಸವಾಗತೊಡಗಿದ್ದ ಈತನ ಜೊತೆಗೆ ಯಾವಾಗಲೂ ಸಾಕಷ್ಟು ಜನ ಇರುತ್ತಿದ್ದರು. ಮುಂದೆ ಗುಂಡಪ್ಪ ನಿಡಗುಂದಿಯಲ್ಲಿಯೇ ದೇವರ ನಾಮಸ್ಮರಣೆ ಮಾಡುತ್ತ ರಾಮಲಿಂಗೇಶ್ವರ ಗುಡಿ ಅರ್ಚನೆ ಮಾಡುತ್ತ ಕಾಲ ಕಳೆದನೆಂಬ ಹೇಳಿಕೆಯಿದೆ. ಈತನ ಸಮಾಧಿ ನಿಡಗುಂದಿಯ ಕ್ವಾಟೆವ್ವನ ಗುಡಿಯ ಹತ್ತಿರವೇ ಇದೆ. ಇಲ್ಲಿ ಪ್ರತಿ ವರ್ಷ ಶಿವರಾತ್ರಿಯ ಅಮವಾಸ್ಯೆ ದಿವಸ ಭಜನಾ ಕಾರ್ಯಕ್ರಮ ನಡೆಸುತ್ತಾರೆ. ಈತನ ಎಲ್ಲ ಪದಗಳು ಅಪ್ರಕಟಿತ. ಕೆಲವೆ ಜನರ ಬಾಯಲ್ಲಿ ಮಾತ್ರ ಉಳಿದಿವೆ.

"ಜೈತುನಾಳ ಮಹಿಮೆ" ಎಂಬ ರಿವಾಯತ್ ಪದದಲ್ಲಿ ಜೈತುನಾ ಒಬ್ಬ ಮುಸ್ಲಿಂ ಧರ್ಮಿಯರಲ್ಲಿಯೇ ಅತಿ ಶೂರ ಮಹಿಳೆ. ಇವಳು ಯಾವಾಗಲೂ ಗಂಡಸರ ಪೋಷಾಕವನ್ನು ಧರಿಸಿಕೊಂಡು ಸೀಮೆ ಸೀಮೆ ತಿರುಗುತ್ತ ಪ್ರಜಾ ರಕ್ಷಕಿಯಾಗಿದ್ದಳೆಂದು ಗುಣಗಾಣಿಸುತ್ತಾನೆ.

"ಕುಂತ ಕೇಳರಿ ದೈವ ಜನಾ ।
ಬಿಚ್ಚಿ ಹೇಳುವೆ ಕತೀ ಶರಣಾ ।ಪ।
ಶಾವಿರ ಒಂದು ಪಟ್ಟಣ ಧರಿಸುತ್ತಾನಾ ।
ಅವನ ಹೊಟ್ಟೆಲಿ ಹುಟ್ಟ್ಯಾಳ ಜೈತುನಾ । ೧।
ಹೆಂಗಸ ಬಹಳ ಶೂರವಾನಾ ।
ಗಂಡಸರ ಪೋಷಾಕ ಹಾಕುತಾನಾ । ೨ ।
ಸಂಗಡ ಇರುವುದು ನಾಲೂರು ಜನಾ ।
ಸೀಮಿ ಸೀಮಿ ತಿರುಗುವಳು ಜೈತುನಾ । ೩ ।
ಆಕೆಯ ಸೀಮಿಯೊಳಗೆ ಕೇಳಿರಣ್ಣಾ ।
ಎರಡನೆ ಜನರದು ಯಾರದು ಇಲ್ಲರಿ ಕೂನಾ । ೪ ।
ಬಂದು ವಸ್ತಿ ಇದ್ದಾಳ ಸೀಮಿತಾನಾ ।
ಶಾರ ನಮ್ಮ ನಿಡಗುಂದಿ ಟಿಕಾಣಾ । ೫ ।
ಬೆಳೆಸಿದರೆ ಬೆಳೆಯುವುದು ಕವಿರಚನಾ ।
ಹೇಳಿದಾನ ಗುಂಡಪ್ಪ ಶರಣಾ । ೬ ।"[೧೪]

ಈಗ ನಿಡಗುಂದಿಯಲ್ಲಿ ಶರಣ ಗುಂಡಪ್ಪನ ಹಾಡುಗಳನ್ನು ಹೇಳುವ ಅನೇಕ ಶಿಷ್ಯರಿದ್ದಾರೆ.

ಸವದತ್ತಿ ಸಿದ್ದಪ್ಪ

ಈತನ ಮೂಲಸ್ಥಳ ಸವದತ್ತಿ. ಇದಕ್ಕೆ ಭಾವಾನ ಸವದತ್ತಿ ಎಂಬ ಹೆಸರು ರೂಢಿಯಲ್ಲಿದೆ. ಉದ್ಯೋಗ ಕುರಿಗಾರಿಕೆ. ಅನಕ್ಷರಸ್ಥ ಜನ ರೂಢಿಯಿಂದ ಅಭ್ಯಾಸ ನಿರತನಾದ ಈತ ಕನ್ನಡ ಹಾಗೂ ಮರಾಠಿ ಲಿಪಿ ಬಲ್ಲವ. ಕನ್ನಡದಲ್ಲಿ ಡೊಳ್ಳಿನ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದನು. "ಡೊಳ್ಳಿನ ಹಾಡುಗಳ ಸಿದ್ದಪ್ಪಜ್ಜ" ಎಂದೇ ಪ್ರಸಿದ್ಧಿಯನ್ನು ಪಡೆದಿದ್ದ. ತಂದೆ ಬೇಲಪ್ಪ, ತಾಯಿ-ತಾಯವ್ವ, ಗುರುಗೋವಿಂದ ಭಟ್ಟನಿಗೂ ಹಾಗೂ ಶರೀಫ್‌ರಿಗೂ ಇದ್ದಂತಹ ಗುರು-ಶಿಷ್ಯರ ಸಂಬಂಧ ಮಹಾಲಿಂಗೇಶ್ವರ ಮಹಾರಾಜ, ಬಾಬಾಜಿ ಜಮಾದಾರ ಹಾಗೂ ಸವದತ್ತಿ ಸಿದ್ದಪ್ಪರಿಗೂ ಸಂಬಂಧವಿತ್ತು. ಸಿದ್ದಪ್ಪ ಮೊದ ಮೊದಲು ಸವದತ್ತಿ ಕೃಷ್ಣಾ ಹಾಗೂ ಬಾಬಾಜಿ ಗುರುಗಳ ಶಾಸ್ತ್ರಗಳನ್ನು ಕೇಳುತ್ತಿದ್ದನು. ಅನಂತರ ದಿಗ್ಗೇವಾಡಿಗೆ ಬಂದು ಬಾಬಾಜಿ ಜಮಾದಾರ ಅವರನ್ನು ಸೇರಿಕೊಂಡನು. ಬಾಬಾಜಿ ಮೊದಲು ಸಿದ್ದಪ್ಪನನ್ನು ಹಾಡಿಸಿ ನಂತರ ಶಿಷ್ಯನನ್ನಾಗಿ ಸ್ವೀಕರಿಸುವನು. 'ನಿನ್ನ ಕಂಠ ಚೆನ್ನಾಗಿದೆ'ಯಂದು ಹೇಳಿ ಪದಗಳನ್ನು ರಚಿಸಲು ಪ್ರೇರೆಪಿಸುತ್ತಾನೆ. ಮುಂದೆ ಸಿದ್ದಪ್ಪ ಅನುಭವ ಪದ, ಡೊಳ್ಳಿನ ಹಾಡು, ಅಧ್ಯಾತ್ಮ ಹಾಗೂ ರಾಮಾಯಣದಲ್ಲಿಯ ಪದಗಳನ್ನು ರಚಿಸತೊಡಗಿದನು.

ಸಿದ್ದಪ್ಪಜ್ಜ ಸವಸುದ್ದಿ, ಮೆಕ್ಕಳಕಿ, ಕಚಗರ ಹಟ್ಟಿ, ನಣದಿ, ಬೊರಗಾಂವ, ಜೋಡಕುರುಳಿ, ಹುನ್ನೂರು [ಜಮಖಂಡಿ], ಇಂಗಳಿ [ದೇಸಾಯಿ] ಮುಂತಾದ ಸ್ಥಳಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾನೆ. ಈತ ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾನೆ. ನಣದಿಯ ರಾಮು, ಲಕ್ಷ್ಮಣ , ಸಿದ್ದಪ್ಪ, ಇಂಗಳಿಯ ಸೂರಪ್ಪ ಕಂಚಗರ ಹಟ್ಟಿ ಕಾಮು, ಕಲ್ಲಪ್ಪ ಪ್ರಮುಖರು. ಸಿದ್ದಪ್ಪಜ್ಜ ಸ್ವಾತಂತ್ರ ಪೂರ್ವಕಾಲದಿಂದಲೂ ಡೊಳ್ಳಿನ ಹಾಡಿನ ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳ್ಳಿಯ ಖಡೆ, ದೋತ್ರ ಮುಂತಾದ ಪುರಸ್ಕಾರಗಳನ್ನು ಪಡೆದಿದ್ದಾನೆ.

"ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಬೆಂಗಳೂರು ಇವರು "ಡೊಳ್ಳಿನ ಸ್ಪರ್ಧೆಯನ್ನು ೧೯೯೭" ರಲ್ಲಿ ಏರ್ಪಡಿಸಿದ್ದರು. ಈ ಸ್ಪರ್ಧೆಯ ಅಧ್ಯಕ್ಷತೆಯನ್ನು ಜಿ. ಶಂ. ಪರಮಶಿವಯ್ಯ ವಹಿಸಿದ್ದರು. ಈ ಸ್ಪರ್ಧೆಯಲ್ಲಿ ಸಿದ್ದಪ್ಪಜ್ಜ ಭಾಗವಹಿಸಿ "ಕಂಚಿನ ಪದಕ" ಪಡೆದುಕೊಂಡಿದ್ದಾನೆ. ಈ ಪ್ರಶಸ್ತಿಯನ್ನು ಮಡಿಕೇರಿಯಲ್ಲಿ ದಿನಾಂಕ: ೧೦-೦೫-೧೯೯೩ ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಿದರು."[೧೫]

೧೯೯೩ ರಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಾಡಿನ ಅನೇಕ ಪ್ರಸಿದ್ಧ ಜಾನಪದ ತಜ್ಞರು ಭಾಗವಹಿಸಿದ್ದರು. ಡಾ॥ ಎಸ್.ಕೆ. ಕರಿಂಖಾನ್, ಡಾ॥ ಚಂದ್ರಶೇಖರ ಕಂಬಾರ. ಶ್ರೀ. ಮುದೇನೂರು ಸಂಗಣ್ಣ, ಮೊದಲಾದವರು ಅಲ್ಲಿದ್ದರು.

೧೨೫ ವರ್ಷ ಬದುಕಿದ್ದ ಸಿದ್ದಪ್ಪ ಕನ್ನಡಕವನ್ನು ಹಾಕಿಕೊಂಡು ಸಾಯುವ ಕೊನೆಯ ದಿನಗಳ ವರೆಗೂ ಪದ ಹೇಳುತ್ತಿದ್ದ. ಕಣ್ಣು, ಕಿವಿ, ತುಸು ಮಂದ, ಬೆನ್ನು ತುಸು ಬಾಗಿದ್ದರೂ ಕೋಲಿನ ಸಹಾಯ ಪಡೆದ, ಈ ಅಪರೂಪದ ಕವಿಗಾರನ ಪ್ರತಿಭೆ ಇಂದಿಗೂ ಪ್ರಖರ. ೨೯-೦೫-೧೯೯೫ ರಂದು ಸಿದ್ದಪ್ಪಜ್ಜ ತೀರಿಕೊಂಡನೆಂದು ಹೇಳುವರು.

'ಶರೀರ ರಚನೆ ಕುರಿತಾದ ಡೊಳ್ಳಿನ ಪದದಲ್ಲಿ ತಾಯಿ ಗರ್ಭದಲ್ಲಿ ಮಗು ಮೊದಲು ತಲೆ ನಿರ್ಮಾಣ. ನಂತರ ದೇಹದ ವಿವಿಧ ಅಂಗಾಂಗಳ ಉತ್ಪತ್ತಿ ಕುರಿತು ಸ್ಪಷ್ಟಪಡಿಸುತ್ತಾನೆ. ಈ ಕಾಯವನ್ನು ಗುಡಿಗೆ ಹೋಲಿಸಿ ಇದು ಒಂಭತ್ತು ಬಾಗಿಲುಗಳಿಂದ ನಿರ್ಮಾಣವಾಗಿದ್ದು ಮೂರು ಲೋಕವು ಈ ಗುಡಿಯೊಳಗೆ ಕಾಣುತ್ತವೆ. ಮತ್ತೇ ಕವಿ ಈ ಶರೀರದಲ್ಲಿಯೇ ಶಿವ-ಪಾರ್ವತಿಯರ ಇರುವನ್ನು ಗುರುತಿಸುತ್ತಾನೆ. ಈತನ ಡೊಳ್ಳಿನ ಹಾಡುಗಳೆಲ್ಲ ಅಪ್ರಕಟಿತ. ದೊರೆತ ಹಾಡೊಂದನ್ನು ಇಲ್ಲಿ ಕಾಣಬಹುದು.

"ಆಯ ನೋಡಲಿಲ್ಲ ಪಾಯ ಹಾಕಲಿಲ್ಲ । ತಿಥಿ ಮೂರ್ತ ಇದಕ ಇಲ್ಲಪ್ಪಾ ।
ಶಿಖರದ ಮೇಲೆ ಕಳಸಾ ಮೊದಲ ಇಟ್ಟ । ಹಿಂದಿಂದ ಗುಡಿ ಕಟ್ಟೆರಪ್ಪಾ । ಪ ।
ದುಡಿದು ದುಃಖಾಪಡಿ ಸದ್ಗುರುವಿನ ಪಾದಾಹಿಡಿ ।
ಅವನಿಂದ ಮೋಕ್ಷ ಆಗುದಪ್ಪಾ ।ಅನು.ಪ।
ಈ ಗುಡಿಯೊಳಗ ಒಂಭತ್ತು ಬಾಗಿಲು । ಒಂದರ ಮೇಲೆ ಒಂದ ಐತಪ್ಪಾ ।
ಹತ್ತನೆ ಬಾಗಿಲದ ಹಾದಿ ಬಂದ ಐತಿ । ಮೊರ ಮಾಡಿ ಅದ ಬಿಟ್ಟಾರಪ್ಪಾ ।
ಈ ಗುಡಿಯೊಳಗೆ ಒಂಭತ್ತು ಬಾಗಿಲ । ಒಂದರ ಮೇಲೆ ಒಂದು ಶ್ರೇಷ್ಠಪ್ಪಾ ।
ಹತ್ತನೆ ಲಿಂಗ ಒಂದು ನೀರಾಗ ಮುಣಿಗೇತಿ ನಿರಾಕಾರದಾಗ ಹೋತಪ್ಪಾ ।
ಈ ಗುಡಿಯೊಳಗೆ ಒಂಭತ್ತು ಚಕ್ರ । ಪಂಚಕರಣ ತೆಗೆದು ನೋಡಪ್ಪಾ ।
ಪಶ್ಚಿಮ ಚಕ್ರಕ ಪ್ರಬ್ರಹ್ಮ ಸ್ಥಾನ । ಸೂರ್ಯ ಚಂದ್ರ ಎರಡು ಇಲ್ಲಪ್ಪಾ ।
ಈ ಗುಡಿಯೊಳಗೆ ಸಂಭ ಪಾರ್ವತಿ ಶಿವಶಕ್ತಿ ಅವರ ಇದ್ದಾರಪ್ಪಾ ।
ಅವರಿಂದ ನೋಡೋ ಈ ಅರುವ । ಇರುವುದು ವಿದ್ಯೆ ವಿಚಾರ ವಿಜ್ಞಾನಪ್ಪಾ ।
ಈ ಗುಡಿಯೊಳಗೆ ಮೂರು ಲೋಕಾ । ಸ್ವರ್ಗ ಮೃತ್ಯು -ಪಾತಾಳಪ್ಪಾ ।
ಹದಿನಾಲ್ಕು ಲೋಕ ಅಂತ ಶಾಸ್ತ್ರದಾಂವ ಬರಿತಾನ ।
ಮೂರದಾಗ ಹನ್ನೊಂದು ಆಗದಪ್ಪಾ ।
ಈ ಗುಡಿಯೊಳಗೆ ಸೂರ್ಯ ಚಂದ್ರ ಮದ ಮೇರು ನೀ ತಿಳಿಯಪ್ಪಾ ।

ಆಕಾರ ನಿರಾಕಾರ ನಿರುಗುಣ ತಮ್ಮಾ । ವಿಚಾರ ಮಾಡಿ ನೀ ನೋಡು ಸ್ವಲ್ಪಾ ।
ಮಹಾಯೋಗಿ ನಮ್ಮ ಗುರು ಮಹಾಲಿಂಗನ ।
ಕೃಪಾದಿಂದ ಹೋಗುವುದು ಪಾಪಾ ।
ಭಕ್ತ ಬಾಬಾಜಿ ಅವನ ಸೇವಕ । ಶಿವಾಚಾರಿ ಶಿವ ಸಿದ್ದಪ್ಪಾ" । [೧೬]

ಕುಡಚಿಯ ಶರಿಭೈರಿ

ಈ ಕವಿಯ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈತನನ್ನು "ಮನ್‌ಕವಿ" (ಆಶುಕವಿ) ಎಂದು ಗುರುತಿಸುವರು. ಯಾವುದೇ ಘಟನೆ ನೋಡಿದ ತಕ್ಷಣ ಪದ್ಯಗಳನ್ನು ಕಟ್ಟುವ ಸಾಮರ್ಥ್ಯ ಹೊಂದಿದ್ದ. ಈತ ಲಾವಣಿ ಪದಗಳನ್ನು ರಚಿಸುತ್ತಿದ್ದನು. ಅದರಲ್ಲಿಯೂ ಈತನದು ನಾಗೇಶಿ ಸಂಪ್ರದಾಯ. ಕುಡಚಿ ರಾಯಪ್ಪನು ಸಹ ಶಾಹೀರ್ ಸಂಪ್ರದಾಯದವನಾಗಿರುವುದರಿಂದ ಕುಡಚಿ ರಾಯಪ್ಪನೇ ಶರಿಭೈರಿ ಅಂಕಿತ ಇಟ್ಟುಕೊಂಡು ಲಾವಣಿ ರಚಿಸಿರಬಹುದೆಂದು ಊಹಿಸಬಹುದು.

ಅಷ್ಟೇ ಅಲ್ಲದೆ ಕವಿಯು ತ್ರಿ ಭಾಷಾ ಬಲ್ಲವನಾಗಿದ್ದನೆಂದು, ಅವನ ಒಂದು ಲಾವಣಿಯಿಂದ ತಿಳಿಯುತ್ತದೆ. [ನಾಗೇಶಿಪದ]

"ನಾ ಒಂದು ಅರ್ಥಕೇಳತೀನ । ಶಾಹೀರಾ ।
ಹೇಳಿಕೊಡೋ ಪಂಡಿತಾ । ಬಿದರ ಗಿಡಕಾ ।
ಮಾವಿನ ಹಣ್ಣಾ । ಶಿವಾ । ತಂದಾನೋ ಹೊತ್ತಾ ।
ತೇ ಜಾಡಾಲಾ ಬಗ ಶಾಹೀರಾ ।
ಕಾಯಾಚಿ ಪಾನ ಹೋತಾ ।
ತೆ ಜಾಡಾಲಾ ಪೂಲ್ ವುಮಗವರಲೆ
ಮೊಗರ್‍ಯಾಚಿ ಮನ ಮಿತಾ ।
ವೋ ಜಾಡಕೋ ಫಲ ತೊಡಿತಾ ।
ಅಂತರಕ್ಯಾ ಪಸರಾತಾ । ಶರಿಭೈರಿ ಸಖಿ
ಬೋಲಲಾ । ಹರದಾಸ ಕೋಪಸ್ತಾ ।" [೧೭]

ಶರಿಭೈರಿ ತ್ರಿಭಾಷಾ ಕವಿ. ಕನ್ನಡ, ಮರಾಠಿ ಹಾಗೂ ಹಿಂದಿ ಬಲ್ಲವನಾಗಿದ್ದು, ನಾಗೇಶಿ ಸಂಪ್ರದಾಯಸ್ಥ. ಈ ಮೇಲಿನ ಪದ್ಯದಲ್ಲಿ "ಯಕ್ಕಿಗಿಡದ" ವರ್ಣನೆ ಬರುತ್ತದೆ. ಯಕ್ಕಿಗಿಡದ ಕಾಂಡವು ಬಿದಿರಿನಂತೆ. ಕಾಯಿ ಮಾವಿನ ಹಣ್ಣಿನಂತೆ ಮತ್ತು ಗಿಡದ ತುಂಬ ಹೂಗಳು ಮಾವಿನ ಹಣ್ಣನ್ನು ತಿನ್ನಲು ಬಳಸುತ್ತಾರೆ. ಆದರೆ ಈ ಗಿಡದ ಕಾಯವನ್ನು ಒಡೆದು ನೋಡಿದರೆ ಅದರಲ್ಲಿ ಬರೀಗಾಳಿಗೆ ಹಾರುವ ಬಿಳಿಯ [ಹತ್ತಿ] ತರದ ವಸ್ತು ಇರುತ್ತದೆ. ಹೀಗೇಕೆ ಎಂದು ಹರದೇಶಿ ಸಂಪ್ರದಾಯಗಳಿಗೆ ಸವಾಲ್ ಹಾಕುತ್ತಾನೆ.

ಬಾಬಾಜಿ ಜಂಗ್ಲಿ ಜಮಾದಾರ

ಈತನ ಮೂಲಸ್ಥಳ ದಿಗ್ಗೇವಾಡಿ. ಉದ್ಯೋಗ ಒಕ್ಕಲುತನ. ಹೆಂಡತಿ ಬಿಯಾಮಾ ಮೂರು ಜನಗಂಡು ಮಕ್ಕಳು ಎರಡು ಜನ ಹೆಣ್ಣು ಮಕ್ಕಳ ತುಂಬು ಸಂಸಾರ. ಅನಕ್ಷರಸ್ಥನಾದ ಬಾಬಾಜಿ ಮಹಾಲಿಂಗೇಶ್ವರರ ಶಿಷ್ಯ. ಈತ ಕರ್ಬಲ್/ರಿವಾಯಾತ್, ಡೊಳ್ಳಿನ ಹಾಡು, ಚೌಡಕಿ ಪದಗಳನ್ನು ಸ್ವತಃ ಕಟ್ಟಿ ಮೇಳಗಳ ಜೊತೆಗೆ ಊರಿಂದ ಊರಿಗೆ ಹಾಡಲು ಹೋಗುತ್ತಿದ್ದ. ಬೋರಗಾಂವ, ನಣದಿ, ಯಕ್ಸಂಬಾ, ಕೆರೂರು, ಚಿಕ್ಕೋಡಿ ಕಾಡಾಪೂರ, ನಂದಿಕುರಳಿ, ಜೋಡಕುರಳಿ, ಕಂಚಗರವಾಡಿ, ನಿಪನಾಳ, ಬಾಂವುಚಿ, ಮೊರಬ, ಅಳಗವಾಡಿ, ಜನವಾಡ, ಹನಗಂಡಿ, ದಿಗ್ಗೇವಾಡಿ, ಕೊಡಗಾನೂರು, ಮುಗಳಖೋಡ, ಮುಂತಾದ ಊರುಗಳಲ್ಲಿ ತಮ್ಮ ಪ್ರದರ್ಶನ ನೀಡಿದ್ದಾನೆ. ಈತನ ಪದಗಳೆಲ್ಲ ಅಧ್ಯಾತ್ಮ, ಅನುಭಾವ ಹಾಗೂ ನಡೆದ ಘಟನೆ ಕುರಿತಾದವುಗಳು. ಈತ ಮರಾಠಿ ಹಾಗೂ ಮೋಡಿ ಭಾಷೆ ಬಲ್ಲವ. ತುಂಬಾ ಬಡತನ ಮನೆಯ ಕಡೆಗೆ ಆಸಕ್ತಿ ಕಡಿಮೆ. ಈತ ಯಾವಾಗಲೂ ಮಹಾಲಿಂಗೇಶ್ವರ ಮಠದಲ್ಲಿಯೇ ಇರುತ್ತಿದ್ದ. ಈತನ ಸಾಹಿತ್ಯವೆಲ್ಲ ಅಪ್ರಕಟಿತ. ಕೆಲವೇ ಜನರಲ್ಲಿ ಹಸ್ತ ಪ್ರತಿ ರೂಪದಲ್ಲಿ ದೊರಕುತ್ತದೆ. ಈತ ಅಪಾರ ಶಿಷ್ಯ ಪರಂಪರೆ ಹೊಂದಿದ್ದು; ಅವರಲ್ಲಿ ಸವದತ್ತಿ ಸಿದ್ದಪ್ಪ ಒಬ್ಬ.

"ರಿವಾಯತ್" ಪದವೊಂದರಲ್ಲಿ ಮನುಷ್ಯನಿಗೆ ಅತಿಯಾದ ಆಸೆಯಿಂದ ಆಗುವಂತಹ ಅನಾಹುತಗಳನ್ನು ತಿಳಿಸುತ್ತಾನೆ. ಸಿಗದ ವಸ್ತುವಿಗೆ ಹಾತೊರೆದು ಮತ್ತು ಕೆಟ್ಟ ವ್ಯಸನಕ್ಕೆ ಬಲಿಯಾಗಿ ಮನುಷ್ಯ ತನ್ನ–ತನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾನೆ. ಇದರಿಂದ ದೂರ ಉಳಿದು ಮುಕ್ತಿ ಸಂಪಾದಿಸಬೇಕು ಎಂಬುದು ಕವಿಯ ಆಸೆ.

"ಆಸೆ ಅತೀ ಪ್ರೀತಿ ಶಾಂತಿ ಇಲ್ಲ ಈ ಸದ ಗಿಡಾ ।
ಅದು ಹೋದತ್ತ ಹೋಗಬೇಡ ಅದರ ಗೂಡಾ ।
ಬಾರದ ವಸ್ತು ಇದ್ದಿರಬೇಕ ಅನ್ನ ಬೇಡಾ ।
ಕೆಟ್ಟ ವ್ಯಸನ ಹಿಂದ ನೀನು ಕೆಡಬೇಡಾ ॥
ಮಾಯಾ ಮನಸ ಆಸೆ ಮೂರು ಇಡಬೇಡಾ ।
ಮುಂದ ಆರು–ಮೂರು ಒಂಭತ್ತು ಕಾಯಬೇಡಾ ।
ಮಹಾಯೋಗಿ ಮಹಾಲಿಂಗನ ಬಿಡಬೇಡಾ ।
ಭಕ್ತ ಬಾಬಾಜಿ ಹೇಳಿದ ತಿಳಿಯೇ ಮೂಢಾ" ॥[೧೮]

ಮಂಜರಗಿ ದೋಣಿ ಮುಳುಗಿದ ಈ "ರಿವಾಯತ್ ಪದ್ಯವನ್ನು ಕೇಳಿದವರಿಗೆ ಹೃದಯ ಕಿತ್ತು ಬರುವಂತಹ ಪ್ರಸಂಗ ನಡೆದಿದೆ. ಕ್ರಿ.ಶ. ೧೮೫೬ ರಲ್ಲಿ ಮಂಜರಗಿ ಹೊಳಿಯಲ್ಲಿ ದೋಣಿ ಮುಳುಗಿ ಆದ ಅನಾಹುತವೇ ಇಲ್ಲಿನ ವಸ್ತು. ಸುಮಾರು ಜನ

ಹುಡುಗರು, ಹೆಂಗಸರು ಮುದುಕರು ಹೀಗೆ ಮೂರು-ನಾಲ್ಕು ಊರಿನ ಜನ ಈ ಅನಾಹುತಕ್ಕೆ ಬಲಿಯಾಗುತ್ತಾರೆ.

"ಕುಂತ ಕೇಳಿರಿ ಪಂಡಿತರಾ ಸರ್ವಜನಾ ।
ಮಂಜರಗಿ ಮುಂದ ಆಗೀತರಿ ಈ ಕಥನಾ ॥ ಪ॥
ಎಂತಾ ಕಠಿನ ವೇಳೆ । ತಂದಾನೋ ಭಗವಾನಾ ॥
ನಾಂವ ಮುಳಗಿತರಿ । ಶುಕ್ರವಾರ ಸಂತಿ ದಿನಾ ॥ ೧ ॥
ಎಷ್ಟು ಹೇಳಿದ್ರ ಜನಾ । ಆಗ ಕೇಳಲಿಲ್ಲಾ ।
ಭರ್ತಿ ಆಗಿ ಹೆಚ್ಚ । ಆಗೇತ್ರಿ ತೋಲಾ ॥ ೨॥
ನಾಂವ ಬಿಟ್ಟಾರ । ನೀರ ಬಂತ ಕಂಗನೇದ ಮ್ಯಾಲಾ
ಅದಕ ಬಂದ ಹತ್ತಿತರಿ । ಮುಳುಗುವ ಕಾಲಾ ॥ ೨॥
ನಡು ಹೊಳಿ ಒಳಗ । ಸೆಳವಿಗಿ ಬಿದ್ದಿತಲಾ ।
ಒಳಗ ನೀರ ಬಂದು । ಕಂಗನೇದ ಮ್ಯಾಲಾ ।
ಹೆಣ್ಣ ಗಂಡ ಶಂಖಾ । ಬಾಜಾ ನುಡಿಶಾರಲಾ ।
ಮಳಗಿ ಮಂದಿ ನೋಡತಿರ ಸುತ್ತ ಎಲ್ಲಾ ॥೩॥
ಗಂಡಾಳ ಇದ್ದಷ್ಟು ಜಿಗಿದ । ಕಡೀಕ ಆದಾರೆಲ್ಲಾ ।
ಮುದುಕರು ಹುಡುಗರು । ಹೆಂಗಸರು ಉಳಿದಾರೆಲ್ಲಾ ।
ಅಂಬಿಗೇರ ಆಟ ನಿಂತಿತ । ಧೈರ್ಯ ಸಾಲಲಿಲ್ಲಾ ।
ಅವರು ಜಿಗದಾರ ಬಿರದಾವನಿ ಒತ್ತಿನ ಮ್ಯಾಲಾ ॥೪॥"[೯]

ಶುಕ್ರವಾರ ಸಂತಿ ದಿನ ನಡೆದ ಈ ದುರಂತದಲ್ಲಿ ಹೆಂಗಸರು, ಹುಡುಗರು, ಮುದುಕರು ನೀರ ಪಾಲಾದರು. ನೀರ ಸೆಳೆವಿಗೆ ಸಿಕ್ಕ ದೋಣಿ ಅಂಬಿಗೇರ ಧೈರ್ಯವನ್ನು ಕಳೆಯಿತು. ಅವರು ಕೊನೆಗೆ ತಮ್ಮ ಜೀವ ಉಳಿಸಿಕೊಳ್ಳಲು ನೀರಿಗೆ ಜಿಗಿದು ಪಾರಾಗುವವರು.

"ಬಂದ ಅಬ್ಬರತಿ । ಬಡಿತ ಘೂಲಕಾ ।
ಅಜಮಾಸ ಭಾರಾದ । ಮ್ಯಾಲ ಘೂಲಕಾ ।
ಸಣ್ಣ ನಾಂವ ಬಿಟ್ಟಾರ । ಆ ವ್ಯಾಳೆಕಾ ।
ಉಳಿಯು ಹ್ವಾರೆ ಇಲ್ಲ । ಬಿದ್ದಿತರಿ ಕಾಡುದಕಾ ॥ ೫॥
ಮಂಜರಗಿ ಬಾವಾ । ಅಂತಾನೋ ಅರೆ ಅರೆ ಅಲ್ಲಾ ।
ತೆಕ್ಕಿ ಹಾದಾರ । ಹೆಂಗಸರ ಲೆಕ್ಕ ಇಲ್ಲಾ ।
ಗೊತ್ತಿ ಕುಡಕುಡದ । ಏಳತೀರ ಮ್ಯಾಲಾ ।
ಉಳಿಸಿಕೊಳ್ಳಾವರು । ಈ ವೇಳೆಗೆ ಯಾರೂ ಇಲ್ಲಾ"[೨೦]

ಈ ದೋಣಿಯಲ್ಲಿ ಮಂಜರಗಿ ಜನರೇ ಹೆಚ್ಚಾಗಿದ್ದರು. ನದಿ ದಂಡೇಲಿ ಸಾಕಷ್ಟು ಜನಾ ಸೇರಿದ್ದರು. ಆದರೆ ಉಳಿಸಿಕೊಳ್ಳಲು ಯಾರೂ ಪ್ರಯತ್ನಿಸಲಿಲ್ಲ.

“ಮಾರಾಕ ಹೋಗಿರ । ಯಡ್ರಾಂವಿ ಮಾಲಗಾರಾ ।
ತಿರುಗಿ ಬಂದ । ನೋಡಲಿಲ್ಲ ತಮ್ಮ ಊರಾ ।
ಐದು ವರ್ಷದ ಕೂಸ । ಅಂಕಲಗಿ ತಳವಾರಾ ।
ದಂಡೆತ್ತಿ ಬಂದ ಹತ್ತೀತರಿ । ಅವನ ಹಣಿಬಾರಾ ।”[೨೧]

ಈ ದೋಣಿಯಲ್ಲಿ ಪವಾಡಯೆಂಬಂತೆ ಅಂಕಲಗಿಯ ತಳವಾರರ ಐದು ವರ್ಷದ ಕೂಸು ದಂಡಿಗೆ ಬಂದು ತಲುಪಿತು.

“ಯಡೂರ ಹಟ್ಟಿವರ । ಒಂಭತ್ತ ಮಂದೇದ ಕೇಳರಿ ಇನ್ನಾ ।
ಸೌಂದತ್ತಿಗೆ ಹೋಗಾವರ । ಇದ್ದಾರ ಆದಿನಾ ।
ಉಡಿ ತುಂಬೋದ । ಇತ್ತರಿ ಕಾರಣಾ ।
ಎಂಟ ಮಂದೆದ । ಹೊಂಟ ಹ್ವೊದಿತರಿ ಪ್ರಾಣಾ ।”[೨೨]

ಸವದತ್ತಿಗೆ ಉಡಿ ತುಂಬುವ ನಿಮಿತ್ಯ ಕುರಿತು ಹೊರಟಿದ್ದ ಒಂಭತ್ತು ಜನರಲ್ಲಿ ಎಂಟು ಜನರ ಪ್ರಾಣ ಹೋಯಿತು.

“ಬಾಗಿ ಕಛೇರಾಗ । ತಿಳಿಸ್ಯಾರ ವಾಲೀಕಾರಾ ।
ಬತ್ತ ರಾಯಬಾಗ । ಪೋಲಿಸರ ಮೋಟಾರಾ ।
ಬಾಳ ಜಭರ ಕಾಯಿದೆ । ತಾಟೆ ರಾವ ಸಾಹೇಬರಾ ।
ಕರವೀರ ಇಲಾಖೆದಾಗ । ಅವರ ಅಧಿಕಾರಾ ।
ಚಿಕ್ಕೋಡಿ ಫೌಜದಾರ ಬಂದ । ಸುಮ್ಮ ನಿಂತಾರ ಅವರಾ ।
ಅಂಕಲಗಿ ಹದ್ದಿನ್ಯಾಗ । ಹತ್ತಿದಿಲ್ಲ ಯಾರೋ ಯಾರಾ ।
ಸುಮ್ಮ ಹಿಂದಕ ತಿರುಗಿ । ಹೋದಾರ ಅವರಾ ।
ಚಿಕ್ಕೋಡಿಗೆ ಹೋಗಿ । ಮಾಡಿದಾರ ಬೆಳಗಾವಿಗೆ ತಾರಾ ।
ಬೆಳಗಾವಿ ಊರಿಂದ । ಬಂದ ಕಲೇಕ್ಟರ ಗೋರಾ ।
ದುರ್ಬಿನಿ ಹಚ್ಚಿ । ನೋಡತಾರ ಅವರಾ ।
ಒಳಗ ಹೆಣಾ ಇದ್ದು । ಮಸ್ತ ಭರಪೂರಾ ।
ಮಣ್ಣಿನ ಹುಕುಮ । ಕೊಟ್ಟಿದಾರ ಕಲೆಕ್ಟರಾ ।”[೨೩]

ಬೆಳಗಾವಿಯಿಂದ ಬಂದ ಕಲೆಕ್ಟರ್ ದುರಂತವನ್ನು ದುರ್ಬಿನಿ ಸಹಾಯದಿಂದ ನೋಡಿ ಅವರಿಗೆ ಅಂತ್ಯ ಸಂಸ್ಕಾರಕ್ಕೆ ಅನುಮತಿ ಕೊಡುತ್ತಾನೆ. ಈ ಪದ್ಯದಿಂದ ಕ್ರಿ.ಶ. ೧೮೫೭ ರ ಕ್ಕಿಂತ ಪೂರ್ವದಲ್ಲಿ ದುರ್ಬಿನಿ ಬಳಕೆಯಲ್ಲಿ ಇತ್ತು ಎಂಬುದು ತಿಳಿದು ಬರುತ್ತದೆ.

"ಅತ್ತ ಇತ್ತ ಒದ್ದ್ಯಾಡಿ । ಬತ್ತಲೆ ಆಗಿದ್ದು ಹೆಣಾ ।
ಹುಲ್ಲ ಕೋದ । ಒಗಿತಿತ್ತ ಮೇಲಿನ ಜನಾ ।
ಹೆಂಗಸರ ಬಗಲಾಗ । ಕೂಸು ಇದ್ದು ಗಂಡು ಹೆಣ್ಣಾ ।
ತೆಕ್ಕೆ ಹಾದಿದ್ದು । ತಮ್ಮ ತಾಯಿಗಳನಾ ।
ಹೊಳಿ ದಂಡಿ ಹಿಡಿದ । ಹುಡುಕತಾರ ಎಲ್ಲಾರಾ ।
ಬಾಳ ದುಃಖ ಮಾಡಿ ಅಳತಾರಾ ಹೆಣ ಸಿಗದವರಾ ।
ಖೂನಾ ಹಿಡಿದ । ಮುಚ್ಚತಾರ ಧೋತರಾ ।
ಏನ ವೇಳೆ । ತಂದಿದ ನಮಗ ಶಂಭೋಹರಾ ।"[೨೪]

ಹೆಣಗಳಿಗೆ ಚೂರು ಬಟ್ಟೆ ಸಹಿತ ಇರಲಿಲ್ಲ. ಹೆಂಗಸರ ಬಗಲಾಗ ಹಸುಳೆಗೂಸುಗಳು ಅಪ್ಪುಗೆಯಲ್ಲಿದ್ದವು. ಹೊಳಿ ದಂಡಿ ಮ್ಯಾಲ ತಮ್ಮ ತಮ್ಮ ಸಂಬಂಧಿಕರ ಹೆಣಗಳನ್ನು ಹುಡುಕುತ್ತಾರೆ. ಹೆಣ ಸಿಗದವರು ಬಹಳಷ್ಟು ದುಃಖ ಪಡುತ್ತ ಧೋತರ ಗುರುತು ಹಿಡಿದು ಅದನ್ನೇ ಮುಚ್ಚುತ್ತಾರೆ.

"ಹೊಳಿ ದಂಡಿಗಿ । ಕುಳ್ಳ ಕಟಗಿ ತಂದಾರವರಾ ।
ಎತ್ತಿ ಎತ್ತಿ ಹಾಕತಾರ । ತಮ್ಮ ಬಳಗದವರಾ ।
ಒಂದ ಒಂದ ಶರಣದಾಗ । ಎರಡ ಮೂರಾ ।
ನಿಮ್ಮನ ಅಗಲಿಸಿ । ಹೋದ ಇಂದ ಪರಮೇಶ್ವರಾ ।
ಚಿಕ್ಕೋಡಿ ಕಛೇರ್ಯಾಗ । ಜಬಾಬ ನಡದಾವಲ್ಲಾ ।
ನಾಲ್ಕು ಮಂದಿ ಅಂಬಿಗೇರಗಿ । ಠರಾವ ಬರದಾರಲ್ಲಾ ।
ಐದು-ಐದು ತಿಂಗಳ । ಶಿಕ್ಷಾ ಮಾಡ್ಯಾರಲ್ಲಾ ।
ಬೆಳಗಾವಿ ಜೇಲದಾಗ । ಓದ ಇಟ್ಟಾರಲ್ಲಾ ।
ಶಕೆ ಅಟರಾಸೆ । ಚಪ್ಪನ ಸಾಲಿನಾಗ ಆಗೇತಿ ।
ಭಾದ್ರಪದ । ತಿಂಗಳದಾಗ ಆಗೇತಿ ।
ದುಗೇವಾಡಿ ಊರ । ಒಳಗ ಹುಟ್ಟೇತಿ ।
ಗುರು ಬಾಬಾಜಿ । ವಸ್ತಾದಾಗ ಒಲದೇತಿ ।
ಅವನ ಗುರು । ಮಹಲಿಂಗ ಸ್ವಾಮಿ ಕೃಪಾ ಐತಿ ।"[೨೫]

ಈ ರೀತಿಯಾಗಿ ಕವಿ ಬಾಬಾಜಿ ಕ್ರಿ.ಶ. ೧೮೫೬ ರಲ್ಲಿ ನಡೆದ ಈ ಕರುಣಾ ಜನಕ ಘಟನೆಯನ್ನು ತುಂಬಾ ಸೊಗಸಾಗಿ ಸರಳ ಶೈಲಿಯಲ್ಲಿ ಚಿತ್ರಿಸಿದ್ದಾನೆ.

ಚಿಂಚಲಿ ಶಂಕರದಾಸ

ಈತನು ಸಹ ಬಾಗೆ ಪರಿಸರದ ಜನಪದ ಕವಿಗಳಲ್ಲಿ ಒಬ್ಬ. ಈತನ ಕುರಿತು ಹೆಚ್ಚಿನ ಮಾಹಿತಿ ಅಲಭ್ಯ. ಈತ ಆಗಾಗ ಅಲಖನೂರಿನ ರಾಮು ಪೂಜೇರಿಯ ಜೊತೆಗೆ ಸೇರುತ್ತಿದ್ದನೆಂದು ಶಿವಪ್ಪ ಪೂಜೇರಿ ಹೇಳುತ್ತಾರೆ. ಈತ ಗೊಂದಲಿಗರ ಪದಗಳನ್ನು ರಚಿಸುತ್ತಿದ್ದನೆಂದು ತಿಳಿಯುತ್ತದೆ. ಆದರೆ ಇವನ ಯಾವ ಒಂದು ಪದವೂ ಲಭ್ಯವಾಗಿಲ್ಲ.

ಶಿರಗೂರದ ಕಲಸಿದ್ಧ

"ಈತನ ಮೂಲಸ್ಥಳ ಶಿರಗೂರ. ತಂದೆ ಸಿದ್ದಪ್ಪ ತಾಯಿ ಸಿದ್ದಮ್ಮ. ಓದು-ಬರಹ ಬಾರದವ. ಈತನ ಕಾಲ ಕ್ರಿ ಶ. ೧೮೬೭".[೨೬] ಹಿರಿಯರ ಒತ್ತಾಯಕ್ಕೆ ಮಣಿದು ಮದುವೆಯಾದರೂ ಸಹ ಪರಮಾರ್ಥ ಚಿಂತನೆಯೇ ಮುಖ್ಯ ಧ್ಯೇಯವಾಗಿತ್ತು . ಈತನ ದಾಂಪತ್ಯ ಜೀವನ ಸಂತ ತುಕಾರಾಮರಂತೆ. ಈತನ ಮೂಲ ಉದ್ಯೋಗ ವ್ಯವಸಾಯ. ಮತ್ತು ಬಳೆಗಾರ ವೃತ್ತಿ. ಕಲಸಿದ್ದನಿಗೆ ಬಾಲ್ಯದಿಂದ ಅಧ್ಯಾತ್ಮದಲ್ಲಿ ವಿಶೇಷ ಒಲವು. ಜಾತ್ರೆ ಉತ್ಸವಗಳಲ್ಲಿ ಭಾಗಿಯಾಗಿ ಅಲ್ಲಿ ಹಾಡುತ್ತಿದ್ದ ಡೊಳ್ಳಿನ ಹಾಡು, ಕರ್ಬಲ್, ಗೀಗೀ, ಲಾವಣಿ ಹಾಗೂ ಭಕ್ತಿ ಪದಗಳನ್ನು ಕೇಳಿ ಆನಂದಿಸುತ್ತಿದ್ದ .

ನಂತರದಲ್ಲಿ ಈತನೇ ಪದಗಳನ್ನು ರಚಿಸಲು ಪ್ರಾರಂಭಿಸಿದನು. ಈತನ ಎರಡು-ಮೂರು ಪುಸ್ತಕಗಳು ಇಂದು ಪ್ರಕಟ ಕಂಡಿವೆ. ಅವು

೧] ಶ್ರೀ. ಕಲ್ಮೇಶ್ವರರ ವಚನಗಳ ಪಾರಾಯಣ; ಪ್ರಕಾಶಕರು ಶ್ರೀ. ವಿರೂಪಾಕ್ಷ ದೇವರು – ೧೯೯೯

೨] "ಪರಮಾರ್ಥ ಜ್ಞಾನಜ್ಯೋತಿ" ಸಂಗ್ರಹಕಾರರು ಶ್ರೀ. ಅಲ್ಲಮಪ್ರಭು ಮಹಾರಾಜರು [ಪ್ರಕಾಶಕರು – ವಿರೂಪಾಕ್ಷ ದೇವರು – ೨೦೦೬]

೩] "ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ" [ತತ್ವ ಪದಗಳು] ಸಂಕಲನ – ಗುರುಪಾದ ಬಾಬು ವಾಳಕೆ. ಸಂಪಾದಕರು – ಡಾ.ಪಿ.ಜಿ. ಕೆಂಪಣ್ಣವರ

ಸುಂದರನೂ, ಆಕರ್ಷಕ ಶರೀರವುಳ್ಳವನು ಆಗಿದ್ದ ಕಲಸಿದ್ದ ಸರ್ಕಸನ್ನು [ಆಂದ್ರ ಪ್ರದೇಶದಲ್ಲಿ] ಮಾಡುತ್ತಿದ್ದನೆಂದು ಈತನ ಶಿಷ್ಯರು ಹೇಳುತ್ತಾರೆ. ಈತನು ಅಪಾರ ಶಿಷ್ಯ ಪರಂಪರೆಯನ್ನು ಹೊಂದಿದ್ದಾನೆ. ಕಲಸಿದ್ದ ಕಲ್ಮೇಶ ಹಾಗೂ ಕಲ್ಲ ಶರಣಸಿದ್ದ ಎಂಬ ಅಂಕಿತದಿಂದ ಅಮೂಲ್ಯ ತತ್ವ ಪದಗಳನ್ನು ರಚಿಸಿದ ಕಲಿಸಿದ್ದ "ಆಧುನಿಕ ವಚನಕಾರರ' ಎಂದು ಇಂದು ಜನಜನಿತನಾಗಿದ್ದಾನೆ. ಗುರುಪಾದ ಬಾಬು ವಾಳಕೆ ಕಲಸಿದ್ದನ ಆಪ್ತ ಶಿಷ್ಯರಲ್ಲಿ

ಒಬ್ಬ. ಕನ್ನಡ ಮರಾಠಿ ಭಾಷೆ ಬಲ್ಲವ. ಗುರುವಿನ ಅನುಗ್ರಹದಿಂದ ಸಾಕಷ್ಟು ತತ್ವ ಪದಗಳನ್ನು ರಚಿಸಿದ್ದಾನೆ. ಇತ್ತೀಚಿಗೆ ವಾಳಕೆ ತೀರಿಹೋದನು. ಶ್ರೀ ಸದ್ಗುರು ಕಲ್ಮೇಶ್ವರ ಮಹಾರಾಜರು ನಿರಾಕಾರ, ನಿರ್ಲಿಪ್ತ, ನಿಸ್ಸಂಗ, ನಿತ್ಯಾನಂದ ಪರಿಪೂರ್ಣ ಪರಬ್ರಹ್ಮಸ್ವರೂಪರು. ಮಾನವನನ್ನು ಭವ ಬಂಧನದಿಂದ ಪಾರು ಮಾಡಲು ಅವತರಿಸಿದ ಅವತಾರ ಪುರುಷರು ಎಂದು ಜನರು ಗುಣಗಾನಿಸುತ್ತಾರೆ. ತತ್ವ ಪದಕಾರರೆಂದು ಗುರುತಿಸಿಕೊಂಡ ಕಲ್ಮೇಶ್ವರರು ಶಿರಗೂರದ ಕಲ್ಮೇಶ್ವರರ ಆರಾಧ್ಯ ಭಕ್ತರು.

"ಕಾಮಕ್ರೋಧದ । ಕಸವ ಹೊಡೆಯಣ್ಣಾ ।
ಈ ಕಾಯಾ ವಾಚಾ । ಸಂಶಯವೆಂಬ ಕರ್ಪೂರ ಸುಡಣ್ಣಾ ।
ನಿತ್ಯ ನಿರಂಜನನಾಗಿ । ಸತ್ಯ ಶಿವನ ಸ್ಮರಿಸು
ಅಂತಃಕರಣದಲ್ಲಿ ಕಲ್ಮೇಶ್ವರ ಪಾದ । ಕಂಡು ಖೂನಾ ಹಿಡಿಯಣ್ಣಾ ।"[೨೭]

ಈ ಸಾಲುಗಳಲ್ಲಿ ಕವಿ ಕಲಸಿದ್ದ ಮಾನವ ಕುಲಕ್ಕೆ ಕಾಮ, ಕ್ರೋಧವೆಂಬ ಕಸಕಳೆಯುವಂತೆ ಉಪದೇಶಿಸಿದ್ದಾನೆ. ಕಾಯಾ, ವಾಚಾ, ಸಂಶಯಗಳನ್ನು ಕಿತ್ತೆಸೆದು ಪರಮಾತ್ಮನ ಅನುಗ್ರಹವಾದಾಗ ಮಾತ್ರ ಮುಕ್ತಿ ಸಾಧ್ಯ ಎಂದು ಹೇಳುವನು.

"ಹಿರೀಹೊಳಿ ದಂಡಿಮ್ಯಾಲ ಶಿರಗೂರ ಐತಿ ಡೌಲ" ಎಂಬ ಸಾಲುಗಳಲ್ಲಿ ಕವಿ ತಮ್ಮ ಹುಟ್ಟೂರಿನ ಸೊಬಗನ್ನು ಚಿತ್ರಿಸುತ್ತಾನೆ.

"ಖರೇ ಮನಸ ಐತಿ ಕಾಶಿ ತಿಳಿದ ನೋಡರಿ ನೀವು ಸೋಸಿ ।
ಅಂತ:ಕರಣ ರಾಮೇಶ್ವರ ನಿಮ್ಮ ಒಳಗ ಇರೋದಾ ।
ನಿಮ್ಮನ ಬಿಟ್ಟ ಕಡೇಕ ಮತ್ತೇಲಿ ದೇವರ ಇರೋದಾ ।"[೨೮]

ಕಲಸಿದ್ದ ಇಲ್ಲಿ ನಿಜ ದೇವನ ದರ್ಶನವನ್ನು ಕೊಡುತ್ತಾನೆ. ಕಂಡ ಕಂಡ ದೇವರಿಗೆ ಕೈಮುಗಿಯುವುದನ್ನು ಖಂಡಿಸುತ್ತಾನೆ. ಮನಸ್ಸೆಂಬುದೇ ಕಾಶಿ; ಅಂತಃಕರಣವೇ ರಾಮೇಶ್ವರ.

ಕವಿ ರಾಚೋಟಿ

ಈತನ ಪೂರ್ಣ ಹೆಸರು ರಾಚೋಟಿ ಭರಮು ಚೌಗಲಾ. ಈತನ ಮೂಲ ಸ್ಥಳ ಜಲಾಲಪೂರ. ಉದ್ಯೋಗ ಒಕ್ಕಲುತನ. ಮಟ್ಟಿ ಹೊಡೆಯುತ್ತ ಇರುವಾಗಲೆ ಲಾವಣಿ ರಚಿಸುವ ಪ್ರೇರಣೆ ಲಭಿಸಿತೆಂದು ಈತನ ಮೊಮ್ಮಗ ಹೇಳುವನು. "ತೇರದಾಳದ ಲಾವಣಿಕಾರ ತುಕಾರಾಮನನನ್ನು ತನ್ನ ಗುರುವನ್ನಾಗಿ ಸ್ವೀಕರಿಸಿಕೊಂಡಿದ್ದನೆಂದು ಹೇಳುವರು. ಈತ ತ್ರಿಭಾಷಾ ಪ್ರಾವೀಣ್ಯತೆ ಪಡೆದಿದ್ದ.

ಕವಿ ಕರ್ಬಲ್, ಭಜನಾ, ಡೊಳ್ಳಿನ ಹಾಡು, ಶಾಹೀರ್ ಪದ, ಹಂತೀ ಹಾಗೂ ಚೌಡಕಿ ಪದಗಳನ್ನು ರಚಿಸುತ್ತಿದ್ದನೆಂದು ದೊರೆತ ಅವನ ಸಾಹಿತ್ಯದಿಂದ ತಿಳಿದು ಬರುತ್ತದೆ. ಈತನು

ಅಪಾರ ಶಿಷ್ಯ ಬಳಗ ಹೊಂದಿದ್ದನು. ಈತನ ಕರ್ಬಲ್ ಹಾಗೂ ಡೊಳ್ಳಿನ ಹಾಡುಗಳನ್ನು ಹಾಡುವವರು ಜಲಾಲಪೂರ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಿಗುತ್ತಾರೆ. ರಾಜೋಟಿಯ ಸಾಹಿತ್ಯವೆಲ್ಲ ಅಪ್ರಕಟಿತ.

"ಸೃಷ್ಟಿ" ನಿರ್ಮಾಣ ಕುರಿತು ವಿಷ್ಣು ಪುರಾಣವನ್ನು ಆಧರಿಸಿ ರಚಿಸಿದ ಡೊಳ್ಳಿನ ಪದವಿದು;

"ಕಮಲದಲ್ಲಿ ಬ್ರಹ್ಮ ಹುಟ್ಟಿ ಚಟ್ಟಣ ಎದ್ದನೋ।
ಹನ್ನೆರಡ ವರುಷ ತಪಜಪ ಮಾಡಿದ್ದನೋ ॥ಪ॥
ತಪೋ ಜಪೋ ಅಂತ ಹೇಳಿದ್ದನೋ ।
ಆಕಾಶಕೆ ವಯಿನಾಗಿ ಅಲ್ಲಿಂದ ನಾರಾಯಣ ಬಂದಿದ್ದನೋ ।
ಅಲ್ಲಿಂದ ನಾರಾಯಣ ಬಂದಿದ್ದನೋ । ನಾಲ್ಕು ವೇದಗಳ ತಂದಿದ್ದನೋ ।
ನಾಲ್ಕು ವೇದಗಳ ತುಗೊಂಡ ಬ್ರಹ್ಮಾ ಸೃಷ್ಟಿ ಮಾಡಬೇಕ ಅಂದಿದ್ದನೋ ।
ಯಾವ ಕಡಿ ನೋಡಿ ಕೊಂಡ ಕುಂತಿದ್ದಿ ಕಳ್ಳಾ । ಜಗ್ಗಿ ವೇದಗಳ ಓದಿದ್ದನೋ ।
ಜಗ್ಗಿ ವೇದಗಳ ಓದಿದ್ದ ಕಳ್ಳಾ । ನೀರಿನೊಳಗ ಅಂವ ಮುಳಗಿದ್ದನೋ ।
ಮಚ್ಚಾವತಾರ ತಾಳಿ ದೇವರ । ನಾಲ್ಕು ವೇದಗಳ ತಂದಿದ್ದನೋ ।
ಕೃತಾ ತ್ರೇತಾ, ದ್ವಾಪಾರ ಕಲಿಯುಗ । ಸತ್ಸರ ಸಾವಿರ ಕಿಪೆ ತಿರುಗಿದ್ದನೋ ।
ಸತ್ಸರ ಸಾವಿರ ಕಿಪೆ ತಿರುಗಿದ ಮ್ಯಾಲೋತ್ತಾ । ಬ್ರಹ್ಮಗ ಒಂದ ದಿವಸ ಆತೇನೋ ।
ಬ್ರಹ್ಮಗ ಒಂದ ದಿವಸ ಆತೋ ತಮ್ಮಾ । ವಿಷ್ಣುಗ ಒಂದು ತಾಸ ಆತೇನೋ ।
ವಿಷ್ಣುಗ ಒಂದ ತಾಸ ಆತೋ ತಮ್ಮಾ । ಮಾದೇವಗ ಒಂದು ಘಟಕ ಆತೇನೋ।
ಒಂದು ಘಟಕದ ಒಳಗೋ ತಮ್ಮಾ । ಸೃಷ್ಠಿ ನಿರ್ಮಾಣ ಆತೇನೋ।
ಕವಿಯ ಮಾಡತೀರಿ ಕರೆಯ ಪರಂತು । ಕಲತಿಲ್ಲ ಸಿರಿ ದಮ್ಮಾ ।
ದಮ್ಮಧೀರ ನಮ್ಮ ಜಲಾಲಪೂರ । ರಾಜೋಟಿ ತಿಳಿಸಿ ಹೇಳ್ಯಾನೇನೋ।"[೨೯]

ಈ ರೀತಿಯಾಗಿ ಕವಿ ವಿಷ್ಣುವಿನ ಮತ್ಸ್ಯಾವತಾರದ ಕಲ್ಪನೆ ಹಾಗೂ ಸೃಷ್ಟಿ ನಿರ್ಮಾಣದ ವಿವಿಧ ಹಂತಗಳನ್ನು ಚಿತ್ರಿಸುತ್ತಾನೆ.

"ಈಸಿ ಈಸಿ ನೀ ದಣಕೊಂಡ್ಯೋ ।
ಸನೇಕ ಬರವಲ್ಲತ ಆಚಿದಂಡ್ಯೋ । ಪ ।
ಮುಕ್ಕಟ ಬರತಾವ ಮೂರು ತೆರಿ
"ಆರು ತೋರಿ ಅರಭಟ ಭಾರಿ ।
ನೀರಿನ ಸೆಳವು ಆಯಿತೋ ಬಲಬಾರಿ ।
ನಿಂತ ಕೊಂಡ ನೋಡೆದೋ ಕಾಲೂರಿ ।

ಎರಡು ದಂಡಿಲೆ ದಡ ಸೋಸಿ ।
ಅದರೊಳಗ ಈಸುವುದು ಬಿರಿ ಆಯಿತಿ
ದಣುವಿಲ್ಲದ ಈಸಿ ಪಾರಾದಾ ।
ಅಂವನ ಪರಮ ಶಿಷ್ಯ ಜಲಾಲಪೂರದಾ
ರಾಚೋಟಿ ತಿಳಿಸಿ ಹೇಳಿದ ಹಿಂಗಾ ।"[೩೦]

ಮಾನವ ಇಂದು ಸಂಸಾರ ಎಂಬ ಸಾಗರದಲ್ಲಿ ಸಿಲುಕಿ ಅದರಿಂದ ಪಾರುಗಾಣದೆ ನರಳುತ್ತ ಕಾಮ, ಕ್ರೋಧ, ಮದ, ಮತ್ಸರ ಎಂಬ ಅರಿಷಡ್ವರ್ಗದಲ್ಲಿ ಮುಳುಗಿ ಒದ್ದಾಡುತ್ತಿದ್ದಾನೆ. ಅದರಿಂದ ಮುಕ್ತಿ ಪಡೆಯಲು ಪರಮಾತ್ಮನ ಸನ್ನಿಧಾನದ ಅವಶ್ಯಕತೆಯನ್ನು ತಿಳಿಸುವನು.

ಮುಗಳಖೋಡ ರಾಚಯ್ಯಾ

ಈತನ ಪೂರ್ಣ ಹೆಸರು ರಾಚಯ್ಯಾ ಮಡಿವಾಳಯ್ಯ ಹಿರೇಮಠ. ರಾಚಯ್ಯನ ಮೂಲಸ್ಥಳ ಮುಗಳಖೋಡ. ಉದ್ಯೋಗ ಒಕ್ಕಲುತನ. ಅನಕ್ಷರಸ್ಥನಾದ ಈತ ಒಂದು ಊರಿನಿಂದ ಮತ್ತೊಂದು ಊರಿಗೆ ಕುದುರೆ ಮೂಲಕ ಹೋಗಿ ತನ್ನ ಕಲೆಯನ್ನು ಪ್ರದರ್ಶಿಸುತ್ತಿದ್ದ ಆಗರ್ಭ ಶ್ರೀಮಂತ. ಎಂಟು ಊರುಗಳಲ್ಲಿ ಆತನ ಜಮೀನು. ಅಧ್ಯಾತ್ಮ ಚಿಂತನೆಯೇ ಆತನ ಪ್ರಮುಖ ಒಲವು. ಕುಂತ ಕುಂತಲ್ಲಿಯೇ ಪದ್ಯಗಳನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿದ್ದನು. ಈತ ಹೆಚ್ಚಾಗಿ ಮುಂಡಗಿ ಪದಗಳನ್ನು ರಚಿಸುತ್ತಿದ್ದನು. ಕರ್ಬಲ್ ರಿಯಾಯತ್, ಚೌಡಕಿ ಪದಗಳು, ಹಾಗೂ ಭಜನಾ ಪದಗಳನ್ನು ರಚಿಸುತ್ತಿದ್ದನೆಂದು ಹೇಳುತ್ತಾರೆ. ಜಯವಂತಿ ಕಾಖಂಡಕಿ ಇವರು ಈಗಲೂ ಮುಗಳಖೋಡ ರಾಚಯ್ಯಾ ರಚಿಸಿದ ಚೌಡಕಿ ಪದಗಳನ್ನು ಹಾಡುತ್ತಾರೆ. ರಾಚಯ್ಯಾ ತೇರದಾಳ, ಹಿಡಕಲ್, ಮುಗಳಖೋಡ, ಮುಂತಾದ ಕಡೆಗೆ ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದನು. ಈತ ಅಪಾರ ಶಿಷ್ಯ ಪರಂಪರೆಯನ್ನು ಹೊಂದಿದ್ದು ಅವರಲ್ಲಿ ಸಿದ್ರಾಮ ಎತ್ತಿನಮನಿ ಒಬ್ಬ. ಈತ ಕವಿಯ ಮುಂಡಗಿ ಪದಗಳನ್ನು ಹಾಡುತ್ತಾನೆ. ಕವಿ ರಚಿಸಿದ ಪದಗಳನ್ನು ಅಹೋರಾತ್ರಿ ಹಾಡುವುದಾಗಿ ಹೇಳುವನು. ಕವಿಯ ಯಾವ ಒಂದು ಪದ್ಯವೂ ಬರಹ ರೂಪದಲ್ಲಿ ದೊರೆಯುವುದಿಲ್ಲ. ಜನರ ಬಾಯಲ್ಲಿ ಮಾತ್ರ ಉಳಿದುಕೊಂಡಿವೆ. ದೊರೆತ ಪದ್ಯ ಭಾಗವನ್ನು ಇಲ್ಲಿ ನೀಡಲಾಗಿದೆ.

"ಹಗರ ಕಾಲವು ಜಗಕ್ಕೆ ಬಂತಣ್ಣಾ ।
ಹರನ ಕೋಪವು । ಜಗದ ಪ್ರಾಣ ಮೇಲೆ ಹೋತಣ್ಣಾ ।
ಜನಕ ಜನನಿ ಸೇರಲಿಲ್ಲ । ಮನಕೆ ನಾಜಿಕೆ ಹುಟ್ಟಲಿಲ್ಲ ।
ಕನಕ ಹೆಣ್ಣು ಮಣ್ಣಿಗಾಗಿ । ಸ್ವಾನಿನಂತೆ ಬೆನ್ನು ಹತ್ತಿ ।
ಜಗವು ಎಲ್ಲಾ । ಹಿಂಗ ತಿರುಗುತದಣ್ಣಾ ।

ಮೇಕ ಮುಂಗಲಿಕಟ್ಟಿ । ಹಾಡಿದ ರಾಚಯ್ಯನವರು ಪದ
ಕೇಳಿದರೆ ಹಾಲು ಸಕ್ಕರೆ । ಕೂಡಿದಂಗ ಆಯಿತಣ್ಣಾ ।"[೩೧]

ಹಗರ ಕಾಲವು ಜಗಕ್ಕೆ ಬಂತು ಎನ್ನುವಲ್ಲಿ ಕವಿ ಮನುಷ್ಯರ ಸಂಕುಚಿತ ವಿಚಾರ ವ್ಯಕ್ತವಾಗುತ್ತದೆ. ಹೆಣ್ಣಿಗಾಗಿ, ಮಣ್ಣಿಗಾಗಿ, ಸಂಪತ್ತಿಗಾಗಿ [ಬಂಗಾರ] ಆಶೆಬಿದ್ದು ನಾಯಿಯಂತೆ ತಿರುಗುತ್ತಿದ್ದಾರೆ. ಈ ಸ್ವಾರ್ಥದ ಅಮಲಿನಲ್ಲಿ ಮಾನವೀಯತೆಯನ್ನು ಗಾಳಿಗೆ ತೂರಿ ನಾಚಿಕೆಯಿಲ್ಲದ ಜೀವನ ನಡೆಸುವರು. ಅದಕ್ಕಾಗಿ ಕವಿ ಜನರ ಅಮಾನವೀಯ ಚಿತ್ರಣವನ್ನು ನೀಡಿರುವನು.

ಮತ್ತೊಂದು ಈತನ "ಅನುಭವ ಪದ" ದಲ್ಲಿಯೂ ಮನುಷ್ಯರ ದುರ್ನನಡತೆಯ ಕಟು ಟೀಕೆಯಿದೆ.

"ಎಂಥಾ ಮಾನವ ಜನ್ಮ ಇದಕ ಬುದ್ದಿ ಇಲ್ಲಾ ।
ಗುರುವಿನ ಶುದ್ಧ ಬೋಧ ಅಮೃತವನ್ನು ಸವಿಯಲಿಲ್ಲಾ ॥ಪ॥
ಹದ್ದಿನಷ್ಟು ಆಯುಷ್ಯ ಪಡಿಯಲಿಲ್ಲಾ ।
ಒಂದು ದಿನ ಎದ್ದು ಓಡಿ ಹೋಗುವ ಮೂಳಾ ನೆಚ್ಚಿಕಿಲ್ಲಾ ।
ಹಿಂದೆ ಹಲವು ಜನ್ಮ ತಿರುಗಿ ಬಂದಿತಲ್ಲಾ ।
ಇದಕ ಮುಂದ ಹೋಗುವಂತ ಮಾರ್ಗಗೊತ್ತಿಲ್ಲಾ ।
ನಂದು ನಿಂದು ಎಂಬ ಭ್ರಾಂತಿ ಪಡದಿತಲ್ಲಾ ।
ಒಂದಿನ ನಂದು ನಿಂದು । ಎಲ್ಲಾ ಬಿಟ್ಟ ನಡದಿತಲ್ಲಾ ।
ಎಷ್ಟು ಇದ್ದರ ಸಾವ ಇದಕ ಬಿಟ್ಟಿಲ್ಲಾ ।
ಒಂದಿನ ಸತ್ತ ಹೋಗುದ ಗಟ್ಟಿ ಮೂಳಗ ನೆನಪಿಲ್ಲಾ ।
ಅಪ್ಪ, ಅಣ್ಣ, ತಮ್ಮ ಬಂಧು ಬಳಗೆಲ್ಲಾ ।
ಒಂದಿನ ಅಪ್ಪನಿಂದ ಒಪ್ಪಿಕೊಂಡು ಉಳಿಸಲಿಲ್ಲಾ ।
ಎಲ್ಲಾ ಸುಳ್ಳ ಒಂದೇ ನೀವು ತಿಳಿಯೋ ಬೈಲಾ ।
ಇದರ ಮೂಲ ತಿಳಿಸುವಂತ ಗುರುವಿನ ಹೊಂದಲಿಲ್ಲಾ ।
ಗುರು ಭೀಮ ತಿಳಿಶಾನರಿ ಭವಕೀಲಾ ।
ತರಳು ರಾಚಯ್ಯನ ನುಡಿ ಕುಡಿದಂಗ ಸಕ್ಕರೆ ಹಾಲಾ।"[೩೨]

ಸರಳವಾದ ನುಡಿಗಳಲ್ಲಿ ಕವಿ ಸಮಾಜವನ್ನು ಖಂಡಿಸುತ್ತಾನೆ. ಗುರುವಿನ ನಾಮಸ್ಮರಣೆ ಮಾಡದ ಮಾನವ ಜನ್ಮ ನಾಚಿಕೆಗೇಡು ನಂದು-ನಿಂದು ಎನ್ನುವ ಭ್ರಾಂತಿಯಲ್ಲಿ ಮುಳಗಿ ಸ್ವಾರ್ಥಿಯಾಗಿದ್ದಾನೆ. ಹುಟ್ಟಿದ ಪ್ರತಿಯೊಂದು ಜೀವಿಗೆ ಸಾವು ತಪ್ಪಿಲ್ಲ, ಈ ವಿಚಾರವನ್ನು ತಿಳಿಯದೆ ಮನುಷ್ಯ ಮತಿಹೀನನಾಗಿದ್ದಾನೆ. ಆದ್ದರಿಂದ ಈ ಭವ ಬಂಧನದಿಂದ ಮುಕ್ತಿ

ಪಡೆಯಲು ಗುರುವಿನ ಜ್ಞಾನವೊಂದೆ ಸಾಕ್ಷಿ ಎಂಬ ಸಲಹೆ ಸೂಚಿಸುತ್ತಾನೆ. ಮತ್ತೆ ಇಲ್ಲಿ ತನ್ನ ಗುರು ಭೀಮನನ್ನು ಸ್ಮರಿಸಿರುವನು. ಅಂತ್ಯ ಪ್ರಾಸವನ್ನು ಕವಿ ಅನುಸರಿಸಿರುವುದು ಗೋಚರಿಸುತ್ತದೆ. ರಾಚಯ್ಯನ ಸಾಹಿತ್ಯಕ್ಕೆ ಪ್ರೇರಣೆ ಅಂತ ಕೇಳಿದರೆ ಆತನ ಶಿಷ್ಯ ಸಿದ್ರಾಮ ಈ ರೀತಿಯಾಗಿ ಹೇಳುತ್ತಾನೆ. "ವರವು ಕೊಡೆಕಲ್ಲು, ತಾಯಿ-ಸೀತಿಮನಿ, ಬಾಯಿ-ಬಬಲಾದಿ, ನುಡಿಮಾಡಿ ಹಾಡಿದವರು ಮುಗಳಖೋಡ ರಾಚಯ್ಯ" ಅಂತ.

ಈ ರೀತಿಯಾಗಿ ಅಲಭೈರಿ ಪರಿಸರದ ಜನಪದ ಕಾವ್ಯ ಪರಂಪರೆ ವಿಶಾಲವಾಗಿದ್ದು, ಸಂಕ್ಷಿಪ್ತದಲ್ಲಿ ಹಿಡಿದಿಡಲು ಪ್ರಯತ್ನ ಮಾಡಲಾಗಿದೆ.

ಟಿಪ್ಪಣಿಗಳು :

೧. ಡಿ. ಲಿಂಗಯ್ಯ ;
ಕೆ. ಆರ್. ಸಂಧ್ಯಾರೆಡ್ಡಿ (ಸಂ); ಜಾನಪದ ಸ್ವರೂಪ ಮತ್ತು ಸಾಹಿತ್ಯ :
ಪುಟ–೫೩

೨. ಸದಾಶಿವ ಬಡಿಗೇರ (ನಿಡಗುಂದಿ) ಇವರಿಂದ ಸಂಗ್ರಹಿತ, ಯಮನಪ್ಪ ಛಲವಾದಿ ರಚಿತ (ಅಪ್ರಕಟಿತ) ಪದ.

೩. ಅದೇ,

೪. ರಾಮಪ್ಪ ಭೀಮಪ್ಪ ಚೌಗಲಾ (ಅಲಖನೂರ) ಇವರ ಮೌಖಿಕ ಸಂದರ್ಶನ ವೇಳೆಯಲ್ಲಿ ರಾಮು ಪೂಜೇರಿ ರಚಿತ ಅಪ್ರಕಟಿತ ಪದ.

೫. ಅದೇ,

೬. ಅದೇ,

೭. ಅದೇ,

೮. ಶರೀಫ ಮೀರಾಸಾಬ ಮುಲ್ಲಾ ಇವರ ಮೌಖಿಕ ಸಂದರ್ಶನದಿಂದ ಪಡೆದ ಮೀರಾಸಾಬ ಮುಲ್ಲಾ ವಸ್ತಾದ ಇವರ ಅಪ್ರಕಟಿತ ಪದ.

೯. ಮಹಮ್ಮದ ಹನಿಫ್ ಶಿರಾಜಸಾಬ ಮುಲ್ಲಾ ಇವರ ಮೌಖಿಕ ಸಂದರ್ಶನದಿಂದ ಪಡೆದ ಮೀರಾಸಾಬ ಮುಲ್ಲಾ ವಸ್ತಾದ ಇವರ ಅಪ್ರಕಟಿತ ಪದ.

೧೦. ಅದೇ,

೧೧. ಅದೇ,

೧೨. ಗುರುಸಿದ್ಧ ನಿಂಗಪ್ಪ ದಳವಾಯಿ ಇವರಿಂದ ಸಂಗ್ರಹಿತ, ಸಿದ್ದಲಿಂಗ ವಸ್ತಾದ ರಚಿತ ಅಪ್ರಕಟಿತ ಪದ.

೧೩. ಅದೇ,

೧೪. ಶರಣಗುಂಡಪ್ಪ ರಚಿತ ಅಪ್ರಕಟಿತ ಪದ.

೧೫. ೧೯೯೨ರ ಪ್ರಶಸ್ತಿ ವಿಜೇತರು, ಪ್ರಕಟಣೆ, ಕರ್ನಾಟಕ ಯಕ್ಷಗಾನ ಮತ್ತು ಜಾನಪದ ಅಕಾಡೆಮಿ, ಬೆಂಗಳೂರು.

೧೬. ಅಪ್ಪಯ್ಯ ಸಿದ್ದಪ್ಪ ಸವದತ್ತಿ (ಬಾವಾನ ಸವದತ್ತಿ) ಇವರ ಮೌಖಿಕ ಸಂದರ್ಶನದಿಂದ ಪಡೆದ ಸವದತ್ತಿ ಸಿದ್ದಪ್ಪ ರಚಿತ ಅಪ್ರಕಟಿತ ಪದ.

೧೭. ಅಪ್ಪಯ್ಯ ಸಿದ್ದಪ್ಪ ಸವದತ್ತಿ (ಬಾವಾನ ಸವದತ್ತಿ) ಇವರ ಮೌಖಿಕ ಸಂದರ್ಶನದಿಂದ ಪಡೆದ ಕವಿ ಶಿಠಿಭೈರಿ ರಚಿತ ಅಪ್ರಕಟಿತ ಪದ

೧೮. ಶರಮುದ್ದೀನ ತುರಾಭ್ ಜಮಾದಾರ ಇವರ ಸಂಗ್ರಹದಿಂದ ಪಡೆದ ಬಾಬಾಜಿ ಜಮಾದಾರ ರಚಿತ ಅಪ್ರಕಟಿತ ಪದ.

೧೯. ಮೈನುದ್ದೀನ ತುರಾಭ್ ಜಮಾದಾರ ಇವರ ಸಂಗ್ರಹದಿಂದ ಪಡೆದ ಬಾಬಾಜಿ

ಜಮಾದಾರ ರಚಿತ ಅಪ್ರಕಟಿತ ಪದ.

೨೦. ಅದೇ,

೨೧. ಅದೇ,

೨೨. ಅದೇ,

೨೩. ಅದೇ,

೨೪. ಅದೇ,

೨೫. ಅದೇ,

೨೬. ಶ್ರೀ ವಿರುಪಾಕ್ಷದೇವರು (ಪೀಠಾಧಿಕಾರಿಗಳು) – ಶಿರಗೂರ ಇವರ ಹೇಳಿಕೆ.

೨೭. ಅಲ್ಲಮಪ್ರಭು ಮಹಾರಾಜರು (ಸಂ), ಪರಮಾರ್ಥ ಜ್ಞಾನ ಜ್ಯೋತಿ;ಪು–೧೬

೨೮. ಅದೇ, ಪುಟ–೧೭.

೨೯. ಮಹಾದೇವ ಪಡಚಿ (ಅಳಗವಾಡಿ) ಇವರ ಮೌಖಿಕ ಸಂದರ್ಶನದಿಂದ ಪಡೆದ ಕವಿ ರಾಚೋಟಿ ವಿರಚಿತ ಅಪ್ರಕಟಿತ ಪದ.

೩೦. ಅದೇ,

೩೧. ಸಿದ್ರಾಮ ಎತ್ತಿನಮನಿ (ಮುಗಳಖೋಡ) ಇವರ ಮೌಖಿಕ ಸಂದರ್ಶನದಿಂದ ಪಡೆದ ಕವಿ ರಾಚಯ್ಯನ ಅಪ್ರಕಟಿತ ಪದ.

೩೨. ರಾಮು ಡಾಂಗೆ (ಹಾರೂಗೇರಿ) ಇವರ ಸಂಗ್ರಹದಿಂದ ಪಡೆದ ಮುಗಳಖೋಡದ ರಾಚಯ್ಯನ ಅಪ್ರಕಟಿತ ಪದ.

ಅಧ್ಯಾಯ: ಮೂರು

ಕವಿ ಅಲಭೈರಿ; ಜೀವನ ದರ್ಶನ

ಅಧ್ಯಾಯ: ಮೂರು

ಕವಿ ಅಲಭೈರಿ; ಜೀವನ ದರ್ಶನ

ಕನ್ನಡ ತತ್ವಸಾಹಿತ್ಯ ಪರಂಪರೆ ಶ್ರೀಮಂತವಾದದ್ದು. ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಸೃಷ್ಟಿಯಾಗುತ್ತ ತನ್ನದೆ ಆದ ಕಾಣಿಕೆಯನ್ನು ನೀಡಿದೆ. ಅದು ಹಲವಾರು ವಿಶಿಷ್ಟ ಘಟ್ಟಗಳ ಹುಟ್ಟಿಗೆ ಕಾರಣವಾಗಿ ತನ್ನ ಸಾಹಿತ್ಯ ರಾಶಿಯನ್ನು ಶ್ರೀಮಂತಗೊಳಿಸಿದೆ. ಅಂತಹ ಸಾಹಿತ್ಯ ಪ್ರಕಾರಗಳಲ್ಲಿ ತತ್ವಸಾಹಿತ್ಯವೂ ಒಂದು. ಇದು ಅನುಭಾವ ಸಾಹಿತ್ಯ. ಕನ್ನಡದ ಉಪನಿಷತ್ತು ಎಂದೇ ಹೆಸರುವಾಸಿಯಾದ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯವನ್ನು ಇಲ್ಲಿ ಪ್ರಮುಖವಾಗಿ ಗುರುತಿಸುತ್ತೇವೆ. ಇವುಗಳಂತೆ ಜನಜೀವನವನ್ನು ಮುಟ್ಟಿ, ಹಸನುಗೊಳಿಸಿದ ಸಾಹಿತ್ಯ ಪರಂಪರೆಯೊಂದು ಇದೆ. ಅದುವೇ ಅನುಭಾವಿಗಳ ಪರಂಪರೆ. ಇವರೂ ಸಹ ಶರಣರ ಮಾರ್ಗವನ್ನೇ ಅನುಸರಿಸಿದ್ದಾರೆ. ಇವರು ಹಾಡುವ ಪದಗಳು ತತ್ವಪದಗಳಾಗಿದ್ದು ಅವು ಅಂತರಂಗದ ಅರಿವಿನ ಕುರಿತಾಗಿವೆ.

"ಅಧ್ಯಾತ್ಮ ನಿಲುವಿನಿಂದ ಧಾರ್ಮಿಕ ಪುನರುತ್ಥಾನಕ್ಕೆ ಕಾರಣವಾದ ಅಂತಹ ಅನೇಕ ಮಹಾಪುರುಷರು ಆಗಿ ಹೋಗಿದ್ದಾರೆ. ಅಂಥವರಲ್ಲಿ ಕರ್ನಾಟಕದ ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪರಂಪರೆಯ ಪ್ರತಿಪಾದಕರು. ಇವರು ಜೀವಾತ್ಮ ಮತ್ತು ಪರಮಾತ್ಮ ಒಂದೇ ಎಂದು ಸಾರುತ್ತಾರೆ. 'ಅಹಂ ಬ್ರಹ್ಮಾಸ್ಮಿ' (ನಾನೇ ಬ್ರಹ್ಮ) ಎಂದು ಪ್ರತಿಪಾದಿಸಿದ್ದಾರೆ. ಮಧ್ವರ ದ್ವೈತ ಸಿದ್ಧಾಂತ ಪರಂಪರೆ ಜೀವ ಮತ್ತು ಪರಮಾತ್ಮ ಬೇರೆ ಬೇರೆ ಅಂತ ತಿಳಿಸುತ್ತದೆ. ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಪರಂಪರೆ ಕರ್ನಾಟಕದಲ್ಲಿ ಅಷ್ಟಾಗಿ ಬೆಳೆದದ್ದನ್ನು ಕಾಣುವುದಿಲ್ಲ. ೧೨ ನೆಯ ಶತಮಾನದ ಬಸವಣ್ಣನವರು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪರಂಪರೆಯನ್ನು ಬೆಳೆಸಿದರು."[೧]

ಬಸವಣ್ಣನವರು ಸಹ ಸಮಾಜವನ್ನೇ ಮುಖ್ಯ ವಸ್ತುವಾಗಿ ತೆಗೆದುಕೊಂಡು ಇಲ್ಲಿರುವ ಜಾಡ್ಯವನ್ನು ಹೋಗಲಾಡಿಸಲು ಶ್ರಮಿಸಿದ್ದಾರೆ. ಪ್ರಾಣಿಬಲಿ, ಲಿಂಗ ತಾರತಮ್ಯ, ಅಸ್ಪೃಶ್ಯತೆ, ಬಡವ-ಶ್ರೀಮಂತ ಈ ಮುಂತಾದ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ಮಾಡಿರುವರು. ಶರಣರ ಜೊತೆಗೆ ಕೀರ್ತನಕಾರರೂ ಸಹ ತಮ್ಮದೆ ಆದ ವಿಶಿಷ್ಟ ಕಾಣಿಕೆಯನ್ನು ಈ ಸಮಾಜಕ್ಕೆ ನೀಡಿದ್ದಾರೆ. ಇವರು ತಮ್ಮ ಕೀರ್ತನೆಯ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡಿರುವರು. ಕೈಯಲ್ಲಿ ತಂಬೂರಿಯನ್ನು ಹಿಡಿದುಕೊಂಡು ಮನೆ ಮನೆಗೆ ಹೋಗಿ ಹಾಡು ಹೇಳುವುದರ ಮೂಲಕ ಸಾಹಿತ್ಯ ಮತ್ತು ಸಂಗೀತ ಎರಡನ್ನು ಶ್ರೀಮಂತಗೊಳಿಸಿದವರು. ಇವರ ನಂತರ ಕರ್ನಾಟಕದಲ್ಲಿ ಆರೂಢ ಪರಂಪರೆಯು ಬೆಳೆದದ್ದನ್ನು ಕಾಣುತ್ತೇವೆ. ಈ ಪರಂಪರೆಯಲ್ಲಿ ಸಿದ್ಧಾರೂಢರ ಹಾಗೂ ಗುರುನಾಥಾರೂಢರ

ಹೆಸರನ್ನು ನೆನಪಿಸಿಕೊಳ್ಳಬಹುದು. ಇವರು ಸಹ ಮತಮಾನ್ಯಗಳನ್ನು ನಿರ್ಮಿಸಿಕೊಂಡು ಆ ಮೂಲಕ ಶುಚಿ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದ್ದಾರೆ.

ಕರ್ನಾಟಕದಲ್ಲಿ ಇವೆಲ್ಲ ಪರಂಪರೆಯನ್ನು ಬಿಟ್ಟು ಇನ್ನೊಂದು ಪರಂಪರೆಯೂ ಬೆಳೆದದ್ದನ್ನು ಕಾಣುತ್ತೇವೆ. ಅದುವೇ 'ಅವಧೂತರ ಅವಧೂತ ಪರಂಪರೆ'. ಪ್ರಸುತ್ತ ಕವಿ ಅಲಭೈರಿಯೂ ಸಹ ಅವಧೂತ ಪರಂಪರೆಗೆ ಸೇರಿದವನು. ಈತನು ಸಹ ಜನಪದ ಕಾವ್ಯಗಳ ಮೂಲಕ ಸಮಾಜದ ಅಂಧಕಾರವನ್ನು ಹೋಗಲಾಡಿಸಲು ಹವಣಿಸಿದ್ದಾನೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಇಂತಹ ಹಲವಾರು ಮಹಾಪುರುಷರು ಆಗಿ ಹೋಗಿದ್ದಾರೆ. ಕೆಲವರ ಕುರಿತು ಅಧ್ಯಯನಗಳು ನಡೆದಿವೆ. ಇನ್ನು ಕೆಲವರು ಸಾಹಿತ್ಯದ ಮುಖ್ಯ ವಾಹಿನಿಯಿಂದ ದೂರಿದ್ದಾರೆ. ಇವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಕೃಷಿ ಮಾಡಿದ್ದಾರೆ. ಅದರಲ್ಲಿ ಅವರದು ವಿಶೇಷವಾಗಿ ತತ್ವಸಾಹಿತ್ಯದಲ್ಲಿ ಆಸಕ್ತಿ. ಸ್ವಭಾವತಃ ಇವರದು ತುಸು ವಿಚಿತ್ರ ಲಕ್ಷಣ.

೧. ಇವರು ನೋಡಲು ವಿಚಿತ್ರವಾಗಿರುತ್ತಾರೆ.
೨. ಬಾಯಿಗೆ ಬಂದದ್ದನ್ನು ಮಾತನಾಡುವುದು.
೩. ಸಿಕ್ಕ ಸಿಕ್ಕ ಸ್ಥಳಗಳಲ್ಲಿ ತಿರುಗುವುದು.
೪. ಮದ್ಯಪಾನ ಅಥವಾ ಗಾಂಜಾ ಸೇವಿಸುವುದು ಸಾಮಾನ್ಯ
೫. ತಮ್ಮ ಶರೀರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳದೆ ಅಂತರಂಗ ಸ್ವಚ್ಛತೆಗೆ ಗಮನ ಕೊಡುವುದು.
೬. ಉದ್ದುದ್ದು ಕೂದಲು ಬಿಡುವುದು.

ಇಂತಹ ವಿಚಿತ್ರ ಲಕ್ಷಣಗಳನ್ನು ಹೊಂದಿದವರು ಅವಧೂತರು. ಇವರ ಸಾಲಿಗೆ ಹಾರೂಗೇರಿ ಲೀಲಾಮಠದ ಶ್ರೀ ಚನ್ನವೃಷಭೇಂದ್ರ ಮಹಾಸ್ವಾಮಿಗಳು ಸೇರುತ್ತಾರೆ. ಇವರು ಭಕ್ತಿ ಜ್ಞಾನ ಅಧ್ಯಾತ್ಮದ ನಿಲುವುಗಳನ್ನು ಅನುಸರಿಸಿ ಸಮಾಜ ಶುಚಿಗೊಳಿಸುವ ಕಾಯಕ ಮಾಡಿದ್ದಾರೆ.

೩.೧ ಮನೆತನ ಹಿನ್ನಲೆ :

"ಅಲಭೈರಿಯ ಪೂರ್ವಜರು ಸೊಲ್ಲಾಪುರದ ಸಮೀಪವಿರುವ ಮಂದಿನಿಮಾಳ ಕೋಟೆಯವರು. ಇವರು ಪೇಶ್ವೆ ದರ್ಬಾರದಲ್ಲಿ ಕರಣಿಕ ಕೆಲಸವನ್ನು ಮಾಡುತ್ತಿದ್ದರು. ಅಲ್ಲಿ ಅವರಿಗೆ ಯಾವುದೊ ಕಾರಣ ನಿಮಿತ್ಯ ಮನಸ್ತಾಪ ಉಂಟಾಗಿ ಪೇಶ್ವೆಯವರ ದರ್ಬಾರ ಬಿಟ್ಟು ಈಗಿನ ಮಿರಜ ತಾಲೂಕಿನ ಕುರಂದವಾಡಿಗೆ ಬಂದು ನೆಲೆಸಿದರು. ಇವರ ಮನೆತನದ ಮೂಲಪುರುಷ ಆದಿನಾಥ. ಇವರು ಕುರಂದವಾಡಿಯಲ್ಲಿಯೂ ಹೆಚ್ಚುಕಾಲ ನಿಲ್ಲದೆ ಒಬ್ಬಿಬ್ಬರನ್ನು ಬಿಟ್ಟು ಉಳಿದವರು ಅಥಣಿ ತಾಲೂಕಿನ ಶೇಡಬಾಳ ಗ್ರಾಮಕ್ಕೆ ಬಂದು

ನೆಲೆಸಿದರು. ಅಲ್ಲಿ ಅವರು ತಮ್ಮ ಬುದ್ಧಿ ಚಾತುರ್ಯ ಹಾಗೂ ಭುಜಬಲದಿಂದ ಆ ಊರಿನ ಗೌಡಿಕೆಯನ್ನೆ ಗಿಟ್ಟಿಸಿಕೊಳ್ಳುತ್ತಾರೆ. ಅಲ್ಲಿಯೇ ಅವರು ಸುಮಾರು ವರ್ಷಗಳ ಕಾಲ ಕಳೆಯುತ್ತಾರೆ."[೨] ಮುಂದೆ ಈ ಮನೆತನದ ಆದಿನಾಥನು ಅಧಿಕಾರದ ಕಚ್ಚಾಟಕ್ಕೆ ಬೇಸತ್ತು ಶೇಡಬಾಳ ಗ್ರಾಮವನ್ನು ಬಿಟ್ಟು ಈಗಿನ ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಹಾರೂಗೇರಿ ಗ್ರಾಮಕ್ಕೆ ಬಂದು ನೆಲಸಿದನು. ಆತ ಬದುಕಿನ ನಿಜಸುಖವನ್ನು ಕಂಡವನು. ಮೂವರು ಮಕ್ಕಳ ತುಂಬು ಸಂಸಾರ. ಸುಭಾನಗೊಂಡ, ರಾಯಗೊಂಡ ಹಾಗೂ ಧರಿಗೊಂಡ ಎಂಬ ಮೂರು ಜನ ಗಂಡು ಮಕ್ಕಳು.

ಇವರದು ಜೈನ ಒಕ್ಕಲು ಮನೆತನ. ಇವರಲ್ಲಿ ಧರಿಗೊಂಡನಿಗೆ ಅಧ್ಯಾತ್ಮದ ಗೀಳಿತ್ತು. ಭವಿಷ್ಯ ಹೇಳುತ್ತಿದ್ದನು. ಇವನು ಕೃಷಿ ಉದ್ಯೋಗದ ಜೊತೆಗೆ ಧರಿಗೊಂಡ ಕಟ್ಟಡ ನಿರ್ಮಾಣ, ಶಿಲ್ಪ, ಆಯ, ನಕ್ಷೆ ತೆಗೆಯುವುದು ಹಾಗೂ ಬಳೆಗಾರಿಕೆಯ ಕಸುಬನ್ನು ಕೆಲಕಾಲ ನಡೆಸಿದ್ದನೆಂದು ಬಲ್ಲ ಹಿರಿಯರು ಹೇಳುತ್ತಾರೆ. ಒಟ್ಟಿನಲ್ಲಿ ಧರಿಗೊಂಡನದು ತೃಪ್ತಿಕರ ಸಂಸಾರವಾಗಿತ್ತೆಂದು ಅವರ ವಂಶಜರು ಹೇಳುತ್ತಾರೆ.

೩.೨ ಅಲ್ಲಪ್ಪನ ಜನನ :

ಧರಿಗೊಂಡನದು ಅಧ್ಯಾತ್ಮಿಕತೆ ನೆಲೆಯುಳ್ಳ ಬಹುಮುಖ ಪ್ರತಿಭೆ. ಈತನ ಧರ್ಮ ಪತ್ನಿ ರಾಯವ್ವ ಇವರ ಚೊಚ್ಚಲು ಮಗನೇ ಅಲ್ಲಪ್ಪ (ಕವಿ ಅಲಭೈರಿ). " ಕ್ರಿ.ಶ. ೧೮೮೫ ರಲ್ಲಿ ಜನಿಸಿದನೆಂದು ಕೆಲವರು ಹೇಳುತ್ತಾರೆ. ಆದರೆ ಜನನ ದಾಖಲೆಗಳು ಲಭ್ಯವಿಲ್ಲ."[೩]

೩.೩ ಅಲ್ಲಪ್ಪನ ಶಿಕ್ಷಣ / ವಿದ್ಯಾರ್ಜನೆ :

ತಂದೆ ಧರಿಗೊಂಡನು ಮಗನನ್ನು ಗಾವಟಿ ಶಾಲೆಗೆ ಸೇರಿಸಿದರೂ ಅಲ್ಲಪ್ಪ ಅಕ್ಷರ ವಿದ್ಯೆಯನ್ನು ಕಲಿಯಲೆ ಇಲ್ಲ. ಒಂದೆರಡು ಸಲ ತಂದೆ ತಿನ್ನಲು ಕೊಟ್ಟು ಪ್ರಯತ್ನಿಸಿದ, ಪ್ರಯೋಜನವಾಗಲಿಲ್ಲ. ನಮಿಸಿದರೂ, ಅಂಜಿಸಿದರೂ, ಅದು ವ್ಯರ್ಥವಾಯಿತು. ಆಗಲೆ ಅಲ್ಲಪ್ಪನಿಗೆ ಲಕ್ಷ್ಮೀ ಮತ್ತು ರಾಜಮತಿಯರೆಂಬ ಇಬ್ಬರು ಸಹೋದರಿಯರಿದ್ದರು. ಅಲ್ಲಪ್ಪ ಅವರನ್ನು ಪ್ರೀತಿಯ ಗೊಂಬೆಗಳಂತೆ ಆಡಿಸುತ್ತ ಕಾಲ ಕಳೆಯುತ್ತಿದ್ದನು. ಅಲ್ಲಪ್ಪ ಬೆಳೆದು ದೊಡ್ಡವನಾದ. ಧರಿಗೊಂಡನಿಗೆ ನಿರಾಸೆಯಾದರೂ ಮಗನ ಮೇಲೆ ಕೋಪಿಸಿಕೊಳ್ಳುತ್ತಿರಲಿಲ್ಲ. ಕೆಲ ದಿನಗಳಲ್ಲಿಯೇ ಅಲ್ಲಪ್ಪ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ. ಹೀಗೆ ಅಲ್ಲಪ್ಪನ ಬದುಕು ಕಷ್ಟದಿಂದಲೇ ಆರಂಭವಾಯಿತು.

ಅಲ್ಲಪ್ಪ ತುಂಟಾಟದಲ್ಲಿಯೇ ೧೨ ವರ್ಷ ಕಳೆಯುತ್ತಾನೆ. ಆತನಿಗೆ ತೆರೆದ ಲೋಕವೆ ವಿದ್ಯಾಲಯವಾಯ್ತು. ಅಲ್ಲಪ್ಪನದು ಸಂಶೋಧಕ ದೃಷ್ಟಿ ಆತನದು ಚಿಕಿತ್ಸಕ ಬುದ್ಧಿ. ಇದರಿಂದಾಗಿ ಆತನಿಗೆ ಜೀವನದ ಅತೀ ಸೂಕ್ಷ್ಮ ವಿಷಯಗಳನ್ನು ಗುರುತಿಸಲು ಸಾಧ್ಯವಾಯಿತು. ಅಲ್ಲಪ್ಪ ಹೆಚ್ಚಾಗಿ ಮಲ್ಲಾರ ಬಾಪೂಜಿ ಕುಲಕರ್ಣಿ ಎಂಬುವರ ಮನೆಯಲ್ಲಿಯೇ ಇರುತ್ತಿದ್ದನು. ಬಾಗಿಲಿಲ್ಲದ ಪಡಶಾಲೆಯೇ ಈತನ ವಾಸವಾಗಿತ್ತು. ಅಲ್ಲಿ ಬಡಬ್ಯಾಕೂಡದ ಪಾಂಡುರಂಗ ಕಟ್ಟಿ ಹಾಗೂ ಆತನ ಸ್ನೇಹಿತರಿರುತ್ತಿದ್ದರು. ಅವರು ತಮ್ಮ ಊರಲ್ಲಿ ಶಾಲೆಯಿಲ್ಲದ ಕಾರಣ ಹಾರೂಗೇರಿಯಲ್ಲಿಯೆ ವಿದ್ಯಾಬ್ಯಾಸ ಮಾಡುತ್ತಿದ್ದರು. ಕುಲಕರ್ಣಿಯವರ ಬಾಗಿಲಿಲ್ಲದ ಮನೆ ಅವರ ರಾತ್ರಿ ವಾಸಿಸುವ ಸ್ಥಳವಾಗಿತ್ತು. ಅಲ್ಲಪ್ಪನು ಅವರ ಸಂಗಡ ಕಾಲ ಕಳೆಯ ತೊಡಗಿದನು. ಒಂದೊಂದು ದಿನ ರಾತ್ರಿ ಅಲ್ಲಿಯೆ ಇರತೊಡಗಿದನು. ಪಾಂಡುರಂಗ ಕಟ್ಟಿ ಹಾಗೂ ಅಲ್ಲಪ್ಪನಿಗೆ ಗೆಳೆತನ ಗಾಢವಾಗಿತ್ತು.

ಪಾಂಡುರಂಗ ಕಟ್ಟಿ ಓದುತ್ತಿದ್ದ ಗ್ರಂಥಗಳನ್ನು ಅಲ್ಲಪ್ಪ ಕೇಳುತ್ತಿದ್ದ. ಅಲ್ಲಪ್ಪನ ಜ್ಞಾನದಾಹ ಕಂಡ ಪಾಂಡುರಂಗ ಕಟ್ಟಿ ಓದು ಬರಹ ಕಲಿಯಲು ಪ್ರೇರೇಪಿಸುವನು. ಮೊದ ಮೊದಲು ನಿರಾಕರಿಸಿದ ಅಲ್ಲಪ್ಪ ನಂತರದಲ್ಲಿ ಒಪ್ಪಿಕೊಳ್ಳುತ್ತಾನೆ. ಮುಂದೆ ಆ ಪಡಶಾಲೆಯೆ ಅಲ್ಲಪ್ಪನ ಶಾಲೆಯಾಯಿತು. ಪಾಂಡುರಂಗ ಕಟ್ಟಿ ಅಲ್ಲಪ್ಪನಿಗೆ ಅಕ್ಷರಾಭ್ಯಾಸ ಮಾಡಿಸಿದರು. ಅಂದಿನಿಂದ ಅಲ್ಲಪ್ಪ ಪಾಂಡುರಂಗ ಕಟ್ಟಿಯ ಆಪ್ತನಾದ. ಅಲ್ಲಪ್ಪನ ಪ್ರತಿಭೆಯನ್ನು ಗುರುತಿಸಿದ ಮೊದಲ ವ್ಯಕ್ತಿಯೇ ಪಾಂಡುರಂಗ ಶ್ರೀನಿವಾಸ ಕಟ್ಟಿ.

ಅಲ್ಲಪ್ಪನ ಜ್ಞಾನದ ದಾಹ ಹಿರಿದಾದದ್ದು. ಅವನು ಕೆಲವೇ ಗ್ರಂಥಗಳಿಂದ ತೃಪ್ತಿಗೊಳ್ಳಲಿಲ್ಲ. ಬೇರೆ ಬೇರೆ ಗ್ರಂಥಗಳನ್ನು ಹುಡುಕಿಕೊಂಡು ಅಭ್ಯಾಸ ಮಾಡಿದ. ಆತನ ಅಭ್ಯಾಸದಲ್ಲಿ ಜೈನ ಶಾಸ್ತ್ರ ಪುರಾಣಗಳು, ವೈದಿಕ ಶಾಸ್ತ್ರಗಳು, ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣಗಳು, ನಿಜಗುಣರ ಶಾಸ್ತ್ರ, ಸರ್ಪ ಭೂಷಣರ ಗ್ರಂಥಗಳು, ಅಷ್ಟೇ ಅಲ್ಲದೆ ದಾಸ ಸಾಹಿತ್ಯ ಹಾಗೂ ವಚನ ಸಾಹಿತ್ಯಗಳೂ ಸಹ ಆತನ ಜ್ಞಾನ ದಾಹಕ್ಕೆ ಒಳಗಾಗುತ್ತವೆ.

ಅಲ್ಲಪ್ಪ ಬರಬರುತ್ತ ಪಾಂಡುರಂಗ ಕಟ್ಟಿಯವರ ಪ್ರೇರಣೆಯಿಂದ ಕನ್ನಡ, ಮರಾಠಿ ಹಾಗೂ ಮೋಡಿ ಲಿಪಿಯನ್ನು ಕಲಿತನು. ಅನಂತರ ಅಲ್ಲಪ್ಪ ಅಧ್ಯಯನದಲ್ಲಿ ತಲ್ಲೀನನಾದನು. ಹೀಗೆ ಅಲ್ಲಪ್ಪನಿಗೆ ಅಕ್ಷರ ಜ್ಞಾನ ಕಲಿಸಿ ಕೊಟ್ಟ ಮೊದಲ ಗುರು ಪಾಂಡುರಂಗ ಕಟ್ಟಿ. ಅಲ್ಲಪ್ಪ ಆಗಲೇ ಸಣ್ಣ ಸಣ್ಣ ಪದ್ಯಗಳನ್ನು ರಚಿಸತೊಡಗಿದನು. ಹಾರೂಗೇರಿಗೆ ಶಾಲಾ ಶಿಕ್ಷಕರಿರಾಗಿ ಬಂದ ಗೋವಿಂದ ಮಾಸ್ತರರು ಅಲ್ಲಪ್ಪನ ಕವಿತೆಗಳನ್ನು ಮಕ್ಕಳ ಮುಂದೆ ಓದಿ ಹೇಳತೊಡಗಿದರು.

೩.೪ ಯೌವ್ವನ :

ಧರಿಗೊಂಡ ಮಗನನ್ನು ತಾನು ಮಾಡುವ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ತಂದೆ ಕೆಲಸದಲ್ಲಿ ತೊಡಗುವುದೆ ತಡ ಮಗ ಹಿಂದಿನಿಂದ ಪರಾರಿ. ಮೊದ ಮೊದಲು ಅಲ್ಲಪ್ಪನಿಗೆ ಕೆಲಸದಲ್ಲಿ ಆಸಕ್ತಿ ಇರುತ್ತಿರಲಿಲ್ಲ. ಬೀದಿಯಲ್ಲಿ ಅಲೆಯುವುದೇ ಉದ್ಯೋಗವಾಯಿತು. ಅಲ್ಲಪ್ಪ ಊಟಕ್ಕೆ ಮಾತ್ರ ಮನೆಗೆ ಬರುತ್ತಿದ್ದನು. ಒಮ್ಮೊಮ್ಮೆ ಊಟವೂ ಹೊರಗಡೆ. ಹೀಗೆ ಸುಮಾರು ವರ್ಷಗಳ ಕಾಲ ಕಳೆಯುತ್ತಾನೆ. ನಂತರ ಅಲ್ಲಪ್ಪ ತಂದೆ ಮಾಡುವ ಮನೆಕಟ್ಟುವ ಕಾರ್ಯವನ್ನು ಮುಂದುವರೆಸಿದನೆಂದು ಅಲ್ಲಪ್ಪನ ಮೊಮ್ಮಗ ಅಣ್ಣಪ್ಪ (ಸುಬ್ಬಣ್ಣವರ) ಈಗಲೂ ಹೇಳುತ್ತಾರೆ. ಮನೆಕಟ್ಟುವ ಕೆಲಸ ಸುಬ್ಬಣ್ಣನವರ ಮನೆತನದ ವಂಶಪಾರಂಪರಿಕ ಉದ್ಯೋಗ ಎಂದು ತಿಳಿದುಬರುತ್ತದೆ. ಏಕೆಂದರೆ ಈಗಲೂ ಸಹ ಈ ಮನೆಕಟ್ಟುವ ಕೆಲಸವನ್ನು ಸುಬ್ಬಣ್ಣನವರ ಮನೆತನದಲ್ಲಿ ಒಬ್ಬಿಬ್ಬರು ಮುಂದುವರೆಸಿಕೊಂಡು ಹೋಗುವುದನ್ನು ಕಾಣುತ್ತೇವೆ.

ಹಾರೂಗೇರಿ ವಗ್ಗರ ಮಠದ ಸಹವಾಸ :

ಕರ್ನಾಟಕದಲ್ಲಿಯೇ ಅತಿ ಹೆಚ್ಚು ಗ್ರಾಮ ಪಂಚಾಯತ ಸದಸ್ಯರನ್ನು ಒಳಗೊಂಡ ಏಕೈಕ ಹಳ್ಳಿ ಎಂದು ಹೆಸರು ಪಡೆದ ಹಾರೂಗೇರಿ ಅಂದು ಒಂದು ಸಣ್ಣ ಹಳ್ಳಿ. ಊರಲ್ಲಿ ಹಾಳುಬಿದ್ದ ಗೋಡೆಗಳು ಪಿರಂಗಿ ಗಿಡಗಳು ಎದ್ದು ಕಾಣುತ್ತಿದ್ದವು. ಜನ ವಸತಿಯೂ ಕಡಿಮೆ. ಇಲ್ಲಿ ವಗ್ಗರ ಮಠವೊಂದಿತ್ತು. ಈ ಮಠದಲ್ಲಿ ಒಬ್ಬ ಸಾಧು ವಾಸವಾಗಿದ್ದನು. ಆತನ ಹೆಸರು ಗುಲಾಬದಾಸ. ಆತ ಗುಜರಾತ ರಾಜ್ಯದವ. ಅಧ್ಯಾತ್ಮ ವ್ಯಸನದಿಂದ ಎಲ್ಲಾ ವ್ಯಸನಿಕರು ಈ ಮಠದಲ್ಲಿ ಸೇರುತ್ತಿದ್ದರು. ಆ ಮಠಕ್ಕೆ ಹೋಗಿ ಬರುವ ಭಕ್ತರಲ್ಲಿ ಅಲ್ಲಪ್ಪನು ಒಬ್ಬ. ಗುಲಾಬದಾಸ ದಿನಂಪ್ರತಿ ಬೇವಿನ ರಸವನ್ನೆ ಆಹಾರವನ್ನಾಗಿ ಸ್ವೀಕರಿಸುತ್ತಿದ್ದನು. ಎಂದಾದರೊಮ್ಮೆ ಹಾಲು ತೆಗೆದುಕೊಳ್ಳುತ್ತಿದ್ದನು.

ಒಮ್ಮೆ ಜನ ಸಾಧುಗಳಿಗೆ ಅನ್ನ ಸ್ವೀಕರಿಸಲು ಕೇಳಿಕೊಳ್ಳುತ್ತಾರೆ. ಆಗ ಗುಲಾಬದಾಸನು ಹಾರೂಗೇರಿಯಲ್ಲಿ ದೊಡ್ಡ ಪ್ರಮಾಣದ ಅನ್ನ ಸಂತರ್ಪಣೆ ಮಾಡಿದರೆ ಮಾತ್ರ ಅನ್ನ ಸ್ವೀಕರಿಸುವುದಾಗಿ ಹೇಳುತ್ತಾನೆ. ಅದೇ ಪ್ರಕಾರವಾಗಿ ಹಾರೂಗೇರಿಯಲ್ಲಿ ದೊಡ್ಡ ಪ್ರಮಾಣದ ಅನ್ನ ಸಂತರ್ಪಣೆ ಮಾಡಿದರಂತೆ. ಈ ಸಪ್ತಾಹಕ್ಕೆ ಶ್ರೀ ಸ್ವಾಮಿ ಶಂಕರಾನಂದ ಪರಮಹಂಸರು ಆಗಮಿಸಿದರೆಂದು ಹಾರೂಗೇರಿಯ ಹಿರಿಯರು ಈಗಲೂ ಹೇಳುತ್ತಾರೆ. ಅಲ್ಲಪ್ಪ ವಗ್ಗರ ಮಠದ ಶಿಷ್ಯ. ಗುಲಾಬದಾಸನು ಯಾರೊಬ್ಬರನ್ನು ಶಿಷ್ಯನೆಂದು ಸ್ವೀಕರಿಸಿರಲಿಲ್ಲ. ಗುಲಾಬದಾಸನು ಅಲ್ಲಪ್ಪನಿಗೆ ದೀಕ್ಷೆಯನ್ನು ಕೊಡದಿದ್ದರೂ ಸಹ ಅಲ್ಲಪ್ಪ ಅವನನ್ನೇ ತನ್ನ ಅಧ್ಯಾತ್ಮದ ಗುರುವೆಂದು ತಿಳಿದಿದ್ದನು. ಅಲ್ಲಪ್ಪ ತನ್ನ ಕೆಲಪದ್ಯಗಳಲ್ಲಿ ಗುಲಾಬದಾಸನನ್ನು ಸ್ಮರಿಸಿರುವುದನ್ನು ಕಾಣುತ್ತೇವೆ.

ಚನ್ನವೃಷಭೇಂದ್ರ ಮಹಾಸ್ವಾಮಿಗಳು ಮತ್ತು ಅಲಭೈರಿ :

ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಚಿಕ್ಕಹಳ್ಳಿ ದ್ಯಾವನಕೊಂಡ ಅಥವಾ ದೇವರಕೊಂಡ. "ಪಟೇಲಸಾಹೇಬ ಮತ್ತು ಗುರವ್ವ ದಂಪತಿಗಳ ಮಗನೇ ಚನ್ನವೃಷಭೇಂದ್ರ"[೪] ದೇವರಕೊಂಡದಿಂದ ವೃಷಭೇಂದ್ರ ಹಾರೂಗೇರಿಗೆ ಬಂದು ಪತ್ತಾರ ಪವಾಡೆಪ್ಪನವರ ಮನೆಯಲ್ಲಿ ಆಶ್ರಯ ಪಡೆದರು. ಅಂದು ಪತ್ತಾರ ಪವಾಡೆಪ್ಪನವರ ಮನೆ ಅಧ್ಯಾತ್ಮ ಚರ್ಚೆಯ ಸ್ಥಳವಾಗಿತ್ತು. ಪ್ರತಿನಿತ್ಯ ಅಲ್ಲಿ ಅಧ್ಯಾತ್ಮ ಚರ್ಚೆ ನಡೆಯುತ್ತಿತ್ತು. ವಗ್ಗರ ಮಠದಿಂದ ಜನ ಆಗಲೇ ಬೇಸತ್ತಿತ್ತು. ವಗ್ಗರ ಮಠದ ಕೆಲ ವ್ಯಸನಿಕ ಭಕ್ತರು ವೃಷಭೇಂದ್ರರರ ಮೇಲೆ ಸುಳ್ಳು ಆರೋಪಗಳನ್ನು ಹೇರತೊಡಗಿದರು. ಇವರೆಲ್ಲ ಅಲ್ಲಪ್ಪನಿಗೆ ಗಂಟುಬಿದ್ದು ವೃಷಭೇಂದ್ರರ ಮೇಲೆ ಒಂದು ವಿಡಂಬನಾತ್ಮಕ ಪದ್ಯ ರಚಿಸಲು ಪ್ರೇರೇಪಿಸಿದರು. ಅಲ್ಲಪ್ಪನು ತಾನು ರಚಿಸಿದ ವಿಡಂಬನಾತ್ಮಕ ಪದ್ಯವನ್ನು ತನ್ನ ಸಹಚರರೊಂದಿಗೆ ಊರ ತುಂಬ ಹಾಡುತ್ತ ತಿರುಗತೊಡಗಿದನು.

ಒಮ್ಮೆ ಅಲ್ಲಪ್ಪ ಹಾಗೂ ಅವನ ಸಹಚರರು ವೃಷಭೆಂದ್ರ ಮಹಾಸ್ವಾಮಿಗಳಿಗೆ ಸಿಕ್ಕಿ ಬೀಳುತ್ತಾರೆ. ಅಲ್ಲಪ್ಪನು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಪ್ಪನಿಗೆ ಸವಾರಿ ಹಾಕಿ "ಡುರ್ ರ್ ರ್ ರ್ ಅಲಕ್ ನಿರಂಜನ್" ಎಂಬ ಡುರಿಕೆ ಹಾಕಿದರು. ಇದನ್ನು ದೂರದಿಂದ ನೋಡುತ್ತಿದ್ದ ಧರ್ಮಟ್ಟಿ ಲಚ್ಚಪ್ಪ "ಅಜ್ಜ, ಪಾಪ ಅವನನ್ನು ಬಿಟ್ಟ ಬಿಡ್ರಿ" ಎಂದನು. ಆತನ ತಂದೆಗೆ ಅವನೊಬ್ಬನೆ ಗಂಡು ಮಗ. ಮೇಲಾಗಿ ತಾಯಿಯನ್ನು ಕಳೆದುಕೊಂಡಿದ್ದಾನೆ. ಅದಕ್ಕೆ ಪ್ರತಿಯಾಗಿ ಸ್ವಾಮಿಗಳು "ನಾನು ಅವನಿಗೆ ಏನೂ ಮಾಡುವುದಿಲ್ಲ. ಅವನಲ್ಲಿದ್ದ ಹೊಲಸು ಮಾತ್ರ ತೆಗೆಯುವುದಾಗಿ"[೫] ಹೇಳುತ್ತ ಹೀಗೆ ನಾಲ್ಕೈದು ಸಲ ಡುರಕಿ ಹೊಡೆದು ಸ್ವಾಮಿಗಳು ಮುಂದೆ ಸಾಗುತ್ತಾರೆ. ಕೆಳಗೆ ಬಿದ್ದ ಅಲ್ಲಪ್ಪ ಅವರನ್ನೇ ಹಿಂಬಾಲಿಸುತ್ತಾನೆ. ಅಂದಿನಿಂದ ವಗ್ಗರಮಠ ಬಿಟ್ಟು ಗುರುವೃಷಭೇಂದ್ರರ ಸಂಗಕ್ಕೆ ಬಂದನೆಂದು ಹಿರಿಯರು ಕಥಿಸುತ್ತಾರೆ.

೩.೫ ಅಧ್ಯಾತ್ಮಿಕತೆ :

ಅಲ್ಲಪ್ಪ ಜನ್ಮತಃ ಜೈನ. ಆದರೆ ಅದ್ವೈತದ ಕಡೆಗೆ ಒಲಿದದ್ದು ಶ್ರೀ ಚನ್ನವೃಷಭೇಂದ್ರರ ಅನುಗ್ರಹದಿಂದ. ಅಲ್ಲಪ್ಪನ ಮನೆಯ ಪರಿಸರ, ನಂತರ ಗುಲಾಬದಾಸನ ಪ್ರೇರಣೆ, ತದ ನಂತರದಲ್ಲಿ ಶ್ರೀ ಚನ್ನವೃಷಭೇಂದ್ರರ ಆರ್ಶೀವಾದದಿಂದ ಅಲ್ಲಪ್ಪ ಅಧ್ಯಾತ್ಮದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ನಂತರ ಅಧ್ಯಾತ್ಮ ಚಿಂತನೆಯೇ ಅವನ ಉಸಿರಾಯಿತು.

ಅಲ್ಲಪ್ಪ ಮಹಾತ್ಮರ ಸಮ್ಮುಖದಲ್ಲಿ ಅನುಭಾವ ಪದಗಳನ್ನು ರಚಿಸಲು ತೊಡಗಿದ. ವೃಷಭೇಂದ್ರರು ಎಲ್ಲಿ ಇರುತ್ತಾರೆಯೊ ಅಲ್ಲಿ ಅಲ್ಲಪ್ಪ ಸೇರತೊಡಗಿದನು. ಪತ್ತಾರ ಮನೆಯಲ್ಲಿ ದಿನಂಪ್ರತಿ ಅನುಭಾವ ಚಿಂತನೆ ನಡೆಸುತ್ತಿದ್ದರು. ಬರಬರುತ್ತ ಅಲ್ಲಪ್ಪ ವಗ್ಗರ

ಮಠದ ಸಂಪರ್ಕ ಕಳಚುತ್ತ ಶ್ರೀಗಳ ಜೊತೆಗೆ ಇರತೊಡಗಿದನು. ಶಾಸ್ತ್ರ ಮುಗಿದ ಬಳಿಕ ಸ್ವಾಮಿಗಳ ಜೊತೆಗೆ ಚರ್ಚೆಗೆ ತೊಡಗುತ್ತಿದ್ದನು. ಹಾಡುಗಳಲ್ಲಿಯೇ ಪ್ರಶ್ನೆಗಳನ್ನು ಕೇಳುತ್ತಿದ್ದನು. ಅಲ್ಲಪ್ಪನ ಜೊತೆಗೆ ಯಾವಾಗಲೂ ಜನರ ದೊಡ್ಡದೊಂದು ಗುಂಪೇ ಇರುತ್ತಿತ್ತು. ಸುತ್ತ ಮುತ್ತಲಿನ ಜನರು ಇವನನ್ನೇ ಶಾಸ್ತ್ರ ಹೇಳಲಿಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಕೆಲವರು ಇವನನ್ನೆ (ಅಲ್ಲಪ್ಪನನ್ನೇ) ಗುರುವೆಂದು ಸ್ವೀಕರಿಸಿಕೊಂಡರು. ಅಲ್ಲಪ್ಪ ಒಮ್ಮೊಮ್ಮೆ ಇಡೀ ದಿನ ಚರ್ಚೆಯಲ್ಲಿ ತೊಡಗುತ್ತಿದ್ದ.

ಈ ರೀತಿಯಾಗಿ ಅಲ್ಲಪ್ಪ ಮಹಾಜ್ಞಾನಿಯಾಗಿ ಅಸಾಧಾರಣ ಪ್ರೌಢಿಮೆ ಬೀರತೊಡಗಿದನು. ಕುಂತ ಕುಂತಲ್ಲಿಯೆ ಹತ್ತಾರು ಪದಗಳನ್ನು ರಚಿಸುವ ಸಾಮರ್ಥ್ಯ ಗಳಿಸಿಕೊಂಡನು. ಅಲ್ಲಪ್ಪ ರಚಿಸಿದ ಒಟ್ಟು ಅಧ್ಯಾತ್ಮ ಸಾಹಿತ್ಯ ರಾಶಿಯನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಹೀಗೆ ಭೋಗದಿಂದ ತ್ಯಾಗದ ದಾರಿ ಹಿಡಿದು ಸಮರ್ಥ ಗುರುವಿನ ಮಾರ್ಗದರ್ಶನದಲ್ಲಿ ಅಧ್ಯಾತ್ಮದ ಉನ್ನತ ಶಿಖರ ಮುಟ್ಟಿ ಅಧ್ಯಾತ್ಮ ಕವಿ ಎಂದು ಗುರುತಿಸಿಕೊಂಡನು. 'ಚನ್ನವೃಷಭೇಂದ್ರರ ಕೃಪಾಶೀರ್ವಾದದಿಂದ ಅಲ್ಲಪ್ಪ ಇಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತೆ'ಂದು ಇಲ್ಲಿಯ ಹಿರಿಯರು ಹೇಳುತ್ತಾರೆ.'

ಅಲ್ಲಪ್ಪ : ಅಲಭೈರವ (ಅಲಭೈರಿ) ಯಾಗಿ :

ಅಲ್ಲಪ್ಪ ತನ್ನ ಹೆಚ್ಚಿನ ವೇಳೆಯನ್ನು ಅಧ್ಯಾತ್ಮ ಚಿಂತನೆಯಲ್ಲಿ ಕಳೆಯತೊಡಗಿದಾಗ ಶ್ರೀಗಳು ಪ್ರೀತಿಯಿಂದ ಅಲ್ಲಪ್ಪನನ್ನು ವೈರಾಗಿ ತೆರನಾಗಿರುವುದರಿಂದ "ಅಲಭೈರಿ" ಎಂದು ಕರೆದರೆಂದು ಕೆಲವರು ಹೇಳುವರು. ಹಾರೂಗೇರಿ ಹಾಗೂ ಸುತ್ತ ಮುತ್ತಲಿನ ಸ್ಥಳಕ್ಕೆ ಅಲಭೈರಿ ಆಶುಕವಿಯಾಗಿ, ವರಕವಿಯಾಗಿ, ತತ್ವಪದಕಾರನಾಗಿ ಪ್ರಸಿದ್ಧಿ ಪಡೆದನು. ಮುಂದೆ ತಾನು ರಚಿಸಿದ ಎಲ್ಲ ಪದಗಳಿಗೆ "ಅಲಭೈರಿ" ಎಂಬ ಅಂಕಿತವನ್ನು ಹಾಕಿ ಕಾವ್ಯ ರಚಿಸತೊಡಗಿದನು. ಮತ್ತೆ ಕೆಲಪದ್ಯಗಳಿಗೆ ತನ್ನ ಗುರು ಗುಲಾಬದಾಸನ ಹೆಸರನ್ನು ಮತ್ತು ಆರಾಧ್ಯ ದೈವ ಚನ್ನವೃಷಭೇಂದ್ರರರ ಹೆಸರನ್ನು ಹಾಗೂ ಕೆಲ ಪದಗಳಿಗೆ ಹರಗಿರಿ ಮಾರಸಿಯ ಮುದ್ರಿಕೆ ಹಾಕಿದ್ದಾನೆ.

ಅಲಭೈರಿ ರಚಿಸಿದ ಸಾಹಿತ್ಯ ಇಂತಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಆತನ ಸಾಹಿತ್ಯ ಸಂಪತ್ತು ಅಪಾರ. ಸತ್ಯಪ್ಪ ಶಿವಪ್ಪ ಸರಿಕರ ಎಂಬುವನು ಕವಿ ಅಲಭೈರಿಯ ಶಿಷ್ಯರಲ್ಲಿ ಒಬ್ಬನು. ಸ್ವತಃ ಕವಿಯನ್ನು ಕಂಡನು. ಈತನು ಅಲಭೈರಿ 'ವ್ಯಕ್ತಿ ಹಾದು ಹೋದರೆ ಹಾಡು ಕಟ್ಟುವ ಸಾಮರ್ಥ್ಯವನ್ನು ಹೊಂದಿದ್ದನೆ'ಂದು ಸತ್ಯಪ್ಪಾ ಈಗಲೂ ಹೇಳುತ್ತಾನೆ. ಸತ್ಯಪ್ಪಾ ಒಬ್ಬ ಅನಕ್ಷರಸ್ಥ. ಆದರೆ ಅವನ ಸ್ಮರಣ ಶಕ್ತಿ ಶ್ರೀಮಂತ. ಅವನು ಅಲಭೈರಿ ರಚಿಸಿದ ಸುಮಾರು ೬೦-೭೦ ತತ್ವಪದಗಳನ್ನು ಈಗಲೂ ಹಾಡುತ್ತಾನೆ.

ಅಲಭೈರಿಯ ಮನೆಯಲ್ಲಿ ಪ್ರತಿದಿನ ಸುಮಾರು ೧೫ – ೨೦ ಜನ ಹಾಡುಗಳನ್ನು ಬರೆದುಕೊಂಡು ಹೋಗಲು ಸೇರುತ್ತಿದ್ದರಂತೆ. ಕವಿ ಅಲಭೈರಿ ಯಾವಾಗಲೂ ಚನ್ನವೃಷಭೇಂದ್ರರ ಹತ್ತಿರವೇ ಇರುತ್ತಿದ್ದನು. ಸ್ವಾಮಿಗಳು ಒಮ್ಮೊಮ್ಮೆ ಹಾಡುಗಳನ್ನು ಕೇಳಬೇಕೆನಿಸಿದಾಗ ಅಲಭೈರಿಯನ್ನು ಕರೆಯಿಸಿ ಹಾಡು ಹೇಳಿಸುತ್ತಿದ್ದರೆಂದು ಇಲ್ಲಿ ಹಿರಿಯರು ಹೇಳುತ್ತಾರೆ. ಒಮ್ಮೆ ಅಲಭೈರಿಯ ಹಾಡನ್ನು ಕೇಳಿ ಸಂತೋಷಗೊಂಡ ಸ್ವಾಮಿಗಳು ತಮ್ಮ ಹೆಗಲ ಮೇಲೆ ಅಲಭೈರಿಯನ್ನು ಕೂಡ್ರಿಸಿಕೊಂಡು ಕುಣಿದಾಡಿದರಂತೆ.

ಅಲಭೈರಿ ಸಮೀಪದ ಹಿಡಕಲ್ ಗ್ರಾಮದ ಪತ್ರೇಶ್ವರ ಮಠದಲ್ಲಿ ಕೆಲ ವರ್ಷಗಳ ಕಾಲ ಕಳೆದಿದ್ದಾನೆ. ಈ ಅವಧಿಯಲ್ಲಿ ಇವನು ಸಾಕಷ್ಟು ಚೌಡಕಿ ಪದಗಳನ್ನು ರಚಿಸಿದ್ದಾನೆಂದು ಹಿಡಕಲ್ ಗ್ರಾಮದ ಚೌಡಕಿ ಮೇಳದವರು ಹೇಳುತ್ತಾರೆ. ಆದರೆ ಅಲಭೈರಿ ಚೌಡಕಿ ಪದಗಳು ಕೇವಲ ಬೆರಳೆಣಿಕೆಯ ಸಂಖ್ಯೆಯಲ್ಲಿ ಸಿಕ್ಕುತ್ತವೆ. ಅಥಣಿ ತಾಲೂಕಿನ ಸಂಕೋನಹಟ್ಟಿ ಗ್ರಾಮಕ್ಕೆ ಕವಿ ಆಗಾಗ ಹೋಗುತ್ತಿದ್ದನೆಂದು ಬಸಲಿಂಗಪ್ಪ ಕರಬಸಪ್ಪಗೋಳ (ವಯಸ್ಸು ೯೬) ಹೇಳುತ್ತಾರೆ. ಈತ "ಸುಕಮುನಿಯಾಟ"ವನ್ನು ರಚಿಸಿರುವುದಾಗಿ ಬಸಲಿಂಗಪ್ಪ ಹೇಳುತ್ತಾರೆ. ಇದಕ್ಕೆ "ವೈರಾಗ್ಯ ವಿಜಯ"ವೆಂಬ ಹೆಸರು ಉಂಟು. ಮತ್ತೆ ಅಲಭೈರಿ ಅಲಖನೂರು ಗ್ರಾಮದಲ್ಲಿಯೂ ಕೆಲದಿನ ಕಾಲ ಕಳೆದಿದ್ದಾನೆ. ಅಲ್ಲಿ ಸಾಕಷ್ಟು ಡೊಳ್ಳಿನ ಹಾಡುಗಳನ್ನು ರಚಿಸಿದ್ದಾಗಿ ಬಾಸ್ಕರ ಪತ್ತಾರ (ಸರ್) ಹೇಳುತ್ತಾರೆ. ಅಲಭೈರಿ ಸಮೀಪದ ತೇರದಾಳ ಗ್ರಾಮಕ್ಕೆ ಮೇಲಿಂದ ಮೇಲೆ ಹೋಗುತ್ತಿದ್ದನೆಂದು ಅಳಗವಾಡಿಯ ಮಹಾದೇವ ಪಡಚಿ ಹೇಳುತ್ತಾರೆ. ತೇರದಾಳ ಅಂದು ಲಾವಣಿಗೆ ಪ್ರಸಿದ್ಧವಾದ ಸ್ಥಳವಾಗಿತ್ತು. ಅಲಭೈರಿಯೂ ಸಾಕಷ್ಟು ಲಾವಣಿ ಪದಗಳನ್ನು ರಚಿಸಿರುವನು

ದಾಂಪತ್ಯ ಬದುಕು :

ಹಾರೂಗೇರಿಯ ನಾಗನೂರ ಮನೆತನದ ಸಂಕವ್ವ ಅಲ್ಲಪ್ಪನ ಹೆಂಡತಿ. ಬಡತನವಿದ್ದರೂ ಸಹ ಅವರದು ಅನ್ಯೋನ್ಯ ಬದುಕು. ೬ ಮಕ್ಕಳ ತುಂಬು ಸಂಸಾರ. "ಅಲ್ಲಿದೆ ನಮ್ಮ ಮನೆ ಇಲ್ಲಿ ನಾ ಸುಮ್ಮನೆ" ಎನ್ನುವಂತೆ ಅಲ್ಲಪ್ಪ ಇಹದಲ್ಲಿದ್ದು ಪಾರಮಾರ್ಥ ಕುರಿತು ಸದಾ ಆಲೋಚಿಸುತ್ತಿದ್ದನು. ಅಲ್ಲಪ್ಪನದು ಆಡಂಬರವಿಲ್ಲದ ಸರಳ ಜೀವನ. ಸರಳ ವೇಷಭೂಷಣ. ಎತ್ತರವೂ ಅಲ್ಲದ ಗಿಡ್ಡವೂ ಅಲ್ಲದ ಮಧ್ಯಮ ಗಾತ್ರದ ಶರೀರ. ಉದ್ದನೆಯ ಮೂಗು, ಮುಖದ ಮೇಲೆ ಗಡ್ಡ, ಬಡಕಲು ಶರೀರ, ಕೈಯಲ್ಲಿ ಯಾವಾಗಲೂ ಒಂದು ಚಿಲುಮೆ, ತಂಬಾಕದ ಚೀಲು ಇರುತ್ತಿತ್ತು. ಒಂಟಿ ಎತ್ತಿನ ಗಾಡಿಯಿಂದ ಕವಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ್ತಿದ್ದನು. ದೂರದ ಊರುಗಳಿಗೂ ಕವಿ ಗಾಡಿಯ ಸಹಾಯದಿಂದಲೇ ಹೋಗುತ್ತಿದ್ದನು. ಮನೆಯಿಂದ ಒಮ್ಮೊಮ್ಮೆ ಬೇರೊಂದು ಊರಿಗೆ ಹೋದರೆ ತಿಂಗಳ ಪರ್ಯಂತ ಅಲ್ಲಿಯೇ ಇರುತ್ತಿದ್ದನು. ಹಲವಾರು ಕಡೆ ಅಲಭೈರಿ ಅಧ್ಯಾತ್ಮದ ಕಾರ್ಯಕ್ರಮವನ್ನು ಕೊಟ್ಟಿದ್ದಾನೆ.

ಪಾಂಡುರಂಗ ಕಟ್ಟಿಯವರ ಸಹಕಾರ :

ಈ ವೇಳೆಯಲ್ಲಿ ಪಾಂಡುರಂಗ ಕಟ್ಟಿಯವರನ್ನು ನೆನೆಯದಿದ್ದರೆ ಈ ಪ್ರಬಂಧ ಅಪೂರ್ಣ. ಇವರು ಬಡಬ್ಯಾಕೂಡ ಗ್ರಾಮದವರು. ಆಗರ್ಭ ಶ್ರೀಮಂತರು. ಅಲಭ್ಯೆರಿಯ ಪ್ರತಿಭೆಯನ್ನು ಮೊದಲು ಗುರುತಿಸಿದ ವ್ಯಕ್ತಿ ಪಾಂಡುರಂಗ ಕಟ್ಟಿಯವರೇ. ಪಾಂಡುರಂಗ ಕಟ್ಟಿ ಗಣಿತ ತಜ್ಞ ಅಂದಿನ ಬ್ರಿಟಿಷ್ ಸರಕಾರದ ಉನ್ನತ ಗೌರವವೆನಿಸಿದ "ರ್‍ಯಾಂಗ್ಲರ್ ಪದವಿ" ಪಡೆದುಕೊಂಡಿದ್ದರು. ಇಂಗ್ಲೆಂಡಿನಲ್ಲಿ ಮೂರು ವರ್ಷಗಳ ಕಾಲ ನೌಕರಿಯಲ್ಲಿದ್ದರು. ಮುಂದೆ ಕಲ್ಕತ್ತಾ, ಮುಂಬಯಿಯಲ್ಲಿಯೂ ಉನ್ನತ ನೌಕರಿಯಲ್ಲಿದ್ದರು. ಕೊನೆಗೆ ಬೆಳಗಾವಿಯಲ್ಲಿ ಕೊನೆಯ ದಿನಗಳನ್ನು ಕಳೆಯುವರು.

ಪಾಂಡುರಂಗ ಕಟ್ಟಿಯವರು ಯಾವ ಮಟ್ಟಕ್ಕೇರಿದರೂ ಸಹ ಅಲಭ್ಯೆರಿ ಹಾಗೂ ಆತನ ಪ್ರತಿಭೆಯನ್ನು ಮರೆಯಲಿಲ್ಲ. ಅಲಭ್ಯೆರಿಯದು ಬಡತನ ಜೀವನ ಆಗಿರುವುದರಿಂದ ಕಟ್ಟಿ ಅಲಭ್ಯೆರಿಯ ಮನೆತನಕ್ಕೆ ಅಗತ್ಯ ವಸ್ತುಗಳನ್ನು ಪೂರೈಸುತ್ತಿದ್ದರು. ಅಲಭ್ಯೆರಿ ಶಾರೀರಿಕ ತೊಂದರೆಯನ್ನು ಅನುಭವಿಸುವಾಗ ಪಾಂಡುರಂಗ ಕಟ್ಟಿಯವರು ಸಾಕಷ್ಟು ಸಹಾಯ ಮಾಡಿದ್ದಾರೆ. ಅಲಭ್ಯೆರಿ ಕುಷ್ಠರೋಗ ಪೀಡಿತನಾದಾಗ ಕಟ್ಟಿಯವರೇ ಅವರನ್ನು ದೂರದ ಮುಂಬೈ ಆಸ್ಪತ್ರೆಗೆ ಕರೆದೊಯ್ದರು. ಈಗಿನ ಹಾಗೆ ಆಸ್ಪತ್ರೆಯ ಅನುಕೂಲತೆಯಿರಲಿಲ್ಲ. ೨-೩ ತಿಂಗಳು ಮುಂಬೈಯಲ್ಲಿಯೇ ಚಿಕಿತ್ಸೆಗೆ ಉಳಿದರು. ಕಟ್ಟಿಯವರು ಅವರಿಗೆ ಎಲ್ಲ ರೀತಿಯ ಸಹಾಯ ಮಾಡಿದರು. ಮುಂಬೈಯಲ್ಲಿದ್ದಾಗಲೆ ಅಲಭ್ಯೆರಿ ಅಲ್ಪಸ್ವಲ್ಪ ಇಂಗ್ಲೀಷ್ ಭಾಷೆಯ ಜ್ಞಾನವನ್ನು ಪಡೆದುಕೊಂಡನು. ಅಷ್ಟು ಅಲಭ್ಯೆರಿಯ ಬುದ್ಧಿ ಚುರುಕಾಗಿತ್ತು ಎಂದು ಪಾಂಡುರಂಗ ಕಟ್ಟಿ ಹೇಳಿದ್ದಾರೆ.

೩.೬ ಕೊನೆಯ ದಿನಗಳು :

ಅಲಭ್ಯೆರಿ ಲೌಕಿಕ ಜೀವನಕ್ಕೆ ಹೆಚ್ಚು ಒತ್ತು ಕೊಡದೆ ಬಾಳಿದವನು. ಅಧ್ಯಾತ್ಮ ಚಿಂತನೆಯೇ ಅವನ ಪರಮ ಧ್ಯೇಯವಾಗಿತ್ತು. ಬದುಕಿನ ಕೊನೆಯ ದಿನಗಳವರೆಗೂ ಪದ ಕಟ್ಟುತ್ತಲೆ ಇದ್ದನು. ಕವಿಯ ಕೊನೆಯ ದಿನಗಳು ಅಷ್ಟು ಸುಖಕರವಾಗಿರಲಿಲ್ಲ. ದೈಹಿಕ ತೊಂದರೆ ಸುರುವಾಗಿತ್ತು. ಕೈ ಕಾಲಿಗೆ ಭಯಂಕರವಾದ ಬೇನೆ ಅಂಟಿಕೊಂಡಿತ್ತು. ಬರೆಯಲು ಹಾಗೂ ನಡೆಯಲು ಆಗುತ್ತಿರಲಿಲ್ಲ. ಆದರೂ ಸಹ ಅವನ ಬಾಯಿಂದ ಪದಗಳ ಸುರಿಮಳೆ ಸುರಿಯುತ್ತಿತ್ತು. ಜನರೇ ಈತನನ್ನು ಗಾಡಿಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಮುಂದೆ ಈತನ ಕಾಯಿಲೆ ಹೆಚ್ಚಾಯಿತು. ಪಾಂಡುರಂಗ ಕಟ್ಟಿಯವರು ಅಲಭ್ಯೆರಿಯನ್ನು ಮುಂಬಯಿ ಆಸ್ಪತ್ರೆಗೆ ಒಯ್ದರು. ಆಸ್ಪತ್ರೆಯಲ್ಲಿ ೨-೩ ತಿಂಗಳ ಕಾಲ ಕಳೆದರೂ ಚಿಕಿತ್ಸೆ ಫಲಕಾರಿಯಾಗಲಿಲ್ಲ.

ದಿನೇ ದಿನೇ ಕಾಯಿಲೆ ಉಲ್ಬಣಗೊಂಡಿತು. ವೈದ್ಯರ ಅನುಮತಿಯ ಮೇರೆಗೆ ಅಲಭೈರಿಯನ್ನು ಹಾರೂಗೇರಿಗೆ ಕರೆ ತರುತ್ತಾರೆ. ಮುಂದೆ ಮುಂಬೈ ಆಸ್ಪತ್ರೆಯಿಂದ ಹಾರೂಗೇರಿಗೆ ಬಂದ ಕೆಲ ದಿನಗಳಲ್ಲಿ ಅಂದರೆ 'ಕ್ರಿ.ಶ. ೧೯೪೨ ರಲ್ಲಿ ಅಂದರೆ ೫೭ ನೆಯ ವಯಸ್ಸಿನಲ್ಲಿ ಕೊನೆಯುಸಿರಳೆದ'ನೆಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಆದರೆ ಮರಣ ದಾಖಲೆ ಲಭ್ಯವಿಲ್ಲ.

ಟಿಪ್ಪಣಿಗಳು :

೧. ಹೆಚ್. ತಿಪ್ಪೇರುದ್ರಸ್ವಾಮಿ; ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ಪುಟ-೧

೨. ಜಿ.ಟಿ.ಸ್ವಾಮಿಯವರ ಅಪ್ರಕಟಿತ ಮೌಖಿಕ ಸಂದರ್ಶನ ಲೇಖನದಿಂದ ಪಡೆದದ್ದು.

೩. ಅದೇ,

೪. ಜಿ.ಟಿ.ಸ್ವಾಮಿಯವರ ಪ್ರಕಟಿತ ಗ್ರಂಥ. 'ಪರಿಪೂರ್ಣ' ಪುಟ-೩೯

೫. ಎಂ.ಬಿ.ನೇಗಿನಹಾಳರ; ನೇಗಿನಹಾಳ ಪ್ರಬಂಧಗಳು
(ಸಂಶೋಧನಾತ್ಮಕ ಲೇಖನಗಳ ಸಂಗ್ರಹ) ಪುಟ-೭೭

೬. ರಾಮು ಅಲ್ಲಪ್ಪ ಸುಬ್ಬಣ್ಣವರ (ಸಂಪಾದನೆ), ಶ್ರೀ ಜಿನಭಕ್ತಿ ಗೀತೆಗಳು, ಸಂಪಾದಕರ ಹೃದಯದಿಂದ.

ಅಧ್ಯಾಯ: ನಾಲ್ಕು
ಪ್ರಕಟಿತ ಸಾಹಿತ್ಯ

ಅಧ್ಯಾಯ: ನಾಲ್ಕು

ಪ್ರಕಟಿತ ಸಾಹಿತ್ಯ

ಅಲಭ್ಯೈರಿಯ ಬಿಡಿ ಬಿಡಿ ಸಾಹಿತ್ಯವನ್ನು ಕ್ರೋಢಿಕರಿಸುದಾಗಲಿ ಶೋಧಿಸುವುದಾಗಲಿ ಒಂದು ಸಾಹಸವೇ ಸರಿ. ಈತನ ಅಪ್ರಕಟಿತ ಸಾಹಿತ್ಯ ರಾಶಿಯೇ ಅಪಾರವಾಗಿದ್ದು, ಅದು ಕೂಡ ವಿನಾಶದ ಅಂಚಿನಲ್ಲಿದೆ. ದೊರೆತ ಈತನ ಬೆರಳೆಣಿಕೆಯ ಪ್ರಕಟಿತ ಸಾಹಿತ್ಯವನ್ನು ಕುರಿತು ಚರ್ಚಿಸಲು ಪ್ರಯತ್ನಿಸಲಾಗಿದೆ. ಒಬ್ಬ ವ್ಯಕ್ತಿಯ ಚರಿತ್ರೆಗಿಂತಲೂ ಚಾರಿತ್ರ್ಯ ಅದೆಷ್ಟು ಮುಖ್ಯವೋ ಹಾಗೆಯೇ ಆತನ ಸಾಧನೆಯೂ ಮುಖ್ಯವಾಗಿರುತ್ತದೆ. ಆತ ಸಾಧನಾ ಪಥದಿಂದ ಸಿದ್ಧಿಯ ಶಿಖರಕ್ಕೇರುವಾಗ ಅಡತಡೆಗಳುಂಟಾಗಬಹುದಾದರೂ, ಅವುಗಳನ್ನು ಎದುರಿಸಿ ಭೇದಿಸಿಕೊಂಡು ಮುಂದುವರೆಯಬೇಕಾಗುತ್ತದೆ. 'ಕೈಕೆಸರಾದರೆ ಬಾಯಿ ಮೊಸರು' ಎಂಬ ನಾಣ್ಣುಡಿಯಂತೆ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುವ ಪ್ರತಿಯೊಬ್ಬ ವ್ಯಕ್ತಿಗೂ ಪರಮ ಸಾಧನಾ ಪ್ರತಿಫಲ ಸಿಗುವುದು ಖಚಿತ. ಹಾಗೆಯೇ ಸಾಧಕನಾದವನೂ ತಾನು ಸಾಧಿಸುವ ಕಾಯಕದಲ್ಲಿ ನಿರಂತರ ತೊಡಗಿಸಿಕೊಂಡಿರಬೇಕು. ಅಂದಾಗ ಪ್ರತಿಫಲ ಸಿಗುತ್ತದೆ. ಅಲಭ್ಯೈರಿ ಕವಿಯ ಜೀವನ ಚರಿತ್ರೆಯನ್ನು ಹಿಂದಿನ ಅಧ್ಯಾಯದಲ್ಲಿ ಗಮನಿಸಲಾಗಿದೆ. ಆ ನಿಟ್ಟಿನಲ್ಲಿ ಅಲಭ್ಯೈರಿ ಸಾಹಿತ್ಯ ಸಾಧನೆಯ ನೋಟವನ್ನು ಪ್ರತಿಪಾದಿಸುವುದು ಈ ಅಧ್ಯಾಯದ ಉದ್ದೇಶ. ಈಗ ಅಲಭ್ಯೈರಿ ಕವಿಯ ಸಮಗ್ರ ಸಾಹಿತ್ಯವನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಈತನ ಪ್ರಕಟಿತ ಸಾಹಿತ್ಯ ಒಂದು ವಿಧವಾದರೆ: ಇನ್ನೊಂದು ಅಪ್ರಕಟಿತ ಸಾಹಿತ್ಯವಾಗಿದೆ. ಕವಿಯದು ಹಸ್ತಪ್ರತಿಯಲ್ಲಿ ಉಳಿದಿರುವ ಸಾಹಿತ್ಯ ಅಪಾರ. ಪ್ರಕಟಿತ ಸಾಹಿತ್ಯ ಮಾತ್ರ ಮಿತಿಯಲ್ಲಿದೆ. ಕೆಲವೇ ಕೆಲವು ಪುಸ್ತಕಗಳನ್ನು ಈತನ ನಂತರದ ಕೆಲವು ಮಹನೀಯರು ಪ್ರಕಟ ಮಾಡಿರುವುದನ್ನು ಕಾಣುತ್ತೇವೆ. ಅಲಭ್ಯೈರಿ ಕವಿ ಕೃತ ಮೂರೇ ಮೂರು ಕೃತಿಗಳು ಸಿಕ್ಕರೂ ಸಹ ಅವು ತುಂಬಾ ಗಮನಾರ್ಹವಾಗಿವೆ.

೧. ಶ್ರೀ. ಚನ್ನವೃಷಭೇಂದ್ರ ಸ್ತೋತ್ರ ಮಾಲಾ.

೨. ಶ್ರೀ. ಜಿನಭಕ್ತಿ ಗೀತೆಗಳು.

೩. ತತ್ತ್ವ ಪದಗಳ / ಭಜನೆಗಳ ಸಂಗ್ರಹ.

ಹಾರೂಗೇರಿ ಅಧ್ಯಾತ್ಮ ರಂಗದಲ್ಲಿ ಖ್ಯಾತಿ ಪಡೆದಿದೆ. ಅಲ್ಲಿರುವುದು ಭವ್ಯ ಮಠ; ಅದರ ಹೆಸರು ಚನ್ನವೃಷಭೇಂದ್ರ ಲೀಲಾಮಠ. ಲೀಲಾ ಮಠದ ರೂವಾರಿ ಮೂಲ ಮಹಾಪುರುಷ ಶ್ರೀ. ಚನ್ನವೃಷಭೇಂದ್ರ ಮಹಾಸ್ವಾಮಿಗಳು. ಇವರು ಮೂಲತಃ "ಕಲಘಟಗಿ ತಾಲೂಕಿನ (ಧಾರವಾಡ ಜಿಲ್ಲೆಯ) ದೇವರಕೊಂಡ ಗ್ರಾಮದವರು. ಈ ಊರಿನ ಪಟೇಲ ಸಾಹೇಬಗೌಡ ಮತ್ತು ಆತನ ಧರ್ಮಪತ್ನಿ ಗುರವ್ವ ಎಂಬ ಸಾತ್ವಿಕ ದಂಪತಿಗಳ ಮಗನೇ

ಚನ್ನವೃಷಭೇಂದ್ರರು. ಈತನು ಆಷಾಢ ಮಾಸ ಶುಕ್ಲಪಕ್ಷ ಸಪ್ತಮಿ ಗುರುವಾರ, ದಿನಾಂಕ: ೨೦.೮.೧೮೫೨ ರಲ್ಲಿ ಜನಿಸಿದನೆಂದು ಈತನ ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ[೧]. ಈತ ಬಾಲಕನಿದ್ದಾಗಲೆ ಶಾಲೆಗೆ ಕಳುಹಿಸಿದರೂ, ಕಲಿಯಲು ಮನಸ್ಸಿರಲಾರದೇ ಅಲ್ಲಿರುವ ಭೂತನಗುಡ್ಡದ ಬಸವಣ್ಣನ ದೇವಾಲಯಕ್ಕೆ ಹೋಗಿ ಧ್ಯಾನಾಸಕ್ತನಾಗುತ್ತಿದ್ದ. ಅಂದಿನಿಂದಲೇ ಆತ ಯೋಗಿಯಾಬೇಕು. ಶಿವಯೋಗಿಯಾಗಬೇಕೆಂದು ಮನೆ–ಮಾರು, ಬಂಧು–ಬಳಗ ಎಲ್ಲವನ್ನು ತೊರೆದು ವಿರಾಗಿಯಾದವನು. ಮಹಾತ್ಮರು ಎಲ್ಲೋ ಹುಟ್ಟಿ ಎಲ್ಲೋ ಬೆಳೆದು, ಹೇಗೋ ಬೆಳಗುತ್ತಾರೆ ಎನ್ನುವುದಕ್ಕೆ ಈ ಚನ್ನವೃಷಭೇಂದ್ರ ಮಹಾಸ್ವಾಮಿಗಳೇ ನಿದರ್ಶನ. ದೇವರಕೊಂಡದಿಂದ ಅವರು ನೇರವಾಗಿ ಹಾರೂಗೇರಿಗೆ ಬಂದು ಈ ಊರನ್ನೇ ಪಾವನಗೊಳಿಸಿದ ಪುಣ್ಯ ಪುರುಷರು. ೧೯೦೫ ರಲ್ಲಿ ಹಾರೂಗೇರಿಗೆ ಆಗಮಿಸಿರುವರೆಂಬ ಹೇಳಿಕೆಯಿದೆ. ಇಲ್ಲಿಂದ ಅಲಭೈರಿಗೂ ಮಹಾಸ್ವಾಮೀಜಿಗೂ ಎಲ್ಲಿಲ್ಲದ ನಂಟು ಬೆಳೆಯಿತು. ಅದು ಗುರು–ಶಿಷ್ಯರ ಸಂಬಂಧವಾಗಿ ಬೆಸೆಯುತ್ತದೆ. ಮೊದಲೇ ಆಶುಕವಿ ಎಂದು ಖ್ಯಾತಿಯಾಗಿದ್ದ ಅಲಭೈರಿಯು ಶ್ರೀ ಗುರುವಿನ ಕುರಿತಾಗಿ ತತ್ತ್ವಪದಗಳನ್ನು ಮಂಗಳಾರತಿ ಪದ, ಸ್ತುತಿರೂಪದ ಗೀತೆಗಳನ್ನು ರಚಿಸಿದ್ದನು. ಇಲ್ಲಿಯ ಪರಿಸರದ ಜನತೆ ಈ ಕವಿಯ ಹಾಡುಗಳನ್ನು ಈಗಲೂ ಮೆಲುಕು ಹಾಕುತ್ತಾರೆ.

೪.೧ ಶ್ರೀ ಚನ್ನವೃಷಭೇಂದ್ರ ಸ್ತೋತ್ರ ಮಾಲಾ:

ಚನ್ನವೃಷಭೇಂದ್ರ ಮಹಾಸ್ವಾಮಿಯ ಸ್ತುತಿರೂಪದ ಹಾಡುಗಳು ಲೆಕ್ಕಕ್ಕೆ ಸಿಗುವುದು ಕಷ್ಟ ಸಾಧ್ಯ. ಕ್ಷೇತ್ರಕಾರ್ಯದಲ್ಲಿ ನನಗೆ ಅಲಭೈರಿಯ ಚನ್ನವೃಷಭೇಂದ್ರ ಸ್ತೋತ್ರ ಮಾಲಾ ದೊರಕಿದ್ದು, ಇದರಲ್ಲಿ ಮಂಗಳಾರತಿ ಪದ ಹಾಗೂ ಸ್ತೋತ್ರ ಪದಗಳೆಂದು ಎರಡು ಭಾಗಗಳಾಗಿ ವಿಭಾಗಿಸಿದ್ದಾರೆ. ಒಟ್ಟು ೨೨ ಪದಗಳಿವೆ. ಇದು ೧೯೮೧ ರಲ್ಲಿ ಶ್ರೀ ಚನ್ನವೃಷಭೇಂದ್ರ ದೇವರಕೊಂಡ ಸ್ವಾಮೀಜಿ ಶರಣ ಸದ್ಭಕ್ತ ಮಂಡಳಿಯಿಂದ ಪ್ರಥಮ ಮುದ್ರಣ ಪಡೆದುಕೊಂಡಿದೆ. ಪ್ರಕಾಶಕರು ಶ್ರೀ. ಶಿವಾನಂದ ಭಾರತಿ ಸ್ವಾಮಿಜಿ. ಶ್ರೀ ಚನ್ನವೃಷಭೇಂದ್ರ ಶಿವಯೋಗಿಗಳು ಅವಧೂತ ಪರಂಪರೆಗೆ ಸೇರಿದವರು. ಹಾರೂಗೇರಿಯಲ್ಲಿ ಅಧ್ಯಾತ್ಮ ಜ್ಞಾನ ಪಸರಿಸುತ್ತ ಪ್ರತಿನಿತ್ಯ ಶಾಸ್ತ್ರ–ಪುರಾಣಗಳನ್ನು ಹೇಳುತ್ತ ಜನರ ಗಮನ ಸೆಳೆದಿದ್ದರು. ಪವಾಡ ಪುರುಷರೆಂದೇ ಹೆಸರುವಾಸಿಯಾದ ವೃಷಭೇಂದ್ರರು ಅನೇಕ ಲೀಲೆಗಳಿಂದ ಜನರ ಅಂಧಕಾರವನ್ನು ಹೋಗಲಾಡಿಸಿದ್ದಾರೆ. ಪ್ರತಿನಿತ್ಯ ಪತ್ತಾರ ಪವಾಡೆಪ್ಪನವರ ಮನೆಯಲ್ಲಿ ಅಧ್ಯಾತ್ಮದ ಚಿಂತನೆ ನಡೆಸುತ್ತಿದ್ದರು. ಅಲ್ಲಿ ಅನೇಕ ಭಕ್ತರು ಸೇರುತ್ತಿದ್ದರು. ಪವಾಡೆಪ್ಪ ಒಬ್ಬ ಶಾಸ್ತ್ರಕಾರನಾಗಿದ್ದನು. 'ಅಲ್ಲಿ ಹೈದರಾಬಾದ್‌ದಿಂದ ಶಾಸ್ತ್ರಜ್ಞರು ಬರುತ್ತಿದ್ದ'ರೆಂದು ಭಾಸ್ಕರ ಪತ್ತಾರ (ಸರ್) ಹೇಳುತ್ತಾರೆ.

"ಪತ್ತಾರ ಪಾವಾಡಿ ಚಿತ್ತರದ ಲಸಮಣ್ಣಾ ।
ಹತ್ತೂರ ಹಿರಿತನ, । ಸಾಧುರ ಗೆನೆತನ
ಸುತ್ತ ನಾಡಾಗ ಮೆರೆದವರು"[೨]

ಪವಾಡಿ ಪತ್ತಾರ ಹಾಗೂ ಲಸಮಣ್ಣಾ ಅಂದು ಪ್ರಸಿದ್ಧ ಅಧ್ಯಾತ್ಮವಾದಿಗಳು. ಹಾರೂಗೇರಿಯಲ್ಲಿ ಅಂದು ಪ್ರತಿಷ್ಠಿತ ಮನೆತನ ಎಂದರೆ ಪತ್ತಾರ ಮನೆತನವಾಗಿತ್ತು. ಪತ್ತಾರ ಮನೆತನವೇ ಅಧ್ಯಾತ್ಮಿಕ ಕೇಂದ್ರ ಸ್ಥಳವಾಗಿತ್ತು. ಇಲ್ಲಿ ಸೇರುವ ಭಕ್ತರಲ್ಲಿ ಅಲಭೈರಿಯೂ ಒಬ್ಬ. ಈತ ಒಬ್ಬ ಸ್ಥಿತಪ್ರಜ್ಞನಾಗಿದ್ದು, ಸದ್ಗುರುಗಳ ಸೇವೆಯನ್ನು ಹಗಲಿರುಳು ಮಾಡುತ್ತ ಅನೇಕ ಸ್ತುತಿ ಪದಗಳನ್ನು ರಚಿಸಿದ್ದಾನೆ.

ಈಗ ಲಭ್ಯವಾದ ಕೃತಿಯಲ್ಲಿಯ ೮ ಪದಗಳು ಸ್ತುತಿರೂಪದಲ್ಲಿವೆ. ಅವು ಈ ಮೇಲೆ ಹೇಳಿದಂತೆ ಚನ್ನವೃಷಭೇಂದ್ರ ಮಹಾಸ್ವಾಮಿಗಳ ಲೀಲೆ, ಪವಾಡ, ಅವರೊಬ್ಬ ದೇವಮಾನವ, ಧರೆಗಿಳಿದು ಬಂದ ಭಗವಂತ, ಹಾರೂಗೇರಿಯ ಭಾಗ್ಯದೇವತೆ, ಬಡವರ ಬಂಧು, ಕರುಣಾಸಾಗರ, ದಯಾನಿಧಿ, ಷಟಸ್ಥಲ ಚಕ್ರವರ್ತಿ, ಅವತಾರ ಪುರುಷ, ಮಾನವ ಜೀವನ ಪಾವನಗೊಳಿಸಲು ಬಂದ ಮಹಾಮಹಿಮ, ಮಹಾಯೋಗಿ ಎಂಬಿತ್ಯಾದಿಯಾಗಿ ಸದ್ಗುರುವಿನ ಸ್ತುತಿರೂಪದ ಪದಗಳು ಇದಾಗಿವೆ. ಈ ಸ್ತುತಿ ಪದ್ಯಗಳು ಕೃತಜ್ಞತೆ ಗೌರವದ ಫಲದಂತಿವೆ. ಅಂಧಕಾರವನ್ನು ಹೋಗಲಾಡಿಸಿ ಸನ್ಮಾರ್ಗದಲ್ಲಿ ನಡೆಯಲು ಸೂಚಿಸುತ್ತಿವೆ.

"ನಂಬಿದಿ ಮಳ್ಳ ಸುಳ್ಳ ಹಂಬಲಗೊಂಡ ಡಾಂಬಿಕವಾ ॥ಪ॥
ಒಂಭತ್ತು ತೂತಿನ ದೇಹಾ
ತುಂಬಿಕೊಂಡಿರುವದು ಹೇಯಾ
ಜಂಬ ಮಾಡ ಬೇಡಾ ಇದು ಮಾಯಾ ಕಾಯಾ ॥೧॥
ಮಡದಿ ಮಕ್ಕಳ ಕೂಡಿ
ದುಡಿದು ಜೋಪಾನ ಮಾಡಿ
ಪಡೆಯಲಿಲ್ಲ ಸದ್ಗತಿಯ ಫಲವೇನು ॥೨॥
ಪರಮ ಸದ್ಗುರುವಿನ ಬಳಿ
ವರ ಮಂತ್ರ ಬೋಧವ ಕೇಳಿ
ಹಾರೂಗೇರಿಯೊಳಿರು ಮೂಢಾ ॥೩॥"[೩]

ಕವಿ ಈ ಶರೀರದ ಮೇಲೆ ಅತಿಯಾದ ಮೋಹ ಇಟ್ಟುಕೊಳ್ಳದೆ ಕಲ್ಮಶ ತುಂಬಿಕೊಂಡಿರುವ ಈ ದೇಹ ಶಾಶ್ವತವಲ್ಲ ಎಂದು ಹೇಳುತ್ತಾನೆ. ಈ ಪದ್ಯ ದಾಸರ "ನೀರಿನ ಮೇಲಣ ಗುಳ್ಳೆ ನಿಜವಲ್ಲೋ ಹರಿಯೆ" ಎಂಬ ಕೀರ್ತನೆಯನ್ನು ನೆನಪಿಸುತ್ತದೆ. ಮಡದಿ

ಮಕ್ಕಳು ಸೇರಿ ದುಡಿದರು ಫಲವಿಲ್ಲ ಪರಮ ಸದ್ಗುರು ಚನ್ನವೃಷಭೇಂದ್ರರ ಉಪದೇಶ ಕೇಳಿ ತಮ್ಮ ಜೀವನ ಪಾವನಗೊಳಿಸಿಕೊಳ್ಳಬೇಕೆಂದು ಕವಿಯ ಅಪೇಕ್ಷೆಯಾಗಿದೆ.

"ಪರಮಾತ್ಮರು ಶಿವನ ಭಜಿಪರು" ಈ ಸ್ತುತಿ ಪದ್ಯದಲ್ಲಿ ಅಲಭೈರಿ ಹಾರೂಗೇರಿ ಭೂಲೋಕದ ಪವಿತ್ರವಾದ ಸ್ಥಳಗಳಲ್ಲಿಯೇ ಒಂದು. ಇಲ್ಲಿಯ ಭಕ್ತರು ಶಿವನ ಸ್ವರೂಪಿಗಳು, ಜೀವನ್ಮುಕ್ತರು ಹಾಗೂ ಮುಕ್ತಿ ಮಾರ್ಗವನ್ನು ಅರಿತವರೆಂದು ಇಲ್ಲಿಯ ಭಕ್ತ ಜನರನ್ನು ಕೊಂಡಾಡಿದ್ದಾನೆ.

"ಪಾವನಾತ್ಮರು ಶಿವನ ಭಜಿಪರು
ಭೂಲೋಕದೊಳಗೆ ಪಾವನಾತ್ಮರು
ಶಿವನ ದೇವಾಂಶಿಕರು ಜೀವನ್ಮುಕ್ತರು
ಕೇವಲಾನಂದ ಭಾವ ಭರಿತರು"[೪]

ಈ ಸ್ತುತಿ ಪದ್ಯದಲ್ಲಿ ಮುಂದುವರೆದು ಕವಿ ವೃಷಭೇಂದ್ರರು ಜನರಿಗೆ ಸನ್ಮಾರ್ಗವನ್ನು ಕಲ್ಪಿಸಿದ್ದಾರೆ ಎಂಬುದನ್ನು ತಿಳಿಸುತ್ತಾನೆ.

"ಭುವಿಯೋಳ್‌ಜ್ಞ ಜೀವಿಗಳಿಗೆ
ದೇವಭಕ್ತಿ ಪ್ರಭಾವ ತೋರಿಸಿ
ಸೇವಾನ್ವಿತರಿಗೆ ತಾವತ್ಕಾಲಕೆ
ಈಯ್ವರ್ವ ಮೋಕ್ಷವು ಭಾವಿಸಲನುಭವ"[೫]

"ರೊಕ್ಕ ದುಃಖವೊ ದುಃಖವೊ ಸುಖವಿಲ್ಲದಾರಿಗೆ" ಈ ಪದ್ಯದಲ್ಲಿ ರೊಕ್ಕದ ಅಹಂಕಾರದಿಂದ ಮನುಷ್ಯ ಯಾವ ಯಾವ ಕುಕೃತ್ಯಗಳನ್ನು ಮಾಡುತ್ತಿದ್ದಾನೆ ಎಂಬುದನ್ನು ತಿಳಿಸುತ್ತದೆ. ಬದುಕಲಿಕ್ಕೆ ರೊಕ್ಕ ಬೇಕು; ಆದರೆ ರೊಕ್ಕವೇ ಬದುಕಲ್ಲ ಎಂಬ ನೀತಿಯನ್ನು ತಿಳಿಸುತ್ತದೆ.

"ರೊಕ್ಕದ ಮದದಿಂದ ಸೊಕ್ಕಿಗೆ ಬರುವರು ಲೆಕ್ಕವಿಲ್ಲದಣ್ಣಾ
ಠಕ್ಕರ ಕೈಯೊಳು ಸಿಕ್ಕರೆ ಸಾಕು ಮುಕ್ಕಿಸುವರು ಮಣ್ಣಾ।"[೬]

ಇಂದು ರೊಕ್ಕದಿಂದಾಗಿ ನಡೆಯುವ ಅನೀತಿ ಕಾರ್ಯಗಳು ಅತಿಯಾದ ಭ್ರಷ್ಟಾಚಾರ ಗಮನಿಸಿದರೆ, ಕವಿಯ ಭಾವ ಸಹಜವೆನಿಸುತ್ತದೆ. ಆದ್ದರಿಂದ ಅತಿಯಾದ ಹಣದ ಮೋಹ ಸಲ್ಲದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

ಈ ಸ್ತುತಿ ಪದ್ಯಗಳು ಮಾನವನಿಗೆ ಮಾರ್ಗದರ್ಶಕವಾಗಿವೆ. ಬಾಳಿನ ಸುಕೃತದ ಫಲದಂತಿವೆ. ನೆಮ್ಮದಿಯ ಬದುಕಿಗೆ ದಿವ್ಯ ಮಂತ್ರ, ಅಮರ ಮಂತ್ರಗಳಾಗಿವೆ ಎಂಬುದಾಗಿ ಇಲ್ಲಿರುವ ಸ್ತುತಿ ಗೀತಗಳಿಂದ ತಿಳಿಯಬಹುದು.

ಒಟ್ಟಿನಲ್ಲಿ ಈ ಕೃತಿಯೂ ಸಹ ಅನೇಕ ಮೌಲ್ಯಯುತವಾದ ತತ್ವಗಳನ್ನು ಒಳಗೊಂಡಿದ್ದರೂ ಕೃತಿಯಲ್ಲಿ ಅನೇಕ ನ್ಯೂನ್ಯತೆಗಳು ಕಾಣುತ್ತವೆ. ಕೃತಿಯು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ದಾಟುವಾಗ ಕೆಲವು, ಬೇರೆಯವರು ರಚಿಸಿದ ಪದಗಳು ಇದರಲ್ಲಿ ಸೇರ್ಪಡೆಯಾಗಿರುವ ಸಂಭವವಿದೆ. ಕೆಲವು ಪದ್ಯಗಳನ್ನು ಗಮನಿಸಿದಾಗ ಅವು ಅಲಭ್ಯೆರಿಯ ರಚನೆಗಳಲ್ಲ ಎಂಬುದು ವಿಧಿತವಾಗುತ್ತದೆ. ಪ್ರಾರಂಭದಲ್ಲಿ ಕೆಲವು ದೇವತಾ ಸ್ತುತಿಗಳನ್ನು ಒಳಗೊಂಡರೆ, ಮಧ್ಯದಲ್ಲಿ ವೃಷಭೇಂದ್ರರರ ಗುಣಗಾನ ಹಾಗೂ ಅನುಭವ ಪದಗಳನ್ನು ಕಾಣುತ್ತೇವೆ. ಕೊನೆಗೆ ಕೆಲವು ಮಹಾಪುರುಷರ ಮಂಗಳಾರತಿ ಪದಗಳು ಇದರಲ್ಲಿ ಮಿಶ್ರಗೊಂಡಿವೆ. ಕೃತಿಯನ್ನು ಚೆನ್ನಾಗಿ ಪರಿಶೋಧಿಸಿ ಪ್ರಕಟಿಸುವ ಅಗತ್ಯವಿದೆ.

೪.೨ ಜಿನಭಕ್ತಿಗೀತೆಗಳು :

ಅಲಭ್ಯೆರಿ ಕವಿಯ ೭೧ ಪದಗಳಿರುವ 'ಶ್ರೀ ಜಿನಭಕ್ತಿಗೀತೆಗಳು' ಎಂಬುದು ಇನ್ನೊಂದು ತತ್ವಪದ ಗ್ರಂಥ. ಭಜನೆಯನ್ನಾಗಿ ಹಾಡುವವರಿಗೆ ರಾಗ-ತಾಳ-ದಾಟಿ(ಲಯ) ಯನ್ನು ಪ್ರತಿಯೊಂದು ಪದದ ಶೀರ್ಷಿಕೆಯ ಕೆಳಗಡೆ ಸೂಕ್ತವಾಗಿ ಗುರುತಿಸಲಾಗಿದೆ. ಈ ಸಂಕಲನದ ಕೊನೆಗೆ ಎರಡು ಮಂಗಳಾರತಿ ಪದಗಳಿವೆ. "ಶ್ರೀ ಜಿನಭಕ್ತಿಗೀತೆಗಳು" ಈ ಕೃತಿಯನ್ನು ಅಲಭ್ಯೆರಿ ಕವಿಯ ಮಗನಾದ ರಾಮು ಸುಬ್ಬಣ್ಣವರ ಸಂಯೋಜಿಸಿ ಸಂಪಾದಿಸಿದ್ದಾರೆ. ಸಿದ್ದಪ್ಪ ವೆಂಕಪ್ಪ ನಾಗನೂರ 'ಮಹಾವೀರ ಭಜನಾ ಮಂಡಳ' ಹಾರೂಗೇರಿ ಇವರು ಈ ಕೃತಿಗೆ ಪ್ರಕಾಶಕರಾಗಿ ಬೆಳಕು ನೀಡಿದ್ದಾರೆ. ಇದನ್ನು ಹಾರೂಗೇರಿಯ ಸರಸ್ವತಿ ಮುದ್ರಣಾಲಯದವರು ೧೫-೨-೧೯೪೯ ರಲ್ಲಿ "ಓಂ" ಸಂಕೇತದ ಸೂತ್ರದೊಂದಿಗೆ ಮುದ್ರಣ ಕಾರ್ಯ ಮಾಡಿದ್ದಾರೆ. ಭಾಸ್ಕರ ಪತ್ತಾರ ಅವರು ಮುನ್ನುಡಿ ಬರೆದಿದ್ದಾರೆ.

೧೦೮ ಆಚಾರ್ಯ ಸುಬಲಸಾಗರ ಮುನಿ ಮಹಾರಾಜರ ಭಾವಚಿತ್ರದೊಂದಿಗೆ ಪ್ರಾರಂಭವಾದ ಈ ಕೃತಿ ಅವರಿಂದಲೇ ಬಿಡುಗಡೆಯಾಗಿರುವುದು ಔಚಿತ್ಯಪೂರ್ಣ. ಅಲಭ್ಯೆರಿಯ ಧರ್ಮಪತ್ನಿ ಸಂಕವ್ವನ ಭಾವಚಿತ್ರ ಈ ಸಂಕಲನದಲ್ಲಿದ್ದರೂ ಕವಿಯ ಭಾವಚಿತ್ರ ಕಂಡು ಬರುವದಿಲ್ಲ. ಇದು ಕವಿಯು ತೀರಿಹೋದ (೧೯೪೨) ನಂತರದ ಮೊಟ್ಟ ಮೊದಲ ಪ್ರಕಟಿತ ಗ್ರಂಥ. ಜೈನ, ಲಿಂಗಾಯತ, ವಿಶ್ವಕರ್ಮ, ಬ್ರಾಹ್ಮಣ, ಮುಸ್ಲಿಂ ಪಂಥದ ಜನರೆಲ್ಲರೂ ಒಂದೇ ಎಂದು ಪರಿಭಾವಿಸಿ ಬಾಳುವ ಕಾಲ ಅದಾಗಿತ್ತು. ಇಂಥ ಸಮುದಾಯದವರೆಲ್ಲರ

ಜಿಜ್ಞಾಸೆ, ಹಾರೂಗೇರಿಯಲ್ಲಿ ಅಂದು ಅದ್ವೈತ ಪರಂಪರೆಯ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಿತ್ತು. ಅಲಭೈರಿಯು ಈ ಪರಂಪರೆಗೆ ಸೇರಿದ ಕವಿ. ಚನ್ನವೃಷಭೇಂದ್ರ ಮಹಾಶಿವಯೋಗಿಯ ಅಚ್ಚು ಮೆಚ್ಚಿನ ಶಿಷ್ಯ. ಈತ ಬರೆದ ಲಾವಣಿ, ರಿವಾಯತ, ಭಜನೆ, ಅಭಂಗ, ಮುಂತಾದ ಜನಪದ ಹಾಡುಗಳಿಂದ ಈತ ಅದ್ವೈತ ಪರಂಪರೆಯ ಕವಿಯಾಗಿಯೇ ಗೋಚರಿಸುತ್ತಾನೆಂಬುದು ಸತ್ಯ.

ಅದ್ವೈತ ಪರಂಪರೆಯಲ್ಲಿ ಇಷ್ಟ ದೇವತಾ ಆರಾಧನೆಗೆ ಸ್ಥಾನವುಂಟು. ಜೈನ ಮತೀಯನಾದ ಕವಿಯು ಜಿನಭಕ್ತಿಗೀತೆಗಳನ್ನು ರಚಿಸಿದ್ದು ಸ್ವಾಭಾವಿಕವಾಗಿಯೇ ಇದೆ. ಈ ಕವಿಗೆ ಸತ್ಯವೇ ಪ್ರಮಾಣ. ಅದುವೇ ಆತನಿಗೆ ಅನುಭಾವ. ಇದ್ದುದನ್ನು ಇದ್ದಂತೆ ಒಪ್ಪುವವರು ಆಸ್ತಿಕರು. ಇದಕ್ಕೆ ಸತ್ ಸತ್ಯವೇ ಪ್ರಮಾಣ. "ಸತ್ಯಾತ್ ನ ಪರಂ" ಅಂದರೆ ಸತ್ಯಕ್ಕಿಂತ ಶ್ರೇಷ್ಠವಾದದು ಮತ್ತೊಂದಿಲ್ಲ.

ಆದರೆ ನಮ್ಮ ಪರಂಪರೆಯಲ್ಲಿ ಈ ಸತ್ಯ ಪ್ರಮಾಣವಾಗದೇ ವೇದಗಳೇ ಪ್ರಮಾಣವಾದವು. ವೈದಿಕವಾದುದು ಆಸ್ತಿಕ : ವೈದಿಕೇತರವಾದುದು ನಾಸ್ತಿಕ ಎಂಬ ವಿಚಿತ್ರ ಪರಂಪರೆ ನಿರ್ಮಾಣವಾಯಿತು. ವೈದಿಕವಾದುದಷ್ಟೇ "ಹಿಂದೂ" ಎಂಬ ಸಂಕುಚಿತ ಹಿನ್ನೆಲೆಯಲ್ಲಿ ಬೌದ್ಧ, ಜೈನ, ಸಿಖ್ಖ ಇತ್ಯಾದಿ ದರ್ಶನಗಳು ನಾಸ್ತಿಕ ಹಣೆಪಟ್ಟಿಗೆ ಗುರಿಯಾದವು. ಅವು ಸ್ವತಂತ್ರ ಧರ್ಮಗಳು ಎನ್ನುವ ಸ್ಥಿತಿ ಉಂಟಾಯಿತು. ಮತೀಯ ಘರ್ಷಣೆಗಳು ವಿಚ್ಛಿದ್ರಕಾರಿ ಮನೋವೃತ್ತಿಯ ಬೆಳವಣಿಗೆಗಳಿಗೆ ಕಾರಣವಾದ, ಯಥಾರ್ಥ ವಿರೋಧಿ ಅರ್ಥಗ್ರಹಣ ಪದ್ಧತಿಯಿಂದ ಒದಗಿದ ಹಾನಿ ಅಭ್ಯಸನೀಯವಾಗಿದೆ. ಸಿದ್ಧಾಂತ ಮತವೂ ಆಸ್ತಿಕ 'ಮತ' ವೆಂದು ಪರಿಭಾವಿಸಿದ ಈ ಕವಿಯ ಎದೆಗಾರಿಕೆ ಮೆಚ್ಚುವಂಥದ್ದು.

ಇದರಲ್ಲಿರುವ ಪದಗಳು ಮಾನವನ ಪ್ರಗತಿಗೆ ಪೂರಕವಾಗಿವೆ. ಆಶಾವಾದದ ಬದುಕಿಗೆ ದೇವರು, ಧರ್ಮ, ಅಧ್ಯಾತ್ಮ, ಯೋಗ, ಸಿದ್ಧಾಂತಗಳು ಅವಶ್ಯಕಗಳಾಗುತ್ತವೆ. ಅನಿವಾರ್ಯವೂ ಆಗುತ್ತವೆ. ಅದನ್ನಿಲ್ಲಿ ಕಾಣಬಹುದು. ಸರ್ವಧರ್ಮ ಸಮನ್ವಯದ ದೃಷ್ಟಿ ಕವಿಯಲ್ಲಿದ್ದದ್ದು ಕಂಡು ಬರುತ್ತದೆ. ಆದರೆ ಈ ಕೃತಿಯಲ್ಲಿ ಹೆಸರೇ ಸೂಚಿಸುವಂತೆ ಜಿನಭಕ್ತಿಗೀತೆಗಳು. ಇವುಗಳಲ್ಲಿ ಜೈನ ದರ್ಶನ ಸಾರ ಹರಳುಗಟ್ಟಿದ್ದು, ಸತ್ಯದ ಸಾಕ್ಷಾತ್ಕಾರಕ್ಕೆ ಜೈನ ಸಿದ್ಧಾಂತವೂ ಒಂದು ಮಾರ್ಗ. "ಅನೇಕಾಂತಂ ಜಗತ್ಸರ್ವಂ" ಎಂಬುದು ಜೈನ ಸಿದ್ಧಾಂತರ ಸೂತ್ರ: ಸತ್ ಸತ್ವಕ್ಕೆ ಈ ಸಿದ್ಧಾಂತದಲ್ಲಿ ಪ್ರಾಧ್ಯಾನತೆಯಿದೆ ಎಂದು ಈ ಮೇಲೆ ಹೇಳಲಾಗಿದೆ. ಈ ಸತ್ವಕ್ಕೆ ಹುಟ್ಟು-ಸಾವು-ಅಮರತ್ವ ಈ ಮೂರು ಉಂಟು. ಅಮರತ್ವವೆಂದರೆ ಮುಕ್ತಿ ಅಥವಾ ಮೋಕ್ಷ.

ಬೀಜ ಮೊಳಕೆಯೊಡೆಯುತ್ತಲೇ ವೃಕ್ಷದ ಹುಟ್ಟು ತೋರುತ್ತದೆ. ವೃಕ್ಷ ಹುಟ್ಟುತ್ತಲೇ ಬೀಜದ ನಾಮ – ರೂಪ (ದೇಹ) ಅಳಿಯುತ್ತದೆ. ಆದರೂ ಬೀಜದ ಆತ್ಮ ಸ್ವರೂಪ ವೃಕ್ಷದಲ್ಲಿ "ಸತ್ತ್ವ" ರೂಪದಲ್ಲಿ ಹುದುಗಿ ಸ್ಥಿರತ್ವ ಹೊಂದಿರುವುದರಿಂದ ಅದಕ್ಕೆ ಅಮರತ್ವವೂ ಉಂಟು.

"ಬ್ರಹ್ಮಸತ್ಯಂ ಜಗನ್ಮಿಥ್ಯಾ" ಎಂಬ ನಿವೃತ್ತಿ ಭಾವವು ಸರ್ವವನ್ನೂ ನಿವೃತ್ತಿ ಮಾಡುತ್ತ ತನ್ನನ್ನು ತಾನೇ ನಿವೃತ್ತಿಕರಿಸಿಕೊಳ್ಳುವಂತೆ, ಅನೇಕಾಂತರವಾದವೂ ಜಗತ್ ಸರ್ವವನ್ನೂ ಅನೇಕಾಂತವನ್ನಾಗಿ ಮಾಡಿ, ತಾನೂ ಅನೇಕಾಂತವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿದ್ಧಾಂತ ಮಾರ್ಗವೂ ಆಸ್ತಿಕ ಮತ ಎಂಬುದು ಕವಿಗೆ ಭಾವಗಮ್ಯ. ಇಂಥ ತಾತ್ತ್ವಿಕ ಸಮನ್ವಯತೆಯ ಹಿನ್ನಲೆಯ ಗ್ರಾಮೀಣ ಪರಿಸರದಲ್ಲಿ ಬಾಳಿ ತನ್ನ ಕಾವ್ಯ ಪ್ರತಿಭೆಯಿಂದ ಜಿನಭಕ್ತಿ ಗೀತೆಗಳಿಗೆ ಮತ್ತು ಜಾನಪದ ಸಂಸ್ಕೃತಿಗೆ ಗರಿ ಮೂಡಿಸಿದ ಶ್ರೇಷ್ಠ ಕವಿ ಎನಿಸಿಕೊಳ್ಳುತ್ತಾನೆ. ಜಿನಭಕ್ತಿ ಗೀತೆಗಳಲ್ಲಿ ಸಂಕಲಿತಗೊಂಡ ಪದಗಳ ಕುರಿತು ಕೆಳಗಿನಂತೆ ಅವಲೋಕನ ಮಾಡಲು ಪ್ರಯತ್ನಿಸಲಾಗಿದೆ.

'ಮಾಡಿರ್‍ಯೊ ಜಿನ ದೇವನ ಭಜನೆಯಾ' ಎಂಬುದರಿಂದ ಆರಂಭಗೊಂಡು 'ಮಂಗಲ ಜಿನೇಂದ್ರ ಶ್ರೀ ಪರಮಾರ್ಥ'ವೆಂಬ ಮಂಗಳಾರತಿ ಪದದೊಂದಿಗೆ ಕೃತಿ ಮುಕ್ತಾಯವಾಗುತ್ತದೆ.

ಜಿನಧರ್ಮ ಸಿದ್ಧಾಂತದ ತಿರುಳು :

ಜಿನನಿಂದ ಭೋದಿಸಲ್ಪಟ್ಟ ಧರ್ಮವು ಜೈನಧರ್ಮ. 'ಜಿನ'ನನ್ನು ದೇವರೆಂದು ಪೂಜಿಸುವವರು ಜೈನರೆಂದೂ ಹೇಳಲಾಗಿದೆ. ಜಿನನು ತನ್ನ ಸ್ವಂತ ತಪೋಬಲದಿಂದ ತನ್ನ ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳನ್ನು ಗೆದ್ದು ಜಿನನಾಗಿದ್ದಾನೆ. 'ಜಿನ' ಎಂಬ ಪದದ ಅರ್ಥ ಗೆದ್ದವ ಅಥವಾ ಜಯಿಸಿದವ ಎಂದರ್ಥ. ಯಾವಾತನು ತನ್ನ ಆತ್ಮಿಕ ವಿಕಾರಗಳನ್ನು ಸಂಪೂರ್ಣವಾಗಿ ಜಯಿಸಿಕೊಂಡಿರುತ್ತಾನೊ ಆತನೇ ಜಿನನು.

ಯಾವ ಪ್ರಾಣಿಯ ಜೀವನಕ್ಕೂ ಬಾಧೆ ತಟ್ಟಕೂಡದೆಂಬುದೇ ಜೈನಧರ್ಮದ ಉದ್ದೇಶವಾಗಿದೆ. ಎಲ್ಲರ ವಿಚಾರಗಳನ್ನು ತಿಳಿದುಕೊಳ್ಳುವುದು. ಎಲ್ಲ ಜೀವಿಗಳನ್ನು ರಕ್ಷಿಸುವುದು ಇದೇ ಜಿನನ ಉಪದೇಶದ ಮೂಲವಾಗಿದೆ. ಅದರಿಂದ ಜಿನನಿಗೆ "ಹಿತೋಪದೇಶಿ" ಎಂಬ ಹೆಸರಿದೆ. ಅವನು ಯಾವ ವ್ಯಕ್ತಿ, ವರ್ಗ, ವರ್ಣ, ಪಂಥ, ಸಂಪ್ರದಾಯಕ್ಕೆ ಮಾತ್ರ ಉಪದೇಶಿಸುವುದಿಲ್ಲ. ಸಮಸ್ತ ಪ್ರಾಣಿಗಳ ಹಿತಕ್ಕಾಗಿ ಬೋಧಿಸುವನು, ಅದಕ್ಕಾಗಿ ಜೈನಧರ್ಮವು ವಿಶ್ವಧರ್ಮವಾಗಿದೆ.

ಜೈನ ದರ್ಶನದಲ್ಲಿ ದೇವರನ್ನು ಜಗತ್ತು, ಜೀವಿಗಳ ಸೃಷ್ಟಿಕರ್ತ ಎಂದು ಒಪ್ಪುವುದಿಲ್ಲ; ಹಾಗೆಯೇ ವೇದೋಪನಿಷತ್ತುಗಳನ್ನು ಪ್ರಮಾಣವಾಗಿ ಸ್ವೀಕರಿಸುವುದಿಲ್ಲ, ತೀರ್ಥಂಕರರು

ಬೋಧಿಸಿದ ಉಪದೇಶಗಳನ್ನೊಳಗೊಂಡ ಶಾಸ್ತ್ರ ಸಮುದಾಯವೇ ಜೈನಧರ್ಮದ ಆಧಾರ ಗ್ರಂಥಗಳಾಗಿವೆ.

ಜೈನರು ತೀರ್ಥಂಕರ ಜೀವನ ಮತ್ತು ಬೋಧನೆಗಳನ್ನು ಪ್ರಮಾಣವಾಗಿ ಸ್ವೀಕರಿಸುತ್ತ ಭವಬಂಧನದ ಪಾಶ ಹರಿದು ಮೋಕ್ಷ ಪ್ರಾಪ್ತಿಗೆ ಮೂರು ಮುಖ್ಯವಾದ ಅಂಶಗಳು ಬೇಕೆಂದು ಹೇಳುತ್ತಾರೆ. ಅವು

೧. ಜೈನ ತತ್ವಗಳ ಸರಿಯಾದ ಪರಿಜ್ಞಾನ.
೨. ಸರಿಯಾದ ಮತ್ತು ಪರಿಶುದ್ಧವಾದ ನಡವಳಿಕೆ.
೩. ಅಹಿಂಸಾ ಪರಮೋಧರ್ಮ ಸರಿಯಾದ ಆಚರಣೆ.

ಇವುಗಳ ಬಳಿವಿಡಿದು ಜೈನಧರ್ಮದ ತಿಳುವಳಿಕೆ ಪ್ರಾರಂಭವಾಗುತ್ತದೆ. ಜೈನಧರ್ಮದಲ್ಲಿ ಸತ್ಯ, ನೀತಿ, ಉತ್ತಮ ನಡವಳಿಕೆಗಳಿಗೆ ವಿಶೇಷವಾದ ಪ್ರಾಧಾನ್ಯತೆಯನ್ನು ನೀಡಿರುವುದು ಕಂಡು ಬರುತ್ತದೆ. ಅಹಿಂಸೆ ಮತ್ತು ದಯೆ ಇವುಗಳು ಜೈನಧರ್ಮದ ಮೂಲ ಸೂತ್ರಗಳಾಗಿವೆ. ಜೀವನ ಜಗತ್ತು ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಸ್ಯಾದ್ವಾದ ದೃಷ್ಟಿಯೆಂಬ ವಿಶಿಷ್ಟವಾದ ನ್ಯಾಯ ಪದ್ಧತಿಯನ್ನು ಜೈನಧರ್ಮವು ಬೋಧಿಸುತ್ತದೆ. ಜೈನರ ವಿಚಾರ ಆಚಾರ ವ್ಯವಹಾರಗಳಿಗೆಲ್ಲ ಈ ಸ್ಯಾದ್ವಾದ ದೃಷ್ಟಿಯೇ ತಳಹದಿ.

ಶ್ರಾವಕರು ಆಚರಿಸಬೇಕಾದ ನೀತಿ ನಿಯಮಗಳನ್ನು ಈ ಸಂಕಲನದಲ್ಲಿ ಪದ ೩೪ ರಲ್ಲಿ ಹೀಗೆ ಹೇಳಿದ್ದಾನೆ. ಅದರ ಶೀರ್ಷಿಕೆಯು "ಶ್ರಾವಕ ಆಚಾರವನು ಬಿಡದೆ ಸಾಧಿಸು" ಎಂದಿದೆ.

"ಸಾಧಿಸೆಲೊ ಶ್ರಾವಕಾಚಾರವನ್ನು ಬಿಡದೇ ।ಪ।
ಗುಪ್ತ ವೈರಿಗುಣಗಳಳಿದು
ಸಪ್ತ ವ್ಯಸನ ಶಿರವ ಕೊಯ್ದು
ಸಪ್ತ ತತ್ತ್ವ ಸಾರವರಿದು
ತೃಪ್ತನಾಗೆಲೊ-ಶ್ರಾವಕಾಚಾರವನು ಬಿಡದೆ।"[೭]

ಮೇಲೆ ಹೇಳಿದಂತೆ ರತ್ನತ್ರಯಗಳ ಮರ್ಮವ ತಿಳಿದುಕೊಂಡು ಆರು ಕರ್ಮ ನಿತ್ಯವೂ ಮಾಡಿ ಹಾರೂಗೇರಿಯೊಳು ಬಂದು ಪಾರುಗಾಣು ಶ್ರಾವಕವನೇ ಎಂದು ಕವಿ ಕರೆ ಕೊಡುತ್ತಾನೆ. ಶ್ರಾವಕಾಚಾರಿಗೆ 'ಆಯುಷ್ಯ ಕ್ಷೀಣಿಸುತಿದೆ ಎಚ್ಚರವಾಗು' ಎಂಬ ತಲೆಬರಹದಲ್ಲಿಯೂ ಎಚ್ಚರ ಕೊಟ್ಟಿದ್ದುದರ ಪ್ರತಿಪಾದನೆಯಿದೆ. (ಪದ ೪೫ - ಪುಟ ೪೭)

"ಹೊತ್ತು ಹೋಗುವುದು ನೋಡು ಎಲೆ ।

ಜಿನ ತತ್ತ್ವ ತಿಳಿದು ಸುಖಿಯಾಗೊ ಎಲೆ ।
ಗೊತ್ತಿಯ ಸಂಸಾರ ಬಿಡದೋ ಎಲೆ ।
ನಿನ್ನ ಮುತ್ತ್ಯಾ ನಾಚಿಕಡೆ ಇದ್ದದೆಲೆ।
ಹೆಂಡರ ಮಕ್ಕಳ ಮಾತಿಗೆಲೆ।
ಮನಗಂಡ ಮರುಳಾಗಿ ಕುಳಿತೆಲೆ।
ಪಂಡಿತರೊಚನವು ಕೇಳದೆಲೆ।
ಹುಚ್ಚ ಮುಂಡೆಗಂಡನಾಗಿ ಹೋದೆಲೆ ।[೮]

ಎಂಬಿ ಪದ್ಯದ ಸಾಲುಗಳನ್ನು ಗಮನಿಸಿದರೆ ಸಂಸಾರ ಸಾಗರ ಬಲು ಜಂಜಾಟ. ಅದರ ಸೆಳವಿಗೆ ಸಿಕ್ಕು ನಲುಗುವುದಕ್ಕಿಂತ ಪೂರ್ವದಲ್ಲಿಯೇ ಜಿನಧರ್ಮದ ತತ್ವಗಳನ್ನು ಅರಿತು ಮೋಕ್ಷವ ಹೊಂದು ಎಂಬ ಧ್ವನಿಯಿದೆ. ಹೆಂಡಿರು-ಮಕ್ಕಳು, ಪಾಪ-ಪುಣ್ಯ, ಲೋಭ-ಮೋಹ, ಸತ್ಯ-ಸುಳ್ಳು, ಸರಿ-ತಪ್ಪು ಏನೂ ತಿಳಿಯದೇ ಜಿದ್ದಿನಿಂದ ಸಂಸಾರದಾಟದಲ್ಲೆ ಸಿಲುಕಿರುವಿ! ಒಂದು ದಿವಸವೂ ಬಸದಿ ಸುತ್ತ ಸುಳಿಯದೆ, ಜಿನಧರ್ಮವನರಿಯದೆ ಇಂಥ ತಾಪತ್ರಯಗಳಲ್ಲಿಯೇ ಬಿದ್ದು ಹೊರಳಾಡುತ್ತಿರುವಿ! ಇದರಿಂದ ಏನೂ ಪ್ರಯೋಜನವಿಲ್ಲ. ಜಿನಧರ್ಮದಲ್ಲಿ ಜನಿಸಿ ಬಂದ ಮೇಲೆ ಬದುಕು ಸಾರ್ಥಕ ಮಾಡಿಕೊ ಎಂದು ಹಿತನುಡಿ ಈ ಪದದಲ್ಲಿ ಕೆನೆಗಟ್ಟಿದೆ.

೧. ಶ್ರಾವಕರ ಆಚಾರ ಪದ್ಧತಿಯನು ತಿಳಿ. ೩೨ ನೇ ಪದ
೨. ಶ್ರಾವಕನಾಗಿ ಆಚಾರವನ್ನೇಕೆ ತಿಳಿಯಲಿಲ್ಲ. ೩೩ ನೇ ಪದ
೩. ಗುರುವಿನ ಸಂಗವನು ತೊರೆಯದಿರು. ೩೪ ನೇ ಪದ
೪. ಶ್ರಾವಕ ಆಚಾರವನು ಬಿಡದೆ ಸಾಧಿಸು. ೩೫ ನೇ ಪದ
೫. ಶ್ರಾವಕಾಚಾರ ಪದ್ಧತಿ. ೫೯ ನೇ ಪದ

ಶ್ರಾವಕನು ಗೃಹಸ್ಥನಾಗಿ, ಸಂಸಾರಿಯಾಗಿ, ವೃತಧಾರಿಯಾಗಿ, ಈ ಧರ್ಮವನ್ನು ಅನುಸರಿಸುವವನಾಗಿದ್ದಾನೆ. ಶ್ರಾವಕನು ವೃತಗಳನ್ನು ಸರಿಯಾಗಿ ಪಾಲಿಸುತ್ತಾ ಎಲ್ಲವನ್ನೂ ತ್ಯಜಿಸಿ ಮುನಿಯೂ ಆಗಬಹುದು. ಶ್ರಾವಕರು ನಿತ್ಯವೂ ಅನುಸರಿಸುವ ಆರ್ಯ ಷಟ್ಕರ್ಮಗಳುಂಟು. ಅವು ಈಜ್ಜೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ, ತಪ, ಈಜ್ಜೆಯೆಂದರೆ ಪೂಜೆ, ಅದು ದಶವಿಧವಾಗಿದೆ. ವಾರ್ತೆ ಎಂದರೆ ಉದ್ಯೋಗ, ಅವು ಅಸಿ, ಮಷಿ, ಕೃಷಿ, ವಾಣಿಜ್ಯ, ಪಶುಪಾಲನೆ, ಶಿಲ್ಪಕರ್ಮ ಎಂದಾರು ವಿಧ. ದಯಾದತ್ತಿ, ಪಾತ್ರ ದತ್ತಿ, ಸಮದತ್ತಿ, ಸಕಲದತ್ತಿ, ಎಂಬ ನಾಲ್ಕು ಬಗೆಯ ದತ್ತಿಗಳುಂಟು. ತತ್ತ್ವಜ್ಞಾನ ಗ್ರಂಥಗಳನ್ನು ಓದುವುದು, ಓದಿಸುವುದು, ಸ್ವಾಧ್ಯಾಯ, ಅನಂತರದಲ್ಲಿ ಬರುವ ಪಂಚಾಣುವ್ರತಗಳು. ಸಂಯಮ, ತಪಗಳು ಹೀಗೆ ಈ ಆರು ಘಟ್ಕರ್ಮಗಳನ್ನು ಆಚರಿಸುವನು ಶ್ರಾವಕ.

ಶ್ರಾವಕನಾಗಿ ಶ್ರಾವಕಾಚಾರವನ್ನು ತಿಳಿಯದಿದ್ದರೆ ನರಜನ್ಮ ಧರಿಸಿ ಏನು ಪ್ರಯೋಜನ? ಎನ್ನುತ್ತಾನೆ ಕವಿ. ಜೈನಧರ್ಮ ಶ್ರೇಷ್ಠವೆಂಬುದನ್ನು ಜಿನಮುನಿಗಳು ಹೇಳುತ್ತಿರುವುದನ್ನು ಕೇಳಿಯಾದರೂ ಆಚರಿಸುವಂತವನಾಗು. ಸಂಸಾರದ ಸುಖ ದುಃಖದಲ್ಲಿ ಮುಳುಗೇಳುವುದಕ್ಕಿಂತ ಪೂರ್ವದಲ್ಲಿ ಗೃಹಸ್ಥ ಧರ್ಮ ತತ್ತ್ವಗಳ ತಿಳಿದುಕೋ! ಪಾಲನೆ ಅನಂತರದ್ದು, ಕವಿಯು ತನ್ನ ಶ್ರಾವಕ ಆಚಾರ ಪದ್ಧತಿಯನು ತಿಳಿ ಎಂಬ ಗೀತೆಯಲ್ಲಿ ಶ್ರಾವಕರ ಕ್ರಿಯೆಗಳು, ಮೂಲ ಅಷ್ಟ ಗುಣಗಳನು ಪರಮ ವ್ರತಗಳನ್ನು ತಿಳಿದುಕೋ, ಇವೆಲ್ಲದಕ್ಕೂ ಮಿಗಿಲಾಗಿ ದ್ವಾದಶ ತಪಗಳು ಮೇಲಾದವು ಎನ್ನುತ್ತಾನೆ.

"ಮುನ್ನ ಸಾಮಾಯಕ ತಿಳಿಯೊ
ಭಿನ್ನ ನಾಲ್ಕು ದಾನವ ತಿಳಿಯೊ
ಹನ್ನೊಂದು ಪ್ರತಿಮೆಗಳನು ತಿಳಿಯೊ
ಐವತ್ತಾರು ಕ್ರಿಯೆಗಳ ತಿಳಿಯೊ
ಶ್ರಾವಕರಿಗೆ ಬೇಕಿವು ತಿಳಿಯೊ
ಕೈವಲ್ಯ ಹಾರೂಗೇರಿಯ ತಿಳಿಯೋ"

ಇವುಗಳನ್ನು ಸರಿಯಾಗಿ ಪಾಲಿಸಿದೆಯಾದರೆ ಕೈವಲ್ಯ ನಿನ್ನೊಳಗಿದೆ ತಿಳಿಯೋ ಎಂದು ಶ್ರಾವಕರ ಮಹಿಮೆ ಕ್ರಿಯೆಗಳನ್ನು ಅರುಹುತ್ತಾರೆ. ಪದ ೫೯ ರ ಶ್ರಾವಕರಾಚಾರ ಪದ್ಧತಿಯ ಲಕ್ಷಣ ಮತ್ತು ತತ್ತ್ವಗಳನ್ನು ಕವಿಯು ಸುದೀರ್ಘವಾಗಿ ಬಣ್ಣಿಸಿದ್ದಾನೆ.

ಪ್ರಾಚೀನ ಕಾಲದಲ್ಲಿ ಪದ್ಮನಂದಿ ಎಂಬ ಪ್ರಸಿದ್ಧ ಜೈನಾಚಾರ್ಯರು ಶ್ರಾವಕ ಆಚರಣೆಯ ಕುರಿತು ಹೇಳಿರುವುದನ್ನು ಕೇಳಬೇಕು. ಸಣ್ಣ-ದೊಡ್ಡವರು ಎಂಬ ಚರಣಗಳೊಂದಿಗೆ ಪ್ರಾರಂಭವಾದ ಈ ಪದವು – ವೃಷಭ ಮತ್ತು ಶ್ರೇಣಿಕರಾಜರೆಂಬ ಮೂಲ ಪುರುಷರಿಂದ ಲೋಕದೊಳಗೆ ದಾನ-ಧರ್ಮ-ವ್ರತಗಳು ಜನರಿಗೆ ತಿಳಿಯುವಂತಹವು. ರತ್ನತ್ರಯಗಳಿಂದ ಮೋಕ್ಷವು ಸುಗಮವಾಗಿ ಪ್ರಾಪ್ತವಾಗುತ್ತದೆ. ಇವುಗಳನ್ನು ಪಾಲಿಸದಿರುವವನು ಎಂದೆಂದಿಗೂ ಸುಖವಾಗಿರಲಾರನು. ಶ್ರಾವಕನೆಂಬುವನು ಗೃಹಸ್ಥನಾದರೂ ವ್ರತಿಕನಾಗಿರಬೇಕು. ಶ್ರಾವಕನು ಅಣುವ್ರತಸ್ಥನು, ಮುನಿಯೂ ಮಹಾವ್ರತಸ್ಥ ಶ್ರಾವಕನು ಸಂಸಾರಿಯಾಗಿದ್ದುಕೊಂಡು ವ್ರತಧಾರಿಯಾಗಿ ಧರ್ಮವನ್ನು ಅನುಸರಿಸುತ್ತಿರುತ್ತಾನೆ.

ಮುನಿಯು ಸಂಸಾರ ತ್ಯಾಗ ಮಾಡಿ, ಗೃಹವನ್ನು ತ್ಯಜಿಸಿ ವ್ರತಧಾರಿಯಾಗಿ ಧರ್ಮವನ್ನು ಅನುಸರಿಸುತ್ತಾನೆ. ಆದ್ದರಿಂದ ಶ್ರಾವಕ ಶ್ರಾವಿಕೆಯರು ನಡೆಸುವ ಧರ್ಮವೇ ಶ್ರಾವಕ ಧರ್ಮ. ಮುನಿ ಅಥವಾ ಆರ್ಯಿಕೆಯರು ನಡೆಸುವ ಧರ್ಮಯತಿ ಇಲ್ಲವೆ

ಮುನಿಧರ್ಮ ಶ್ರಾವಕ ಧರ್ಮವು ಸಂನ್ಯಾಸ ಧರ್ಮದ ತಳಹದಿಯಾಗಿದೆ. ಯತಿ ಅಥವಾ ಸಂನ್ಯಾಸ ಧರ್ಮವೇ ಸರ್ವ ವಿಧದಲ್ಲಿ ಸಂಪೂರ್ಣ ಆದರ್ಶಗಳನ್ನು ರೂಪಿಸುತ್ತದೆ. ಅಂದರೆ ಶ್ರಾವಕನು ಸನ್ಯಾಸಿಯಾಗುವುದೇ ಕೊನೆಗೆ ಆದರ್ಶವಾಗಿದೆ. ಶ್ರಾವಕನು ದೇವ, ಶಾಸ್ತ್ರ, ಗುರುಗಳಲ್ಲಿ ಭಕ್ತಿಯುಳ್ಳವನನ್ನು, ದಯೆ ಪೂಜೆಗಳಲ್ಲಿ ಪ್ರೀತಿಯುಳ್ಳವನನ್ನು, ಅಷ್ಟಮದ, ಸಪ್ತ ವ್ಯಸನಗಳಲ್ಲದವನನ್ನು, ವಿದ್ವಾಂಸರು ಜೈನಧರ್ಮದಲ್ಲಿ ಶ್ರಾವಕನೆಂದು ಕರೆಯುತ್ತಾರೆ. ಇಂಥ ನೀತಿಯ ತಳಹದಿಯ ಮೇಲೆ ನಿರ್ಮಿತವಾದ ಶ್ರಾವಕಾಚಾರ್ಯರ ಕಾರ್ಯಾಚರಣೆಗಳನ್ನು ಕವಿ ತನ್ನ ಪದಗಳಲ್ಲಿ ಚೆನ್ನಾಗಿ ನಿರೂಪಿಸಿದ್ದಾನೆ.

ಪದ ೩೮ ರಲ್ಲಿ "ಇಪ್ಪತ್ನಾಲ್ಕು ತೀರ್ಥಂಕರರಿಗೆ ನಮನ" ಎಂಬ ತಲೆಬರಹದಲ್ಲಿ ಶ್ರಾವಕರಿಗೆ ಸದ್ಭಾವ ತಾಳಿ ಅವರಿಗೆ ಭಕ್ತಿಯಿಂದ ನಮನ ಸಲ್ಲಿಸಲು ಕರೆಕೊಟ್ಟಿದ್ದಾನೆ. ಪ್ರಪ್ರಥಮ ತೀರ್ಥಂಕರನಾದ ಆದಿನಾಥನಿಂದ ಹಿಡಿದು ೨೪ ನೆಯ ತೀರ್ಥಂಕರನಾದ ಮಹಾವೀರನವರೆಗೂ ಅವರವರ ಗುಣಧರ್ಮ ಸ್ಮರಣೆ ಮಾಡುವುದರೊಂದಿಗೆ ಪುಣ್ಯ ಪುರುಷರ ಚರಣ ಕಮಲಗಳಿಗೆ ನಮಿಸಿ, ಪ್ರಾರ್ಥನೆ ಸಲ್ಲಿಸಿ ಪುಣ್ಯವನು ಪ್ರಾಪ್ತಿ ಮಾಡಿಕೊಳ್ಳಿರೋ ಎಂಬುದಾಗಿ ಶ್ರಾವಕ- ಶ್ರಾವಕಿಯರಿಗೆ ಹೇಳಿದ ಪದ ಶಿಸ್ತುಬದ್ಧ ಮತ್ತು ಶಾಸ್ತ್ರ ಸಮ್ಮತವೂ ಆಗಿದೆ. ಒಬ್ಬೊಬ್ಬ ತೀರ್ಥಂಕರರ ಸಾಧನೆ - ಸಿದ್ಧಿ ಗುಣ ವಿಶೇಷಗಳ ವರ್ಣನೆಯನ್ನೂ ದ್ವಿಪಾದಗಳಲ್ಲಿ ಬಣ್ಣಿಸಿದ್ದುದು ಕಂಡು ಬರುತ್ತದೆ. "ಚತುರ್ವಿಂಶತಿ ತೀರ್ಥಂಕರಾಳಿಯೊಳ್ ಪ್ರಪ್ರಥಮ ವೃಷಭದೇವನಿಗೆ ಶಿರವು ಬಾಗಿರೋ" ಎಂದು ಆರಂಭಗೊಂಡು, ಅಜಿತನಾಥ, ಸಂಭವನಾಥ, ಸುಮತಿನಾಥ, ಪುಷ್ಪದಂತ, ಶೀತಲ, ಶ್ರೇಯಾಂಶ, ವಾಸುಪೂಜ್ಯ, ವಿಮಲ, ಅನಂತ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತ, ನಮಿನೇಮಿ, ಪಾರ್ಶ್ವನಾಥ, ಮಹಾವೀರನಿಗೆ ನಮನವ ಮಾಡಿರೋ ಎಂದು ಜೈನ ಬಾಂಧವರಲ್ಲಿ ಕರೆಯಿತ್ತಿದ್ದಾನೆ. ೩೯ ನೆಯ ಪದವು ಅತಿ ಚಿಕ್ಕದಾದರೂ "ಶ್ರೀ. ಗುರುವೆ ಕೃಪೆದೋರಿ ಕರುಣಿಸು" ಎಂಬುದಾಗಿ ಶ್ರೀ ಗುರುವಿನಲ್ಲಿ ಹಾರೂಗೇರಿ ಪುರ ವಾಸಿಗಳನು ರಕ್ಷಿಸು ಎಂಬ ಪ್ರಾರ್ಥನೆಯಿದೆ.

೪೦ ನೆಯ ಪದವು - "ಬಂದನು ಕರುಣಾಕರ ಶಾಂತಿ ಸಾಗರನು" ಎಂಬುದು ಇಡೀ ಸಂಕಲನದಲ್ಲಿಯೇ ದೀರ್ಘವಾದ ಪದವಾಗಿದ್ದು ಚೌಪದಿಗಳನ್ನು ಬಳಸಿ ರಚಿಸಿದ ಗೀತೆಯಾಗಿದೆ. ಶಾಂತಿ ಸಾಗರ ಮಹಾರಾಜರು ಜೈನಧರ್ಮ ಪ್ರಸಾರ ಮಾಡುತ್ತ ಊರೂರು ಅಲೆಯುವರು. ಅವರು ಹಾರೂಗೇರಿಗೆ ಬಂದಾಗ ಸಂತಸದಿಂದ ರಚಿಸಿದ ಸಂಗೀತವಿದು. ಶಾಂತಿಸಾಗರರು ಉಪಮಾತೀತ ಮಹಾಮುನಿಗಳು ಮುನಿಧರ್ಮಕ್ಕೆ ಕಳಸಪ್ರಾಯರಾದವರು.

"ಅಸಮ ತೇಜದೊಳ್ ಬೆಳಗುವ ಶ್ರೀ ಜಿನ
ರಸಿಕ ಬೋಧಮಯವಾಗುವನವನೆ

ಹಸನುಳ್ಳ ಭಕ್ತಿಗೆ ಮೋಕ್ಷವ ನೀಡಲು
ವಸುಧಿಗೆ ತೀರ್ಥಂಕರ ನಾಮಾಂಕಿತ।"[೧೦]

ಇಂಥ ಮಹಾಮಹಿಮನು ಹಾರೂಗೇರಿ ಪುರಕ್ಕಾಗಮಿಸಿ ಬೆಳಗಿದಂತಹ ಕರುಣಾಕರನು ಶ್ರೀ ಶಾಂತಿಸಾಗರನು ಎಂದು ಹೃದಯದುಂಬಿ ಹಾಡಿದ್ದಾನೆ ಕವಿ. ಇವರನ್ನೇ ಕುರಿತಾದ ಪದ ೪೨ರಲ್ಲಿ "ಇವರೇ ನಿಜವಾದ ಸಾಧು ಮುನಿಗಳು" ಎಂಬುದರಲ್ಲಿಯೂ ಶಾಂತಿಸಾಗರರ ಮಹಿಮೆಯ ಗುಣಗಾನವಿದೆ.

ಕವಿಯು ತನ್ನ ಜನಸಮುದಾಯಕ್ಕೆ ಕರೆ ಕೊಡುತ್ತಿದ್ದುದು ಹೀಗೆ 'ಜಿನತತ್ವವ ತಿಳಿದು ಸುಖಿಯಾಗು' ಎಂಬೀ ಪದದಲ್ಲಿ ಮಾರ್ಮಿಕಾರ್ಥದಲ್ಲಿ ವಿಡಂಬನೆಯಿದೆ. ಜಿನಧರ್ಮದೊಳಗೆ ಹುಟ್ಟಿ ಬಂದ ಮೇಲೆ ಅದರರ್ಥವ ತಿಳಿದುಕೊಂಡು ಆಚರಿಸುವಂತವನಾಗು. ಶ್ರಾವಕ ಧರ್ಮವನು ಪಾಲಿಸು ಮಹಾಮುನಿಗಳು ತೀರ್ಥಂಕರಾದಿಗಳು ಜಿನಧರ್ಮಗಳನ್ನು ಬಿತ್ತರಿಸಿ ಬಿತ್ತಿ ಹೋಗಿದ್ದಾರೆ. ಅವುಗಳನ್ನು ಅರಿತು ಆಚರಿಸುವುದೊಂದೆ ನಮ್ಮ ಆದ್ಯ ಕರ್ತವ್ಯವಾಗಬೇಕು. ವಿಶ್ವದಲ್ಲಿಯೇ ಶ್ರೇಷ್ಠ ಮತ್ತು ಪವಿತ್ರವಾದ ಧರ್ಮ ಜಿನಧರ್ಮವಾಗಿರಲು, ಅನ್ಯಧರ್ಮಕ್ಕೇಕೆ ಆಯಾಸ ಪಡುವಿ! ಎಂದು ಪ್ರಶ್ನಿಸುವನು.

ಉದಾಹರಣೆಗಾಗಿ ಆತನ ಪದದಲ್ಲಿರುವ ಸಾಲುಗಳನ್ನು ನೋಡಿ.

"ಹಲಗು ರಾತ್ರಿ ಹೊಟ್ಟಿಗೊಟ್ಟಿ
ಬಟ್ಟೆಗಾಗಿ ದುಡಿದು ಕೆಟ್ಟಿ
ಜಿನದೇವನ ಮರೆತು ಬಿಟ್ಟಿ
ಮುಸಿ ಮಾಯದಹಂಕಾರ ತೊಟ್ಟಿ
ನಿನ್ನೆದರೆಷ್ಟಿರುವದು ಖೊಟ್ಟಿ
ಮಹಾಮಂತ್ರವ ಜಪಿಸದೆ ಬಿಟ್ಟಿ
ಇನ್ನರ ತಿಳಿಯೋ ಭವಬಾಧೆ ಅಳಿಯೊ।"[೧೧]

ಜೈನ ಧರ್ಮದಲ್ಲಿ ಒಳ್ಳೆಯದು ಸಾಕಷ್ಟಿರಲು, ಅನ್ಯದೇವರಿಗೆ ಅನ್ಯಧರ್ಮಕ್ಕೆ ಮನಸಿಟ್ಟಿ: ಮಿಥ್ಯಾದೇವರಿಗೆ ನಡೆದುಕೊಳ್ಳುವದಕ್ಕಿಂತಲೂ ಹಾರೂಗೇರಿಯೊಳಿರುವ ಆದಿನಾಥನಿಗೆ ನಡೆದುಕೋ, ಅರಹಂತನ ನೆನೆಯೋ ಆತನಿಗೆ ಮಣಿಯೋ ಎಂದು ಶ್ರಾವಕರಿಗೆ ಕಿವಿಮಾತು ಹೇಳಿರುವುದನ್ನು ಈ ಪದದಲ್ಲಿ ಕಾಣುತ್ತೇವೆ. ಜೈನ ಮತದ ಬಗೆಗಿರುವ ಕಾಳಜಿ, ಅನನ್ಯ ಪ್ರೀತಿ ಎದ್ದು ಕಾಣುತ್ತದೆ.

ಪದ ೪೩ ರಲ್ಲಿ "ಭಕ್ತಿಯಿಂದ ಭಜಿಸುವವರಿಗೆ ಮುಕ್ತಿಯು ದೂರಿಲ್ಲ" ಎಂಬುದರ ಮುಖಾಂತರ ಜಿನಧ್ಯಾನವನು ಭಕ್ತಿಯಿಂದ ಮಾಡಿರಿ. ನಿಜಧರ್ಮದ ನೀತಿಯನು ತಿಳಿ, ತೀರ್ಥಂಕರರು ಭಯಂಕರ ತಪವನು ಮಾಡಿ ಜೀವನ್ಮುಕ್ತಿ ಹೊಂದಿ ನಮಗೆ ತತ್ತ್ವಗಳನ್ನು ರಚಿಸಿ ಅಮರರಾಗಿದ್ದಾರೆ. ಅವನ್ನು ಸ್ವಾಧ್ಯಾಯ ಮಾಡಿಕೊಂಡು ಮುನಿವರ್ಯರ ಮುಖವಾಣಿಯಿಂದ ಪ್ರವಚನವನ್ನು ಸವಿದು ಅದರಂತೆ ನಡೆಯುವಂತಹ ಧೀರ ಜಿನಮಣಿಗಳಾಗೋಣವೆಂಬುದಾಗಿ ಶ್ರಾವಕರಿಗೆ ಹೇಳಿದ ಈ ಮಾತು ಸಂಸಾರದಿಂದ ವಿಮುಖರಾಗಿ ಸದ್ಗತಿ ಹೊಂದಬೇಕೆಂಬ ಕಳಕಳಿಯಿದರಲ್ಲಿದೆ. ಮುಂದಿನ ಪದದಲ್ಲಿಯೂ ಸಂಸಾರವೆಂಬ ಅಬ್ಧಿಯಲ್ಲಿ ಬಿದ್ದು ಹೊರಳಾಡಬೇಡ: ಮನುಷ್ಯರಾಗಿ ಹುಟ್ಟಿ ಬಂದ ಮೇಲೆ ಅದನ್ನು ಸಾರ್ಥಕ ಪಡಿಸಿಕೊ ಎಂಬುದಾಗಿ ಪದ ೪೮ ರಲ್ಲಿ ನರಜನ್ಮ ಸಾರ್ಥಕ ಮಾಡಿಕೊಳ್ಳು ಎಂದು ಪ್ರೇರೆಪಿಸಿದ್ದಾನೆ.

ಪದ ೪೧ ರಲ್ಲಿ "ನೀನು ನಂಬಿದ ಡಂಬಾಚಾರದಿಂದ ಸುಖವಿಲ್ಲ" ಎಂದು ಅತಿ ಕಿರಿಯ ಸಾಲುಗಳಲ್ಲಿ ಹಿರಿದಾದ ಅರ್ಥವುಳ್ಳ ವಿಷಯ ಪ್ರತಿಪಾದಿಸಿದ್ದುದು ಈ ಕವಿಯ ವಿಶೇಷತೆ. ಒಂಬತ್ತು ತೂತಿನದು ಈ ದೇಹ ತುಂಬಿಕೊಂಡಿರುಹುದು ಹೇಯಾ ಆದರೂ ಜಂಭ ಮಾಡುವುದು ಬಲು ವೈಯ್ಯಾರದಿಂದ ಮಡದಿ-ಮಕ್ಕಳ ಸಲುವಾಗಿ ರಾತ್ರಿ ಹಗಲೂ ದುಡಿದು ಸಂಗ್ರಹಿಸಿಟ್ಟ ಎಲ್ಲವನ್ನು ಬಿಟ್ಟು ಹೊಂಟಿ: ಕೊನೆಗೂ ಕಾಣಲಿಲ್ಲ ಗುರುವಿನ ಪಾದ ಮತ್ತು ಸದ್ಗುರುವಿನ ವಾಣಿಯನ್ನು ಸವಿಯಲಿಲ್ಲ. ಇದೆಲ್ಲವೂ ಖಾಲಿ ಮನಿ ಎಂಬ ವಿಡಂಬನೆಯಿದೆ. ಅದರಿಂದ ದುಡಿಯುವುದೇನೋ ಸರಿ ಆದರೂ ಧರ್ಮದನುಸಾರವಾಗಿ ದಾನ-ಧರ್ಮವನು ಮಾಡಿಯಾದರೂ ಪುಣ್ಯ ದೊರಕಿಸಿಕೊ ಎಲೆ ಶ್ರಾವಕನೆ! ನರಜನ್ಮದ ಉದ್ಧಾರಕ್ಕೆ ಸಾಧು-ಸಂತರ ಸಹವಾಸ ಯೋಗ್ಯವೆಂಬುದಾಗಿ ಪದ ೪೩ ರಲ್ಲಿ ಪ್ರತಿಪಾದಿಸಿದ್ದಾನೆ.

ಹಸನುಳ್ಳ ಮನಸ್ಸು ಬೇಕು: ಸಾಧು ಸಂತರ ಸಹವಾಸ ಮಾಡೋದಕ್ಕೆ, ಗುಣವಂತ ಗೆಳೆಯರ ಗೆಳೆತನ ಮಾಡುವುದು, ಸದ್ಗುರುವಿನ ಕೃಪೆಯನ್ನು ಪಡೆಯಲು ಹಂಬಲಿಸುವುದು. ಗುರುವಿನ ಬೋಧಾಮೃತವ ಸವಿದು ಅವರು ಹೇಳಿದಂತೆ ನಡೆದುಕೊಂಡು ನರಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಕೊಟ್ಟ ಕರೆ ಜೈನರಿಗೂ ಜೈನೇತರರಿಗೂ ಮಾರ್ಗದರ್ಶಕವಾಗಿದೆ.

ಶ್ರೀ. ಜಿನಭಕ್ತಿ ಗೀತೆಗಳು ೯೨ ಪುಟಗಳುಳ್ಳ ಪುಟ್ಟ ಕೃತಿ. ಮೇಲ ನೋಟಕ್ಕೆ ಇದು ಶ್ರೀ. ಜಿನಭಕ್ತಿ ಗೀತೆಗಳು ಎಂಬ ಶೀರ್ಷಿಕೆ ಹೊಂದಿದ್ದು ೭೧ ಪದಗಳನ್ನು ಒಳಗೊಂಡಿದೆ. ಇದರಲ್ಲಿ ೫೫ ಜಿನಭಕ್ತಿ ಗೀತೆಗಳು, ಉಳಿದವು ೩ ಮಂಗಳಾರತಿ, ೨ ಜೋಗುಳ ಪದ, ೮ ಲಾವಣಿಗಳು, ೩ ಸಖಿ ಗೀತೆಗಳನ್ನು ಒಳಗೊಂಡಿದೆ. ಇದು ಈ ಕವಿಯ ಪ್ರಕಟವಾದ ಮೊದಲ ಕೃತಿ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಇದು ವೈಜ್ಞಾನಿಕವಾಗಿ ವರ್ಗೀಕರಣಗೊಳ್ಳದೆ

ಇದ್ದರೂ ಇದರ ಮೌಲ್ಯ ಮಾತ್ರ ಕಡಿಮೆಯಿಲ್ಲ. ಇಲ್ಲಿರುವ ಗೀತೆಗಳು ಮಾತ್ರ ಜೈನರಿಗಷ್ಟೇ ಏಕೆ ಜೈನೇತರರಿಗೂ ಮಾರ್ಗದರ್ಶನ ನೀಡುವಂತಿವೆ. ಜೈನ ಧರ್ಮದ ಬೋಧಾಮೃತದ ಕೆನೆಹಾಲು ಇದಾಗಿದೆ. ಹಾರೂಗೇರಿಯ ಭಜನಾ ಮಂಡಳಿಯವರು ಸದಾಕಾಲವೂ ಚಪ್ಪರಿಸುವ ಗೀತಗುಚ್ಚವಿದು. ಭಕ್ತಿಗೆ ಸ್ಫೂರ್ತಿ ನೀಡುವ ಅಮೃತ ಸೆಲೆಗಳಿವು. "ಮುನಿಕುಲಕ್ಕೆ ಅನಿಮಿತ್ಯ ಬಾಂಧವ್ಯ, ಮತ್ತು ಯೋಗಿವರನಲ್ಲಿ ಆಕ್ರಂಧನ, ಅರಹಂತನೇ ದಯವನ್ನು ತೋರು, ಎನ್ನಪರಾಧವನ್ನು ಕ್ಷಮಿಸು-ಪಾಲಿಸು, ನಿನ್ನ ಹೊರತು ಆರುಗತಿ ದೇವಾ, ನೀನು ದಯಮಾಡಿದರೆ, ನಾನು ಹರುಷಾಗುವೆ... ಭಕ್ತರ ಕೈವಲ್ಯ ನಿಧಿಯೇ, ಬೇಗ ಬಾ, ಧರ್ಮ-ಅಧರ್ಮದ ಮರ್ಮವನು ತಿಳಿಸು, ಅರಹಂತನೇ ಎನ್ನನು ಉದ್ಧರಿಸು.

ಶ್ರೀ ಜಿನೇಶ್ವರನೆ ನನ್ನನ್ನು ದಾಸನನ್ನಾಗಿ ಸ್ವೀಕರಿಸು, ದಯವಂತನೆ ಭಯ ನಿವಾರಿಸಿ ಪಾಲಿಸು, ದೇವಾ ನಿಮ್ಮ ಪಾದ ಸೇವೆಯನು ಕರುಣಿಸು, ಭವಹರ ದೇವಾ ತಮ್ಮ ಸುಬೋಧ ಸಾರವನ್ನು ಅರುಹಿರಿ, ಜಿನದೇವಾ ನೀನೊಲಿದರೆ ಸಾಕು, ದೇವಾ ನಿಸ್ವಾರ್ಥ ಪ್ರೇಮ ತೋರಿ ಬದುಕಿಸು, ಶ್ರೀ. ಆದಿನಾಥಾ ಪುರಾಣ ಪುರುಷ ನೀನೆಸಿದ ಪಾರ್ಥಾ. ಜಿನವಾಣಿ ಸುಬೋಧ ಸುಖಮಯ ಖಣಿ, ಮಾಯಾ ಮೋಹದ ಬಲೆಯಿಂದ ನನ್ನನ್ನು ಸಲಹು, ಶ್ರೀ ಜಿನರಾಯಾ ಬೇಗನೇ ಬಾರೋ, ಶ್ರೀ. ಜಿನದೇವನ ಭಜನೆಯ ಮಾಡಬಾರದೇ? ಮಾನವಾ ಮುಕ್ತಿವಲ್ಲಭನನು ಸ್ಮರಿಸು, ಮನವೇ ಘನ ಚಿದಾನಂದನನು ಸ್ಮರಿಸು, ಅರಹಂತನ ಸ್ಮರಣೆಯ ಮಾಡಿರಿ, ಧರ್ಮಧ್ಯಾನದಲ್ಲಿ ಬ್ರಹ್ಮರೂಪ ಕಾಣು, ಕೇಳ ಜಿನಧರ್ಮದ ಪದ್ಧತಿ, ಮಾನವ ಜನ್ಮಕ್ಕೆ ಜಿನ ಧ್ಯಾನವೇ ಮೇಲು, ಜಿನವಾಣಿ, ಘನ ಸುಬೋಧದ ಖಣಿ, ಸ್ವಧರ್ಮದ ನಡೆ ನುಡಿಗಳನು ದೃಢವಾಗಿ ನಂಬು ಈ ಮುಂತಾದ ಗೀತೆಗಳಲ್ಲಿ ಜಿನಭಕ್ತಿಯ ಮಹಿಮೆಯಿದೆ. ಆರ್ತ ಭಕ್ತಿಯ ಕಳಕಳಿಯಿದೆ. ಪ್ರತಿಯೊಬ್ಬ ಜಿನಭಕ್ತನು ಪ್ರಾರ್ಥಿಸಿಕೊಂಡದ್ದೇನೆಂದರೆ, ವಿವಿಧ ಮಾಯಾ-ಮೋಹ - ಮಮಕಾರಗಳಿಗೆ ಮರುಳಾಗುವುದು. ತಿಳಿದೊ-ತಿಳಿಯದೋ ಮಾಡಿದ ತಪ್ಪು ಎನ್ನದು. ಕರುಣಾಕರನೆ, ದಯಾಸಾಗರ, ಅರಹಂತನೇ, ತೀರ್ಥಂಕರನೇ ನನಗೆ ಈಗ ಅರಿಕೆಯು ಬಂದಿದೆ. ನೀನು ಹೇಳುವಂತಹ ಜಿನಧರ್ಮದ ತತ್ವಗಳಲ್ಲಿ ನಂಬಿಕೆಯಿಟ್ಟು ಸಂಸಾರದಲ್ಲಿ ಯಾರಿಗೂ ಅನ್ಯಾಯವೆಸಗದಂತೆ ನಡೆಯುವೆನು. ನಾನು ಇಲ್ಲಿಯವರೆಗೂ ಮಾಡಿದ ತಪ್ಪುಗಳನ್ನು ಮನ್ನಿಸು ಮತ್ತು ಧ್ಯಾನದ ಕಡೆಗೆ ಚಿತ್ತವಿರುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸಿಕೊಂಡ ಬಗೆಯಿದೆ. ಮೇಲ್ಕಾಣಿಸಿದ ಸುಮಾರು ಮೂವತ್ತು ಗೀತೆಗಳಲ್ಲಿ ಇದೇ ಪ್ರಾರ್ಥನೆ, ದೈನ್ಯತಾಭಾವವು ಹರಿದು ಬಂದಿದೆ. ಎನ್ನನು ದಾಸನ ಮಾಡಿಕೋ ನಿನ್ನ ಹೊರತು ನಾನು ಅನ್ಯ ದೈವಂಗಳನ್ನು ಕನಸು-ಮನಸ್ಸಿನಲ್ಲಿಯೂ ಸ್ತುತಿಸುತ್ತಿಲ್ಲ, ನೀನೆ ನನಗೆ ದೈವ ಎಂಬುದು ಪ್ರತಿಯೊಬ್ಬ ಜಿನಭಕ್ತನ ಆರ್ತ ಪ್ರಾರ್ಥನೆ ಈ ಪದಗಳಲ್ಲಿ ಎದ್ದು ಕಾಣುವ ಅಂಶ. ನಿನ್ನ ನಾಮದ ಮುಂದೆ ಯಾವುದೂ ಶ್ರೇಷ್ಠವಲ್ಲ. ನೀನೇ ಮಿಗಿಲಾದವನು ಎಂದು ಹೇಳುವ ಗೀತ ಮಾಧುರ್ಯ ಹಾಸುಹೊಕ್ಕಾಗಿದೆ.

"ಲೆಕ್ಕ ಮಾಡಿದಿ ರೊಕ್ಕಾ
ರೊಕ್ಕದಿಂದಲೆ ಸೊಕ್ಕಾ
ಸೊಕ್ಕಿನಿಂದಲೆ ದುಃಖ ಬಲುಮುಂದೆ ।
ರೊಕ್ಕ ದಿಕ್ಕುಗಳುಳ್ಳ
ಒಕ್ಕಲ ಮುರಿದೊಮ್ಮೆ
ಹಕ್ಕಲವಾಗುವುದು ಚಿಕ್ಕ ಮನುಜಾ ॥
ಕೆಡಬೇಡ ಸ್ವಧರ್ಮದ ನಡೆನುಡಿ।"೨೨

ಸಾಧು-ಸಂತರ, ಅರಹಂತರ- ತೀರ್ಥಂಕರರ ಪಾದ ತೀರ್ಥವನು ಸೇವಿಸದೆ ಅವರನ್ನು ಸ್ತುತಿಸದೆ ವ್ಯರ್ಥ ಸಮಯವನ್ನು ಕಳೆದೆವು. ಇನ್ನು ಮೇಲಿಂದ ಜಿನಧರ್ಮದ ಧ್ಯಾನದಲ್ಲಿಯೇ ಮಗ್ನರಾಗಿ ನಿಮ್ಮ ಪ್ರಾರ್ಥನೆಯನ್ನು ಸದಾಕಾಲವೂ ಮಾಡುವೆವು ಎಂಬ ಆರ್ತಭಕ್ತಿಯ ತೀವ್ರತೆ ಪ್ರತಿಯೊಂದು ಗೀತೆಯಲ್ಲಿ ವ್ಯಕ್ತವಾಗಿದೆ. ಜಡಮತಿಗಳ ಸಂಗವನು ಮಾಡದೆ ಮುನಿಗಳ ಸೇವೆಯನ್ನು ಅನುದಿನ ಮಾಡುವೆನು, ಎನ್ನುವ ರೀತಿಯಲ್ಲಿ ವಿನಮ್ರಭಾವದ ನುಡಿಗಳು ಈ ಪದಗಳಲ್ಲಿ ಬಳಕೆಗೊಂಡು ಭಜನಾ ಹಾಡುಗಾರರಿಗೆ ಕೇಳುಗರಿಗೆ ಇನ್ನಷ್ಟು ಹುರುಪು-ಹುಮ್ಮಸ್ಸು ಭಕ್ತಿಯ ಪರಿಮಳವನ್ನು ಬೀರಿವೆ.

"ಜಿನವಾಣಿ ಘನ ಸುಬೋಧದ ಖಣಿಯೇ" ಇರುವಾಗ ಅನ್ಯಧರ್ಮಕೆ, ಅನ್ಯದೇವಗೆ ಎರಗುವೆಯೇಕೆ? ಎಂದು ಕೇಳುವ ಎಚ್ಚರಿಕೆಯ ಪದ ಯಾರಿಗಾದರೂ ಅಪ್ಯಾಯಮಾನವೇ ಸರಿ. ದುರಿತ ಕರ್ಮವನು ಮಾಡಿ, ಮರವಿನೊಳು ಕೂಡಿ, ಪರಿಪರಿಯ ಚೇಷ್ಟೆಯನ್ನು ಬಲು ಹರುಷದಿಂದ ಮಾಡುತ್ತ, ಮಡದಿ ಮಕ್ಕಳೊಡನೆ ಹುಡದಿ ಹಾಕುತ್ತ ಮೋಹಕ್ಕೆ ಸಿಲುಕಿ ಅನಂತ ಕಾಲ ಈಸುಬಿದ್ದು ಮರುಳಾದೆನು. ನಿನ್ನ ಧ್ಯಾನದಿಂದ, ಅನುಸಂಧಾನದಿಂದ, ಜಿನ ಪ್ರತಿಬಿಂಬಕ್ಕೆ, ವಂದಿಸುವುದರಿಂದ ತಿಳುವಳಿಕೆ ಪ್ರಾಪ್ತವಾಗಿದೆ. ಇನ್ನು ಮೇಲಿಂದ ನಿನ್ನ ಸ್ತುತಿಯೇ, ಧ್ಯಾನವೇ ಗತಿಮತಿಯೆನಗೆ ಎಂಬ ಭಕ್ತಿಯ ಹೊನಲು ಈ ಪದಗಳಲ್ಲಿ ತುಂಬಿದೆ.

ಈ ಸಂಕಲನದಲ್ಲಿರುವ ಕೆಲವು ಪದಗಳು, ಕರ್ಣ ಮಾಧುರ್ಯ, ಅರ್ಥವಂತಿಕೆಯಿಂದ ಕೂಡಿವೆ. ಭಜನೆಗೆ ತಕ್ಕಂತಿವೆ, ಎಲ್ಲ ಪದಗಳೂ ಪ್ರಾಸಬದ್ಧ ಮತ್ತು ಪ್ರಾದೇಶಿಕ ನಡೆ-ನುಡಿ-ಪರಿಸರದ ಪದಗಳ ಬಳಕೆಯು ಈ ಗೀತ ಮಾಧುರ್ಯಕ್ಕೆ ಕಳೆತಂದಿವೆ. ಗ್ರಾಮೀಣ ಪರಿಸರದ ಭಾಷೆಗೆ ಸೊಗಸು ತಂದಿವೆ. ಅಲ್ಲಲ್ಲಿ ಮರಾಠಿ ಪದಗಳ ಬಳಕೆಯಿದೆ. ಹಿಂದಿನಿಂದಲೂ ಹಾರೂಗೇರಿ ಗ್ರಾಮದ ಜನ ಮಹಾರಾಷ್ಟ್ರದ ಬೇರೆ ಬೇರೆ ಗ್ರಾಮಗಳಿಗೆ ವಾಣಿಜ್ಯೋದ್ದೇಶಕ್ಕಾಗಿ ಹೋಗಿ ಬಂದು ಮಾಡುತ್ತಿದ್ದರಿಂದಲೂ, ಹಾಗೂ ಸ್ವಾತಂತ್ರ್ಯ ಪೂರ್ವದಲ್ಲಿ ಉತ್ತರ ಕರ್ನಾಟಕದ ಹೆಚ್ಚುವರಿ ಭಾಗವು-ಮುಂಬಯಿ ಕರ್ನಾಟಕ- ಮಹಾರಾಷ್ಟ್ರದ ಜೊತೆ ಹೆಚ್ಚು ನಂಟು ಹೊಂದಿದ್ದರಿಂದಲೂ, ಈ ಭಾಗದ ಜನತೆ ತಮ್ಮ ಆಡು ನುಡಿಯಲ್ಲಿ ಮರಾಠಿ

ಭಾಷೆಯ ಶಬ್ದಗಳನ್ನು ಬಳಸುತ್ತಾರೆ. ಅಂತೆಯೇ ಈ ನಾಡಿನ ಕವಿಯಾದ ಅಲಭ್ಯೆರಿಯೂ ಕೂಡ ತಾನು ರಚಿಸಿದ ಪದ, ಬಯಲಾಟಗಳಲ್ಲಿ ಅಲ್ಲಲ್ಲಿ ಮರಾಠಿ ಶಬ್ದಗಳನ್ನು ಬಳಸಿದ್ದಾನೆ. ಇದೊಂದು ಭಾಷಾ ಬಾಂಧವ್ಯದ ಕೊಡುಗೆಯೆಂದೇ ಹೇಳಬೇಕು. ತಾತ್ವಿಕ ನೆಲೆಗಟ್ಟಿನ ಮೇಲೆ ನಿಂತ ಈ ಜಿನಗೀತೆಗಳು ಸರ್ವಧರ್ಮದ ಸಮನ್ವಯವನ್ನು ಬಿತ್ತರಿಸುವಲ್ಲಿ ಮುಂಚೂಣಿಯಲ್ಲಿವೆ.

ಈ ಸಂಕಲನದ ಪುಟ ೫೫ ರಲ್ಲಿ ಈ ಕವಿಯೇ ಹೇಳಿರುವಂತೆ ೧೯೩೩ ರಲ್ಲಿ ಹಾರೂಗೇರಿಯ ಬಸದಿಯಲ್ಲಿ ಚಂದ್ರನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವವನ್ನು ಆಚರಿಚಸಲಾಗಿತ್ತು. ಅದು ಈಗಿರುವ ಆದಿನಾಥ ದಿಗಂಬರ ತೀರ್ಥಂಕರನ ಜಿನ ಬಿಂಬದ ಸಭಾ ಭವನದಲ್ಲಿ ನಡೆದಿದ್ದ, ಈ ಮಹೋತ್ಸವದಿಂದ ಜಿನ ಜಾಗ್ರತೆ, ಜನಜಾಗೃತಿಯೂ ಆಯಿತೆಂದು ಕವಿಯು ಹೇಳಿಕೊಂಡಿದ್ದು, ಹೀಗೆ;

> "ಭೂಷಣಾ ತಂಗಿ ಭೂಷಣಾ
> ಹಾರೂಗೇರಿಗೆ ಒಳೆ ಭೂಷಣಾ ॥ಪ॥
> ವಸುಧಿಗೆ ಮೇಲಾದ ಹಸನುಳ್ಳ ಜಿನಧರ್ಮ
> ಅಸಮತೇಜ ಬಲು ಭೂಷಣಾ ।
> ಘನವಾದ ಹಾರೂಗೇರಿ ಜಿನ ಮಂದಿರದೊಳು ।
> ಮುನಿಗಳು ಬಂದದ್ದು ಭೂಷಣಾ।
> ಅನುದಿನ ಶ್ರಾವಕ ಜನರೆಲ್ಲರೊಡಗೂಡಿ
> ಮನಮುಟ್ಟಿ ದುಡಿದದ್ದು ಭೂಷಣಾ ।"[೧೩]

ಎಂಬುದಾಗಿ ಅಲ್ಲಿಯ ಜನತೆ ಈ ಕಾರ್ಯಕ್ರಮದಲ್ಲಿ ಹರುಷದಿಂದ ಭಾಗಿಯಾಗಿದ್ದುದನ್ನು ಗಮನಿಸಿ ಕವಿ ವರ್ಣಿಸಿದ್ದನ್ನು ಗಮನಿಸಲೇ ಬೇಕಾದ ಅಂಶ. ಜನ ಮನ ಪರಿವರ್ತನೆ ಮಾಡಿದ ಕಾರ್ಯಕ್ರಮವಿದು ಎಂಬುದನ್ನು ಅರಿಯಬಹುದಾದ ಸಂಗತಿಯಿದು. ಮುಂದೆ ೫೮ ನೆಯ ಪದದಲ್ಲಿ ಪಂಚಕಲ್ಯಾಣ ಮಹೋತ್ಸವದ ಜಿನಧರ್ಮಕ್ಕನುಸರಿಸಿ ಆಚರಿಸಿದ ಮಹಿಮೆಯ ವರ್ಣನೆಯಿದೆ. ಪದ ೫೪ ಮತ್ತು ೫೫ ರಲ್ಲಿ ಆದಿ ತೀರ್ಥಂಕರ ವೃಷಭದೇವನ ಮಂಗಲ ಮೂರ್ತಿಯನ್ನು (ಜಿನಬಿಂಬವನ್ನು) ತೊಟ್ಟಿಲಲ್ಲಿ ಹಾಕಿ ತೂಗುವ, ತೂಗಿ ಆನಂದ ಪಡುವ ಜೋಗುಳ ಹಾಡುಗಳಾಗಿವೆ. ಆ ಹಾಡಿನಲ್ಲಿ ವೃಷಭನಾಥನ ಜೀವನ ಚರಿತ್ರೆಯಿದೆ.

"ತೂಗಿರೆ ಶ್ರೀ ವೀತರಾಗ ವೃಷಭನಾಥ ಯೋಗಿ ಜಿನೇಶನ ತೂಗಿರೆ" ಎಂಬ ಪಲ್ಲವಿಯೊಂದಿಗೆ ಪ್ರಾರಂಭವಾಗಿ ಹಸನುಳ್ಳ ಹಾರೂಗೇರಿ ಹೊಸ ಚೈತ್ಯಾಲಯದೊಳು ಅಸಮಾಕ್ಷ ವೃಷಭನ ತೂಗಿರೆ ಎಂಬುದರೊಂದಿಗೆ ಈ ಪದವು ಮುಕ್ತಾಯವಾಗುತ್ತದೆ.

ಪದ ೫೯ ರಲ್ಲಿ ದೇವಸ್ತುತಿಯಿದ್ದರೆ, ಪದ ೫೭, ಜಿನಧರ್ಮದ ಮಹಿಮೆಯನ್ನು ವ್ಯಕ್ತಪಡಿಸುವ ಪದವಾಗಿದೆ. ಸರ್ವಧರ್ಮಗಳಲ್ಲಿ ಜಿನಮತವೇ ಮೇಲು ಎಂಬ ತುಡಿತವಿರುವ ಗೀತವಿದು. ಅನಂತರದ ಪದವು ಮೂರ್ತಿ ಪೂಜಾ ಮಹಿಮೆಯನ್ನು ವಿವರಿಸುತ್ತದೆ. ಆದಿನಾಥನ ಭಾವಚಿತ್ರದ ಮಹಿಮೆ. ಆತನ ಜನನ, ಧ್ಯಾನ, ಧರ್ಮ, ತತ್ತ್ವದ ಪ್ರಸಾರ, ತೀರ್ಥಂಕರನಾದ ಬಗೆ ಈ ವಿವರವೆಲ್ಲವೂ ಈ ಪದದಲ್ಲಿ ಎರಕ ಹೊಯ್ಯಲಾಗಿದೆ. ಗೀತ ೬೦ ರಲ್ಲಿ ಜೈನಧರ್ಮದಲ್ಲಿಯೇ ಪರಮ ಪವಿತ್ರ ಮತ್ತು ಶ್ರೇಷ್ಠವಾದ ತತ್ತ್ವದ ಮಹಿಮೆಯನ್ನು ಸಾರುವ ಸಂದೇಶ ಬೀರುವ ಸಂಗತಿಯಿದೆ. ಅದುವೆ "ಅಹಿಂಸಾ ಪರಮೋ ಧರ್ಮ" ಎಂಬುದಾಗಿದೆ. ಇದೊಂದು ಲಾವಣಿ. ಸರ್ವಧರ್ಮಗಳಲ್ಲಿ ಜಿನಧರ್ಮವೇ ಶ್ರೇಷ್ಠವಾದುದು. ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಮಹಾತ್ಮ ಗಾಂಧೀಜಿಯವರು ಅಹಿಂಸಾ ಧರ್ಮವನ್ನೇ ಪಾಲಿಸಲಿಲ್ಲವೆ? ಎಂದು ಹೇಳುತ್ತ ಅಲಭೈರಿಯು ಹೀಗೆ ಹೇಳುತ್ತಾನೆ.

"ಶ್ರಾವಕ ಜನಗಳೆ ಕೇಳಿರಿ ನೀವು ಭಕ್ತಿ ಪೂರ್ವಕ ಚಿತ್ತಿಟ್ಟಾ
ಜಗದೊಳು ಹೆಚ್ಚಿನ ಧರ್ಮದ ಪೈಕಿ ಜೈನ ಧರ್ಮ ಒಂದೇ ಶ್ರೇಷ್ಠಾ ।ಪ।
ಆತ್ಮನಲ್ಲಿ ರಾಗ ದ್ವೇಷಾದಿ ವಿಕಾರ ದೋಷವಾಗಲು ಉತ್ಪನ್ನಾ
ಅದುವೇ ಹಿಂಸೆ ಎಂದು ತಿಳಿದದ್ದೀ ಧರ್ಮವು ಅಂದ ಬಳಿಕ ಎಷ್ಟಿದು ಹಸನಾ
(ಚಾಲ) ತಾನಾವ ಪ್ರಕಾರದ ದ್ವೇಷವಿಲ್ಲದಂಥಾದ್ದು ಅಹಿಂಸಾ ತತ್ತ್ವವಿದ್ದದ್ದು ।೧।
ಆ ತತ್ತ್ವಕ್ಕನುಸರಿಸಿ ಜೈನಧರ್ಮವಾದದ್ದು ಸನಾತನದಿಂದಲೇ ಬಂದದ್ದು ।೨।
ವೇದಾಗಮ ಪುರಾಣದೊಳಗೆ ವರ್ಣಿಸಿಕೊಂಡದ್ದು
ಸರ್ವರಿಗೆ ಒಳ್ಳೆಯದಾಗಿದ್ದು।೩।
ಅಹಿಂಸಾ ಪರಮೋಧರ್ಮ ಜೈನಧರ್ಮಕ್ಕೊಂದೆ ಸಲ್ಲಿಸಿತು
ಉಳಕಿಯ ಧರ್ಮವು ಯಳಕವಿದರಕ್ಕಿಂತ ಹಿಂಸಾ ಮಾಡುವುದರಿಂದೆ ಘಾತು.
ಬ್ರಾಹ್ಮಣ ಕ್ಷತ್ರಿಯ ಮುಖ್ಯ ಧರ್ಮದೊಳು ವಿಚಾರ ಮಾಡಲು ಯಾಹೊತ್ತು
ಅಜಗಜ ಅಶ್ವನರ ಮೊದಲಾದ ಪ್ರಾಣಿಬಲಿ ಕೊಡುವದು ಬೇಕಾಯ್ತು
ಅಂದ ಬಳಿಕ ಸುಡು ಯಾತರಧರ್ಮವಿವು ನೀವೆ ಮಾಡಿರಿ ಕಿಮ್ಮತ್ತು!"[೧೪]

ಹೀಗೆ ಕವಿಯು ಅಹಿಂಸಾ ತತ್ವದ ಮಹಿಮೆಯನ್ನು ಇಂದಿನ ಸಂದರ್ಭದಲ್ಲಿ ಪ್ರಸ್ತುತಪಡಿಸಿದ್ದು ಸೂಕ್ತವಾಗಿದೆ. ಜೂಜು, ಮೋಜು, ಕುಡಿತ, ಮಾಂಸ ಸೇವನೆ, ಗುಟಕಾ-ಮಟಕಾ, ಜಟಕಾ ಮುಂತಾದ ಚಟಾದಿಗಳಿಗೆ ಬಲಿಯಾಗಿ ಜನತೆ ಚಟ್ಟಾ ಏರಬಾರದು ಎಂಬ ಎಚ್ಚರಿಕೆಯನ್ನು ಈ ಗೀತೆಯ ಮೂಲಕವಾಗಿ ಪ್ರಚಾರಪಡಿಸಿದ್ದಾನೆ. ಪ್ರತಿಯೊಬ್ಬ ಭಾರತೀಯನೂ ಅಹಿಂಸಾ ಮಾರ್ಗ(ಧರ್ಮ) ವನ್ನು ಪಾಲಿಸುವಂತವನಾಗಬೇಕು.

ಬಸವಣ್ಣನವರು ದಯವನ್ನು ಕುರಿತು ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ಎಂಬ ಮಾತಿನಂತಿದೆ.

ಮುಂದಿನ ಪದಗಳಲ್ಲಿ ಸದ್ಗುಣವೇ ಮಾನವನಿಗೆ ಭೂಷಣ. ಮಾನವನ ಮನೋವಿಕಾರದ ಕಾಯಿಲೆಗೆ ಉಪದೇಶಗಳು ಬೇಕು. ಪದ ೬೭ ರಲ್ಲಿ ಹೇಳಿದ್ದು ಇದನ್ನೇ ಎಂಬುದು ತಿಳಿದುಬರುತ್ತದೆ. ಎಲ್ಲಾ ಜನ್ಮಗಳಲ್ಲಿ ಮಾನವ ಜನ್ಮವೇ ಶ್ರೇಷ್ಠ ಮತ್ತು ಮಿಗಿಲು ಎಂದು ಹೇಳುತ್ತ ಸಂಸಾರ ಸಾಗರದಲ್ಲಿಯೇ ಮುಳಗೇಳಬೇಡಿ. ಸಾಧು ಸತ್ಪುರುಷ-ಮುನಿವರ್ಯರುಗಳಿಗೆ ಶಿರಬಾಗಿ ನಮಿಸು, ಶ್ರವಣ ಮನನವೆಂಬ ದುಡಕಿಯ ಮಾಡಿ ಮುಕ್ತಿಯನು ಪಡೆಯುವಂತವನಾಗು! ಎಂದು ಕರೆಕೊಟ್ಟ ಪದವಿದಾಗಿದೆ. ಕೊನೆಯವೆರಡು ಮಂಗಳಾರತಿ ಪದಗಳೊಂದಿಗೆ ಈ ಸಂಕಲನವು ಮುಕ್ತಾಯಗೊಳ್ಳುತ್ತದೆ.

ಮುಕ್ತ ಮನಸ್ಸಿನಿಂದ ತೆರೆದಿಟ್ಟ ಪದಗಳು ಹಿರಿ-ಕಿರಿಯ ಚರಣಗಳಿಂದ ರಚನೆಗೊಂಡು ಸಾಮಾನ್ಯನಿಗೂ ಅರ್ಥವಾಗುವಂತಿವೆ. ಪ್ರಾರ್ಥನೆಗೆ ಭಜನೆಗೆ ಹೇಳಿ ಮಾಡಿಸಿದಂತಿವೆ. ದೇಸಿಯ ಮಾತುಗಳು, ಶಬ್ದಗಳು, ನಾಣ್ಣುಡಿಗಳು ಇದರ ಗೀತ ರಚನೆಗೆ ಮೇಳೈಸಿವೆ. ಜೈನ ಧರ್ಮದ ತತ್ತ್ವದ ಬೋಧನೆಯಿದ್ದರೂ ಸಾರ್ವತ್ರಿಕವಾಗಿ ಅನುಭವವನ್ನೊದಗಿಸುತ್ತವೆ.

೪.೩ ಭಜನೆಯ (ತತ್ತ್ವ) ಪದಗಳು :

ಅಲಭೈರಿ ಕವಿಯ ಪ್ರಕಟಿತ ಕೃತಿಗಳಲ್ಲಿ ಇದು ಒಂದು. ೧೦೫ ಪುಟಗಳನ್ನೊಳಗೊಂಡಿದ್ದು, ಡಾ. ವಿ.ಎಸ್. ಮಾಳಿಯವರು ಈ ಗ್ರಂಥಕ್ಕೆ ಬೆನ್ನುಡಿ ಬರೆದಿರುವರು. ಈ ಗ್ರಂಥವನ್ನು ಡಾ. ಆರ್. ಬಿ. ಚಿಲಮಿಯವರು ಸಂಪಾದಿಸಿದ್ದಾರೆ. ಸಂಪಾದಕರೇ ಹೇಳಿರುವಂತೆ ಭಾರತ ಸರಕಾರವು ಹಸ್ತಪ್ರತಿ ಸರ್ವೇಕ್ಷಣಾ ಕಾರ್ಯವನ್ನು ರಾಯಬಾಗ ತಾಲೂಕಿನಲ್ಲಿ ಕೈಗೊಳ್ಳುವಂತೆ ಆದೇಶಿಸಿತ್ತು. ಆ ಸಂದರ್ಭದಲ್ಲಿ ಹೆಕ್ಕಿ ತೆಗೆದು, ಆಯ್ದುಕೊಂಡು ಅಲಭೈರಿ ಕವಿಯ ಈ ತತ್ತ್ವಪದಗಳನ್ನು ಒತ್ತಟ್ಟಿಗೆ ತಂದು ಸಂಗ್ರಹಿಸಿ ಸಂಪಾದಿಸುವ ಪ್ರಯತ್ನ ಮಾಡಿದ್ದಾರೆ.

ಇದು ೨೦೦೭ ರಲ್ಲಿ ಸ್ಥಳೀಯ ಸರಸ್ವತಿ ಮುದ್ರಣಾಲಯದಿಂದ ಮುದ್ರಣಗೊಂಡು, ಅದೇ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಜರುಗಿದ ವೇದಾಂತ ಪರಿಷತ್ತಿನ ಸಮಾರಂಭದಲ್ಲಿ ಶ್ರೀ ಶಿವಾನಂದ ಭಾರತಿ ಮಹಾಸ್ವಾಮಿಗಳಿಂದ ಗ್ರಂಥವು ಬಿಡುಗಡೆಗೊಂಡಿತು. ಕಾರಣವಿಷ್ಟೇ ಅಲ್ಲಿಯ ಭಜನಾ ಮಂಡಳಿಯವರು ಈ ಕವಿಯ ತತ್ತ್ವಪದಗಳನ್ನು ಹಾಡುತ್ತ ಬಂದಿದ್ದಾರೆ. ಮೇಲಾಗಿ ಶ್ರೀ ಸದ್ಗುರು ಚನ್ನವೃಷಭೇಂದ್ರ ಮಹಾಸ್ವಾಮಿಗಳನ್ನು ಕುರಿತು, ಸ್ತುತಿ ಪದಗಳೇ ಹೆಚ್ಚಿರುವುದರಿಂದ ಜನತೆ ಕೂಡ ಹರ್ಷಪುಳಕಿತವಾಯ್ತು ಎಂದೇ ಹೇಳಬೇಕು. ಆಶುಕವಿಯೆಂದೆ ಖ್ಯಾತಿ ಹೊಂದಿದ ಅಲಭೈರಿಯು ವಿವಿಧ ಪ್ರಕಾರದ ಪದಗಳನ್ನು

ಜಾನಪದೀಯ ಸೊಗಡಿನಲ್ಲಿ ರಚಿಸಿರುವ, ಡೊಳ್ಳಿನ ಪದಗಳು, ಗೀಗಿ ಪದಗಳು, ಕರ್ಬಲ್, ಅಥವಾ ರಿವಾಯತ್ ಪದಗಳನ್ನು ಜನರಿಗೆ ಬೇಸರಿಸದ ರೀತಿಯಲ್ಲಿ ರಚಿಸುವ ಜಾಣ್ಮೆಯನ್ನು ಕರಗತ ಮಾಡಿಕೊಂಡವನು.

ಇಲ್ಲಿರುವ ಭಜನಾ ಪದಗಳನ್ನು ಗಮನಿಸಿದರೆ ಖಂಡಿತವಾಗಿಯೂ ಶಿಶುನಾಳ ಶರೀಫರ ತತ್ತ್ವಪದಗಳನ್ನೇ ಹೋಲುತ್ತವೆ. ಕವಿ ರಚನೆ ಮಾಡಿರುವ ಪ್ರತಿಯೊಂದು ತತ್ವಪದದ ಕೊನೆ ಕೊನೆಗೆ ೧೨ ನೆಯ ಶತಮಾನದ ವಚನಕಾರರು ಬಳಸಿರುವ ವಚನಾಂಕಿತದಂತೆಯೇ "ಹಾರೂಗೇರಿಯ ಅಲಭೈರಿ ಕವಿ" ವಿರಚಿಸಿರುವನೆಂಬುದು ಉಲ್ಲೇಖಗೊಂಡಿದೆ. ಈ ಅಂಕಿತನಾಮವು ಕವಿಗೆ ಪುಷ್ಟಿಯನ್ನು, ತುಷ್ಟಿಯನ್ನೂ ನೀಡಿ ಗೀತ ರಚನೆಗೆ ಹುರುಪು-ಹುಮ್ಮಸ್ಸು ಬಂದಿದೆ. ಅದಕ್ಕಾಗಿ ಈ ಅಧ್ಯಯನದಲ್ಲಿ ಸಾಂದರ್ಭಿಕವಾಗಿ ಶರೀಫರ, ಬಸವಣ್ಣ, ಅಕ್ಕಮಹಾದೇವಿ ಹಾಗೂ ದಾಸರ ತತ್ವಪದಗಳನ್ನು ಬಳಸಲಾಗಿದೆ. ಈತ ಜೈನನಾದರೂ ಸರ್ವಧರ್ಮ ಸಮನ್ವಯ ದೃಷ್ಟಿಯುಳ್ಳ ಕವಿಯೆಂಬುದು ಈತನ ಸಮಗ್ರ ಸಾಹಿತ್ಯದಿಂದ ತಿಳಿದು ಬರುವ ಅಂಶ.

ವರಕವಿ ಅಲಭೈರಿಯ ಸಮಗ್ರ ಸಾಹಿತ್ಯದಲ್ಲಿ ತತ್ವಪದಗಳು ಭಜನೆಯ ಪದಗಳಾಗಿ ಹಾರೂಗೇರಿಯ ಸುತ್ತ-ಮುತ್ತಲಿನ ಪರಿಸರದಲ್ಲಿ ಇಂದಿಗೂ ಜನಪ್ರಿಯವಾಗಿವೆ. ಅವು ಹೆಚ್ಚಾಗಿ ಲೀಲಾಮಠದ ಸದ್ಗುರು ಶ್ರೇಷ್ಠರಾದ ಶ್ರೀ ಚನ್ನವೃಷಭೇಂದ್ರ ಸ್ವಾಮಿಗಳನ್ನು ಸ್ತುತಿಸಿದ ಪದಗಳೆಂದು ಕಂಡುಬರುತ್ತವೆ. ಸದ್ಗುರು ಶ್ರೀ ಚನ್ನವೃಷಭೇಂದ್ರ ಮಹಾಸ್ವಾಮಿಗಳಿಗೂ ಮತ್ತು ಅಲಭೈರಿ ಕವಿಗೂ ಗುರು-ಶಿಷ್ಯರ ಸಂಬಂಧವಿತ್ತೆಂದು ಹೇಳಬಹುದು. ಇವೆಲ್ಲ ರಚನೆಗಳು ಜನ ಮಾನಸದಲ್ಲಿ ತೂರಿಬಿಟ್ಟ ಚಿಂತನೆಗಳಾಗಿ ಅಚ್ಚಳಿಯದೇ ಉಳಿದಿವೆ.

ಈ ಕವಿ ಅಧ್ಯಾತ್ಮದ ಅನುಭಾವಗಳನ್ನು, ಆತ್ಮಬೋಧನೆಗಳನ್ನು ಸರಳವಾಗಿ, ಸುಲಭವಾಗಿ, ಸಹಜವಾಗಿ ನಿರೂಪಿಸಿ ಪಂಡಿತರಿಂದ, ಜ್ಞಾನಿಗಳಿಂದ "ವರಕವಿ" ಎಂಬ ಬಿರುದನ್ನು ಸಂಪಾದಿಸಿಕೊಂಡಿರುವುದನ್ನು ಆತನ ಜೀವನ ಚರಿತ್ರೆಯಲ್ಲಿ ಹೇಳಲಾಗಿದೆ. ಈತನ ಪದಸಂಕಲನದಲ್ಲಿರುವ ತತ್ವಪದಗಳು ಸಾಮಾನ್ಯ ಜನತೆಗೆ ನೀತಿ ಬೋಧನೆ ಮಾಡುತ್ತವೆ. ಹಾಗೆಯೇ ಅಲಭೈರಿಯು "ಗಣನಾಥನೆ ಪಾಲಿಸೆನ್ನನು ಫಣಿಧರಸುತ ಸದ್ಗುಣಮಣಿ ಶ್ರೀ ದಯಾನಿಧಿಯೇ" ಎಂಬುದಾಗಿ ಗಣೇಶನನ್ನು ಸ್ತುತಿಸುವುದರೊಂದಿಗೆ ಪದ-೧ ರಿಂದ ಪ್ರಾರಂಭವಾಗಿ ೧೧೬ ನೆಯ ಪದ ಮಂಗಲಮಯ ಗುರುನಾಥಾ ಜಯಾಶ್ರುತಿ ಮತಗತಯುತ ಅವಧೂತಾ ಜಯ ಮಂಗಲಂ" ಎಂಬ ಮಂಗಳಾರತಿ ಪದಗಳೊಂದಿಗೆ ಮುಕ್ತಾಯವಾಗುತ್ತದೆ. ಗ್ರಂಥದ ಕೊನೆಯಲ್ಲಿ ಒಟ್ಟು ಏಳು ಮಂಗಳಾರತಿ ಪದಗಳಿವೆ. ಉಳಿದ ೧೧೨ ಪದಗಳು ತತ್ತ್ವಪದಗಳಾಗಿವೆ. ಆದರೆ ಈ ಸಂಪಾದನೆಯಲ್ಲಿ ಒಂದು ದೊಡ್ಡ ಕೊರತೆಯೆಂದರೆ ಪ್ರತಿಯೊಂದು ತತ್ವ ಪದಕ್ಕೆ ಶೀರ್ಷಿಕೆಯಿಲ್ಲ ಮತ್ತು ಪರಿವಿಡಿಯನ್ನೂ

ನಮೂದಿಸಿಲ್ಲ. ನಿಜವಾಗಿಯೂ ಪುಸ್ತಕ ರೂಪವನ್ನು ಪಡೆದಾಗ ಇವು ಅವಶ್ಯಕವಾಗಿ ಇರಬೇಕು. ಸಾಮಾನ್ಯರಿಗೆ ಓದಲೂ, ಸವಿಯಲೂ ಅಭಿರುಚಿಯುಂಟಾಗುತ್ತದೆ. ಕೆಲವೇ ಕೆಲವು ತತ್ತ್ವಪದಗಳಿಗೆ ರಾಗ, ತಾಳ, ಲಯಗಳ ಹೆಸರನ್ನು ಸೂಚಿಸಲಾಗಿದೆ. ಇದರಲ್ಲಿ ೬ ಕರ್ಬಲ್ ಪದಗಳು ಸೇರಿಕೊಂಡಿವೆ. ಈ ಮೊದಲಿನ ಕೃತಿಯು ಜಿನಭಕ್ತಿಗೆ ಮೀಸಲಿಟ್ಟರೆ, ಇದು ಶಿವಭಕ್ತಿಗೆ, ಶಿವನವತಾರಿಯಾದ ಶ್ರೀ ಚನ್ನವೃಷಭೇಂದ್ರ ಸ್ವಾಮಿಜಿಯವರ ಸ್ತುತಿಗೆ ಮೀಸಲಾಗಿದೆ. ನೀತಿಯೇ ಈ ಗ್ರಂಥದ ಪ್ರಧಾನ ಪಾತ್ರವಾಗಿದೆ. 'ಸಂಸಾರದ ಆಗುಹೋಗುಗಳಿಗೆ ಜರ್ಜರಿತನಾಗಿ ಬದುಕು ಸಾಗಿಸುವುದಕ್ಕಿಂತ ಈ ಪದಗಳಲ್ಲಿ ಬರುವ ನೀತಿ ಸಾರವನ್ನು ಸವಿದುಂಡು ಅದರಂತೆ ಆಚರಿಸೋ' ಎಂಬ ಸಂದೇಶ ನೀಡಲಾಗಿದೆ.

ಸಮಾಜ ವಿಮರ್ಶೆ, ಸಮಾಜ ನಿಂದನೆ, ನೀತಿ ಬೋಧನೆ ಮಾಡಿದ ಈ ಕವಿಯ ವಿಚಾರ ಧೋರಣೆಗಳು ಪ್ರಸಿದ್ಧ ವಚನಕಾರರ, ದಾಸಶ್ರೇಷ್ಠರ, ಶಿವಯೋಗಿ-ಸಂತರನ್ನು ನೆನಪಿಸುವಂತಿವೆ. ಸಮಾಜ ಮುಖಿಯಾದ ಈ ಕವಿ ತಾನು ಕಂಡುಂಡ ಅನುಭವಗಳನ್ನು ಪದಗಳಲ್ಲಿ ಎರಕ ಹೊಯ್ದಿರುವನು. ಇವು ಕನ್ನಡಿಗರ ಮನೆ ಮಾತೆನ್ನುವಂತಿವೆ. ಈ ಸಂಕಲನದಲ್ಲಿರುವ ಎಲ್ಲ ಪದಗಳು ಮಾನವ ಸಂಸಾರದಲ್ಲಿನ ತೊಂದರೆಗಳನ್ನು ಬಿಂಬಿಸಿ, ಮೋಕ್ಷ ಪದ ಪಡೆಯಲು ಏಣಿಗಳಂತಿವೆ. ಕೇವಲ ಕೇಳಿ ಹಾಡಿ ಬಿಡಬಾರದು, ಆಚರಿಸಬೇಕೆಂಬ ತುಡಿತ: ಬಡಿದೆಚ್ಚರಿಸುವಂತಿವೆ. ಖಂಡ ತುಂಡವಾಗಿ ಹೇಳುವ ಅಪ್ಪಟ ಶುದ್ಧ-ಪ್ರಬುದ್ಧ ಕವಿಯೀತ. ೨ ನೆಯ ಪದ ಶಾರದೆಯ ಸ್ತುತಿ ರೂಪದಲ್ಲಿದೆ. ಕರುಣಾಕಾರೆ ಜಗದಾಂಬೆ, ಪರಮ ದಯಾನಿಧಿ ದಯಾಘನ ದುರಿತ ವಿನಾಶಿಸಿನಿ ಎಂದು ಕವಿ ಪ್ರಾರ್ಥಿಸಿಕೊಂಡಿದ್ದಾನೆ.

೩ ನೆಯ ಪದವು 'ನುಡಿಯೋ ಶಿವನಾಮವನು ನೀ ಕೆಡಬೇಡೋ ಮಾಡೋ ಭಕ್ತಿ; ಗುರುವಿನ ಬೋಧೆಯನು ಹಸನು ಮನಸ್ಸಿನಿಂ ಕೇಳು, ಅದರಂತೆ ನಡೆದರೆ ಹಸನುಳ್ಳ ಹಾರೂಗೇರಿ ವೃಷಭೇಶನೊಳು ಸೇರಿ, ವಿಷಯಾಬ್ಧಿಯೊಳು ಮಸಣಿಸದೇ ಅನುದಿನವೂ ನುಡಿ ನಮಃ ಶಿವಾಯವನು, ಪಡೆ ಮುಕ್ತಿಯನು' ಎಂದು ಜನತೆಗೆ ಕರೆ ಕೊಟ್ಟಿದ್ದಾನೆ. ಇಂಥ ಸದ್ಗುರುವಿನ ಪಾದಕೆರಗಿ ಪ್ರಶಾಂತ ಮನಸ್ಸಿನವನಾಗಿರು ಎಂಬುದಾಗಿ ೪ ನೆಯ ಪದ ಬಣ್ಣಿಸುತ್ತದೆ. ನಾನು ಗುರುಧ್ಯಾನವನು ಮಾಡುವೆನು ಸತತ ತೋರಿಸೆನಗೆ ಪಾರಮಾರ್ಥಿಕ ಮೋಕ್ಷವನು ಕೊಡು ಎಂದಿದ್ದಾನೆ. ಮಾಯಾ ಮಮಕಾರದೊಳಗೆ ಜಾರಿ ಬಿದ್ದು-ಏಳು, ಭಕ್ತಿ ಮಾಡಿ ಯೋಗಿವರನೊಳು ಬೇಡೋ ನೀ ಮುಕ್ತಿ ಎಂದು ೬ ನೆಯ ಪದದಲ್ಲಿ ಬರುತ್ತದೆ. ಸತ್ಯವಂತರ ಸಂಗವ ನೀ ಮಾಡು ಹಾರೂಗೇರಿಯೊಳು ಈಶನು ನೆಲೆಸಿದ್ದಾನೆ. ಅಲ್ಲಿ-ಇಲ್ಲಿ ಯಾಕ ತಿರುಗಾಡುತ್ತಿ ಎಂದು ವ್ಯಂಗ ಮಾಡಿದ್ದಾನೆ.

ಏಳನೆಯ ಪದ ಮನುಕುಲಕ್ಕೆ ದಾರಿದೀಪವಾಗಿದೆ. ಅದರ ಮರ್ಮವನು ತಿಳಿಯಬೇಕೆಂಬುದಾಗಿದೆ. ಕವಿಯ ಸಾಲುಗಳು ಚಕಚಕನೇ ಬಂದು ನಿಲ್ಲುತ್ತವೆ. ಮಾನವನ

ಅಹಂಕಾರವನ್ನೇ ಮುರಿದು ಹಾಕುವಂತಿದೆ. ಮಾನವ ಅಹಂಕಾರವನ್ನಳಿದರೆ ಮಹಾ ಮಾನವನಾಗಬಲ್ಲವೆಂಬುದಕ್ಕೆ ಈ ಪದ ನಿದರ್ಶನವಾಗಿದೆ.

"ತೊಗಲಿನದೊ ಈ ದೇಹ ತೊಗಲಿನದೋ
ಬಗಿಯಲು ಬ್ರಹ್ಮ ಸೃಷ್ಟಿ! ತೊಗಲಿನದಿದು ಸರ್ವ"[೧೫]

ಎಂಬ ಎರಡೆರಡು ಚರಣಗಳ ೭ ಪದ್ಯಗಳ ರಚನೆಯಿದೆ. ತೊಗಲಿನಿಂದ ಸೃಷ್ಟಿಯಾದ ಗಂಡು-ಹೆಣ್ಣು, ಸಂಧಿಸಿದಾಗ ತೊಗಲಿನದೇ ಮಗ ಅಥವಾ ಮಗಳಾಗಲಿ. ಜನಿಸುತ್ತದೆಯಲ್ಲವೇ? ತಂದೆ-ತಾಯಿ, ಶತ್ರು-ಮಿತ್ರ, ರಾಜ-ರಂಕ, ದನ-ಕರು, ಆಕಳು-ಆನೆ, ಒಂಟೆ ಎಲ್ಲವೂ ತೊಗಲಿನ ಹೊದಿಕೆಯಿಂದಲೇ ನಿರ್ಮಾಣವಾದವು. ಅಂದ ಮೇಲೆ ಮಾನವ ನೀನೇಕೆ ಅಹಂಕಾರದಿಂದ ಬೀಗುವಿ ಎಂದು ಕವಿ ವ್ಯಂಗ್ಯ ನುಡಿದಿದ್ದಾನೆ. ಕೊನೆಗೆ ಕವಿ ತನ್ನನ್ನೂ ಬಿಟ್ಟಿಲ್ಲ.

"ತೊಗಲಿನದೊ ದೇಹ ತೊಗಲಿನದೊ
ಬಗಿಯಲು ಬ್ರಹ್ಮ ಸೃಷ್ಟಿ ತೊಗಲಿನದಿದು ಸರ್ವ ॥ಪ॥
ತೊಗಲಿನ ರಾಜ-ಪ್ರಜಾ । ತೊಗಲಿನ ನ್ಯಾಯಾಧೀಶಾ
ತೊಗಲಿನ ಮೇಲೆ ಹುಕುಂ । ತೊಗಲೇ ನಡೆಸಿತು ತಮ್ಮಾ
ತೊಗಲಿನ ಹಾರೂಗೇರಿ । ತೊಗಲಿನ ಅಲಭ್ಯೆರಿ
ತೊಗಲಿನ ಒಳಗೊಂದು । ಮಿಗಿಲಾದ ವಸ್ತು ತಿಳಿಯೋ।"[೧೬]

ಮಹತ್ವದ ಅಂಶವೆಂದರೆ 'ಮಿಗಿಲಾದ ವಸ್ತು ಒಂದಿದೆ'ಅದನ್ನು ತಿಳಿಯಲು ಕರೇ ನೀಡಲಾಗಿದೆ.

ಇದು ಶಿಶುನಾಳ ಶರೀಫರ ತತ್ವ ಪದವನ್ನು ನೆನಪಿಸುತ್ತದೆ. ಮೋಹಪಾಶ ಬಂಧನದಿಂದ ಮುಕ್ತನಾಗಬೇಕಾದರೆ ತನ್ನನ್ನು ತಾನು ತಿಳಿದುಕೊಳ್ಳಬೇಕು. ಬದುಕಿನಲ್ಲಿ ಅನುಮಾನ ಮಾಡಲೇಬಾರದು. ಅರ್ಥವಿಲ್ಲದೆ ವ್ಯರ್ಥ ಮೋಹಿಸಿದರೆ, ಸಾರ್ಥಕವಾಗದು ಮಾನವಾ ಅರಿತು ಅರಿವಿಲೆ ತುರ್ತು ನಮಿಸೋ ಶ್ರೀ ಗುರುವಿನ ಪಾದಕೆ ಎಂದಿದ್ದಾನೆ. ಎಡರು-ತೊಡರುಗಳು ಎಡೆ ಬಿಡದೇ ಬರುವ ಸಂಸಾರ ಸಾಗರದಲ್ಲಿ ಏಕೆ ತೇಲಾಡುವೆ! 'ಭೋಗದ ಸಂಸಾರದಭಿಮಾನವ ಮಾಣಾ॥ ಮಾಡೋ ಮನುಜಾ ಮಹಾದೇವನ ಧ್ಯಾನಾ!' ಎಂಬುದಾಗಿ ಪದ ೧೦, ೧೧, ೧೨ ರಲ್ಲಿ ಕವಿಯ ಪ್ರತಿಪಾದನವಿದೆ. ಶಿವಧ್ಯಾನವನು ಮಾಡು ಮರೆಯಬೇಡಾ ಮನುಜಾ! ಭವಜಲಧಿಯೊಳು ತವೆ ಕಡೆಗಾಣಲು ಶಿವಮಂತ್ರವೇ ಮುಖ್ಯ ನೋಡಾ ಎಂದು ಪದ ೧೩ ರಲ್ಲಿ ಮನುಕುಲಕ್ಕೆ ಹಿತ ನುಡಿದರೆ, ಪದ ೧೪೩ ರಲ್ಲಿ ನಂಬಿದ ಸುಳ್ಳ ಹಂಬಲಗೊಂಡು ಡಾಂಬಿಕವಾ ಒಂಬತ್ತು ತೂತಿನಾ ದೇಹವಿದು ಎಂದು ಹೇಳುವ ಪದ ಪುರಂದರ ದಾಸರ "ಅಂಬಿಗ ನಾ ನಿನ್ನ ನಂಬಿದೆ: ಜಗದಂಬಾರ ಮನ ನಿನ್ನ ನಂಬಿದೆ...

ತುಂಬಿದ ಹರಿಗೋಲಂಬಿಗಾ ಇದಕ್ಕೆ ಒಂಬತ್ತು ಛಿದ್ರಗಳಂಬಿಗಾ" ಎಂಬ ತತ್ವಪದವನ್ನು ನೆನೆಪಿಸುತ್ತದೆ.

ಸಾಮಾಜಿಕ ಬೋಧನೆಯ ಪದಗಳು ಇಲ್ಲಿ ಬೇಕಾದಷ್ಟಿವೆ. ನೀತಿ ಬೋಧನೆಯೇ ಈ ಕವಿಯ ಮುಖ್ಯ ಧ್ಯೇಯ! ೮೪ ಲಕ್ಷ ಜೀವರಾಶಿಗಳಲ್ಲಿಯೇ ಮಾನವ ಜನ್ಮ ದೊಡ್ಡದು. ಸದ್ಗುರುವಿನ ಸಂಗತಿ ಹೊಂದಿ, ಅವರ ಪಾದ ಪುಣ್ಯವ ಪಡೆದು ಸಂಸಾರದಲ್ಲಿದ್ದರೂ ಸುಖಿಯಾಗಿರು ಎಂಬ ಹಾರೈಕೆಯೂ ಈತನ ಪದಗಳಲ್ಲಿ ಹೆಪ್ಪುಗಟ್ಟಿದೆ. ಪದ ೧೭ ರಲ್ಲಿ ಹೇಳಿರುವುದನ್ನು ಕೇಳಿದರೆ ಈ ಸಂಸಾರದ ಜಂಜಾಟವೇ ಬೇಡ ಎನ್ನುವಂತಿದೆ.

"ಗುರುವಿನ ಹೊಂದಿ ಗುಣಗಳ ತಿಳಿಯೊ
ಮರವಿನ ಮಾಯಾ ಪ್ರಪಂಚವ ಅಳಿಯೊ
ಅರುವಿನ ಅರಮನೆಯೊಳು ಸುಳಿಯೊ
ಶರಣರ ಸೇವಾದಲ್ಲಿ ಹೊತ್ತಗಳಿಯೊ
ಹಾರೂಗೇರಿ ವಾಸಲು ಹಿರಿಯೊಳೆಯೊ।"[೧೭]

ಸಜ್ಜನರ ಶರಣರ ಸಂಗವನು ಮಾಡಿ ಸುಖಿಯಾಗಿರು ಎಂದು ತಿಳುವಳಿಕೆ ನೀಡಿದ ಗೀತೆಯದಾಗಿದೆ. ಪದ ೧೮ ಮತ್ತು ೨೧ ರಲ್ಲಿ ಕಾಮ, ಕ್ರೋಧ, ಮದ, ಮತ್ಸರಾದಿ ಗುಣಗಳಲ್ಲಿ ಸಿಲುಕಿ ಪೇಚಾಡುವಿ, ವಿಷಯಗಳಿಂದ ಎಂದೂ ಏಳಿಗೆಯಿಲ್ಲ. ಅದುಕಾರಣ ಶಿವನಾಮವನು ಬಿಡದೇ ಜಪಿಸು, ಸದ್ಗುರುವಿನ ಪಾದವನು ಬಿಡದೆ ಪೂಜಿಸಿದರೆ ಮುಕ್ತಿ ದೊರತೀತು ಎಂದು ಹಿತ ನುಡಿದಿದ್ದಾನೆ. ಮಾನವನ ಹೊಣೆಗೇಡಿತನ, ಮಾಯಾ ಮೋಹದಲ್ಲಿ ಬಿದ್ದು ಹೊರಳಾಡುವ ಕ್ರಿಯೆ, ವಿವಿಧ ವಿಷಯಾಸಕ್ತಿಯಲ್ಲಿ ಮುಳುಗೇಳುವ ಕ್ರಿಯೆ ಅಹಂಕಾರವೆಂಬ ಮದಗಜವನ್ನೇರಿ ಮೆರೆಯದೆ, ಕಪಟಗುಣಗಳನು ಅನುಸರಿಸುವಿಕೆ, ಡಂಬಾಚಾರದ ಬದುಕು ಸಾಗಿಸುವಿಕೆ, ಸಾಮಾಜಿಕ ನೀತಿ ಬೋಧಕನಾಗಿ ಗೋಚರಿಸುತ್ತಾನೆ.

ಪದ ೨೬ ಈ ಸಂಕಲನದಲ್ಲಿಯೇ ಸುದೀರ್ಘ ಮೂರು ಪುಟಗಳಲ್ಲಿರುವ ಪದ ಅದು ಹೀಗೆ ಪ್ರಾರಂಭವಾಗುತ್ತದೆ.

"ಸ್ವಪ್ನದೊಳು ದೇಹವ ಕಂಡು । ಸ್ವಪ್ನದೊಳು ವಿಭ್ರಮಗೊಂಡು
ಸ್ವಪ್ನದಿಂದೆ ಎಚ್ಚರವಾಗಲು । ಮೋಹ ನಿರ್ಮೊಹಗಳಿಲ್ಲ।"[೧೮]

ಸ್ವಪ್ನದಲ್ಲಿಯೇ ತ್ಯಾಗ, ವಿರಾಗಿಯಾಗುವುದು, ಗಂಡ-ಹೆಂಡತಿ ಮಕ್ಕಳಾಗುವುದು. ಪಾಪ-ಪುಣ್ಯ ದೊರೆತಂತಾಗುವುದು, ಸ್ವರ್ಗ ನರಕದೊಳ್ ಹೋದಂತಾಗುವುದು, ಸ್ವಪ್ನದೊಳು ಬ್ರಾಹ್ಮಣ ಹೊಲೆಯನಾಗುವುದು. ಸ್ವಪ್ನದಲ್ಲಿಯೇ ದಾನಧರ್ಮ ಮಾಡಿದಂತಾಗುವುದು. ಸಂಗಿ

ನಿಸ್ಸಂಗಿಯಾಗುವುದು, ಕೋಪ ತಾಪ, ಶಾಪಗಳುಂಟಾಗುವುದು, ಮೋಸ-ವಂಚನೆ, ಮಿಥ್ಯಾ-ಸತ್ಯ ಆಚರಿಸಿದಂತಾಗುವುದು. ಇವೆಲ್ಲವೂ ಘಟಿಸಿದ್ದು ಸ್ವಪ್ನದಲ್ಲಿಯೇ ಆದರೆ ಸ್ವಪ್ನದಿಂದ ಎಚ್ಚರವಾಗಲು ಇವ್ಯಾವವೂ ಇಲ್ಲ ಎಂದು ಹೇಳಿದ ಕವಿಯು ಹೀಗೆ ಈ ಪದವನ್ನು ಮುಕ್ತಾಯಗೊಳಿಸುತ್ತಾನೆ.

"ಸ್ವಪ್ನದೊಳು ಅಲಭ್ಯೆರವ ತಾ । ಸ್ವಪ್ನದೊಳು ಕಲ್ಪಿಸಿ ಕವಿತಾ
ಸ್ವಪ್ನದಿಂದೇ ಎಚ್ಚರವಾಗಲು । ಹಾರೂಗೇರಿ ಗ್ರಾಮದೊಳಿಲ್ಲಾ ತಾ।"[೧೯]

ಎಂದು ಹೇಳುತ್ತ ಹಾಸ್ಯದಿಂದಲೇ ಮುಕ್ತಾಯ ಹಾಡಿದ್ದಾನೆ. ಅದರ ಮುಂದಿನ ಪದವೂ ಕೂಡ ಚಹಾ ಚಟ ಬಿಡಲು ಬೋಧಿಸಿದರೂ ಪದ ಮಾತ್ರ ಬೇಂದ್ರೆಯವರ ಅಧ್ಯಾತ್ಮದ ಕೃತಿ ನಾನು-ನೀನು ಆನು-ತಾನು ಎಂಬ ನಾಲ್ಕು ತಂತಿಯನ್ನು ನೆನಪಿಸುವಂತಿದೆ.

"ಚಹಾ ಕುಡಿಯುದು ಬಲು ಕೆಡಕ ವ್ಯಸನ
ಬಿಡಲೇಬೇಕು ಬೇಡವೇಬೇಡ ಸರ್ವಥಾ ॥ಪ॥
"ಬಿಡೋ ನರಾ-ಧಮಾ-ತ್ವರಾ
ನೋಡು ಅರ್ಥ-ಕೇಡು-ವ್ಯರ್ಥಾ
ಒಡಲೊಡವಿಯ ಕೆಡಿಸುವ ಕೃತಿ
ಪಿಡಿಯಲತಿ ಕೆಡಕಮತಿ
ಬಿಡಲೇಬೇಕೋ ಬೇಡವೇಬೇಡ ಸರ್ವಥಾ ।೧।
ಪರಾ-ತ್ವರಾ-ಸುರೇ-ಶ್ವರಾ
ಸಾರಸೌಖ್ಯ - ಭಾವದೈಕ್ಯ
ಹರಗಿರಿಯೊಳಗರುಹಿದ ಶೃತಿ
ಪರಮ ಪ್ರತಿ ಕೆಡಕಮತಿ
ಬಿಡಲೇಬೇಕು ಬೇಡವೇಬೇಡ ಸರ್ವಥಾ।"[೨೦]

ಪದ ೨೬ ರಲ್ಲಿ ಹಲವು ತೂತಿನ ತೊಗಲಾ! ಎಲವು ತುಂಬಿದ ಚೀಲಾ ಮಲ ಮಾಂಸ ಶೋಣಿತ ಮೂತ್ರಾ" ಮಾನವಾ ದೇಹವು ಮೂಳೆ ಮಾಂಸದ ತಡಿಕೆ ಎಂಬಂತೆ, ಈ ದೇಹ ಅಳಿಯುವುದಕ್ಕಿಂತ ಮುನ್ನವೇ ದೇವನ ಬಳಿಗೆ ಹೋಗಿ ಭಕ್ತಿಯನ್ನು ಮಾಡಿ ಪುಣ್ಯ ಪಡೆದುಕೋ ಎಂಬುದಾಗಿ ಮಾನವರಿಗೆ ಕರೆಕೊಟ್ಟಿದ್ದಾನೆ. ಪದ ೩೦ ರಲ್ಲಿ ಸಾಧು-ಸಂತರಿಗಾಗಿ ರಚಿತವಾದದ್ದು ಮಂಡೆ ಬೋಳಿಸಿಕೊಂಡು, ಮೈಗೆ ಬೂದಿ ಬಳಿದುಕೊಂಡು ಊರೂರು ಅಲೆಯುವ ಸಾಧುಗಳನ್ನು ಕಂಡು ಸರ್ವಜ್ಞನಂತೆಯೇ ಲೋಕಾನುಭವವನ್ನು ಬಿಚ್ಚಿಟ್ಟಿದ್ದಾನೆ. ವಿಷಯ ಲಂಪಟರಾಗದೇ ಕಾಯಕವಿಡಿದು ಬದುಕಿರಿ; ಚನ್ನವೃಷಭೇಂದ್ರರರ ಮಾರ್ಗವನು ಹಿಡಿಯಿರೆಂದು ಸಾಧುಗಳಿಗೆ ಎಚ್ಚರಿಸಿದ್ದಾನೆ.

"ದೇವನೊಬ್ಬನು ನಾಮ ಹಲವು" ಎಂಬ ನಾಣ್ಣುಡಿಯಂತೆ ಪದ ೭೪ ರಲ್ಲಿ ಕವಿ ಸೊಗಸಾಗಿ ವಿಡಂಬಿಸಿದ್ದಾನೆ. "ಸಬ್‌ಕಾ ಮಾಲೀಕ ಏಕ ಹೈ" ಎಂಬಂತೆ ಸಕಲಕ್ಕೆಲ್ಲಕೂ ಅಕಲಂಕ ದೇವನೊಬ್ಬನೆ ಆಗಿರುವನು. ಸುಮ್ಮನೆ ಜಾತಿಯ ಪಟ್ಟು ಹಿಡಿದು ಯಾಕೆ ಹೊಡೆದಾಡುವಿರಿ ಎಂದು ಬೋಧಿಸಿದ್ದಾನೆ.

"ಮೂರು ಲೋಕಕೆ ಗುರುವೆ ಆಧಾರಾ ।
ಅಲ್ಲಾಮಯ ಲಾಲಿ । ಮುಖ್ಯ ಫೀರಾ ।
ಸರ್ವ ಸಾಕ್ಷಿ ಒಬ್ಬ ದೇವರಾ ।
ಏಕ ಅಲ್ಲಾ ನಾಮ ಹಜಾರಾ ।"[೨೧]

ಬಡ್ಡಿಯ ಲೆಕ್ಕದಂತೆ ಜಾತಿ ಮುನ್ನೂರು. ಆದಕಾರಣ ಬೇರೆ ಬೇರೆ ಹೆಸರುಗಳಿಂದ ಜನರು ಕರೆಯುತ್ತಿದ್ದು, ಅದನ್ನು ಹೀಗೆ ಹೇಳುತ್ತಾನೆ ಕವಿ.

"ಹಿಂದೂ ಜನರಿಗೆ ಅನಸಿದ ಈಶ್ವರಾ ।
ಮುಸಲ್ಮಾನರಿಗಾದನೋ ಫೀರಾ
ಹೇಳಿದ ಅಲಭ್ಯೆರಿ ಆನಂದದ ಲಹರಾ।"[೨೨]

ಎಂದು ಮುಕ್ತಾಯ ಮಾಡಿರುವುದನ್ನು ಗಮನಿಸುವಂತಿದೆ. ಮತ ಭೇದವನು ಮಾಡಬೇಡಿರಿ ಮನುಷ್ಯ ಕುಲವಿರುವುದು ಒಂದೇ. ಆ ಜಾತಿ, ಈ ಜಾತಿ, ಈ ಕುಲ ಆ ಕುಲವೆಂದು ಭೇದ ಮಾಡಿ ಬಡಿದಾಡಬೇಡಿರಿ, ಎಲ್ಲರೂ ಒಂದಾಗಿ ಚೆಂದಾಗಿ ಬಾಳಿರೆಂದು ಪದ ೩೫ ರಲ್ಲಿ ಪ್ರತಿಪಾದಿಸಿದ ವಿಷಯವಿದೆ. ಪದ ೭೮

"ಹೈ ದೇಖೋ ತೋ ಬಜಾರ ದೋ ದಿನಕಾ
ನೀ ಮಾಯಿಗೆ ಮರುಳಾಗಿ ಕುಂತೆಲ್ಲೋ ಮೂರ್ಖಾ । ಪ।
ನಹಿ ಜೀವನ ಕಿ ಅಸಾ ಕಿಸಕಿ ಏಕದಿನ ಮರನೆ ಕಾ
ಧಿತ್ತಾದಿರಕಿಟ ತೊಂಗಾ ಥೈಥೈ ಸುನಲೆ ಇಸ ತನಕಾ ।೨।"[೨೩]

ಜೀವನ ಎನ್ನುವುದು ಎರಡು ದಿನದ ಸಂತೆ. ಅದನ್ನು ತಿಳಿಯದೆ ವ್ಯರ್ಥವಾಗಿ ಕಾಲ ಕಳೆಯುತ್ತಿ ಎಂದು ಪ್ರಶ್ನಿಸುತ್ತಾನೆ. ಇದೊಂದು ವಿಶಿಷ್ಟವಾಗಿದ್ದು ರಿವಾಯತ್ ಧಾಟಿಯಲ್ಲಿದೆ.

ಗಾಂಜಾ ಮತ್ತು ಭಂಗಿ ಸೇದುವ ಮಾನವರನ್ನು ತರಾಟೆಗೆ ತೆಗೆದುಕೊಂಡ ವಿಷಯವು ಪದ ೮೧ ಮತ್ತು ೮೨ ರಲ್ಲಿ ನಿರೂಪಿತವಾಗಿದೆ. ಚಟಾದಿಗಳನ್ನು ಫಟ್ ಅಂತ ಹರಿದು

ಅಥವಾ ಸುಟ್ಟು ಹಾಕಿ ಹರನಾಮವನು ಬಿಡದೆ ಜಪಿಸುತ್ತ ಕಾಲವನು ಕಳೆಯಿರಿ ಎಂದು ಚಟಕ್ಕೆ ಬಲಿಯಾದವರನ್ನು ಉದ್ದೇಶಿಸಿ ಹೇಳಿದ್ದು ಗಮನಿಸುವಂತಿದೆ. ಕವಿ ಮನುಕುಲಕ್ಕೆ ಕೊಡುವ ಮಹತ್ವದ ಕರೆ ಯಾವುದೆಂದರೆ, "ಕಾಯಾಪುರದ ಸಂತಿ ಕೂಡಿತಲ್ಲಾ – ಮಾಯವಾಯಿತು ತೋರಿ ಬಯಲಿಗೆ ಬಯಲಾ" ಎಂಬುದರಲ್ಲಿ ಅಂತರಂಗ ಬಹಿರಂಗದಲ್ಲಿ ಏಕೋಭಾವದಿಂದ ಒಡಗೂಡಬೇಕಾದರೆ ನೀನು ಮಹಾತ್ಮರ ಸಂಗವ ಮಾಡು. ಅವರು ಹೇಳುವ ಉಪದೇಶವನ್ನು ಲಕ್ಷಗೊಟ್ಟು ಪಾಲಿಸು.

"ಕಾಯಾಪುರದ ಸಂತಿ ಕೂಡಿತಲ್ಲಾ
ಮಾಯವಾದಿತು ತೋರಿ ಬಯಲಿಗೆ ಬಯಲಾ ।ಪ।
ಭವದೊಳು ಹುಟ್ಟಿ ಬಂದ ಮಹಾತ್ಮರೆಲ್ಲಾ
ಶಿವನ ಅವತಾರಿವರು ಜೀವರೆಲ್ಲಾ
ಶಿವ ಜೀವರೈಕ್ಯದ ವ್ಯವಹಾರ ತಿಳಿಯಲಿಲ್ಲಾ
ಮಾಯಾವಾದಿ ಮತಗಳೆಲ್ಲಾ
ಶುದ್ಧ ಅವಧೂತ ಮಾರ್ಗಕೆ ಹತ್ತಲಿಲ್ಲಾ
ಸುತ್ತ ಕವಿದ ಅಜ್ಞಾನವೆಂಬ ಕತ್ತಲಾ ।೨।"[೨]

ಆದುದರಿಂದ ಸದಾಕಾಲವು ಹರಿಗಿರಿಯ ತತ್ವದ ಮೂಲವನ್ನು ತಿಳಿಯಲು ಪ್ರಯತ್ನಿಸು; ಆದರೆ ಸಂಸಾರದ ಜಟಾಪಟಿಯಲ್ಲಿಯೇ ಈ ದೇಹವನ್ನು ಸವೆಯಿಸಬೇಡ ಎಂಬುದಾಗಿ ನೀತಿಯ ಬೋಧನೆ ಮಾಡಿರುವನು.

ಶರೀಫರಂತೆ ಹಿಂದೂ-ಮುಸ್ಲಿಂ ಭಾವೈಕ್ಯದ ಪ್ರತೀಕವೆಂಬಂತೆ ತಮ್ಮದೊಂದು ರಿವಾಯತ್ ಪದದಲ್ಲಿ ಹೀಗೆಂದಿದ್ದಾನೆ.

"ಆನಂದದಾಲಾವಿ ಆಡೂನು ಬಾ ಕೂಡಿ! ಅಂಗವೆಂಬ ಏಹೋ! ಅಂಗವೆಂಬೋ ಮಸೀದೆಯನ್ನು ಮಾಡಿ ಆತ್ಮದೇವರು ಅದರೊಳು ಕುಂತಾರ ಫೀರಾ. ಭಕ್ತಿಯೆಂಬ ಕುಂಡದೊಳಗೆ ಜ್ಞಾನವೆಂಬುದೇ ಬೆಂಕಿ. ಅದರಲ್ಲಿ ಪುಟ ಮಾಡಿ ಕಾಮ, ಕ್ರೋಧಗಳೆಂಬ ಕಟ್ಟಿಗೆಯನ್ನು ಹಾಕಿ ಒಳಗೆ ನೂಕಿ ಮಹಾ ತೇಜದೊಳು ನೋಡಿ ಆಡೋಣ ಕೂಡಿ ಜೋಡಿ ಎಂದು ಹೇಳುತ್ತ ನಿತ್ಯ ಮುಕ್ತಿ, ನಿರ್ವಿಕಾರವಾದ, ಪರಬ್ರಹ್ಮನವತಾರವೂ ಆದ ಪರಮಾತ್ಮನ ಹೊಂದಿ ಅನಂತ ಕಾಲವೂ ಶಿವಭಜನೆಯನ್ನು ಮಾಡುತ್ತ ಪೂರ್ಣದೃಷ್ಟಿಯಿಂದ ಮನ ಮುಟ್ಟಿ ಸ್ತುತಿಸೋಣವೆಂಬ ಆರ್ತ ಭಕ್ತಿಯು ಇದರಲ್ಲಿದೆ.

ಭಕ್ತಿಮಾರ್ಗ ಪ್ರತಿಪಾದಕರಾದ ಅಲಭ್ಯೆರಿಯು ದೇವ ದೇವತೆಯರನ್ನು ಪ್ರಾರ್ಥಿಸಲು ಮಾನವರಿಗೆ ಬೋಧಿಸಿರುವನು. ಯಾವುದೇ ಧರ್ಮ, ಮತ, ಪಂಥಗಳ ಮಿತಿಯೊಳಗೆ ಸಿಲುಕಬೇಡಿರಿ. ಮೇಲು-ಕೀಳಿನ ಜಾಡ್ಯ ಕಳೆಯಿರಿ ಎಂದು ಈ ಸಂಕಲನದಲ್ಲಿರುವ ತತ್ವ ಪದಗಳ ಮುಖ್ಯ ವಸ್ತು ವಿಷಯವಾಗಿದೆ. ಪದ ೯೬ ರಲ್ಲಿ ಹೇಳಿಕೆ ಹೀಗಿದೆ.

"ನಾನು ನೀನು ಅಂಬುವ ಭೇದ ಬೇಡಾ ।ಪ।
ಭೇದ ವಾದ ಮಾಡುವುದೆ ಬಡಾ ।
ತಿಳಿಯದೆ ಅರ್ಥದ ಗೂಢಾ ।
ಸತ್ಯವಾಗುವುದು ಮುಕ್ತಿಯ ಕೇಡಾ।"[೨೫]

ಮುಕ್ತಿ ಪಡೆಯುವದೊಂದೇ ಗುರಿಯಾಗಬೇಕೆಂಬ ಅಭಿಪ್ರಾಯವಿದರಲ್ಲಿದೆ. ದ್ವೈತ ಅದ್ವೈತವೆಂಬ ವಾದ ಮಂಡನೆಯೂ ಬೇಡವೆಂದು ಹೇಳುತ್ತ ಅದ್ವೈತವಾದಿಯ ಕೂಡ-ದ್ವೈತವಾದಿ ತಾಳಲಾರನು ಮತ್ತು ಜೋಡು ಅಂದರೆ ಹೊಂದಾಣಿಕೆಯಾಗಲಾರನು ಎಂದು ನುಡಿದುದನ್ನು ಗಮನಿಸಿದರೆ ಶ್ರೀ ಗುರು ಚನ್ನವೃಷಭೇಂದ್ರ ಮಹಾಸ್ವಾಮಿಜಿಯವರ ಕರಸಂಜಾತನಾಗಿ ಕವಿಯೂ ಅದ್ವೈತ ಮತದ ಅನುಯಾಯಿಯಾಗಿದ್ದರೆಂಬುದು ಇದರಿಂದ ವಿದಿತವಾಗುತ್ತದೆ.

ಪದ ೧೦೭ ರಲ್ಲಿ ಕೆಲವು ಕೋಮಿನವರು ಶೀಲ-ಮಡಿವಂತಿಕೆ ಮಾಡುವುದನ್ನು ಕುರಿತು ಹೇಳಿದಂತಿದೆ. ಬ್ರಾಹ್ಮಣರು ಕೆಳಸ್ತರದ ಜನರೊಂದಿಗೆ ಬೆರೆಯಲಾರರು, ಈಗಲೂ ಅವರು ಊರಲ್ಲಿ ಬಂದರೆ ಹೊಲೆಯ ಜನಾಂಗದವರು ಮುಟ್ಟಿದರೆ ಮೈಲಿಗೆಯಾದೆವು ಎಂದು ಭಾವಿಸಿ, ಮನೆಗೆ ಹೋದ ತಕ್ಷಣವೇ ಸ್ನಾನ ಮಾಡಿ ಮಡಿಯಾದೆವು, ಎನ್ನುವ ಸಂಪ್ರದಾಯ ಇನ್ನೂ ಕೆಲಕಡೆ ಇದೆ. ಇದನ್ನು ಕಂಡು ರೇಗಿ ರಚಿಸಿದ ತತ್ವಪದವಿದಾಗಿರಬಹುದು.

"ತೊಗಲ ಮಲ್ಯಾಗಿನ ಹಾಲ ಕುಡಿದು ನೀವು
ಶೀಲ ಮಾಡತೀರಿ ಸರ್ವರೆಲ್ಲಾ
ತೊಗಲಿನ ಆಟ ತಿಳಿಯದು ತಮ್ಮಾ
ತಗಲ ಮಾತ ತುಸು ಚೂರಿಲ್ಲಾ
ತೊಗಲಿನೊಳಗೆ ತೊಗಲ ಹುಟ್ಟಿತಲ್ಲಾ
ಕಾಮನಾಟ ಕೇಳೊ ಕಡೆ ಮೊದಲಾ।"[೨೬]

ಎಂಬೀ ಸಾಲುಗಳಿಂದ ಪ್ರಾರಂಭವಾಗುವ ಈ ಪದ ಹಿಂದೆ ಈ ಕವಿಯೇ ಹೇಳಿದ ಪದ ೨ ರಲ್ಲಿಯ "ತೊಗಲಿನದೇ ದೇಹ ತೊಗಲಿನದೋ" ಎನ್ನುವುದಕ್ಕಿಂತಲೂ ಭಿನ್ನವಾಗಿದೆ. ಅದರಲ್ಲಿ ಅಹಂಕಾರ ತತ್ವವಿದ್ದರೆ ಸ್ಥಿರವಿಲ್ಲದೀ ಕಾಯ ಹುಟ್ಟಿ ಬಂದುದೇನೋ ನಿಜ ಮುಂದೆ

ಸಾಯುವುದಂತೂ ಖಚಿತ; ಎಲ್ಲರ ಶರೀರದೊಳಗೆ ಹರಿದಾಡುತ್ತಿರುವ ರಕ್ತ ಒಂದೇಯಾಗಿರುತ್ತದೆ. ಬೇರೆ ಬೇರೆ ಜಾತಿಯವರಿಗೆ ಬೇರೆಬೇರೆ ರೀತಿಯ ಬಣ್ಣದ ರಕ್ತವಿರಲಾರದು. ಇದೆಲ್ಲ ಗೊತ್ತಿದ್ದೂ ಶೀಲ ಮಾಡುತ್ತೀರಿ, ಇಲ್ಲದ ಬಡಿವಾರ ಮಾಡ್ತೀರಿ ಎಂದು ಕವಿ ಅಂಥ ಜನರನ್ನು ಕಂಡು ರಚಿಸಿದ ಪದವಿದಾಗಿದೆ.

"ಕಂಡ ರಕ್ತ ಕಾಯಾ ರೂಪ ಕಣ್ಣಿಗೆ
ಛಾಯಾ ಕಾಣಿಸುವುದು ಈ ತೊಗಲಾ
ಕುಡಗೋಲ ಹಿಡಿದು ಕೂಲಿಯ ಮಾಡಿ
ತುಂಬಿಸಬೇಕೋ ಈ ಚೀಲಾ
ಒಂದು ದಿನ ಅನ್ನವಿಲ್ಲದಿದ್ದರೆ
ಸೈಲ ಬೀಳುವುದು ಈ ತೊಗಲಾ"[೨]

ಅನ್ನಮಯ ಕೋಶ ಈ ದೇಹ ದುಡಿದು ಅನ್ನ ಸಂಪಾದಿಸಿ ದೇಹವೆಂಬ ಚೀಲಕ್ಕೆ ತುಂಬಿದಾಗ ಮುಂದಿನ ಕ್ರಿಯೆಗಳು, ಪ್ರಾರಂಭ. ರಕ್ತ, ಮಾಂಸ, ಎಲುವಿನ, ಹಂದರದ ಮೇಲೆ ತೊಗಲಿನ ಹೊದಿಕೆಯಿಂದಲೇ ಮಾನವಾಕೃತಿಯ ಸ್ವರೂಪದಿಂದ ಅಂದ-ಚಂದ ಕಾಣುವುದು. ಸರಿಯಾದ ಕ್ರಮದಲ್ಲಿ ರಕ್ತ ಸಂಚಾರವು ದೇಹದಲ್ಲಾಗುತ್ತಿದ್ದರೆ ಮಾತ್ರ ದೇಹದ ಆಟ ರಕ್ತ ಸಂಚಲನ ನಿಂತಿತೆಂದರೆ, ಆತ ಸತ್ತಂತೆಯೇ. ಆದುದರಿಂದ ಹುಟ್ಟು-ಸಾವಿನ ಮಧ್ಯದಲ್ಲಿರುವ ಜೀವನದ ಇರುವಿಕೆ ಮುಖ್ಯವಾದುದು ಅದನ್ನು ಪರಮಾತ್ಮನ ಧ್ಯಾನ ಮತ್ತು ಅನುಸಂಧಾನಕ್ಕಾಗಿ ತೊಡಗಿಸಿಕೋ ವ್ಯರ್ಥಕಾಲ ಹರಣ ಮಾಡಬೇಡ ಜಾತಿ ವಿಜಾತಿ, ಮೇಲು-ಕೀಳು, ಶೀಲ-ಕುಲ ನೆಲೆಗಳಲ್ಲಿಯೇ ವ್ಯಾಕುಲಗೊಳ್ಳಬೇಡ" ಮಾನವ ಕುಲಂ ತಾನೊಂದೆ ವಲಂ" ಎಂದು ಆದಿಕವಿ ಪಂಪನು ಹೇಳಿದ್ದುದನ್ನು ಸ್ಮರಿಸಿಕೋ ತರತಮ ಭಾವನೆಯನ್ನು ಕಿತ್ತು ಹಾಕು ಎಂದು ಹಿತೋಕ್ತಿಯ ನೀತಿಯ ತತ್ವಪದವಿದಾಗಿದೆ.

ಶಿಶುನಾಳ ಶರೀಫ ಸಾಹೇಬರು ಯಾವುದಕ್ಕೂ ಅಂಜಿದವರಲ್ಲ. "ನ್ಯಾಯ ನಿಷ್ಠುರ ದಾಕ್ಷಿಣ್ಯಪರ ನಾನಲ್ಲ. ಲೋಕ ವಿರೋದಿ ಶರಣನಾರಿಗೂ ಅಂಜುವವನಲ್ಲ ಎಂಬ ಬಸವಣ್ಣನವರ ಧೀರೋಕ್ತಿಯಂತೆ ಜಾತಿ-ಕುಲಗಳನ್ನು ಖಂಡಿಸಿದವರು. ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬನೂ [ತಾಯಿಯ ಮೊಲೆಯೆ] ತೊಗಲ ಮಲಿಯ ಹಾಲು ಕುಡಿದು ದೊಡ್ಡವನಾದರೂ ತಮ್ಮ-ತಮ್ಮೊಳಗೆ ತರ-ತಮ ಭಾವ ಪ್ರಕಟಿಸುವುದನ್ನು ನೋಡಿ ಕಸಿವಿಸಿಗೊಂಡು ಈ ಪದ ರಚಿಸಿದರೆಂದು ತೋರುತ್ತದೆ. ಅದು ಹೀಗಿದೆ.

"ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ
ಶೀಲ ಮಾಡತೀರಿ ನಾಡೆಲ್ಲಾ

ತೊಗಲಿನಾಟಾ ತಿಳಿಯದೋ ತಮ್ಮಾ
ತಗಲು ಮಾತು ಒಂದು ಚೂರಿಲ್ಲಾ
ಕುಡುಗೋಲ ಹಿಡಿದು ಕೂಲಿ ಮಾಡಿ
ತುಂಬಿಸಬೇಕೋ ಈ ಚೇಲಾ
ಒಂದರ ಘಳಗಿ ಅನ್ನವಿಲ್ಲದಿರೆ
ಸೈಲ ಬೀಳತೈತೋ ಈ ಚೇಲಾ ।೧।
ಜಪತಪ ಎಂದು ಸನ್ಯಾಸಿಯಾಗುತಿ
ಬೂದಿಯೆಲ್ಲ ಮೈಯಗೆ ಪೂಸಿ
ಶಿವ ಶಿವ ಎಂದು ಶಿವಧ್ಯಾನ ನಡಸತಿ
ತೊಗಲ ಮ್ಯಾಲ ಕೂತು ಜಪ ಎಣಿಸಿ”[೨೮]

ಎಂಬಿ ಶರೀಫರ ಸಾಲುಗಳನ್ನು ಓದುತ್ತಿದ್ದಂತೆಯೇ ಅಲಭೈರಿ ಕವಿಯು ಈ ಪದದ ಹೋಲಿಕೆ ಎದ್ದು ಕಾಣುತ್ತದೆ. ಇವರಿಬ್ಬರದೂ ಸಮಾನ ಧೋರಣೆ ಈ ಪದಕ್ಕೆ ಸಾಟಿಯಾಗಿದೆ ಎಂದೆನಿಸುತ್ತದೆ.

“ನಾ ಆದರೇನೊ ನೀ ಆದರೇನೊ ನೀ
ಅರಸೀನೊ ಪಶ್ಚಾ ಬೀರಬಲ್ಲನೊ
"ತೊಗಲ ತೊಳಕೊಂಡು ಮಡಿಯ ಮಾಡತೀರಿ
ನೀ ಬಾಳ ಅತಿಕೊಳಕ ಪಿಕನಾಶಿ
ಜಪತಪವೆಂದು ಸನ್ಯಾಸಿ ಆಗತೀರಿ
ಬೂದಿ ತಂದ ಕೈಯಿಂದ ಪೂಸಿ
ಶಿವ ಶಿವ ಎಂದು ಪೂಜೆ ಮಾಡತೀರಿ
ತೊಗಲ ಮೇಲೆ ಕೂತು ಜಪಾ ಮುಗಿಸಿ
ಮಿಗಿಲಾದ ತೊಗಲಿದು ತಗಲಿಲ್ಲ ಇದರೊಳು।”[೨೯]

ಇವರಿಬ್ಬರ ಈ ಎರಡೂ ಪದಗಳಲ್ಲಿ ಏಕಸೂತ್ರತೆಯಿದೆ. ವಚನಕಾರರು ಹೇಳಿದಂತೆ– 'ನಡೆವುದೊಂದೆ ಭೂಮಿ ಕುಡಿವುದೊಂದೆ ನೀರು, ಸುಡುವಗ್ನಿಯೊಂದೆ ಇರುತಿರಲು– ಕುಲಗೋತ್ರ ನಡುವೆ ಎತ್ತಣದು ಎನ್ನುವ ಸರಿಸಮಾನತೆ ಹಾಗೂ ಜಾತ್ಯಾತೀತ ಮನೋಭಾವದ ಸರ್ವಜ್ಞನಂತೆ ಶರೀಫರು, ಅಲಭೈರಿಯೂ ಕುಲಭೇದಗಳು ಕೃತಕವೆಂದು ಹಾಗೂ ಅವುಗಳ ಬೆಳವಣಿಗೆ ಸಮಾಜಕ್ಕೆ ಆರೋಗ್ಯಕರವಲ್ಲವೆಂದು ಎಚ್ಚರಿಸಿದರು.

ಇನ್ನುಳಿದ ಪದಗಳಲ್ಲಿ ಅಲಭೈರಿಯು ಮಾನವ ಲೋಕಕ್ಕೆ ಎಚ್ಚರಿಕೆಯ ಮಾತುಗಳನ್ನು ಕೊಟ್ಟಿದ್ದಾನೆ, ಮಾಯಾ ಪ್ರಪಂಚವಿದು. ಇದರಲ್ಲಿ ಧುಮುಕಿ ಈಜಿ ಪಾರಾಗುವದು ಬಲು

ಕಠಿಣ. ಆದುದರಿಂದ ಸಾಧು-ಸಂತ ಮಹಾತ್ಮ ಸತ್ಪುರುಷರ ಪಾದವ ಹಿಡಿದು ಗಟ್ಟಿಯಾಗಿ ಕುಳಿತು ಧ್ಯಾನ, ತಪವ-ಭಜನೆಯನು ಮಾಡಿರೋ; ಹೊಟ್ಟೆಗಾಗಿ ದುಡಿದು ಮಿಕ್ಕ ಅವಧಿಯಲಿ ಈ ಕಾರ್ಯವೆಸಗಿರೋ ಎಂದಿದ್ದಾನೆ.

ನಾನು-ನೀನು ಅಂಬುವ ಭೇದ ಬೇಡವೋ ಮುಕ್ತಿಯನು ನೀಡುವ ಕರುಣಾಸಾಗರನಾದ ಪರಶಿವನ ಪುಣ್ಯವನು ಪಡೆದು ಜೀವನವನ್ನು ಪಾವನ ಮಾಡಿಕೋ ಎಂಬುದಾಗಿ ಪದ ೯೮, ೯೯, ೧೦೦, ೧೦೧, ೧೦೨ ರಲ್ಲಿ ಬೋಧನೆ ಮಾಡಿದ್ದು ಕಂಡು ಬರುತ್ತದೆ. ಆತ ಪರಬ್ರಹ್ಮ ನಿರ್ಗುಣ, ನಿರ್ವಿಕಾರನು ಆತ ಬಹುದೂರನು ಅಖಂಡ ಸುಖಸಾಗರನು ಆತನಿಗೆ ಮಹೇಶ್ವರನೆಂದೂ, ಮಹಾಯೋಗಿ, ಪುರುಷೋತ್ತಮ ಮುಂತಾದ ಹೆಸರುಗಳಿಂದ ಕರೆಯುತ್ತೇವೆ. ಆರಾಧನೆ ಮಾಡುತ್ತೇವೆ. ಆದುದರಿಂದ ಮಾನವರೇ ನೀವೂ ಮಹಾಮಾನವರಾಗುವ ಶಕ್ತಿಯಿದೆ ಅದರ ಸದ್ಬಳಿಕೆ, ಸದುಪಯೋಗವಾಗಬೇಕಿದೆ. ಸಂಸಾರ ಶೋಭೆಯು ಈಶ-ಜೀವ-ಜಗವು ಆದದ್ದು ಚಿನ್ಮಯ ಸ್ವರೂಪನಾದ ಶಿವನಿಂದ ಅದು ಕಾರಣ ಹೇ ಮನುಜನೆ ಸಾರಾಸಾರ ಅರಿಯೋ ಶಾಸ್ತ್ರದ ಬೋಧೆಯನು ಹಾರೂಗೇರಿಯೊಳು ಪಡೆಯೋ ದೇವರ ಕೃಪೆಯಾ ಗುರುವರ ಲೀಲೆಯನು ಎಂದು ಮಹಾಸ್ವಾಮೀಜಿಯವರ ಅನುಗ್ರಹ ಪಡೆಯಿರೆಂದು ಜನತೆಗೆ ಕರೆ ಕೊಟ್ಟ ಕ್ರಮವಿದೆ. ಪ್ರತಿವರ್ಷವೂ ಮತ್ತು ಶ್ರಾವಣ, ಯುಗಾದಿ, ವಿಜಯದಶಮಿ, ದೀಪಾವಳಿ ಈ ಮುಂತಾದ ಹಬ್ಬಹರಿದಿನಗಳಲ್ಲಿ ಶ್ರೀ.ಮಠದಲ್ಲಿ ಜರುಗುವ ಅಧ್ಯಾತ್ಮದ ಶಾಸ್ತ್ರ-ಪ್ರವಚನದ ಕಾರ್ಯಕ್ರಮಗಳಿಗೆ ಹೋಗುವಂತೆ ಜನತೆಗೆ ಪ್ರೇರಣೆ ನೀಡಿದ್ದಾನೆ ಕವಿ.

ದೇಹವು ಇದ್ದರೆಷ್ಟು, ಬಿಟ್ಟರೆಷ್ಟು, ಸುಟ್ಟರೆಷ್ಟು ಮೋಹ ಬಂಧನದಿಂದ ಮುಕ್ತಿ ಹೊಂದಬೇಕು. ಮೋಹದ ಬಾಧೆಯು ನೀಗಿ ನಿರಂತರ ಅಹಂಭಾವ ನೀಗಿದವನೇ ಮುಕ್ತಿ ಪದವಿ ಹೊಂದಬಲ್ಲ. ಯಾವುದೇನೆ ಇದ್ದರೂ ಇದ್ದೂ ಇಲ್ಲದಂತಿದ್ದರೆ ಸಮಾಧಾನದ ಬದುಕಿಗೆ ಆಸರೆಯಾಗುತ್ತದೆ. ಸತಿ-ಸುತ-ಧನ-ಕನಕ-ವಸ್ತು ಒಡವೆಗಳ ಬೆಂಬತ್ತಿ ಕೆಡಬೇಡ ಎಲೆ ಮನುಜನೇ ತನು-ಮನ-ಧನವನ್ನು ಗುರು-ಲಿಂಗ-ಜಂಗಮಕ್ಕರ್ಪಿಸಿ ಶಾಂತ ಚಿತ್ತನಾಗಿರು ಎಂದು ದಾನದ ಮಹಿಮೆಯನ್ನು ಗುರುತಿಸಿದ್ದಾನೆ. [ಪದ-೧೦೩ ರಲ್ಲಿ ನೋಡಬಹುದು].

ತತ್ವಪದ ೧೦೪ ರಲ್ಲಿ ಕವಿಯು ಎಲ್ಲವನ್ನೂ ತೊರೆದು ಗುರುಪಾದಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡಿದ್ದಾನೆ. ಕವಿಯು ಶ್ರೀಗುರುವನ್ನು ಅನನ್ಯ ಪ್ರೀತಿಯಿಂದ ಆರ್ತ ಭಕ್ತಿಯಿಂದ ಪ್ರಾರ್ಥಿಸಿಕೊಂಡ ಬಗೆಯಿದೆ.

"ಗುರುವೆ ನಿಮ್ಮ ಕರುಣ ಒಂದೇ ಸ್ಥಿರವಾಗಿರಲಿ
ಧರೆಯ ಭೋಗ ಸುಖಗಳೆನಗೆ ದೊರೆಯದ್ಹೋಗಲಿ

ಸಿರಿಯ ಸಂಪತ್ತವರಿಗೆ ಬಂದು ಸುಖಿಯಾಗಲಿ
ಹೆಂಡಿರು, ಮಕ್ಕಳು ಕಳದು ಹೊನ್ನು ಮಣ್ಣು ಕೂಡಲಿ
ಕಂಡ ಕಂಡವರೆನಗೆ ಬೋರ್‍ಯಾನೆಂದು ಕರೆಯಲಿ
ಗುಂಡನಿಕ್ಕಿ ಕೊಂದು ಎನ್ನ ಕೊಳಕ್ಕೆಸೆಯಲಿ
ಖಂಡ ಮಾಂಸವನ್ನೆಲ್ಲಾ ಹದ್ದು ಕಾಗೆ ಹರಿಯಲಿ
ಅನ್ನ ಅಂಬುದೇನು ಎನಗೆ ದೂರ ಎದ್ದೋಗಲಿ
ಬಣ್ಣ ಬಡಿಸಿ ಜನರೊಳೆನ್ನ ಮಾನ ಕಳೆಯಲಿ
ಎನ್ನ ಕಾಡಿದವರಿಗಿಂದೇ ಪರಮ ಪದವಿ ದೊರೆಯಲಿ
ಹೆಣ್ಣು ಗಂಡು ಹುಟ್ಟಿ ಮಕ್ಕಳವರಿಗಾಗಲಿ
ಹಿಡಿತದಿಂದಿದ್ದ ಮಿತ್ರರೆಲ್ಲಾ ಶತ್ರುವಾಗಲಿ
ಮಥನ ಮಾಡಿ ಭೇದವನ್ನು ಬಯಲಿಗೆಳೆಯಲಿ
ಕ್ಷಿತಿ ಮನದ ನರರು ಸತತ ಎನ್ನ ಕಾಡಲಿ
ಪತಿಯ ಹರಗಿರಿ ವೃಷಭನಾಥನ ದಯವಿರಲಿ।"[೩೦]

ಎಂಬೀ ತತ್ವಪದವನ್ನು ಗಮನಿಸಿದರೆ ಈ ಕವಿಯ ಜೀವನದಲ್ಲಿ ಏನೋ ಒಂದು ಘಟನೆ ಸಂಭವಿಸಿದಂತೆ ಭಾಸವಾಗುತ್ತದೆ. ಈ ಪದ ಪ್ರತಿಯೊಬ್ಬನಿಗೂ ಒಪ್ಪಿತವಾಗುವಂತಹದ್ದೆಂದು ತಿಳಿದು ಬರುವ ಸಂಗತಿ. ದುಡಿದು ಗಳಿಸಿ ತಿಂದುಂಡು ಉಳಿದುದನ್ನೆಲ್ಲವನ್ನು ಇಲ್ಲಿಯೇ ಬಿಟ್ಟು ಹೋಗುವುದಿದೆ. ಹಾಗಾದರೆ ಇಷ್ಟೇಕೆ ಬದುಕಿಗಾಗಿ ಹಪಹಪಿ ಪಡಬೇಕು? ಎಂದೆನಿಸುವಂತಿದೆ.

ಈ ಪದ ಮುಪ್ಪಿನ ಷಡಕ್ಷರ ಶಿವಯೋಗಿ [ಮುಪ್ಪಿನಾರ್ಯ] ಯ" ತಿರುಕನೋರ್ವ ಊರ ಮುಂದೆ ಮುರುಕು ಧರ್ಮ ಶಾಲೆಯಲ್ಲಿ ಒರಗಿರುತ್ತಲೊಂದು ಕನಸು ಕಂಡನು." ಎಂಬ ತತ್ವಪದವನ್ನು ನೆನಪಿಸುತ್ತದೆ. ಎಲ್ಲವನ್ನೂ ತೊರೆದು ವಿರಾಗಿಗಳಾದವರಿಗೆ ಈ ರೀತಿಯಾಗುತ್ತದೆ ಎಂಬುದಕ್ಕೆ ಸಾಕಷ್ಟು ನಿದರ್ಶನಗಳುಂಟು.

ಅಲ್ಲಮ-ಅಕ್ಕಮಹಾದೇವಿಯರು ಇದಕ್ಕೆ ಶ್ರೇಷ್ಠ ಉದಾಹರಣೆ. ಅಲಭ್ಯೆರಿ ಕವಿಯ ಈ ಪದವು ಅಕ್ಕನ ವಚನದಂತಿದೆ. ತಂದೆ-ತಾಯಿ, ಬಂಧು-ಬಳಗವೆಲ್ಲವನ್ನು ತೊರೆದು ದಿಟ್ಟತನದಿಂದ, ಸಕಲವೆಲ್ಲವನ್ನೂ ತೊರೆದು ಶ್ರೀಶೈಲ ಮಲ್ಲಿಕಾರ್ಜುನನೇ ಎನ್ನ ನಿಜ ಪತಿಯೆಂದು ಶ್ರೀಶೈಲ ಕ್ಷೇತ್ರದೆಡೆಗೆ ಹೋಗುವಾಗ ಮಧ್ಯದಲ್ಲಿ ಅನೇಕ ಆತಂಕ ಎಡರು-ತೊಡರು ನೋವು ದುಃಖಗಳನ್ನು ಎದುರಿಸಬೇಕಾಯಿತು. ಅಕ್ಕ ಮೊದ-ಮೊದಲು ಕಂದ

ಮೂಲ ಆಹಾರ ಹಣ್ಣು-ಹಂಪಲಗಳನ್ನು ಸೇವಿಸಿದಳು. ಎಂಬುದಾಗಿ ಅಕ್ಕನ ವಚನದಿಂದ ತಿಳಿದು ಬರುತ್ತದೆ.

"ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆ
ಗಿಡ ಗಿಡ ತಪ್ಪದೆ ಬೇಡಿದೆನೆನ್ನಂಗಕ್ಕೆಂದು
ಅವು ನೀಡಿದವು ತಮ್ಮ ಲಿಂಗಕ್ಕೆಂದು
ಆನು ಬೇಡಿ ಭವಿಯಾದೇನು ಅವು ನೀಡಿ ಭಕ್ತರಾದುವು
ಇನ್ನು ಬೇಡಿದೆನಾದರೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ।"[೩೧]

ಎಂದು ಪ್ರತಿಜ್ಞೆ ಮಾಡಿರುವುದನ್ನು ಗಮನಿಸಿದರೆ ಅಧ್ಯಾತ್ಮ ಪ್ರಪಂಚದಲ್ಲಿ ಅಮರತ್ವ ದೊರೆಯುತ್ತದೆ. ಒಡಲ ಕಳವಳ, ಪ್ರಾಣದ ತಳಮಳವನ್ನು ಹಸಿವು-ತೃಷೆ-ನಿದ್ರೆ-ಕಾಮಗಳ ದಾರಿಯನ್ನು ಅಲುಗದ ನಿರ್ಧಾರದಿಂದ ಎದುರಿಸಿ, ಜಯಿಸಿ, ಗಿಡ-ಮರಗಳಿಗೂ ಕೈಯೊಡ್ಡಿ ಬೇಡಿದಂಥ ಆಶಾರಹಿತ್ವವನ್ನು ಸಾಧಿಸಿದ ಈ ಅಕ್ಕನಿಗೆ ಎಷ್ಟು ಮಣಿದರೂ ಕಡಿಮೆಯೆ! ಆದರೆ ಇದಕ್ಕೂ ಮೊದಲು ಅಕ್ಕ ತುಳಿದ ದಾರಿ ಸ್ವಲ್ಪ ಬೇರೆ ರೀತಿಯದಾಗಿದ್ದಿತು. "ನಾನು ಬೇಡಿದರೂ ನೀಡದಂತೆ ಮಾಡು: ಎಂಬ ನಿಷೇಧಾತ್ಮಕ ವೈರಾಗ್ಯದ ದಾರಿಯದು ಅದು ಹೀಗಿದೆ.

"ಮನೆಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ
ಬೇಡಿದೊಡೆ ಇಕ್ಕದಂತೆ ಮಾಡಯ್ಯ
ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ
ನೆಲಕ್ಕೆ ಬಿದ್ದೊಡೆ ನಾನೆತ್ತಿಕೊಂಬುದಕ್ಕೆ ಮುನ್ನವೇ
ಶುನಕ ಎತ್ತಿಕೊಂಬಂತೆ ಮಾಡಯ್ಯ ಚೆನ್ನಮಲ್ಲಿಕಾರ್ಜುನಯ್ಯ।"[೩೨]

ಈ ನಿಷೇಧಾತ್ಮಕ ವೈರಾಗ್ಯವೇ ಮಾಗಿ, ತರು ಮರಗಳನ್ನೇ ಆಗಲಿ, ಬೇಡುವುದೇ ಬೇಡವೆಂದು ನಿಶ್ಚಯಾತ್ಮಕ ವೈರಾಗ್ಯದ ತಣಿವೆಣ್ಣಾಗಿ, ಅಕ್ಕನ ಬಾಳು ಗೆದ್ದಿತೆಂಬಂತೆ ಅಲಭ್ಯೆರಿಯು ಎಲ್ಲವನ್ನು ಎಲ್ಲರನ್ನು ತೊರೆದು ಗುರುವಿನ ಪಾದಕ್ಕೆ ಶರಣಾಗತರಾಗಿರಿ ಮೋಕ್ಷ ಪಡೆಯಿರಿ ಎಂಬ ವಿರಕ್ತಿಯ ಭಕ್ತಿಯನ್ನು ತನ್ನ ಪದದಲ್ಲಿ ವ್ಯಕ್ತ ಮಾಡಿರುವುದನ್ನು ಗಮನಿಸುವಂತಿದೆ.

ಈ ಸಂಕಲನದ ೧೦೯, ೧೧೦, ೧೧೧ ರ ತತ್ವಪದಗಳು ಲೀಲಾಮಠದ ಅಧಿಪತಿ ಶ್ರೀ ಚನ್ನವೃಷಭೇಂದ್ರ ಮಹಾಸ್ವಾಮೀಜಿಯವರ ಕುರಿತಾಗಿವೆ. 'ಆತ ಈಶ್ವರನ ಅವತಾರಿ, ಹಾರೂಗೇರಿಯನ್ನು ಭೂಕೈಲಾಸವನ್ನಾಗಿ ಮಾಡಲು ಬಂದವನು. ಅದ್ವೈತ ಶಿಖಾಮಣಿ, ಸಾಧು ಚಕ್ರವರ್ತಿ, ಸಾರ್ವಭೌಮ' ಎಂಬಿತ್ಯಾದಿಯಾಗಿ ಆತನ ವ್ಯಕ್ತಿತ್ವವನ್ನು ಬಣ್ಣಿಸಿರುವನು.

“ಯಾರು ನೋಡಣ್ಣಾ ಇವರಾರು ಹೇಳಣ್ಣಾ
ಯಾರದೇನ ದರಕಾರವಿಲ್ಲದಲೆ ಡುರಕಿ ಹೊಡಿವರಣ್ಣಾ ।ಪ।
ಬಡಿಗೆ ಹಿಡಿದಾರಣ್ಣಾ ತಲೆಯೊಳು ಜಡೆ ಬಿಟ್ಟಾರಣ್ಣಾ
ತೀಡಿ ತಿದ್ದಿದಾ ಮುಖದ ಮೇಲೆ ಗಡ್ಡಮೀಸೆಗಳುಂಟಣ್ಣಾ ।೧।
ಭಗವಾ ತೊಟ್ಟಾರಣ್ಣಾ ಹಣೆಯೊಳು ಭಸ್ಮಾಧರಿಶಾರಣ್ಣಾ
ಅಂಗದ ಮೇಲೆ ಲಿಂಗ-ರುದ್ರಾಕ್ಷಿ ಕಂಗೊಳಿಸುವದಣ್ಣಾ ।೨।
ಪರಮಾರ್ಥವನ್ನಾ ತಿಳಿಸಿ ಪೊರೆದವ ಭಕ್ತರಣ್ಣಾ
ಹಾರೂಗೇರಿ ಅಲಭ್ಯೆರಿಯ ಗುರು ಅಂತಾ ಸಾಧು ಇವರಣ್ಣಾ!”[೩೩]

ಚನ್ನವೃಷಭಾರೂಢ ಶಿವಾದ್ವೈತ ನಿರಾಭಾರಿ ವೀರಶೈವ ವಿರಕ್ತ ಷಟ್‌ಸ್ಥಲ ಚಕ್ರವರ್ತಿ ನಿರಾಭಾರಿ ಜಂಗಮ ರೂಪತಾಳಿ ಹಾರೂಗೇರಿಗೆ ಆಗಮಿಸಿದ ದೇವರಕೊಂಡಜ್ಜನವರಿಗೆ ಜಯವಾಗಲೆಂದು ಮತ್ತೊಂದು ಪದದಲ್ಲಿ ಕವಿಯ ಪರಾಕು ಇದೆ. ಭಕ್ತರಿಗಾಗಿ ಬಂದನು ಹಾರೂಗೇರಿಗೆ, ಈ ಪುರವನು ಉದ್ಧಾರಗೈಯಲು ಬಂದವನು ಆ ಮಹಾಪುರುಷನು.

ಭವಿಗಳ ದೃಷ್ಟಿಗೆ ಉಗ್ರರೂಪ ಭಾವದುಳ್ಳಾ ಹೊತ್ತು ಕರುಣ ರಸವನು ಹರಿಸುವಂತಹ ಸದ್ಗುರು ಯೋಗಿ ಹಾರೂಗೇರಿಗೆ ದಯಮಾಡಿಸಿದ್ದುದು ನಮ್ಮ ಭಾಗ್ಯವೆಂದೇ ಬಗೆದು ಸಂತಸದಿಂದ ಕವಿಯೊಂದಿಗೆ ಇತರರೂ ಹಾಡಿ ನಲಿದಿದ್ದಾರೆ. ಈ ಸದ್ಗುರುವಿನ ಮಹಿಮೆಯಿಂದಲೇ ಈ ಊರು "ಹರನಗಿರಿ" ಆಯಿತೆಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಹೀಗೆ ಹಾರೂಗೇರಿಯ ಉದ್ಧಾರಕನೂ ಮಹಾಪುರುಷನೂ ಆದಂತಹ ಸದ್ಗುರು ಚನ್ನವೃಷಭೇಂದ್ರ ಮಹಾಸ್ವಾಮೀಜಿಯವರ ಕುರಿತು ರಚಿಸಿದ ಮಂಗಳಾರತಿ ಪದದೊಂದಿಗೆ ಈ ಕೃತಿಯು ಮುಕ್ತಾಯಗೊಂಡಿದೆ.

“ಆರತಿ ಬೆಳಗುವೆ ಶ್ರೀಗುರು ವರಗೆ
ಹರುಷದಿ ಪಾಡುವೆ ಎತ್ತಿ ಮಂಗಲವಾ
ಭವದಲಿ ಬಳಲುವ ಪ್ರಾಣಿಗಳಿಗೆ
ಭವದ ಮರ್ಮವ ನೆರೆ ಅರುಹಿದವಗೆ
ಉತ್ತಮನಿಗೆ ಮಹಾವಾಕ್ಯ ಬೋಧಿಪಗೆ
ಅತ್ಯಧಿಕದ ನಿಜಸುಖದೊಳಿರಿಸಿದವಗೆ
ಧರೆಯೊಳು ದೇವರಕೊಂಡ ಪುರದೊಳು ಜನಿಪಗೆ
ವರಗುರು ಶ್ರೀ ಚನ್ನವೃಷಭೇಂದ್ರ ಪ್ರಭುವಿಗೆ।”[೩೪]

ಎಂಬ ಮಂಗಲ ಗೀತೆಯೊಂದಿಗೆ ಈ ಕೃತಿಯು ಮುಕ್ತಾಯ ಕಂಡಿದೆ.

ಈ ಕೃತಿಯು ರಚನೆ ಮತ್ತು ಶೈಲಿಯ ದೃಷ್ಟಿಯಿಂದ ಜನಪದರ ನುಡಿಗಳ ಬಳಕೆಯೆ ಹೆಚ್ಚಾಗಿದ್ದು ಮರಾಠಿ ಪದಗಳೂ ಸೇರಿವೆ. ಜನಪದೀಯ ಶೈಲಿಯಿರುವುದರಿಂದ ಜನರಿಗೆ ಅಲಭ್ಯೆರಿಯ ಪದಗಳು ಇನ್ನೂ ಹತ್ತಿರವಾಗಿವೆ. ತಾಳ-ತಂಬೂರಿಯಂತಹ ವಾದ್ಯ ಸಲಕರಣೆಗಳೊಂದಿಗೆ ಹಾಡುವಂತಹ ತತ್ವ ಪದಗಳೇ ಇವಾಗಿರುವುದರಿಂದ ಭಜನಾ ಪದಗಳೆಂದೂ ಕರೆಯಲಾಗಿದ್ದು ಔಚಿತ್ಯಪೂರ್ಣವೇ ಸರಿ. ಈ ಪದಗಳು ಈ ಪರಿಸರದ ಜನತೆಯ ಮನೆ ಮಾತಾಗಿವೆ. ಭಜನೆಯ ಮೇಳಗಳನ್ನು ಕಟ್ಟಿಕೊಂಡು ಈಗಲೂ ಹಾಡುತ್ತ ಬಂದುದು ಕವಿಯ ಸ್ಮರಣೆಗೆ ಪೂರಕವಾಗಿದೆ. ಈತನ ಸಾಹಿತ್ಯ ರಚನೆಗೆ ಬೆಲೆ ಮತ್ತು ಪ್ರೋತ್ಸಾಹ ಬರುವಂತಾಗಿದೆ.

ಟಿಪ್ಪಣಿಗಳು :

೧. ಪರಿಪೂರ್ಣ : ಜಿ.ಟಿ. ಸ್ವಾಮಿ : ಪುಟ-೩೯,

೨. ಬಾಸ್ಕರ ಪತ್ತಾರ ಇವರ ಮೌಖಿಕ ಸಂದರ್ಶನದಿಂದ ಪಡೆದದ್ದು.

೩. ಶಿವಾನಂದ ಭಾರತಿ ಸ್ವಾಮೀಜಿ (ಪ್ರಕಾಶಕರು); ಶ್ರೀ ಚನ್ನವೃಷಭೇಂದ್ರ ಸ್ತೋತ್ರ ಮಾಲಾ ಪುಟ – ೬,

೪. ಅದೇ, ಪುಟ – ೭

೫. ಅದೇ,

೬. ಅದೇ, ಪುಟ-೮

೭. ರಾಮು ಅಲ್ಲಪ್ಪ ಸುಬ್ಬಣ್ಣವರ: (ಸಂ); ಶ್ರೀ ಜಿನಭಕ್ತಿಗೀತೆಗಳು : ಪುಟ-೩೫

೮. ಅದೇ, ಪುಟ – ೪೭

೯. ಅದೇ, ಪುಟ – ೩೨

೧೦. ಅದೇ, ಪುಟ – ೪೨

೧೧. ಅದೇ ಪುಟ – ೪೮

೧೨. ಅದೇ, ಪುಟ – ೩೧

೧೩. ಅದೇ, ಪುಟ – ೫೫

೧೪. ಅದೇ, ಪುಟ-೭೩, ೭೪

೧೫. ಆರ್. ಬಿ. ಚಿಲಮಿ (ಸಂ), ಅಲಭೈರಿ ವಿರಚಿತ ತತ್ವ ಪದಗಳು. ಪುಟ-೭

೧೬. ಅದೇ,

೧೭. ಅದೇ, ಪುಟ-೧೫.

೧೮. ಅದೇ, ಪುಟ-೨೩.

೧೯. ಅದೇ, ಪುಟ-೨೪.

೨೦. ಅದೇ, ಪುಟ-೨೫.

೨೧. ಅದೇ, ಪುಟ-೬೭.

೨೨. ಅದೇ,

೨೩. ಅದೇ, ಪುಟ-೬೯.

೨೪. ಅದೇ, ಪುಟ-೬೮.

೨೫. ಅದೇ, ಪುಟ-೮೩.

೨೬. ಅದೇ, ಪುಟ-೯೫.

೨೭. ಅದೇ,

೨೮. ಅ.ರಾ.ಸೇ (ಸಂ), ಶಿಶುನಾಳ ಶರೀಫರ ನೂರಾರು ತತ್ವ ಪದಗಳು. ಪುಟ-೩೫.

೨೯. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು. ಪುಟ-೯೬.

೩೦. ಅದೇ, ಪುಟ-೯೧.

೩೧. ವೀರಣ್ಣ ರಾಜೂರ (ಸಂ), ಶಿವ ಶರಣೆಯರ ವಚನ ಸಂಪುಟ-೫. ಪುಟ-೩೩.

೩೨. ಅದೇ, ಪುಟ-೮೪.

೩೩. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು. ಪುಟ-೯೭.

೩೪. ಅದೇ, ಪುಟ-೧೦೪.

ಅಧ್ಯಾಯ: ಐದು

ಅಪ್ರಕಟಿತ ಸಾಹಿತ್ಯ

ಅಧ್ಯಾಯ: ಐದು

ಅಪ್ರಕಟಿತ– ಸಾಹಿತ್ಯ

೫.೧ ಡೊಳ್ಳಿನ ಪದಗಳು

ಹಾರೂಗೇರಿಯಲ್ಲಿ ಹಾಲುಮತದ ಸಂಪ್ರದಾಯದವರು ಬಹು ಸಂಖ್ಯಾತರಾಗಿದ್ದುದು ಸರ್ವವಿದಿತ. ಅಷ್ಟೆ ಅಲ್ಲದೆ ಹಾರೂಗೇರಿಯ ಸುತ್ತಮುತ್ತಲಿನ ಹಳ್ಳಿಗಳಾದ ಅಲಖನೂರ, ಬ್ಯಾಕೂಡ, ಹಿಡಕಲ್, ಮುಗಳಖೋಡ, ಅಳಗವಾಡಿ, ನಿಡಗುಂದಿ, ಚಿಂಚಲಿ, ಹಾಗೂ ದಿಗ್ಗೇವಾಡಿ ಈ ಮುಂತಾದ ಹಳ್ಳಿಗಳಲ್ಲಿಯೂ ಕುರುಬ ಜನಾಂಗದವರು ಹೆಚ್ಚಾಗಿದ್ದಾರೆ. ಇವರು ಅನೇಕ ಡೊಳ್ಳಿನ ಮೇಳಗಳನ್ನು ಕಟ್ಟಿಕೊಂಡು ಕರೇಸಿದ್ಧನ, ಬೀರೇಶ್ವರನ, ಹಾಲುಮತದ ತತ್ವ ಸಿದ್ಧಾಂತ ಕುರಿತು ಗುಣಗಾನಿಸಿದ್ದನ್ನು ಕಾಣುತ್ತೇವೆ. ನಾನು ಅಲಭೈರಿಯ ಡೊಳ್ಳಿನ ಹಾಡುಗಳ ಕುರಿತು ಸರ್ವೇಕ್ಷಣಾ ಕಾರ್ಯವನ್ನು ಕೈಗೆತ್ತಿಕೊಂಡಾಗ ನನಗೆ ಅನೇಕ ಅಲಭೈರಿಯ ಡೊಳ್ಳಿನ ಪದಗಳು ಹಾಗೂ ಡೊಳ್ಳಿನ ಹಾಡುಗಳನ್ನು ಹಾಡುವ ಅನೇಕ ಹಾಡುಗಾರರು ಕಂಡು ಬಂದಿರುತ್ತಾರೆ. ಅವರೆಲ್ಲರೂ ಅಲಭೈರಿಯ ಅನನ್ಯ ಭಕ್ತರು [ಆರಾಧಕರು]. ಇವರಲ್ಲಿ ಅನೇಕರು ಅಲಭೈರಿಯನ್ನು ಗುರುವನ್ನಾಗಿ ಸ್ವೀಕರಿಸಿಕೊಂಡು; ಈ ಹೊತ್ತಿಗೂ ಈತನ ಪದಗಳನ್ನು ಆರಾಧಿಸುತ್ತ ಬಂದಿರುವರು. ಹುಲಗಬಾಳಿ ರಾಮು, ಸಿದ್ದಪ್ಪ ಹುಲಗಬಾಳಿ, ರಾಮು ಒಡ್ಡೊಡಗಿ, ಅಳಗವಾಡಿಯ ಮಹಾದೇವ ಪಡಚಿ ಮುಂತಾದವರು ಶಿಷ್ಯರಾಗಿದ್ದಾರೆ.

ಹಾರೂಗೇರಿಯಲ್ಲಿ ಜರುಗುವ ಭೂತಾಳಸಿಧ್ಧನ ಜಾತ್ರೆ, ಕರೇಸಿದ್ಧನ ಜಾತ್ರೆ, ಮಾಳಿಂಗರಾಯನ ಜಾತ್ರೆ, ಅರಣ್ಯಸಿದ್ಧನ ಜಾತ್ರೆ, ಹಾಗೂ ಹುಣ್ಣಿಮೆ ಅಮವಾಸ್ಯೆ ಹಬ್ಬ ಹರಿದಿನಗಳಲ್ಲಿಯೂ ಈ ಮೇಳಗಳು ತಮ್ಮ ಕಲೆಯನ್ನು ಪ್ರದರ್ಶಿಸುತ್ತವೆ. ಈ ಸಂದರ್ಭದಲ್ಲಿ ಬಹುಪಾಲು ಅಲಭೈರಿಯ ಪದಗಳನ್ನೇ ಹಾಡುತ್ತಾರೆ. ಈತನ ಹಾಡುಗಳಲ್ಲಿ ಸವಾಲ್ ಜವಾಬ್ ಪದಗಳೂ ಉಂಟು. ಸಂದರ್ಶನದಲ್ಲಿ ಸುಮಾರು ೪೦ ರಿಂದ ೪೫ ರ ವರೆಗೆ ಡೊಳ್ಳಿನ ಪದಗಳನ್ನು ಸಂಗ್ರಹಿಸಲಾಗಿದ್ದು ಅವುಗಳನ್ನು ಅಧ್ಯಯನಿಸಿ ವಿಶ್ಲೇಷಿಸಲಾಗಿದೆ.

ಕನ್ನಡ ಜನಪದ ಗೀತೆಗಳಲ್ಲಿ ಡೊಳ್ಳಿನ ಪದಗಳು ಸಿಂಹಪಾಲು. ಡೊಳ್ಳಿನ ಪದಗಳ ವಸ್ತು ಸಾಮಾನ್ಯವಾಗಿ ಪೌರಾಣಿಕ ಅಂಶಗಳನ್ನು ಒಳಗೊಂಡಿರುತ್ತದೆ. ಜೊತೆಗೆ ಸಮಾಜ, ನಿಸರ್ಗ, ವ್ಯಕ್ತಿಗಳನ್ನು ಕುರಿತು ಸಾಕಷ್ಟು ಪದಗಳು ಸಿಗುತ್ತವೆ. ಪ್ರಧಾನವಾಗಿ ಮರಾಣ ಕಥೆಗಳು, ನಡೆ–ನುಡಿಗಳು, ಧಾರ್ಮಿಕ ಪುಣ್ಯ ಮರುಷರ ವೃತ್ತಾಂತವನ್ನು ತಿಳಿಸುತ್ತವೆ. ಡೊಳ್ಳಿನ ಪದಗಳಲ್ಲಿ ದೈವಭಕ್ತಿಗೆ ಹೆಚ್ಚಿನ ಪ್ರಾಧ್ಯಾನ್ಯತೆ ಇರುತ್ತದೆ. ಮೂಲತಃ ಡೊಳ್ಳಿನ ಪದಗಳು ಹಾಲುಮತದ

ಸಂಪ್ರದಾಯದಲ್ಲಿ ಮಾತ್ರ ಗೋಚರವಾಗುತ್ತಿದ್ದವು. ಕಾಲಕ್ರಮೇಣ ಡೊಳ್ಳಿನ ಪದಗಳಲ್ಲಿ ಕಡಿಮೆ ಪ್ರಮಾಣದಲ್ಲಿಯಾದರೂ ನಿಸರ್ಗ ಹಾಗೂ ಸಮಾಜದ ಚಿತ್ರಣ ನೀಡುತ್ತಿವೆ. ಸೃಷ್ಟಿ ನಿರ್ಮಾಣ, ಶನಿದೇವರು, ಕೌರವ, ಪಾಂಡವರು, ನರಜನ್ಮ ಸಾರ್ಥಕ್ಯ, [ಶರೀರ] ಚಂದ್ರವಂಶದ ವಂಶಾವಳಿ, ಕರೆಪ್ಪ, ಭೀರಪ್ಪ ಹಾಗೂ ಡಾಂಬಿಕತೆಯ ಹಲವು ವಸ್ತುಗಳನ್ನು ಡೊಳ್ಳಿನ ಹಾಡುಗಳಲ್ಲಿ ಬಳಸಿದ್ದಾರೆ. ಹೀಗೆ ಅಲಭ್ಯೆರಿಯ ಡೊಳ್ಳಿನ ಹಾಡುಗಳನ್ನು ಗಮನಿಸಿದಾಗ ಕವಿ ಮೇಲ್ಕಾಣಿಸಿದ ವಸ್ತುಗಳನ್ನು ಡೊಳ್ಳಿನ ಹಾಡಿಗೆ ಆಕರವಾಗಿಸಿಕೊಂಡಿದ್ದಾನೆ. ಅಧ್ಯಯನದ ಅನುಕೂಲಕ್ಕಾಗಿ ಅಲಭ್ಯೆರಿಯ ಡೊಳ್ಳಿನ ಹಾಡುಗಳನ್ನು ಈ ರೀತಿ ವಿಂಗಡಿಸಿಕೊಳ್ಳಲಾಗಿದೆ.

೧. ಧಾರ್ಮಿಕ ಪದಗಳು

೨. ನೀತಿ ಪದಗಳು

೩. ಪೌರಾಣಿಕ ಪದಗಳು

೪. ಪವಾಡ ಪದಗಳು

೫. ಒಗಟಿನ / ಸವಾಲ್ ಜವಾಬ್ ಪದಗಳು

೧] **ಧಾರ್ಮಿಕ ಪದಗಳು :**

ಯಾರು ಧರ್ಮವನ್ನು ರಕ್ಷಿಸುತ್ತಾರೆ ಅವರನ್ನು ಧರ್ಮ ರಕ್ಷಿಸುತ್ತದೆ. ಹಾಲು ಮತದ ಸಂಪ್ರದಾಯ ಜನರು ಧರ್ಮವಂತರು, ಧರ್ಮವಂತರಾಗಿ ಜೀವನ ಸಾಗಿಸಿದವರು. ಅದಕ್ಕಾಗಿಯೇ ಸತ್ಯ, ಸದಾಚಾರ, ಶುದ್ಧ ಭಕ್ತಿಗೆ ಕುರುಬರ ಹೆಸರು, ಹೆಸರುವಾಸಿಯಾಗಿದೆ. ಮುಗ್ಧ ಸ್ವಭಾವದ ಕುರುಬರು ಕಪಟ,ಮೋಸ, ಹಿರಿತನ, ದೊರೆತನವನ್ನು ಎಂದೂ ಕನಸಿನಲ್ಲಿಯೂ ಅರಿಯದವರು. ಈ ಕಾರಣಕ್ಕಾಗಿಯೇ ಹಳ್ಳಿಗಳಲ್ಲಿ ಅವರಿಗಿರುವ ಗೌರವ ಅಪಾರ. ಇನ್ನೂ ಹಳ್ಳಿಗಳಲ್ಲಿ ಯಾವುದೇ ಹೊಸ ಕಾರ್ಯ ಮಾಡಿದರೆ ಮೊದಲು ಕುರುಬ ಜನಾಂಗದರಿಂದಲೇ ಪೂಜಿಸುವ ಪರಿಪಾಠವಿದೆ. ಕುರುಬರು ತಮ್ಮ ಮತ ಧರ್ಮ ಕುರಿತು ಅನೇಕ ಪದಗಳನ್ನು ಹಾಡುತ್ತಾರೆ.

ಅಲಭ್ಯೆರಿಯಿಂದ ಅನೇಕ ಡೊಳ್ಳಿನ ಹಾಡುಗಳು ರಚಿತಗೊಂಡಿದ್ದು ಅವುಗಳಲ್ಲಿ ಧಾರ್ಮಿಕ ವಿಷಯದ ಎರಡು ಪದಗಳು ಮಾತ್ರ ಸಿಕ್ಕಿವೆ. ಅವೆರಡು ಅಪ್ರಕಟಿತವಾಗಿವೆ. 'ಒಳ್ಳೆಯ ಕುರುಬರಾ ನಾವು ಹಾಲು ಮತದವರಾ, ಯಾರಿವನಯ್ಯಾ ಹಿಂಗ ಉರತರ ಬಿಸಲೋಳು ತಿರಗುವನೊ'.

"ಒಳ್ಳೆಯ ಕುರುಬರಾ ನಾವು ಹಾಲುಮತದವರಾ" ಈ ಪದದಲ್ಲಿ ಅಲಭ್ಯೆರಿ ಮುಗ್ಧ ಸ್ವಭಾವದ ಕುರುಬರ ಗುಣಗಾನ ಮಾಡುತ್ತಾನೆ. ಭಕ್ತಿ ವಿಶ್ವಾಸದಿಂದ ಗುರುದೇವರಲ್ಲಿ ನಂಬಿಕೆಯುಳ್ಳವರು ಸರಳ ಜೀವನ ನಡೆಸಿದವರು; ಶಾಸ್ತ್ರ, ಪುರಾಣ, ವೇದ ಏನೆಂಬುದು ತಿಳಿಯದವರು.

" ಒಳ್ಳೆಯ ಕರುಬರಾ ನಾವು ಹಾಲುಮತದವರಾ
ಡಂಬಾಚಾರದ ಡಾಂಬಿಕವಿಲ್ಲದೆ ತುಂಬು ಮನದವರಾ । ಪ ।
ನಾವು ಕುಂಬಿನಿಯೊಳಗೆ ಕುರಿಗಳ ಪಾಲಿಸಿ – ಅಂಬಲಿ ನೀಡುವರಾ ।
ಹಿರಿತನ ದೊರೆತನ ಮನದೊಳಗೆಂದು ಬಯಸದವರಾ" ॥ ೧॥
ಶಂಕರ ಸೇವಾ ಕಿಂಕರ ವೃತ್ತಿಯು ಅದುವೇ ನಮ್ಮಸಿರಾ।
ದಾರಿ ತಪ್ಪಿದ ಜನರಿಗೆ ದಾರಿಯ ತೋರುವರಾ ೨।"

ಸಮಾಜದಲ್ಲಿಯ ಜನರು ರೀತಿ, ನೀತಿ ಬಿಟ್ಟು ಪಾಪಕ್ಕೆ ಗುರಿಯಾದಾಗ ಮಹಾದೇವ ನರನ ಅವತಾರ ತಾಳುವರು. ಹಾರೂಗೇರಿಗೆ ದೇವರಕೊಂಡಪ್ಪ ಬಂದಾಗ ಅವರನ್ನು ಗುರುತಿಸಿದವರು. ಹಾಲುಮತ ಸಂಪ್ರದಾಯದವರೆ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ಮತ್ತೆ ಹಾರೂಗೇರಿಯಲ್ಲಿ ದಿನನಿತ್ಯ ಶಾಸ್ತ್ರ ಹೇಳುವ ಪರಂಪರೆಯನ್ನು ಬೆಳೆಸಿದ ಪಾವಾಡಿ ಪತ್ತಾರ, ವೀರಚಂದ ಗುಜ್ಜರ, ಧರೆಪ್ಪ ಸುಬ್ಬಣ್ಣನವರ, ಲಕ್ಷ್ಮಣ ಕರಾಡಿ, ತಾರಾಬಾಯಿ, ಶಿವರಾಯಿ, ರಾಮಣ್ಣ–ರಾಮಪ್ಪ ಉಪಾಧ್ಯಾಯರ ಹೆಸರು ಗುರುತಿಸುತ್ತಾನೆ.

ಬಾವಿ ಹಳ್ಳದಿಂದ ಆಗಮಿಸಿದ ಅಪ್ಪಸಾಬಗೌಡ [ವೃಷಭೇಂದ್ರ] ಅಜ್ಜಗೆ ಭೂದ್ಯಾಳೆ ಈರಪ್ಪ, ಮಲಕಾರಿ, ಸಿದ್ದಪ್ಪ, ವೀರಭದ್ರ ಕಂಬಾರ, ನಾವಿ ಲಕ್ಷ್ಮಣ, ಕಳ್ಳೆಪ್ಪ, ದಿನ್ನಿಧರಮಣ್ಣ, ಅಲ್ಲಪ್ಪ ಸುಬ್ಬಣ್ಣವರ, ಆಸಂಗಿ ಮಲಕಪ್ಪ, ಚಿಕ್ಕೋಡಿ ಮಲ್ಲಪ್ಪ, ಬಸವಂತ ಬಡಿಗೇರ, ಕುರಿ ರಾಮಣ್ಣ, ದ್ಯಾಮಣ್ಣ, ಪದಮಣ್ಣ, ಶಿಂಗಾಡಿ, ಹಾಡಕಾರ, ಲಗಮಣ್ಣ ರಾಮಣ್ಣ, ಬಂತಿರಾಯಪ್ಪ, ಬನಪ್ಪ ಬನಾಜ, ಶಿರಹಟ್ಟಿ ಅಣ್ಣಪ್ಪ, ಹೊಟೇಲ ಪಾಯಪ್ಪಾ, ಯಲ್ಲಪ್ಪ, ಗಸ್ತಿ, ಜ್ಯೋತೆಪ್ಪಾ ಜೋಕಾನಟ್ಟಿ, ಮಾಯಪ್ಪ ಚಿಕ್ಕಟ್ಟಿ, ಯಮನಪ್ಪ ಬೂದ್ಯಾಳ, ಜಂಬಗಿ ಶಿವರಾಯ, ಭೀಮಣ್ಣಾ ನಾಗನೂರ, ಖಂಡು ಶುಭರಾಯ, ಸಿದ್ಧಪ್ಪ ಬಳೇಗಾರ, ಯಲ್ಲಪ್ಪ ತಳವಾರ, ರಾಮಣ್ಣ ಉಪ್ಪಾರ ಮುಂತಾದ ಭಕ್ತರು ತನು–ಮನ ಧನದಿಂದ ಸೇವೆಯನ್ನು ಮಾಡಿ ತಮ್ಮ ಜೀವನವನ್ನು ಪಾವನಗೊಳಿಸಿಕೊಂಡಿದ್ದಾರೆ.

ಧರ್ಮಟ್ಟಿ ಲಚ್ಚಪ್ಪ ಭೂದಾನವನ್ನು ಮಾಡಲು ಮಠ ಕಟ್ಟಿ ಶಾಸ್ತ್ರ ಸಪ್ತಾಹವನ್ನು ಭಕ್ತರು ನಡೆಸಿದರು. ಮಠದ ಆವರಣದಲ್ಲಿ ಗಿಡಮರಗಳನ್ನು ಹಚ್ಚಿ ಹೊತ್ತ ನೀರ ಹಾಕಿ ಬೆಳೆಸಿದರು. ಮಠದ ಅಂಗಳ ಝುಳಝುಳ ಮಾಡಿದ ಕುಡ್ಡರಾಮ, ಗಿಡಪ್ಪ ಮಾದರರನ್ನು ಕವಿ ಇಲ್ಲಿ ಸ್ಮರಿಸಿದ್ದಾನೆ.

"ಹಾಳ ಹಾರೂಗೇರಿ ಬೆಳೆಯಲು ವರವಿತ್ತ ಕಾರಣ ಪುರುಷರಾ ॥
ಒಮ್ಮನದಿಂದಲಿ ನಮ್ಮನ್ನಗಲದೆ ಇಂದಿಗೆ ಇರುವವರಾ ।
ಇವರೆ ಶ್ರೀ ಚನ್ನವೃಷಭೇಂದ್ರ ಸ್ವರೂಪವಾಗಿ ಬೋಧಿಸುವಂತರಾ।"[೨]

ಹಾರೂಗೇರಿ ಇಂದು ಸುಂದರವಾಗಿ ಬೆಳೆಯಲು ಶ್ರೀ ಚನ್ನವೃಷಭೇಂದರರ ಆಶೀರ್ವಾದವೇ ಕಾರಣ. ಗುರುವಿನ ಕೀರ್ತಿಯನ್ನು ಗಗನಕ್ಕೆ ಮುಟ್ಟಿಸಿದ ಅಲಭೈರಿಯೇ ಕವಿಶೂರಾ. ಹೀಗೆ ಅಲಭೈರಿ ಹಾಲು ಮತದ ಗುಣಸ್ವಭಾವವನ್ನು ಚಿತ್ರಿಸುತ್ತ ಕೊನೆಗೆ ಇಡೀ ಹಾರೂಗೇರಿಯ ಸಂಕ್ಷೀಪ್ತ ಚರಿತ್ರೆಯನ್ನು ಸುಂದರವಾಗಿ ಚಿತ್ರಿಸಿದ್ದಾನೆ.

"ಯಾರಿವನಯ್ಯಾ ಹಿಂಗ ಉರತರ ಬಿಸಲೋಳು ತಿರುಗುವನೋ" ಈ ಪದ್ಯದಲ್ಲಿ ಕವಿ ಕುರುಬನ ಜೀವನವನ್ನು ಚಿತ್ರಿಸಿದ್ದಾನೆ.

ಕಾಮ, ಕ್ರೋಧ, ಮದ, ಮತ್ಸರ ಎಂಬ ಅರಿಷಡ್ ವರ್ಗದ ದುರುಳತೆಯನ್ನು ಕಳೆದ ಮಹಾಮುನಿ ಈ ಕುರುಬನು ಕಂಬಳಿ ಹೊತ್ತುಕೊಂಡು ಕೋಲು ಹಿಡಿದು ಅಂಬಲಿ ಕುಡಿಯುತ್ತ ಕುರಿಯನ್ನು ಕಾಯುತ್ತ ಕಾಲಕಳೆಯುತ್ತಾನೆ.

"ಸರಸ–ವಿರಸಗಳ ಸಮಭಾವದಲಿ ಅರಿಯುವ ನರರೂಪ ಕುರುಬವನೋ ।
ಕಾಡಿನಲ್ಲಿ ಚಳಿ ಮಳಿ ಗಾಳಿಗೆ ಮನವನ್ನು ಕದಲದೆ ಬೈಲೊಳಗೆ ಇರುವನೋ ।
ಭೂಮಿಯ ಭಾಗ್ಯದ ಹಾಸಿಗೆ ಮಾಡಿ ಕಮಾನದಾಕಾಶ ಮೆಲ್ ಮನೆಯವನೋ।
ಕಾಮಿತ ಕಾನನ ಕಣ್ಣಿಂಬಾಗಿ ಸಾಮಜ–ಗಾನವು ಕುರಿದನಿಯಿವನೋ"।[೩]

ಭೂಮಿಯನ್ನೇ ಹಾಸಿಗೆಯನ್ನಾಗಿ ಮಾಡಿ ಆಕಾಶವನ್ನೇ ಮೇಲ ಹೊದಿಕೆಯನ್ನಾಗಿ ಮಾಡಿ ವಿಶಾಲ ಮನಸ್ಸುಳ್ಳ ಮನುಜನೀತನು. ನಾಯಿಯೇ ಅವರಿಗೆ ನ್ಯಾಯದ ದೇವತೆಯಾಗಿ ಸಾಯುವತನಕ ಕುರಿಗಳನ್ನು ರಕ್ಷಿಸುತ್ತದೆ. ಕುರಿಗಳು ನಮ್ಮ ನಿಮ್ಮ ಅರ್ಥದಲ್ಲಿ ಕೇವಲ ಕುರಿಗಳು, ಪ್ರಾಣಿಗಳು ಮಾತ್ರ ಆದರೆ ಕುರುಬರಿಗೆ ಕುರಿಗಳೇ ಅವರ ಪ್ರಾಣ, ಉಸಿರು, ಸರ್ವಸ್ವ ಅದಕ್ಕಾಗಿ ಅವರು ಕುರಿಗಳನ್ನು "ಬದುಕು" (ಸಂಪತ್ತು) ಎಂದು ಗುರುತಿಸುತ್ತಾರೆ.

ಈ ರೀತಿಯಾಗಿ ಕವಿ ಕುರುಬನ ಸಾಹಸ ಜೀವನವನ್ನು ಚಿತ್ರಿಸಿರುತ್ತಾನೆ.

೨ **ನೀತಿಯ ಪದಗಳು :**

ಶರಣರು, ದಾಸರು, ಈ ಸಮಾಜವನ್ನು ಖಂಡಿಸಿದಂತೆ ಡೊಳ್ಳಿನ ಹಾಡಗಾರರು ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಅಲಭೈರಿ ಅನೇಕ ನೀತಿ ಪದಗಳನ್ನು

ರಚಿಸಿದ್ದಾನೆ. ದಿನನಿತ್ಯ ನಡೆಯುವ ಜನರ ಆಚಾರ ವಿಚಾರ ಮತ್ತು ಅವರ ಲೋಪದೋಷ ಸಂಗತಿಗಳೇ ಈ ಹಾಡುಗಳ ವಸ್ತು. ಡಾಂಬಿಕತೆಯನ್ನು ಕಟುವಾಗಿ ಟೀಕಿಸಿದ್ದಾನೆ.

"ವಾದಿ ಮೂರ್ಖರು ವೇದಶಾಸ್ತ್ರ ಓದಿಕೊಂಡರೆ ಫಲವೇನೋ" ಈ ಪದ್ಯದಲ್ಲಿ ಕವಿ, ವೇದಶಾಸ್ತ್ರ ಓದಿಕೊಂಡು ಸೊಕ್ಕಿನಿಂದ ಮೆರೆಯುವ ವಿದ್ವಾಂಸ, ಜ್ಞಾನಿಗಳನ್ನು ಟೀಕಿಸುತ್ತಾನೆ. ಹೀನ ಗುಣಗಳನ್ನು ಮನದಲ್ಲಿಟ್ಟುಕೊಂಡು ಸಾಧು, ಸಂತರ ಸಹವಾಸ ಮಾಡಿದರೂ ಫಲವಿಲ್ಲ.

"ಗುರುವಿನ ಹೊಂದಿ ಗುಣಗಳ ತಿಳಿಯದೆ ನರನಾಗಿದ್ದರೆ ಫಲವೇನೋ
ಮರುವಿನ ಸಂಸಾರ ಮರವಿನೊಳಗೆ ಬಿದ್ದು ಮರಮರ ಮರಗಲು ಫಲವೆನೋ
ವಿದ್ಯೆಕೊಟ್ಟ ಸದ್ಗುರು ಬಳಿಯಲಿ ಜಿದ್ದು ವರಮಗಳ ಫಲವೆನೋ
ಸದ್ಗುಣವಿಲ್ಲದ ಬುದ್ಧಿಗೇಡಿ ಪದಪದ್ಯದ ಕಲಿತರೆ ಫಲವೇನೋ"[೪]

ವಿದ್ಯೆಯನ್ನು ಕಲಿಸಿದ ಗುರುವಿನ ಜೊತೆಗೆ ನಯ ವಿನಯದಿಂದ ವರ್ತಿಸಬೇಕು. ಅವನ ಜೊತೆ ಸ್ಪರ್ಧೆಗೆ ನಿಲ್ಲುವುದು ಶಿಷ್ಯರ ಲಕ್ಷಣವಲ್ಲ. ಅದಕ್ಕಾಗಿ ಪುರಂದರ ದಾಸರು ಹೇಳುತ್ತಾರೆ 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಅಂತಹ ಮನುಷ್ಯ ಜನ್ಮದಲ್ಲಿ ಹುಟ್ಟಿ ಈ ಜನ್ಮಕ್ಕೆ ಸಾರ್ಥಕತೆ ದೊರೆಯಬೇಕಾದರೆ ಗುರು ಅವಶ್ಯ. ಗುರುವಿಲ್ಲದಿದ್ದರೆ ಈ ಮರುವಿನ ಸಂಸಾರದಲ್ಲಿ ಬಿದ್ದು ಮರಮರ ಮರಗುವುದು ನಿಶ್ಚಿತ.

"ಕಪಟ ಗುಣದಲಿ ನಿಪುಣನಾದವಗ ಅಪರೂಪದನುಭವ ಫಲವೆನೋ
ಅಪರೂಪದನುಭವವ ಉಪದೇಶಿಸಲು- ಚಪಲ ಮನುಜನಿಗೆ ಫಲವೇನೋ
ಬರೆಯದೆ ಓದಿದ ವಿದ್ಯಾಮದದಲಿ ಗರುವಿಷ್ಟನಾದರೆ ಫಲವೇನೋ
ಗುರು ಹಿರಿಯರನು ಗುರುತಿಸದೆ ಪರ-ಪಾಮರನಾದರೆ ಫಲವೇನೋ"[೫]

ಮನದಲ್ಲಿ ಕಪಟ ಗುಣಗಳನ್ನು ತುಂಬಿಕೊಂಡು ಶ್ರೇಷ್ಠವಾದ ಅನುಭವನ್ನು ಅಥವಾ ಜ್ಞಾನವನ್ನು ತಿಳಿಸಿದರೂ ಫಲವಿಲ್ಲ, ಓದಿನ ಮದದಲ್ಲಿ ಗರುವಿಷ್ಠನಾಗಿ ಗುರು-ಹಿರಿಯರನ್ನು ಗುರುತಿಸದೆ ಜ್ಞಾನಿ ಅಂತ ಹೆಸರು ಗಳಿಸಿದರೂ ಫಲವಿಲ್ಲ. ಎಲ್ಲರನ್ನು ರಕ್ಷಿಸುವಂಥಾ ಕರುಣಾಮಯ ಶಿವ -ಶರಣರ ಸಹವಾಸ ಹೊಂದಿ ಈ ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಲು ಉಪದೇಶಿಸುತ್ತಾನೆ.

ಈ ರೀತಿಯಾಗಿ ಕವಿ ಬಡಿವಾರದಿಂದ ಜೋಪಡಿ ತುಡುಗ ಮಾಡಿದ ತನ್ನ ಶಿಷ್ಯನಿಗೆ ಈ ಎಲ್ಲ ರೀತಿಯ ನೀತಿ ಸಂದೇಶವನ್ನು ತಿಳಿಸುತ್ತಾನೆ.

"ಸತ್ಯ ಸಾಧುರ ಸಂಗ ಹಿಡಿಯೋ ನಿತ್ಯದಲ್ಲಿ ನೀನೋ" ಈ ಪದ್ಯದಲ್ಲಿ ಕವಿ ಸಾಧುರ ಸಹವಾಸ, ಗುರು ಸನ್ನಿಧಾನ, ಹಾಗೂ ಧೃಡವಾದ ಚಿತ್ತದ ಕುರಿತು ವಿಶ್ಲೇಷಿಸಿದ್ದಾನೆ.

"ಸುತ್ತ-ಮುತ್ತ ನೋಡಬ್ಯಾಡ ಸುಳ್ಳಗೊತ್ತಿ ಕುಡಿಯಬ್ಯಾಡ
ಸತ್ಯಸಾಧುರ ಸಂಗ ಹಿಡಿಯೋ ನಿತ್ಯದಲಿ ನೀನೋ ॥ ಪ॥
ಸತ್ಯ ಸಾಧುರ ಸಂಗ ಹಿಡಿಯೋ ನಿತ್ಯ ಕಾಲದಲ್ಲಿ ನೀನೋ ।
ಉತ್ತಮರ ಹೇಳಿದ ನೀತಿಯ ಮಾತಾ ಗೊತ್ತ ಮಾಡ ನೀನೋ । ೧ ।
ಯುಕ್ತಿಯನಿಲ್ಲ ಭಕ್ತಿಯನಿಲ್ಲ ಮತ್ತ ಮುಂದ ಪೇಳುವದೆನೋ ।
ಹತ್ತುವಷ್ಟ ಕಸ್ತೂರಿ ಹೊತ್ತರ ಕತ್ತಿಗೆ ಫಲವೇನೋ । ೨ ।
ಹತ್ತುವಷ್ಟ ಕಸ್ತೂರಿ ಹೊತ್ತರ ಕತ್ತಿಗೆ ಫಲವೇನೋ
ತಮ್ಮಾ ವತ್ತಿ ಹಿಡಿದ ಕಿತ್ತ ಒಗಿಯೋ ಕಲತ ಹಂಕಾರನೋ । ೩ ।[6]

ಕತ್ತೆಗೇನ ಗೊತ್ತು ಕಸ್ತೂರಿ ವಾಸನೆ ಎಂಬಂತೆ ಮನುಷ್ಯ ಹತ್ತೆಂಟು ಪದಕಟ್ಟಿ ಸತ್ಯ ಜ್ಞಾನವನ್ನು ತಿಳಿಯದಿದ್ದರೆ ಫಲವಿಲ್ಲ. ಸತ್ಯ ಪುರುಷರ ಸಂಗ ಹಿಡಿದು ಸು-ತತ್ವ ತಿಳಿದು ನಿತ್ಯಕಾಲ ಗುರುವಿನಲ್ಲಿ ದುಡಿಯಬೇಕು. ಉತ್ತಮರು ಹೇಳಿದ ಮಾತನ್ನು ತಪ್ಪದೇ ಪಾಲಿಸಬೇಕು.

ಅದಕ್ಕಾಗಿ ಕವಿ ಭಕ್ತಿಯಿಂದ ಅನನ್ಯ ಸೇವೆಯನ್ನು ಮಾಡಿದರೆ ಸತ್ಯ ಗುರುವಿನ ಪಾದ ಹೊಂದಲು ಸಾಧ್ಯ ಎಂದು ಉಪದೇಶಿಸುತ್ತಾನೆ.

"ಕಾಕಪೋಕ ವಿದ್ಯೆಗಳು ಅನೇಕವಿದ್ದರೇನು" ಈ ಪದ್ಯದಲ್ಲಿ ಕವಿ ಅನೇಕ ವಿದ್ಯೆಗಳನ್ನು ಕಲಿತರೂ ಪ್ರಯೋಜನವಿಲ್ಲ. ಅವೆಲ್ಲವೂ ಕಾದ ಹೊಟ್ಟೆಗೆ ಅನ್ನಾ ಬ್ಯಾಡದಾಂಗ, ಶ್ರೇಷ್ಠ ವೇದಾಂತ ಒಂದೇ ಮುಕ್ತಿಯನ್ನು ಹೊಂದಲಿಕ್ಕೆ ಎಂದು ವೇದಾಂತದ ಮಹತ್ವನ್ನು ತಿಳಿಸುತ್ತಾನೆ.

"ಕಾಕಪೋಕ ವಿದ್ಯೆಗಳು ಅನೇಕ ಇದ್ದರೇನು
ಜನ್ಮ ಶೋಕ ನೀಗಿ ನಿತ್ಯಾನಂದದೇವವಲ್ಲಬೋ ॥ಪ॥
ಶೋಕವನ್ನು ನೀಗಿ ಮೋಕ್ಷ ದೇವಾನಂದವಿಲ್ಲದ
ವಿದ್ಯಾಬೇಕಾದಷ್ಟು ಇದ್ದರೇನು ಎಲ್ಲಾ ವ್ಯರ್ಥವೋ ।೧।
ಜ್ಯೋತಿಷ್ಯ ಹೇಳಿ ವಾಸ್ತು ವೈದ್ಯ ಗಾರುಡ ಗ್ಯಾನ ಸೋಗಾ ಹಾಕಿ
ಸಂಗೀತ ನಾಟಕ ಸಾಮುದ್ರಿಕಾ ಭೂತ ವಿದ್ಯೆಗಳು ।೨।

ಸಂಗೀತ ನಾಟಕ ಸಾಮುದ್ರಿಕಾ ಭೂತ ವಿದ್ಯಾ ಕಲಿತವರೆಲ್ಲಾ ॥
ತೂತ ಮಾತ ಮುಂದ ಮಾಡಿ ಜಾತ ಹೇಳುವರೋ ।೩।
ಎಷ್ಟು ವಿದ್ಯೆ ಇದ್ದರೇನು ಕಷ್ಟ ಎಂದೂ ಬಿಡದೋ ತಮ್ಮಾ
ಶ್ರೇಷ್ಠ ವೇದಾಂತೊಂದ ನೋಡ ಮುಕ್ತಿ ಮಾರ್ಗದೊಳು ।೪
ಶ್ರೇಷ್ಠ ವೇದಾಂತ ಒಂದೇ ನೋಡೊ ಮುಕ್ತಿಯನ್ನುಗಳಿಸಲಾಕ
ಕಷ್ಟ ರಹಿತ ಆದ್ಯೋ ತಮ್ಮಾ ಸ್ಪಷ್ಟ ಹೇಳುವೇನೋ ।೫।

ಮನುಷ್ಯ ಜನ್ಮದ ಶೋಕವನ್ನು ನೀಗಿಸಿ ಮೋಕ್ಷವನ್ನು ನೀಡಿದ ವಿದ್ಯೆಗಳು ಎಷ್ಟು ಇದ್ದರೇನು ಫಲವಿಲ್ಲ, ಅವೆಲ್ಲವು ಕಾದಹೊಟ್ಟೆಗೆ ಬೆನ್ನೀರು ಹಾಕಿದಂತೆ. ಆದ್ದರಿಂದ ಕವಿ ಜ್ಯೋತಿಷ್ಯ ಸಂಗೀತ, ನಾಟಕ, ವೈದ್ಯ ಗಾರುಡಿಗ ಇವೆಲ್ಲ ಸೋಗಾ ಹಾಕಿ ಕುಣಿಯುವ ಭೂತವಿದ್ಯೆಗಳು ಮನುಷ್ಯರ ಕಷ್ಟಕ್ಕೆ ಸ್ಪಂದಿಸಿ ಅವನಿಗೆ ಮುಕ್ತಿಯ ಮಾರ್ಗವನ್ನು ಕಲ್ಪಿಸುವ ಏಕೈಕ ವಿದ್ಯೆ ಎಂದರೆ ವೇದಾಂತ ವಿದ್ಯೆ ಎಂದು ಹೇಳಿ ಅದೇ ಶ್ರೇಷ್ಠ ವಿದ್ಯೆ ಎಂದು ಪ್ರತಿಪಾದಿಸುತ್ತಾನೆ.

"ಲೇಸಾದ ಪದಗಳ ಸೋಸುನು ತಮ್ಮಾ" ಈ ಪದದಲ್ಲಿ ಕವಿ ಲೇಸಿನ [ಒಳ್ಳೆಯದು] ಕುರಿತು ತುಂಬಾ ಮಾರ್ಮಿಕ ವಿಚಾರಗಳನ್ನು ತಿಳಿಸಿದ್ದಾನೆ.

"ಮಳಿಯಾದರೆ ಲೇಸ ಬೆಳೆಯ ಬಂದಾಗ ಲೇಸ
ಕಳಿಯುಳ್ಳ ಕೂಸ ಮನೆಯೊಳು ಲೇಸ।
ಗಳಿಸಿದ ಕುರಿಲೇಸ ಬೆಳೆಸಿದ ಮರಿಲೇಸ
ಕಳೆಯುಳ್ಳ ಶಿವಗುಡಿಯೊಳು ಲೇಸ।
ವನಕ ಕೋಗಿಲ ಲೇಸ ಮನಕೆ ಹರುಷಲೇಸ
ಕನಕ ಉಳ್ಳವನ ಕಳಿಲೇಸ।
ಮನದೊಳು ಮನನವ ಮಾಡುದ ಲೇಸ
ಘನ ವಿದ್ಯೆ ಅನುಭವ ಬಹುಲೇಸ ॥
ಹಣವು ದೊರೆತರೆ ಲೇಸ ಋಣವು ಹರಿದರೇ ಲೇಸ
ಜಾಣರ ಸಂಗವು ಬಲು ಲೇಸ
ಬಣ್ಣದ ಗುಡಿಲೇಸ ಸುಣ್ಣದ ಗ್ವಾಡಿ ಲೇಸ
ಹನುಮದೇವರು ಊರಿಗೆ ಲೇಸ।"[೮]

"ವರಕವಿಗಳ ಮುಂದೆ ನರಕವಿಗಳು ಎಂದೂ ವಿದ್ಯೆ ತೋರಬಾರದು" ಎಂಬ ಪದ್ಯದಲ್ಲಿ ಕವಿ ನೀತಿ ಮಾತುಗಳನ್ನು ವಿವರಿಸಿದ್ದಾನೆ. ಹುಟ್ಟುಕವಿಗಳ ಮುಂದೆ ಮನುಷ್ಯ

ಎಂದೂ ತನ್ನ ವಿದ್ಯೆಯ ಪ್ರಾಬಲ್ಯವನ್ನು ತೋರಬಾರದೆಂದು ಕವಿಯ ಅಭಿಪ್ರಾಯ ಮತ್ತೆ ಕವಿ ಬಡತನ ಬಂದಾಗ ನೆಂಟರ ಬಾಗಿಲಿಗೆ ಹೋಗದಿರಲು ತಿಳಿಸುತ್ತಾನೆ.

"ಪರರನ್ನು ನೋಯಿಸಿ ಪಾಪಕ್ಕೆ ಗುರಿಯಾಗಿ
ನರಕದಲಿ ತಮ್ಮಾ ಎಂದೂ ಬೀಳಬಾರದಲಿಮೆ
ಸರಿಜನರೋಳು ತಾನು ಸಾಧಿಸಿ ಕಲಿಯದೆ
ಪರರಿದಿರೊಳು ತಮ್ಮಾ ಎಂದೂ ನಿಲ್ಲಬಾರದಲಿಮೆ
ಬಿಡಾರ ವಸ್ತಿಯ ಬಾಯ್ ಬಡುಕರಿದಲ್ಲಿ
ಕಡುತನದಲಿ ತಮ್ಮಾ ಎಂದೂ ಕೂಡಬಾರದಲಿಮೆ
ಮಡದಿಯ ಮಾತಕೇಳಿ ಜಗಳವ ತೆಗಿಲಾಕ
ಬಿಡದೆ ತಮ್ಮಾ ಎಂದೂ ಹೋಗಬಾರದಲಿಮೆ
ಮುಂದೆ ಬಲಾ ಎಂದು ಹಿಂದೆ
ನಿಂದಿಪರನ್ನು ತಮ್ಮಾ ಎಂದು ಕೂಡಬಾರದಲಿಮೆ
ತಂದಿ ಕೇಶವನ ನಾಮದ ಸ್ಮರಣೆಯ
ಹೊಂದುದ ತಮ್ಮಾ ಎಂದೂ ಮರಿಯಬಾರದಲಿಮೆ
ಸುಂದರ ದೇವರಕೊಂಡ ಚಂದುಳ್ಳ ಹಾರೂಗೇರಿ
ಮಂದಿರ ತಮ್ಮಾ ಎಂದು ಮರಿಬಾರದಲಿಮೆ
ಕಂದಲಭೈರಿಯ ಸುಂದರ ನುಡಿಗಳ
ಚೆಂದದಿ ತಮ್ಮಾ ಎಂದು ಬಿಡಬಾರದಲಿಮೆ।"

ಪರನಿಂದೆ ಎಲ್ಲ ಪಾಪಗಳಲ್ಲಿ ಅತೀ ಹೆಚ್ಚಿನ ಪಾಪ. ಪರರನ್ನು ನಿಂದಿಸಿ ನರಕಕ್ಕೆ ಹೋಗದೆ ತಂದೆ ಕೇಶವನ ನಾಮಸ್ಮರಣೆ ಮಾಡದೇ ಸುಂದರ ದೇವರಕೊಂಡ ಇರುವ ಹಾರೂಗೇರಿ ಗ್ರಾಮವನ್ನು ಮರೆಯದಿರಲು ಸೂಚಿಸಿಸುತ್ತಾನೆ. ಈ ರೀತಿ ಅಲಭೈರಿ ಹಲವಾರು ನೀತಿ ಮಾತುಗಳನ್ನು ತಿಳಿಸುತ್ತಾನೆ.

೩. ಪೌರಾಣಿಕ ಪದಗಳು :

ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಸಾಹಿತ್ಯದಲ್ಲಿ ಪುರಾಣಗಳ ಗಾಢವಾದ ಪ್ರಭಾವ ಕಾಣುತ್ತೇವೆ. ದೇವಾನುದೇವತೆಗಳನ್ನು ಕುರಿತು ಪೌರಾಣಿಕ ಕಥೆ ಹೆಣೆದ ಪದಗಳು ರಾಶಿ ರಾಶಿಯಾಗಿವೆ. ಪುರಾಣಗಳಲ್ಲಿ ಬರುವ ವ್ಯಕ್ತಿಗಳು ದೇವರ ಸ್ವರೂಪದಲ್ಲಿ ಕಾಣುತ್ತಾರೆ. ಇಂತಹ ಅಮಾನುಷ ವ್ಯಕ್ತಿಗಳ ಬಗೆಗೆ ಜಾನಪದ ಕವಿಗಳು ಗೀತೆಗಳನ್ನು ರಚಿಸಿದ್ದಾರೆ.

ಬಾಗೆನಾಡಿನ ಪರಿಸರದಲ್ಲಿಯ ಜನಪದ ಕವಿಗಳು ಪೌರಾಣಿಕ ವಸ್ತುಗಳನ್ನು ತಮ್ಮ ಕಾವ್ಯ ವಸ್ತುವನ್ನಾಗಿ ಸ್ವೀಕರಿಸಿಕೊಂಡು ಸಾಕಷ್ಟು ಜನಪದ ಗೀತೆಗಳನ್ನು ರಚಿಸಿದ್ದಾರೆ. ಹಾಗೆ

ಅಲಭ್ಯೆರಿ ಡೊಳ್ಳಿನ ಹಾಡುಗಳಲ್ಲಿ ಸಾಕಷ್ಟು ಪೌರಾಣಿಕ ವಸ್ತುವನ್ನು ನಿದರ್ಶನವನ್ನಾಗಿ ಸ್ವೀಕರಿಸಿಕೊಂಡು ಅನೇಕ ಪದಗಳನ್ನು ರಚಿಸಿದ್ದಾನೆ. ಬಹುಪಾಲು ಅಪ್ರಕಟಿತವಾಗಿವೆ. ದೊರೆತ ಪೌರಾಣಿಕ ಪದಗಳನ್ನು ಅಧ್ಯಯನಿಸಲಾಗಿದೆ.

"ಬಲ್ಲಿದ ಮಹಾತ್ಮರ ಬರೆದಿಟ್ಟಂತ ಸಲ್ಲವ ಹೇಳುವೆ ಈಗ ಕರೆ" ಈ ಪದ್ಯದಲ್ಲಿ ಕವಿ ಹಣೆ ಬರಹವನ್ನು ಬದಲಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲವೆಂಬುದನ್ನು ವಿವರಿಸಿದ್ದಾನೆ. ಹಿಂದಿನ ರಾಜರು, ದೇವಾನುದೇವತೆಗಳು ಪಟ್ಟ ಪಾಡನ್ನು ಕ್ರೋಢಿಕರಿಸಿದ್ದಾನೆ. ಕಾಲಕ ಸರಿಯಾಗಿ ಕಾರ್ಯನಡಿಯತಾವ ಯಾರಿಗೂ ಬಿಟ್ಟಿಲ್ಲ ಇದು ಸತ್ಯ

"ಬಲ್ಲಿದ ಮಹಾತ್ಮರ ಬರೆದಿಟ್ಟಂತ ಸಲ್ಲವ ಹೇಳುವೆ ಈಗ ಕರೆ ।ಪ।
ಹರಿಯು ಹತ್ತು ಅವತಾರ ತಗೊಂಡಾ ಹಂದಿಯಾಗಿ ತಿರುಗಿದ್ದ ಕರೆ
ಧೀರಬ್ರಹ್ಮನ ನಡದಲಿ ಕಡದಿತ ಅವನ ಹಣೆಬಾರಿತ್ತ ಕರೆ ।
ಚಂದ್ರಕಾಮನು ಶಿವನ ಶಕ್ತಿಯಿಂದ ಸುಟ್ಟ ಭೂದಿಯಾದದ್ದು ಕರೆ
ಇಂದ್ರನ ಮೈಯಲ್ಲಾ ಭಗಿಂದ್ರವಾಗಿ–ಸಂಧ –ಸಂಧ ಸೋರಿದ್ದು ಕರೆ ।"[೧೦]

ಇಲ್ಲಿ ಹರಿ, ಬ್ರಹ್ಮ, ಚಂದ್ರಕಾಮ, ಹಾಗೂ ಇಂದ್ರ ಇವರಿಗೆ ಒದಗಿದ ಕಷ್ಟವನ್ನು ಕವಿ ವರ್ಣಿಸಿದ್ದಾನೆ.

"ಶ್ರೀರಾಮಚಂದ್ರನ ವನವಾಸದೊಳಗ ದುಃಖ ಬಹಳವಾದದ್ದು ಕರೆ ।
ನಳಮಹಾರಾಜನು ಅಡಿಗೆ ಮಾಡಲಿಕ್ಕೆ ಚಾಕರಿ ನಿಂತದ್ದು ಹೌಂದ ಕರೆ
ಬಲಿಚಕ್ರವರ್ತಿನ ವಾಮನ ತಾನು ತುಳದಾನ ಪಾತಾಳಕ್ಹೊಂದ ಕರೆ ।
ವ್ಯಾಳೆ ಹೊತ್ತಿಗೆ ಯಾರಿಲ್ಲ ಕೃಷ್ಣಗ ಬ್ಯಾಡನ ಕೈಯಾಗ ಸತ್ತ ಕರೆ
ಹೊಲಿಯರ ಮನೆಯೊಳು ಹರಿಶ್ಚಂದ್ರ ರಾಜ ಆಳಾಗಿ ದುಡದದ್ದು ಕರೆ ।"[೧೧]

೧೪ ವರ್ಷ ಕಾಡಿನಲ್ಲಿ ಶ್ರೀರಾಮಚಂದ್ರರು ಗಡ್ಡೆ ಗೆಣಸು ತಿಂದು ಪಟ್ಟ ಪರಿಶ್ರಮ ಹೇಳತಿರದು. ನಳಮಹಾರಾಜನು ಚಾಕರಿ ನಿಂತಿದ್ದು, ಬಲಿಚಕ್ರವರ್ತಿ ವಾಮನನಿಂದ ಪಾತಾಳ ಸೇರಿದ್ದು, ಬ್ಯಾಡನ ಕೈಯಿಂದ ಕೃಷ್ಣ ಹತನಾದದ್ದು, ಹರಿಶ್ಚಚಂದ್ರರಾಜನು ಚಾಂಡಾಲನಾಗಿ ಸ್ಮಶಾನ ಕಾಯ್ದಿದ್ದು ಹೀಗೆ ಹಲವಾರು ವಿಷಯಗಳನ್ನು ಕವಿ ಚರ್ಚಿಸಿದ್ದಾನೆ.

"ವೀರಧೀರ ಗಂಭೀರ ಪಾಂಡುವರು ಭಿಕ್ಷೆ ಬೇಡಿ ತಿಂದದ್ದು ಕರೆ
ಸುರಾಸುರರು ಜಗಳವಾಡಿ ಶೇಷನ ಹಗ್ಗಾ ಮಾಡಿ ಕಡೆದದ್ದು ಕರೆ।"[೧೨]

ವೀರ ಶೂರನಾದ ಪಾಂಡವರು ಧರ್ಮರಾಯನ ಮಾತಿನ ತಪ್ಪಿಗೆ ಕಾಡಿನಲ್ಲಿ ಕಾಲ ಕಳೆಯಬೇಕಾದ ಸ್ಥಿತಿ, ಕಾಡಿನಲ್ಲಿ ಭಿಕ್ಷೆ ಬೇಡಿ ಗಡ್ಡೆ ಗೆಣಸು ತಿಂದು ಕಾಲ ಕಳೆಯುತ್ತಾರೆ. ಸುರಾಸುರರು ಜಗಳವಾಡಿ ಆದಿಶೇಷನನ್ನೇ ಹಗ್ಗ ಮಾಡಿ ತುಂಡರಿಸುತ್ತಾರೆ.

ಹೀಗೆ ಅಲಭ್ಯೆರಿ ಹಲವಾರು ಗಂಭೀರ ಪೌರಾಣಿಕ ವಸ್ತುಗಳನ್ನು ತನ್ನ ಕಾವ್ಯ ವಸ್ತುವಾಗಿಸಿಕೊಂಡಿದ್ದಾನೆ.

"ರಾಮನಾಮದ ಮಹಿಮೆ" ಈ ಪದ್ಯದಲ್ಲಿ ಅಲಭ್ಯೆರಿ ಶ್ರೀರಾಮ ದರ್ಶನದ ಮಹತ್ವನ್ನು ಸ್ಮರಿಸುತ್ತಾನೆ. ಇಲ್ಲಿ ರಾಮನ ದರ್ಶನದಿಂದ ಮುಕ್ತಿಯನ್ನು ಪಡೆದುಕೊಂಡ ಐಲಾಬಾಯಿ (ಅಹಲ್ಯೆ), ವಾಲ್ಮೀಕಿ ಮತ್ತು ಶಬರಿಯ ವರ್ಣನೆಯಿದೆ.

"ಅಲ್ಲದ ಬುದ್ಧಿ ಮಾಡಿಕ್ಯಾರಿ ಕಲ್ಲನಾಗಿ ಬಿದ್ದಾಳಪ್ಪ ಚೆಲು ಚದುರ್ಥಲ್ಯಾಬಾಯಿ
ಇಲ್ಲ ಸರಿಯಾರೋ । ಚಲುಚದುರಲ್ಯಾಬಾಯಿ ಸಲ್ಲಸಲ್ಲಿಗೆ ಧ್ಯಾನ ಮಾಡಿ
ಕಲ್ಲಿಗಿಕಾಲ ಸಲ್ಲಿಸಿ ಕೊಟ್ಟಿವ ಕೈಲಾಸ ಪದವಿಯನೋ"[೧೩]

ಅಲ್ಲದ ಬುದ್ಧಿ ಮಾಡಿ ಕಾಡಿನಲ್ಲಿ ಕಲ್ಲಾಗಿ ಬಿದ್ದಂತಹ ಅಹಲ್ಯೆ ರಾಮನ ಪಾದ ತಟ್ಟಲು ತಟ್ಟನೆ ಅವಳು ಸ್ತ್ರೀರೂಪವನ್ನು ಧರಿಸುತ್ತಾಳೆ. ಅನಂತರ ಶ್ರೀರಾಮನಿಗೆ ತನ್ನ ಘಟನೆ ಅರುಹಲು. ಅವಳಿಗೆ ಗಣ ಪದವಿಯನ್ನು ಕೊಟ್ಟು ಕೈಲಾಸಕ್ಕೆ ಕಳುಹಿಸುತ್ತಾನೆ.

"ಘೋರ ಕಾಂತಾರದೊಳಗ ತಮ್ಮಾ ಕ್ರೋದ ಕೀರ್ತಿಯನ್ನು
ಮಾಡಿ ಬಾರಿತರದ ಪಾಪದ ಗಾಸಿ ಮೀರಿದ ವಾಲ್ಮೀಕಿನೋ ।
ಬಾರಿತರದ ಪಾಪ ಮಾಡಿ ಮೀರಿದಂತ ವಾಲ್ಮೀಕಿ ಋಷಿಯನೋ।
ನರಕಾತಪ್ಪಿಸಿ ಕರಕೊಂಡ ಹೋಗ್ಯಾನೋ ಸ್ವರ್ಗಕ ಶ್ರೀರಾಮನೋ ।"[೧೪]

ಘೋರ ಕಾಡಿನಲ್ಲಿ ವಾಲ್ಮೀಕಿ ಪಾಪದ ಕೆಲಸವನ್ನು ಮಾಡಿ ನರರಕ್ಕೆ ಗುರಿಯಾಗುತ್ತಾನೆ. ಶ್ರೀರಾಮನ ದರ್ಶನದಿಂದ ಸ್ವರ್ಗ ಪ್ರಾಪ್ತಿ ಪಡೆದುಕೊಳ್ಳುತ್ತಾನೆ. ಮತ್ತೆ ನೇಮ ನಿಷ್ಠೆಯಿಂದ ಶಬರಿ ರಾಮನಾಮಧ್ಯಾನ ಮಾಡಿ ಪ್ರೇಮದಿಂದ ಹಣ್ಣನ್ನು ಕೊಡುತ್ತಾಳೆ. ಎಂಜಲದ ಹಣ್ಣ ತಿಂದ ಶ್ರೀರಾಮನು ಶಬರಿಗೆ ಕೊಟ್ಟಾನ ಕೈಲಾಸ ಮಾರ್ಗವನ್ನು

"ಜಾತಿ ಗೋತ್ರದ ಭೀತಿಯ ಬ್ಯಾಡ
ನೀತಿ ಒಂದ ಇದ್ದರ ಸಾಕ
ಮಾತ ಮಾತಿಗೆ ರಾಮನ ಧ್ಯಾನಾ ।
ಪ್ರೀತಿಲೆ ಅನಬೇಕೋ। ಮಾತ ಮಾತಿಗೆ ರಾಮನ ಧ್ಯಾನಾ ।
ಪ್ರೀತಿಯಿಂದ ಅಂದರೆ ತಮ್ಮಾ
ದೂತನಾಗುದವನೆ ಸತ್ಯನಿತ್ಯ ತಿಳಿನೀನೋ।

ನಿತ್ಯಕಾಲದಲ್ಲಿ ಗಾಂಧಿ ತತ್ವವನು ತಿಳಿದನೋಡ
ಸತ್ಯ ಹಿಂಸೆ ವೃತ್ತಿಯಿಂದ ರಾಮನ ಧ್ಯಾನವನೋ ।
ಸತ್ಯ ಅಹಿಂಸೆ ವೃತ್ತಿಯಿಂದ ನಿತ್ಯರಾಮನ ಧ್ಯಾನ ಮಾಡಿ
ಛತ್ತಿಸಕೋಟಿ ದೇವರ ಒಳಗ ಉತ್ತಮನಾದವನೋ॥"[೧೫]

ಜಾತಿಗೋತ್ರದ ಭೀತಿಯಿಲ್ಲದೆ ನಿತ್ಯ ರಾಮನ ಧ್ಯಾನ ಮಾಡಿ ಗಾಂಧಿ ತತ್ವವನ್ನು ತಿಳಿದು ಸತ್ಯ ಅಹಿಂಸೆಯಿಂದ ರಾಮನನ್ನು ನಿತ್ಯ ಗುಣಗಾನಿಸಿ ಪಾವನನಾಗಲು ಕವಿ ಅಲಭ್ಯೆರಿ ತಿಳಿಸುತ್ತಾನೆ. ಈ ರೀತಿಯಾಗಿ ರಾಮನ ಗುಣಗಾನ ಹಾಗೂ ಅವನ ದರ್ಶನದ ಮಹತ್ವವನ್ನು ತಿಳಿಸುತ್ತಾನೆ. "ಶನಿದೇವನ ಮಹತ್ವ" ವನ್ನು ಸಾರುವ ಎರಡು ಪದ್ಯಗಳಿವೆ. ಒಂದರಲ್ಲಿ ಶನಿಗ್ರಹದ ಗುಣಗಾನವಿದ್ದರೆ ಮತ್ತೊಂದರಲ್ಲಿ ಶನಿದೇವನ [ಹನುಮಂತ] ದೇವನ ಸ್ತುತಿ ಕಾಣುತ್ತೇವೆ.

ಪೂರ್ವಕಾಲದಲ್ಲಿ ವಿಜಯನಗರದ ಆಸ್ಥಾನದಲ್ಲಿ ರಾಜನು ಒಂದು ದಿನ ಗ್ರಹಗಳ ವಿಚಾರವನ್ನು ತೆಗೆಯುತ್ತಾನೆ. ಒಬ್ಬೊಬ್ಬರು ಒಂದೊಂದು ಗ್ರಹಗಳ ವಿಚಾರವಾಗಿ ಮಾತನಾಡುತ್ತಾರೆ. ಮೊದಲನೆಯವನು ರವಿಯನ್ನು ಬೆಳೆಸಿ ಹೇಳಿದರೆ, ಎರಡನೆಯವನು ಚಂದ್ರನ ಲೀಲೆಯನ್ನು ಗುಣಗಾನಿಸುವನು ಬಿಡದೆ ಮೂರನೆಯವನು ಮಂಗಳನ್ನು, ನಾಲ್ಕನೆಯವನು ಬುಧದ ವರ್ಣನೆಯನ್ನು ಮಾಡುತ್ತಾನೆ.

"ಏಳನೆಯವ ರಾಹುವನೋ । ಎಂಟನೆದವನು ಕೇತುವನೋ ।
ಗಂಟ ಬಿದ್ದನೋ ಒಂಭತ್ತನೆಯವನೋ । ಶನಿ ಪ್ರಭಾವ ಹೇಳಿದನೋ।
ಸರ್ವಗ್ರಹದಲ್ಲಿ ಶನಿದೇವನು ಶ್ರೇಷ್ಠನೋ । ಬಲಾಢ್ಯನು ಅದ್ಭುತಾನೋ
ದೇವದಾನವರು ಆತಗ ಅಂಜಿ ಅವರ ಶರಣವ ಹೇಳಿದನೋ।"[೧೬]

"ಹೀಗೆ ಕವಿ ಎಲ್ಲ ದೇವರಲ್ಲಿ ಶನಿದೇವನು ಬಲಾಢ್ಯನು ಹಾಗೂ ಸರ್ವಶ್ರೇಷ್ಠನೆಂದು ಆತನ ಪೌರುಷಕ್ಕೆ ಎಲ್ಲ ದೇವರು ಅಂಜಿ ಶರಣಾಗಿದ್ದಾರೆಂದು ಪ್ರತಿಪಾದಿಸುತ್ತಾನೆ.

ಮತ್ತೊಂದು ಪದ್ಯದಲ್ಲಿ ಶನಿದೇವನನ್ನು ನೆನೆಸಿದರೆ ಎಂತಹ ಕಷ್ಟಗಳಿದ್ದರೂ ದೂರವಾಗುತ್ತವೆ.

"ಸೂರ್ಯನ ಸರ್ವಾಂಗ ಕಷ್ಟವಾಯಿತು ।
ಅರಿಯೇ ನಮ್ಮ ಶನಿಮಹಾತ್ಮನೋ
ಪಾರ್ವತಿ ಹೆಳುವಾಗಿ ಶೂದ್ರ ಕುರುಡನಾಗಿ ।

ಪರಭಾವ ತಿಳಿ ಶನಿ ಮಹಾತ್ಮನೋ ॥[೧೭]

ಸೂರ್ಯ ಹಾಗೂ ಪಾರ್ವತಿ ಕಷ್ಟವನ್ನು ದೂರ ಮಾಡಿದವನು . ಅಷ್ಟೇ ಅಲ್ಲದೆ ಕವಿ ತಾನು ಬೇನೆ ಬಿದ್ದಾಗ ಶನಿದೇವನನ್ನು ನೆನೆಸಿ ಪಾವನನಾದುದನ್ನು ಸ್ಮರಿಸುತ್ತಾನೆ.

“ಹೊತ್ತಿಗೆ ಓದುನು ಬನ್ನಿರೋ” ಈ ಪದ್ಯದಲ್ಲಿ ಕವಿ ತಾನು ದಿನನಿತ್ಯ ಕರೆಸಿದ್ಧನ ಗುಡಿಯಲ್ಲಿ ಕುಳಿತು ಓದುವ ಅಧ್ಯಾತ್ಮದ ಪುಸ್ತಕ ಕುರಿತಾಗಿ ಹೇಳುತ್ತಾನೆ. ಇದು ಇಡೀ ಮಾನವ ಕುಲವನ್ನು ಉದ್ಧಾರ ಮಾಡುವಂತಹ ಗ್ರಂಥವೆಂದು ವಿವರಿಸಿದ್ದಾನೆ.

“ಯುಕ್ತಿಲಿ ಶಿವನೋಳು ಭಕ್ತಿಯ ಮಾಡಿಸಿ ಮುಕ್ತಿ ಹೊಂದಿಸುವ ಹೊತ್ತಿಗೋ
ಮುಕ್ತಿಯ ಹೊಂದಲು ಶಕ್ತಿಯ ನೀಡುವ ಉತ್ತಮವಾದ ಹೊತ್ತಿಗೋ ॥
ಸುರನರ ಮಹಾಮುನಿ ವರಕವಿ ವಾಲ್ಮೀಕಿ ಹರುಷದಿ ಓದುವ ಹೊತ್ತಿಗೋ ।
ಮರುವಿನ ಮನೆಯೊಳು ಅರಿವುಳ್ಳ ಜ್ಞಾನದ ಗುರುತವ ತೋರಿಸುವ ಹೊತ್ತಿಗೋ
ಪಾಪ ಪುಣ್ಯಗಳ ರೂಪವ ತಿಳಿಸಿ ತಾಪಹರಿಸುವ ಹೊತ್ತಿಗೋ ॥
ಕೋಪ ತಾಪಗಳ ವ್ಯಾಪಾರ ಇಲ್ಲದ ಅಪಾರ ಬ್ರಹ್ಮನ ಹೊತ್ತಿಗೋ।”[೧೮]

ಶಿವನಲ್ಲಿ ಅನನ್ಯ ಭಕ್ತಿಯನ್ನು ಇಟ್ಟು ಪೂಜಿಸಿ ಹೊತ್ತಿಗೆ ಓದಿದರೆ ಮುಕ್ತಿಯನ್ನು ತೋರುತ್ತದೆ. ಸುರರು, ನರರು ಹಾಗೂ ವಾಲ್ಮೀಕಿಯನ್ನು ಹಿಡಿದ ಹರುಷದಿಂದ ಓದುವ ಹೊತ್ತಿಗೆ ಪಾಪ ಪುಣ್ಯಗಳ ರೂಪವನ್ನು ತಿಳಿಸಿ, ನರರ ಕಷ್ಟವನ್ನು ಪರಿಹರಿಸುವ ಹೊತ್ತಿಗೆ ಎಂದು ಕವಿ ಗುಣಗಾನಿಸಿದ್ದಾನೆ. ಅಂತಹ ಅದ್ಭುತ ಶಕ್ತಿ ಅದರಲ್ಲಿದೆ.

‘ಆದಿಯನಾದಿಗಾಧಾರ ಸಾಧುರೂಪ ಶಿವ ಸಿದ್ಧಯ್ಯನೋ’ ಪದ್ಯದಲ್ಲಿ ಶಿವನ ಸ್ತುತಿಯನ್ನು ವ್ಯಕ್ತ ಪಡಿಸಿದ್ದಾನೆ. ದೇವರು ಒಬ್ಬನೇ ನಾಮಗಳು ಹಲವು ಎಂಬಂತೆ ಯಾವ ಯಾವ ಧರ್ಮಿಯರು ಯಾವ ಹೆಸರಿನಲ್ಲಿ ಪೂಜಿಸುತ್ತಾರೆಂಬುದನ್ನು ತಿಳಿಸುತ್ತಾನೆ. ಶಿವನ ಅನಂತ ರೂಪುಗಳು ಇಲ್ಲಿ ವ್ಯಕ್ತವಾಗಿವೆ.

“ವೀರ ಶೈವರಿಗೆ ಶಿವ ಕುರುಬರಿಗೆ ಬೀರದೇವ ಶಿವ ಸಿದ್ಧಯ್ಯನೋ
ಹಾರೂರಿಗೆ ಹರಿ ಮುಸಲ್ಮಾನರಿಗಲ್ಲಾ–ಬ್ಯಾರಿ ಮತಕ ಶಿವಸಿದ್ಧಯ್ಯನೋ।”[೧೯]

“ಕುರುಕ್ಷೇತ್ರ” ಈ ಪದ್ಯದಲ್ಲಿ ಮಹಾಭಾರತದಲ್ಲಿ ಕೌರವ ಪಾಂಡವರಿಗೆ ನಡೆದ ಘೋರ ಯುದ್ಧದ ವರ್ಣನೆ ಬರುತ್ತದೆ.

“ಕೌರವರ ಪಾಂಡವರ ಕಾಳಗದೊಳಗ ಸೈನ್ಯವೆಲ್ಲಾ ಹಾಳಾತಲಿಮೆ ।
ಕರ್ಣ ಉಳಿಯಲಿಲ್ಲ ದ್ರೋಣ ಉಳಿಯಲಿಲ್ಲಾ ಮಕ್ಕಳು ಉಳಿಯಲಿಲ್ಲಲಿಮೆ॥

ನೂರು ಜನಾ ಉಳಿಯಲಿಲ್ಲಲಿಮೆ । ಚೋರಶಕುನಿ ಭೋಳಾದಲಿಮೆ
ಶೂರ ಭೀಷ್ಮಗೊಳಾದಲಿಮೆ ।"[೨೦]

ಕೌರವರ ನೂರು ಜನ ಮಕ್ಕಳು, ಶೂರ ಕರ್ಣ , ದ್ರೋಣ ಹಾಗೂ ಶಕುನಿ ಭೀಷ್ಮರಿಗೆ ಒದಗಿದ ದುರಂತ ಪ್ರಸಂಗವನ್ನು ಕವಿ ಮಾರ್ಮಿಕವಾಗಿ ವರ್ಣಿಸಿದ್ದಾನೆ.

"ಸುಧಾಮ ಕೃಷ್ಣರ ಆತ್ಮೀಯ ಗೆಳೆತನ ಹೇಳುವ ಪದ್ಯದಲ್ಲಿ ಕವಿ ಅಲಭ್ಯೆರಿ ಗೆಳೆತನದ ಪವಿತ್ರ ಬಂಧನವನ್ನು ಸಮಸ್ತ ಮಾನವ ಕುಲಕ್ಕೆ ತಿಳಿಸಿದ್ದಾನೆ. ಸುಧಾಮ ಬಡ ಬ್ರಾಹ್ಮಣ. ಇವರೆಲ್ಲರೂ ಒಂದೇ ಗರಡಿಯಲ್ಲಿ ವಿದ್ಯೆಯನ್ನು ಪಡೆದುಕೊಂಡವರು. ಅನಂತರ ಸುಧಾಮನು ಶ್ರೀಕೃಷ್ಣನನ್ನು ಭೆಟ್ಟಿಯಾಗಲು ಹೋದಾಗ ನಡೆದ ಘಟನೆ ಇಲ್ಲಿದೆ.

"ದೊಡ್ಡವರಾಗಿ ವಿದ್ಯೆ ಕಲಿತು ಹೋದಾರ ತಮ್ಮ-ತಮ್ಮ ಮನೆಯಲ್ಲೆ
ಅಡ್ಡದಾರಿ ಹಿಡಿದು ನಡಿಯವನಲ್ಲಾ ಕೃಷ್ಣನ ಧ್ಯಾನಾ ಮನದಲ್ಲೆ ।
ಮಡದಿ ಮಕ್ಕಳು ಮೈತುಂಬವೆಲ್ಲಾ ಬಟ್ಟೆ ಇರಲಿಲ್ಲ ಅವರಲ್ಲೆ
ಬಡತಾನ ಸುಧಾಮಗ ಬಿಟ್ಟಿರಲಿಲ್ಲಾ ಹೊಟ್ಟೆ ತುಂಬ ಊಟ ಇರಲಿಲ್ಲೆ।"[೨೧]

ವಿದ್ಯೆಯನ್ನು ಕಲಿತ ಅವರೆಲ್ಲರೂ ತಮ್ಮ ಮನೆಯನ್ನು ಸೇರುತ್ತಾರೆ. ಅವರಲ್ಲಿ ಮಧುರವಾದ ಗೆಳೆತನವಿತ್ತು. ಕೃಷ್ಣನಿಗೆ ಯಾವುದಕ್ಕೂ ಕೊರತೆಯಿರಲಿಲ್ಲ. ಅಷ್ಟೈಶ್ವರ್ಯದಿಂದ ರಾಜ್ಯವಾಳುತ್ತಿದ್ದನು. ಸುಧಾಮನು ಶ್ರೀಕೃಷ್ಣನನ್ನು ಕಾಣಲು ಹೋದಾಗ ಅವಲಕ್ಕಿಯನ್ನು ತೆಗೆದುಕೊಂಡು ಹೋದ ಪ್ರಸಂಗ.

"ಅವಲಕ್ಕಿ ತೊಗೊಂಡ ಹೋದಾಗ ಕುಚಲಾ- ಏನು ಇಲ್ಲದಕ ಮನೆಯಲ್ಲೆ
ಶಿವನನು ಭಜಿಸುತ ಹೋದಾಗ ಅವನು ದ್ವಾರಕಾ ಪಟ್ಟಣ ನಗರದಲ್ಲೆ ॥
ಅರಮನೆಯಲ್ಲಿ ಕೃಷ್ಣನು ರುಕ್ಮಿಣಿಯೊಡನೆ ಕೂತಿದ್ದ ಮಂಚದಲ್ಲೆ
ಬರದಿಂದ ಬಂದು ಸುಧಾಮನನ್ನು ಅಪ್ಪಿಕೊಂಡು ಸಂತೋಷದಲ್ಲೆ ॥
ಕರತಂದ ಮಂಚದ ಮೇಲೆ ಕೂಡ್ರಿಸಿ ಮಾತುಕತೆ ನಡದಾವಲ್ಲೆ
ಊರಿಂದ ಏನು ತಂದದಿ ಗೆಳೆಯಾ ಕೊಡಬೇಕ ನನ್ನ ಕೈಯಲ್ಲೆ ।
ಅಲ್ಲಿಗೆ ತಂದ ಅವಲಕ್ಕಿ ಕೊಡಲು ಅಂಜಿದ ತನ್ನ ಮನದಲ್ಲೆ
ಅವನ ಭಕ್ತಿಗೆ ಆಶೀರ್ವಾದ ಮಾಡಿ ಪಂಚಾಮೃತ ಉಂಟಾತ ಮನೆಯಲ್ಲೆ ।"[೨೨]

ಈ ರೀತಿಯಾಗಿ ಅಲಭೈರಿ ಕೃಷ್ಣ ಸುಧಾಮರ ಗೆಳೆತನದ ಗಾಢ ಸಂಬಂಧವನ್ನು ಬೆಸೆಯುತ್ತಾನೆ. ಸುಧಾಮ ತನ್ನ ಮನೆಯಲ್ಲಿ ಕೃಷ್ಣನನ್ನು ಗುಣಗಾನ ಮಾಡುವುದರೊಂದಿಗೆ ತಮ್ಮ ಗೆಳೆತನವನ್ನು ಗಟ್ಟಿಗೊಳಿಸುತ್ತಾನೆ.

"ಓಲಗ ನೋಡಲು ಬನ್ನಿಯರೋ" ಈ ಪದ್ಯದಲ್ಲಿ ಸಿದ್ಧನ ಓಲಗದ ವರ್ಣನೆ ಬರುತ್ತದೆ. ಸಿದ್ಧನ ಓಲಗ ನೋಡಿ ಪಾವನವಾಗಲು ಬನ್ನಿರಿ ಎಂದು ಭಕ್ತ ಸಮೂಹವನ್ನು ಆಹ್ವಾನಿಸುತ್ತಾನೆ.

"ಸದ್ಗುರು ಸಿದ್ಧನ ಸುಜ್ಞಾನದಂಬಲಿ –ಇದ್ದಷ್ಟು ಉಣ್ಣೋನು ಬನ್ನಿಯರೊ
ಬದ್ಧ ಸಂಸಾರ ಹೆಬ್ಬಗದ್ದಲದೊಳು– ಉದ್ಧಾರಾಗೂನು ಬನ್ನಿಯರೋ।"[೨೩]

ಇದಲ್ಲದೆ ಕರಿಯಪ್ಪ, ಭೀರಪ್ಪ, ಹನುಮಪ್ಪ, ಚಂದ್ರವಂಶದ ವಂಶಾವಳಿ ಇನ್ನೂ ಮುಂತಾದ ಹಾಡುಗಳು ಈ ಭಾಗದಲ್ಲಿ ಬರುತ್ತವೆ. ಹೀಗೆ ಅಲಭೈರಿ ಇಂಥ ಪೌರಾಣಿಕ ವಸ್ತುಗಳನ್ನು ಎತ್ತಿಕೊಂಡು ಅನೇಕ ಪೌರಾಣಿಕ ಪದ್ಯಗಳನ್ನು ರಚಿಸುವಲ್ಲಿ ಸಮರ್ಥರಾಗಿದ್ದಾನೆ.

ಪವಾಡ ಪದಗಳು :

ಕರಿಯಪ್ಪ ಭೀರಪ್ಪರು ಮಾಡಿದ ಪವಾಡಗಳನ್ನು ಇಲ್ಲಿ ಆಕರ ವಸ್ತುವನ್ನಾಗಿ ಸ್ವೀಕರಿಸಿಕೊಂಡು ಅಲಭೈರಿ ಪದ್ಯಗಳನ್ನು ರಚಿಸಿದ್ದಾನೆ. ದೊರೆತ ಎರಡು ಪದ್ಯಗಳನ್ನೂ ಇಲ್ಲಿ ಅಧ್ಯಯನಿಸಲಾಗಿದೆ.

"ಕರಿಯಪ್ಪನೋ" ಎಂಬ ಪದ್ಯದಲ್ಲಿ ಕರಿಯಪ್ಪನ ಪವಾಡಗಳನ್ನು ಕವಿ ಕ್ರೋಢಿಕರಿಸಿದ್ದಾನೆ. ಹಾಲುಮತದವರಿಗೆ ಆರಾಧ್ಯ ದೈವವಾಗಿ ಅನೇಕ ಪವಾಡಗಳನ್ನು ವಿವರಿಸಿದ್ದಾನೆ.

"ಸತ್ಯ ಶರಣರ ಸುತ್ತ ಸುತ್ತಿದ ಗರ್ವಕಿತ್ತ ಹಾಕಿದ ಕರಿಯಪ್ಪನೋ
ಸತ್ತಗೂಳಿ ಮಹಾಮಂತ್ರದ ಬಲದಿ ಎಬ್ಬಿಸಂತ ಹೇಳಿದ ಕರಿಯಪ್ಪನೋ॥"[೨೪]

ಶರಣರಲ್ಲಿ ತುಂಬಿದ ಗರ್ವವನ್ನು ಹೋಗಲಾಡಿಸಿ ಸತ್ತ ಗೂಳಿಯನ್ನೇ ತನ್ನ ಮಹಾಮಂತ್ರದ ಬಲದಿಂದ ಎಬ್ಬಿಸಿ ಕೀರ್ತಿವಂತನಾಗಿದ್ದಾನೆ. ಪಾಪದ ಕಲಿಯುಗದಲ್ಲಿ ರೂಪುಳ್ಳ ಮೂರುತಿಯಾಗಿ ಮೆರೆದಿದ್ದಾನೆ. ಅಂತರಂಗದಲ್ಲಿ ಏಕಾಂತ ಸ್ವರೂಪನಾಗಿ ಪರಶಿವನ ರೂಪವಾದವನು ಕರಿಯಪ್ಪನು.

"ಗಂಟಿಯ ಕಟ್ಟಿದ ಮಂಟಪದೊಳು ಎಂಟವತಾರ ಕರಿಯಪ್ಪಾನೋ
ಎಂಟು ದಿಕ್ಕಿನ ಕಂಟಕ ಪರಿಹರಿಸುವ ಬಂಟದೇವರ ಕರಿಯಪ್ಪನೋ ॥೨॥
ಒಂದ ಟಗರಿನ ತಂದಾ ಶರಣರ ಮುಂದ ಕೊಂದ ಕರಿಯಪ್ಪನೋ
ಕೊಂದ ಕುರಿಯ ಬಲದಿಂದಲೆಬ್ಬಶ್ಯಾನ ಚಂದ ಮೂರ್ತಿ ಕರಿಯಪ್ಪಾನೋ॥"[೨೫]

ಎಂಟು ದಿಕ್ಕಿಗೆ ಹಬ್ಬಿದ ಕಂಟಕವನ್ನು ಹೋಗಲಾಡಿಸುವವನು. ಶರಣರು ತಂದ ಟಗರನ್ನು ಕೊಂದು ಮತ್ತೆ ತನ್ನ ಅಂತಃಶಕ್ತಿಯ ಬಲದಿಂದ ಎಬ್ಬಿಸಿದ ಚಂದ ಮೂರ್ತಿ ಕರಿಯಪ್ಪನೋ ಎಂದು ಪವಾಡಗಳನ್ನು ಕವಿ ಇಲ್ಲಿ ವಿವರಿಸಿದ್ದಾನೆ. ಇನ್ನೂ ಅನೇಕ ಪವಾಡಗಳನ್ನು ಮಾಡಿ ಭಕ್ತ ಜನರ ಬೆಂಗಾವಲಾಗಿದ್ದಾನೆ.

"ಬೀರೇಶ್ವರ ಬೀರಪ್ಪನೋ" ಈ ಪದ್ಯದಲ್ಲಿ ಬೀರಪ್ಪನ ಅನಂತ ರೂಪಗಳು ವ್ಯಕ್ತವಾಗುತ್ತವೆ. ವೀರಭದ್ರನ ಅವತಾರ ತಾಳಿ ಸಮಸ್ತ ಕುರುಬರಿಗೆ ಒದಗಿದ ಕಂಟಕವನ್ನು ಪರಿಹರಿಸಿದ ಮಹಾನುಭಾವ ಬೀರಪ್ಪನು ಕರೇಸಿದ್ಧನಾಗಿ ಧರೆಯೊಳು ಮೆರೆದವನು ಬೀರಪ್ಪನು

"ನಿರ್ವಿಕಾರದೊಳು ಗರ್ವನಡಗಿಸಿ ಸರ್ವಸಾಕ್ಷಿ ಬೀರಪ್ಪನೋ ॥
ಸರ್ವಸಾಕ್ಷಿಯಾಗಿರು ಕಾರಣ ಅರವುಳ್ಳವ ಬೀರಪ್ಪನೋ।"[೨೬]

ವಿಕಾರವಿಲ್ಲದೆ ಗರ್ವವನ್ನು ಅಡಗಿಸಿ ಸರ್ವ ಸಾಕ್ಷಿ ಆದವನು ಬೀರಪ್ಪನು ಅರವು ತುಂಬಿಕೊಂಡು ಸರ್ವ ಸಾಕ್ಷಿಯಾಗಿದ್ದಾನೆ.

"ನಿರಂಕಾರ ಆಕಾರ ರೂಪವ ಸೇರಿಸಿಕೊಂಡ ಬೀರಪ್ಪನೋ
ಸೇರಿಸಿಕೊಂಡ ಸಂಸಾರಿಗಳನುದ್ಧಾರ ಕರ್ತ ಬೀರಪ್ಪನೋ"[೨೭]

ನಿರಂಕಾರ ಸ್ವರೂಪನಾಗಿ ಸಂಸಾರಿಗಳ ಉದ್ಧಾರಕ್ಕೆ ಕಾರಣ ಕರ್ತನಾಗಿ ಇದ್ದವನು ಬೀರಪ್ಪನು.

"ಕ್ವಾಣೆಶೂರನ ಪ್ರಾಣ ಹೊಡೆದ ಜಾಣದೇವರ ಬೀರಪ್ಪನೋ
ಕ್ವಾಣಗನೂರ ನಿರ್ಮಾಣ ಮಾಡಿ ಕಾಣಿಸಿದವ ಬೀರಪ್ಪನೋ ।
ಹರನು ಬೀರನು ಕುರಬರಿಗಾದವ ಕರುಣಾಕರ ಬೀರಪ್ಪನೋ
ಹಾರೂಗೇರಿ ಹರಬೀರ ಕುರಬರಿಗೆ ಬೀರೇಶ್ವರ ಬೀರಪ್ಪನೋ ।"[೨೮]

ದೈತ್ಯ ಕ್ವಾಣೆಶೂರನನ್ನು ಕೊಂದು ಕ್ವಾಣಗನೂರ ನಿರ್ಮಾಣ ಮಾಡಿದ ಕೀರ್ತಿ ಬೀರಪ್ಪನಿಗೆ ಸಲ್ಲುತ್ತದೆ.

೫. ಒಗಟಿನ ಪದಗಳು /ಸವಾಲ್ ಜವಾಬ್ ಪದಗಳು :

ಡೊಳ್ಳಿನ ಪದಗಳಲ್ಲಿ ಬರುವ ಒಗಟಿನ ಪದಗಳನ್ನು ಸವಾಲ್-ಜವಾಬ್ ಪದಗಳೆಂತಲೂ ಗುರುತಿಸುತ್ತಾರೆ. ಡೊಳ್ಳಿನ ಪದಗಳನ್ನು, ವಿಶೇಷವಾಗಿ ಪ್ರಶ್ನೋತ್ತರ ಹಾಕುವ ಪದಗಳನ್ನು ಜಾತ್ರೆಯಲ್ಲಿ ಹಾಡುತ್ತಾರೆ. ಒಂದು ಮೇಳದವರು ಹಾಡುತ್ತ ಇನ್ನೊಂದು ಮೇಳದವರಿಗೆ ಸವಾಲು ಹಾಕುತ್ತಾರೆ. ಇವರು ಹಾಕಿದ ಸವಾಲಿಗೆ ಬಂದ ಡೊಳ್ಳಿನ ಮೇಳದವರಲ್ಲಿ ಯಾವ ಮೇಳದವರಾದರೂ ಉತ್ತರಿಸಬಹುದು. ಅಥವಾ ಅದಕ್ಕೆ ಪ್ರತಿಯಾಗಿ ತಾವೊಂದು ಅಂತಹ ಪದವನ್ನು ಅವರಿಗೆ ಹಾಕಬಹುದು. ಒಬ್ಬರ ಹಾಡಿಗೆ ಇನ್ನೊಬ್ಬರಿಂದ ಉತ್ತರ ಹೇಳದಾಗದಿದ್ದಾಗ ಹಾಡಿದವರೇ ಅಥವಾ ಪ್ರಶ್ನೆ ಹಾಕಿದವರೇ ಉತ್ತರ ಕೊಡಬೇಕಾಗುತ್ತದೆ. ವಾದ ಪ್ರತಿವಾದ ಹಾಡಿನ ಮೂಲಕ ನಡೆಯುವುದರಿಂದ ಇವುಗಳನ್ನು ಸವಾಲ್ ಜವಾಬ್ ಪದಗಳೆಂದು ಕರೆಯುವರು. ಇಂತಹ ಹಾಡುಗಳು ಪ್ರೇಕ್ಷಕರಿಗೆ ರಂಜನೀಯ ಹಾಗೂ ಕುತೂಹಲಕಾರವೂ ಆಗಿರುತ್ತವೆ. ಒಮ್ಮೊಮ್ಮೆ ಅಪಾಯದ ಮಟ್ಟವನ್ನು ತಲುಪುತ್ತವೆ. ಏಕೆಂದರೆ ಎದುರಾಳಿ ತಂಡದವರಿಗೆ ಉತ್ತರಿಸಲಾಗದ ಸಂದರ್ಭದಲ್ಲಿ ಅಪಮಾನವಾಗಿ ಜಗಳವಾದ ಉದಾಹರಣೆಗಳು ಉಂಟು.

ಅಲಭೈರಿಯೂ ಹಲವು ಸವಾಲ್ ಪದಗಳನ್ನು ರಚಿಸಿದ್ದಾನೆ. ಅವೆಲ್ಲವೂ ಗಂಭೀರ ವಿಷಯದ ಕುರಿತು ರಚಿತವಾದವು.

"ಹೇಳ ಹೇಳ ನಾ ಕೇಳುವ ಮಾತಿನ ಅರ್ಥ ಮಾಡಿ ನಮಗ್ಹೇಳಲಿಮೆ.
ಹೇಳಿದವರ ಮನಿ ಆಳಿನ ಆಳಾಗಿ-ಕುಳಿಗಿ ದುಡಿತಿನ ಹೇಳಲಿಮೆ"[೨೯]

ಸರಿಯಾಗಿ ಉತ್ತರ ನೀಡಿದವರ ಮನೆಯಲ್ಲಿ ಆಳಾಗಿ ದುಡಿಯುವುದಾಗಿ ನಮ್ರತೆಯನ್ನು ತೋರುವನು. ಏಳು ಕೋಟಿ ಮಹಾ ಮಂತ್ರಕ ತಾಯಿ ಯಾರು, ತೊಂಬತ್ತಾರು ತತ್ವಗಳು ಯಾವವು ? ಏಳುದ್ವೀಪ, ಏಳು ಸಮುದ್ರ, ಏಳು ಪರ್ವತಗಳು ಯಾವವು ? ಏಳು ಪಾತಾಳ, ಏಳುಲಿಂಗ, ಮೂರು ಸ್ವರೂಪಗಳು ಯಾವವು ? ಎಂಟು ನರಕ ಎಂಟು ಮದಗಳು, ಎಂಟು ನಮಸ್ಕಾರಗಳು ಯಾವವು? ಒಂಬತ್ತು ಕಾಂಡ, ಒಂಬತ್ತು ಬ್ರಹ್ಮ, ಒಂಬತ್ತು ಭಕ್ತಿಗಳು ಯಾವವು?

"ಹನ್ನೊಂದು ರುದ್ರ ಅವತಾರ ತೊಟ್ಟ-ತಾಯಿ ತಂದಿಯಾರ ಹೇಳಲಿಮೆ
ಹನ್ನೆರಡು ಕಳಿಗಳು ಸೂರ್ಯಾಗ ಇರತಾವ ಬಲ್ಲವನಾದರೆ ಹೇಳಲಿಮೆ।
ಬತ್ತಿಸರಾಗಾ ಅಂಗ ಜಾತಿಗಳ ಹುಟ್ಟಿದ ಊರಾ ಹೇಳಲಿಮೆ
ಕ್ಷಿತಿಯೊಳು ಹಾರೂಗೇರಿ ಅಲಭೈರಿ ಕೇಳಿದ್ದ ಪ್ರೀತಿಲೆ ನಮಗ ಹೇಳಲಿಮೆ"।[೩೦]

ಹೀಗೆ ಅಲಭೈರಿ ಡೊಳ್ಳಿನ ಹಾಡಿನಲ್ಲಿ ಅನೇಕ ಕ್ಲಿಷ್ಟ ವಿಷಯಗಳನ್ನು ಎದುರಾಳಿ ತಂಡಕ್ಕೆ ಹಾಕುತ್ತಾನೆ.

ಈ ಕೆಳಗಿನ ಡೊಳ್ಳಿನ ಪದದಲ್ಲಿ ಅಲಭೈರಿ ಕೆಲವು ಗಂಭೀರ ಪ್ರಶ್ನೆಗಳ ಉತ್ತರವನ್ನು ನೀಡಿದ್ದಾನೆ.

"ಕೇಳೋ ಕೇಳೋ ನಾ ಹೇಳುವೆ ಇದರರ್ಥ ಚಿತ್ತಗೊಟ್ಟ ನೀ ಕೇಳಯ್ಯಾ
ಹೇಳಲಿ ನಿನಗ್ಯಾಕ ಸುಳ್ಳ ಮಾತವನು ಬಲ್ಲಿದರ ಹೌದನ್ನಯ್ಯಾ"[೩೧]

ಸುಳ್ಳ ಮಾತಲ್ಲ ಇದು ಸರಿ ಉತ್ತರವನ್ನೇ ನೀಡುವೆ. ಗೊತ್ತಿದ್ದರೆ ಹೌದು ಎನ್ನಲು ಹೇಳುವನು. ರಾಮಾಯಣ, ಮಹಾಭಾರತ, ಪುರಾಣ ವ್ಯಕ್ತಿಗಳ ಪರಿಚಯವನ್ನು ಈ ಡೊಳ್ಳಿನ ಹಾಡಿನಲ್ಲಿ ಮಾಡಿರುವುದನ್ನು ಕಾಣುತ್ತೇವೆ. ಸಮುದ್ರನಾಥನ ಮಗಳಾದ ಲಕ್ಷ್ಮೀಯ ಮಗ ಮನ್ಮಥ, ಮನ್ಮಥನ ಮಗ ಅನುರುದ್ಧಿನ, ಅನುರುದ್ಧಿನನ್ನು ಸಲುಹಿದವಳು ಉಷಾದೇವಿ, ಇವಳ ತಂದೆ ಭಾಣಾಶೂರ, ಭಾಣಾಶೂರನನ್ನು ಗೆದ್ದವ ಕೃಷ್ಣ.

"ಯಮನ ತಂದೆಯ ವೈರಿಯ ತಾಯಿನ ವಿಪ್ರಜಿತು ಲಗ್ನವಾದಯ್ಯ
ವಿಪ್ರುಜಿತುವಿನ ಮಾವನ ಕೊಂದಾಂವ ವಿಷ್ಣು ಎಂಬುದ ತಿಳಿಯಯ್ಯ ।
ಹಿರಣ್ಯಾಕ್ಷನು ಸುರನರರಿಗೆ ಕೊಡಲು ಉಪದ್ರವ ಕೇಳಯ್ಯ
ಆಗ ವಿಷ್ಣು ಆತನ ಕೊಲ್ಲಲು – ವರಹನಾಗಿ ಬಂದ ತಿಳಿಯಯ್ಯಾ"[೩೨]

ಮತ್ತೆ ಕವಿ ಮುಂದುವರೆದು;

"ರಾವಣ ಸೇವಕನು ರಾಕ್ಷಸಗುರು – ಶುಕ್ರಾಚಾರಿಗಳು ಕೇಳಯ್ಯಾ
ಶುಕ್ರಾಚಾರಿಯ ತಂದೆಯ ಹೆಸರು – ಭೃಗುಋಷಿ ಎಂಬುದ ತಿಳಿಯಯ್ಯಾ ।
ಭೃಗುಋಷಿ ಹೆಂಡತಿ ದಿವ್ಯಾದೇವಿನ ಕೊಂದಾವ ವಿಷ್ಣು ಕೇಳಯ್ಯಾ
ವಿಷ್ಣುದೇವರಿಗೆ ಗರುಡರಾಜನು – ವಾಹನಾಗ್ಯಾನ ತಿಳಿಯಯ್ಯಾ ।"[೩೩]

ಅಲಭೈರಿ ಇಂತಹ ಸವಾಲ್ – ಜವಾಬ್ ಪದಗಳಲ್ಲಿ ಸಾಕಷ್ಟು ಗಂಭೀರ ವಿಷಯ ಚರ್ಚಿಸಿದ್ದಾನೆ. ಡೊಳ್ಳಿನ ಪದಗಳಲ್ಲಿ ಪೌರಾಣಿಕ, ಮತಧರ್ಮ, ಅನುಭಾವ, ಸಮಾಜ ವಿಡಂಬನೆಯ ಕುರಿತು ಹೆಚ್ಚಿನ ಪ್ರಮಾಣದಲ್ಲಿ ರಚಿಸಿದ್ದಾನೆ. ಸಮಾಜ ಬದಲಾದಂತೆ ಸಾಹಿತ್ಯ ಬದಲಾಗುವುದು ಅನಿವಾರ್ಯ. ಆ ನಿಟ್ಟಿನಲ್ಲಿ ಡೊಳ್ಳಿನ ಹಾಡುಗಳೂ ತುಂಬಾ ಪರಿವರ್ತನೆಗೊಂಡಿವೆ. ಹಾಡುಗಾರರು ಎಷ್ಟೇ ಪರಿಣಾಮಕಾರಿಯಾಗಿ ಹಾಡಿದರೂ ಇಂದು ಕೇಳುಗರ ಆಸಕ್ತಿ ಕಡಿಮೆಯಾಗಿದೆ. ಅದಕ್ಕೆ ಮಾಧ್ಯಮಗಳ ಪ್ರಭಾವವೆಂದು ಹೇಳಬಹುದು.

ಇದರಿಂದ ಹಾಡುಗಾರರ ಸಂಖ್ಯೆಯು ಕ್ಷೀಣಿಸುತ್ತಿದೆ. ಇದೇ ರೀತಿ ಮುಂದುವರೆದರೆ ಕೆಲವು ದಶಕಗಳಲ್ಲಿ ಈಗ ಇದ್ದ ಹಾಡುಗಾರರು ಸಂಪೂರ್ಣವಾಗಿ ಹಾಡುವುದನ್ನೇ ಬಿಡುತ್ತಾರೆಂದರೆ ಅತಿಶಯೋಕ್ತಿಯಾಗಲಾರದು.

ಕಲಾ ಪರಂಪರೆ ಉಳಿಯಬೇಕಾದರೆ ಒಂದೇ ದಾರಿ. ವಿಶ್ವ-ವಿದ್ಯಾಲಯಗಳು, ಅಕಾಡೆಮಿಗಳು, ಕರ್ನಾಟಕದಾದ್ಯಂತ ಕ್ಷೇತ್ರ ಕಾರ್ಯ ಕೈಗೊಂಡು ಡೊಳ್ಳಿನ ಪದಗಳ ಪ್ರಕಟಣೆ, ಧ್ವನಿಮುದ್ರಣ, ವಿಡಿಯೊ ಚಿತ್ರಣ ಮಾಡಿದರೆ ಮುಂದಿನ ಪೀಳಿಗೆಗೆ ಡೊಳ್ಳಿನ ಪದಗಳನ್ನು ಪರಿಚಯಿಸಲು ಸಾಧ್ಯವಾದೀತು.

೫.೨ ಕರ್ಬಲ್ / ರಿವಾಯತ್ ಪದಗಳು:

ಕರ್ನಾಟಕ ಬಹು-ಮತಗಳ ಬಹು ಸಂಸ್ಕೃತಿಯ ನಾಡು. ಬಹುತ್ವದಲ್ಲಿ ಏಕತ್ವವನ್ನು ಸಾಧಿಸಿಕೊಂಡು ಬಂದ ಬೀಡು. ಈ ನಾಡಿನಲ್ಲಿ ಆಯಾ ಕಾಲಕ್ಕೆ ಬಂದ ಧರ್ಮಿಯರು ತಮ್ಮದೆ ಆದ ಕಲ್ಪನೆಯಲ್ಲಿ ತಮ್ಮ ಧರ್ಮದ ಅಥವಾ ಅನ್ಯಧರ್ಮದ ತತ್ವಗಳನ್ನು ಕಾವ್ಯದ ಮೂಲಕ ಹೊರ ತರಲು ಪ್ರಯತ್ನಿಸಿದ್ದಾರೆ. ಆದರೆ ಅವರದು ಸಮರಸಭಾವ. ಸಮಗ್ರ ಬದುಕಿನ ಮೌಲ್ಯಗಳನ್ನು ಚಿತ್ರಿಸಿರುವುದು ಸಾಹಿತ್ಯದ ಮೂಲಕ. ಆ ಗೀತ ಪ್ರಧಾನವಾದ ಸಾಹಿತ್ಯವೇ ಜನಪದ ಸಾಹಿತ್ಯ. ಇದನ್ನು ರಚಿಸಿದವರು ಅನಕ್ಷರಸ್ಥ, ಹೆಸರಿಲ್ಲದ ಕವಿಗಳು. ಇಂತಹ ಜನಪದ ಗೀತ ಪ್ರಕಾರಗಳಲ್ಲಿ ಕರ್ಬಲ್/ರಿವಾಯತ್‌ಗಳು ಪ್ರಮುಖವಾಗಿವೆ.

"ರಿವಾಯತ್‌ಗಳು ಇಸ್ಲಾಂ ಧರ್ಮಿಯರ ಹಾಡುಗಳು. 'ಇಸ್ಲಾಂ' ಇದರ ಶಬ್ದಸ್ಯ ಅರ್ಥ ಶಾಂತಿ, ಶರಣು ಹೋಗು ಎಂದರ್ಥ".[೧] ಇಸ್ಲಾಂ ಧರ್ಮದ ಆದ್ಯ ಪ್ರವರ್ತಕನಾದ ಮಹಮ್ಮದ್ ಪೈಗಂಬರರು ಕಂಡ ದರ್ಶನ, ಬೋಧಿಸಿದ ತತ್ವಗಳು ಮುಂತಾದ ಅನುಭವಗಳನ್ನು ರಿವಾಯತ್ ಪದಗಳಲ್ಲಿ ಕಾಣುತ್ತೇವೆ. ಈ ಹಾಡುಗಳನ್ನು ಮೊಹರಂ ತಿಂಗಳಲ್ಲಿ ಹಾಡುವುದರಿಂದ ಮೊರಹಂ ಪದಗಳೆಂದಲೂ, ಅಲಾವಿಯ ಸುತ್ತ ಸುತ್ತುತ್ತ ಹಾಡುವುದರಿಂದ ಅಲಾವಿ ಹಾಡುಗಳೆಂದೂ ಹೆಸರು. ಕರ್ಬಲ್ ಕದನದ ದುರಂತ ಸಾರುವುದರಿಂದ ಕರ್ಬಲ್ ಪದಗಳೆಂದು ಹೆಸರು. "ಕರ್ಬಲ್" ಎಂಬುದು ಅರಬಸ್ಥಾನದಲ್ಲಿಯ ಒಂದು ಯುದ್ಧ ಭೂಮಿ. ಇದು ಮಹಾಭಾರತದ ಕುರುಕ್ಷೇತ್ರ ಭೂಮಿಯಿದ್ದಂತೆ. ಕರ್ಬಲ್ ಧರ್ಮಕ್ಕಾಗಿ ಮಡಿದವರ ಪವಿತ್ರ ಭೂಮಿ. ಮಡಿದವರ ಶೋಕಾಚರಣೆಯ ಹಬ್ಬವೇ ಮೊಹರಂ. ಮುಸಲ್ಮಾನರಿಗೆ ಹನ್ನೆರಡು ತಿಂಗಳಲ್ಲಿಯೇ ಮೊಹರಂ ಹಬ್ಬದ ತಿಂಗಳು ಪವಿತ್ರ, ಈ ತಿಂಗಳಲ್ಲಿಯೇ ಕದನ ನಡೆದಿರುವುದರಿಂದ ಮುಸಲ್ಮಾನ ಧರ್ಮಿಯರಿಗೆ ಪವಿತ್ರ ಹಬ್ಬವಾಗಿದೆ. ಕರ್ಬಲ್ ಕಾಳಗವು ಮಹಮ್ಮದ್ ಪೈಗಂಬರರು ತೀರಿಕೊಂಡ ಬಳಿಕ ನಡೆದ ಕದನ. ಪೈಗಂಬರನ ನಂತರ ಅವರ ಅಳಿಯ

ಹಜರತ್ ಅಲಿ ಖಲೀಫನಾದನು. ಈತನ ನಂತರ ಇವನ ಮಕ್ಕಳು ಖಲೀಫರಾಗಬೇಕು. ಆದರೆ ದಮಾಸ್ಕಸನಲ್ಲಿ ಮೂಆವಿಯಾ ತಾನೆ ಸಾಮ್ರಾಜ್ಯದ ಅಧಿಪತಿಯೆಂದು ಸಾರಿಕೊಳ್ಳುತ್ತಾನೆ. ಮತ್ತೆ ಬಲವಂತವಾಗಿ ಪ್ರಜೆಗಳಿಗೆ ತನ್ನ ಧರ್ಮವನ್ನೆ ಅನುಸರಿಸಬೇಕೆಂದು ಒತ್ತಾಯಿಸುತ್ತಾನೆ.

ಅಷ್ಟೇ ಅಲ್ಲದೆ ಮುಂದಿನ ಖಲೀಫನಾಗಿ ತನ್ನ ಮಗ ಏಜೀದನೇ ಎಂದು ಪಟ್ಟವನ್ನು ಒಪ್ಪಿಸುತ್ತಾನೆ. ಪೈಗಂಬರನ ಅಳಿಯ ಹಜರತ್ ಅಲಿ, ಮಗಳು ಬೀಬಿ ಪಾತಿಮಾ ಹಾಗೂ ಮೊಮ್ಮಕ್ಕಳಾದ ಹಸೇನ – ಹುಸೇನ ಇದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಇವರ ಕ್ರಾಂತಿಗೆ ಕೆಲ ಅರಬ್ ರಾಷ್ಟ್ರಗಳು ಬೆಂಬಲವನ್ನು ವ್ಯಕ್ತಪಡಿಸುತ್ತವೆ. ಹಜರತ್‌ಅಲಿಯ ಹೊಡೆತಕ್ಕೆ ಏಜೀದ್‌ನ ಸೈನ್ಯ ಕರ್ಬಲ್ ಮೈದಾನದಲ್ಲಿ ತತ್ತಿರಿಸಿ ಹೋಯಿತು. ಸೋತ ಏಜೀದನು ಮೋಸದ ಮಾರ್ಗ ಹಿಡಿಯುತ್ತಾನೆ. ಕುಡಿಯುವ ನೀರಿನಲ್ಲಿ ವಿಷವ ಬೆರೆಸುತ್ತಾನೆ. ಮತ್ತೆ ಏಜೀದ ಯುದ್ಧಕ್ಕೆ ಸಿದ್ಧನಾಗುತ್ತಾನೆ. ಕುರುಕ್ಷೇತ್ರ ಯುದ್ಧ ೧೮ ದಿನಗಳ ವರೆಗೆ ನಡೆದರೆ ಕರ್ಬಲಾ ಕದನ ೧೦ ದಿನಗಳ ವರೆಗೆ ನಡೆಯುತ್ತದೆ. ೧೦ ನೆಯ ದಿನ ಹಜರತ್ ಅಲಿ, ಬಂಧು ಬಳಗ ಹಾಗೂ ಮಕ್ಕಳಾದ ಹಸೇನ – ಹುಸೇನರು ಹತರಾಗುತ್ತಾರೆ. ಈ ಹುತಾತ್ಮರ ನೆನಪಿನ ಹಬ್ಬವೇ ಮೊಹರಂ.

ಮೊಹರಂ ಇದು ಸೂತಕದ ಹಬ್ಬವಾಗಿ ಆರಂಭಗೊಂಡು ಇಂದು ಸಂತೋಷದ ಹಬ್ಬವಾಗಿ ಆಚರಣೆಯಲ್ಲಿದೆ. ಹಿಂದೂ – ಮುಸ್ಲಿಂರು ಸಹಭಾಗಿಯಾಗಿ ಈ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಇದು ಭಾವೈಕ್ಯದ ಸಂಕೇತ. ಉತ್ತರ ಕರ್ನಾಟಕದಲ್ಲಿ ಹಿಂದೂ – ಮುಸ್ಲಿಂರು ಕರ್ಬಲಾ ಮೇಳಗಳನ್ನು ಕಟ್ಟಿಕೊಂಡು ಹಾಡುತ್ತಾರೆ. "ಮೊಹರಂ ತಿಂಗಳ ಗುದ್ದಲಿ ಪೂಜೆಯಿಂದ ಹಿಡಿದು ಹತ್ತನೆಯ ದಿನದವರೆಗೆ ಈ ಹಬ್ಬವನ್ನು ಆಚರಿಸುತ್ತಾರೆ. ಅದರಲ್ಲಿ ಒಂಬತ್ತನೆಯ ರಾತ್ರಿ ಕತ್ತಲು ರಾತ್ರಿ. ಈ ದಿನದ ರಾತ್ರಿಯಂತೂ ಬೆಳಂಬೆಳತನಕ ಕರ್ಬಲ – ಮೇಳಗಳು ಕರ್ಬಲ್ ಪದಗಳನ್ನೂ ಹಾಡುವರು."[೨] ಅಲಾವಿ (ಕೊಂಡ) ಸುತ್ತ ಕುಣಿಯುತ್ತ ಹಾಡುವುದರಿಂದ ಇದಕ್ಕೆ ಅಲಾವಿ ಕುಣಿತವೆಂದು ಹೆಸರು ಬಂದಿದೆ.

ಕರ್ನಾಟಕದ ರಾಯಚೂರು ಜಿಲ್ಲೆಯ ಮುದಗಲ್, ಬಾಗಲಕೋಟೆ ಜಿಲ್ಲೆಯ ಬೀಳಗಿ, ಧಾರವಾಡ ಜಿಲ್ಲೆಯ ನವಲೂರು, ಬೆಳಗಾವಿ ಜಿಲ್ಲೆಯ ಮೊರಬ ಮೊಹರಂ ಆಚರಣೆಗೆ ಪ್ರಸಿದ್ಧವಾಗಿವೆ.

ಬಾಗೆನಾಡಿನಲ್ಲಿಯೂ (ರಾಯಬಾಗ ತಾಲೂಕ) ಸುಮಾರು ೨೩ ಕರ್ಬಲ್ ಮೇಳಗಳಿವೆ. ತಂಡ ಕಟ್ಟಿಕೊಂಡು ಜಾತ್ರೆ, ಉತ್ಸವಗಳಲ್ಲಿ ಸ್ಪರ್ಧೆ ನಡೆಸುವುದನ್ನು ಕಾಣುತ್ತೇವೆ. ಹಾರೂಗೇರಿ, ಹಿಡಕಲ್, ಅಳಗವಾಡಿ, ಅಲಖನೂರ, ನಿಲಜಿ, ಮೊರಬ, ಪರಮಾನಂದವಾಡಿ,

ಖೇಮಲಾಪೂರ, ಸಿದ್ಧಾಪೂರ, ಸುಲ್ತಾನಪೂರ, ಹಂದಿಗುಂದ, ಮುಗಳಖೋಡ, ಸವದತ್ತಿ, ದಿಗ್ಗೇವಾಡಿ ಮುಂತಾದ ಗ್ರಾಮಗಳಲ್ಲಿ ಕರ್ಬಲಾ ಮೇಳಗಳಿವೆ". 'ರಾಯಬಾಗ ತಾಲೂಕಿನ ಹಾರೂಗೇರಿ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ಕರ್ಬಲ ಹಾಡುಗಳು ಜರುಗುತ್ತಿದ್ದು ಕಳೆದ ೧೫ ವರ್ಷಗಳಿಂದ ರಾಜ್ಯ ಮಟ್ಟದ ಕರ್ಬಲ್ ಹಾಡುಗಳ ಸ್ಪರ್ಧೆಗಳ ನಡೆಯುತ್ತಿವೆ'. ಎಂದು ಪರಶುರಾಮ ಆಲಗೂರ ಹೇಳುತ್ತಾರೆ. ಹಾರೂಗೇರಿಯಲ್ಲಿಯೇ ಗುಲಾಬಸಾಬ ಜಮಾದಾರ, ಪರಶುರಾಮ ಆಲಗೂರ ಮಲೀಕಜಾನ್ ಹಾಗೂ ಹಣಮಂತ ಸವದಿ ಮುಂತಾದವರ ಕರ್ಬಲ್ ಮೇಳಗಳಿವೆ. ಬಾಗೆನಾಡಿನಲ್ಲಿ ಅಲಭೈರಿ, ರಾಚೋಟಿ, ಯಮನಪ್ಪ ಛಲವಾದಿ, ರಾಮು ಪೂಜೇರಿ, ಮೀರಾಸಾಬ ವಸ್ತಾದ, ಸಿದ್ಧಲಿಂಗ ವಸ್ತಾದ, ಶರಣ ಗುಂಡಪ್ಪ, ಬಾಬಾಜಿ ಜಂಗ್ಲಿ ಜಮಾದಾರ, ಭೀಮಣ್ಣ ಮುಂತಾದವರು ಈ ತಾಲೂಕಿನ ಕರ್ಬಲ್ ಕವಿಗಳು. ಇವರಲ್ಲಿ ಅಲಭೈರಿ ಕರ್ಬಲ್ ಪದಗಳು ಹೇರಳ ಹಾಗೂ ವೈವಿಧ್ಯಮಯವಾಗಿವೆ. ಕ್ಷೇತ್ರ ಕಾರ್ಯದ ಅವಧಿಯಲ್ಲಿ ಅಲಭೈರಿಯ ೧೨೦ ಕರ್ಬಲ್ / ರಿವಾಯತ್ ಪದಗಳು ಲಭಿಸಿವೆ.

ಪ್ರತಿವರ್ಷ ಹಾರೂಗೇರಿಯಲ್ಲಿ ನಡೆಯುವ ಮೊಹಮ್ಮದ ಫೈಗಂಬರರ ಜಯಂತಿ ಅಂಗವಾಗಿ ನಡೆಯುವ ಕರ್ಬಲ್ / ರಿವಾಯತ್ ಸ್ಪರ್ಧೆಯಿಂದ ಹಾಡುಗಳನ್ನು ಸಂಗ್ರಹಿಸಿದ್ದು ಅಧ್ಯಯನದ ಅನುಕೂಲಕ್ಕಾಗಿ ಅವುಗಳನ್ನು ಈ ರೀತಿಯಾಗಿ ವರ್ಗೀಕರಿಸಿಕೊಳ್ಳಲಾಗಿದೆ.

೧) ದೇಶಭಕ್ತಿಗಳು.
೨) ಸಂಸಾರ ನಿರಸನದ ಪದಗಳು.
೩) ರಾಮಾಯಣ-ಮಹಾಭಾರತ ಪದಗಳು.
೪) ಹಿಂದೂ ಮುಸ್ಲಿಂರ ಸಮರಸ ಪದಗಳು.
೫) ಕರ್ಬಲಾ ಕಥಾನಕ ಪದಗಳು.
೬) ಗುರುಸ್ತುತಿ ಪದಗಳು.
೭) ಸಾಮಾಜಿಕ ಪದಗಳು.
೮) ಉಪಸಂಹಾರ.

೧. ದೇಶಭಕ್ತಿಗೀತೆಗಳು :

ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಜನರನ್ನು ಜಾಗೃತಗೊಳಿಸಲು ಹಾಗೂ ದೇಶದ ಮೇಲೆ ಅಭಿಮಾನವನ್ನು ಉಂಟುಮಾಡಲು ಲಾವಣಿ ಪ್ರಕಾರ ಬೆಳೆದಂತೆ ರಿವಾಯತ್ ರಚನೆಕಾರರು ಅಂದಿನ ತುರ್ತು ಪರಿಸ್ಥಿತಿಗೆ ಸ್ಪಂಧಿಸದೆ ಇರಲಿಲ್ಲ. ಬ್ರಿಟಿಷರ ಆಗಮನ, ಬರಿದಾತೋ ಹಿಂದುಸ್ತಾನಾ, ಹಿಂದುಸ್ಥಾನದ ಸದ್ಯದ ಸ್ಥಿತಿ ಮುಂತಾದ ವಿಷಯಗಳನ್ನು ಕೇಂದ್ರವಾಗಿರಿಸಿಕೊಂಡು ಪದಗಳನ್ನು ರಚಿಸಿ ಹಾಡಿ ಕುಣಿದಿರುವರು.

ಅಲಭ್ಯೆರಿಯೂ ಸಹ ಇಂತಹ ಪದಗಳನ್ನು ರಚಿಸಿದ್ದಾನೆ. ಆತನ ಬ್ರಿಟಿಷರ ಆಗಮನ ಎಂಬ ಪದದಲ್ಲಿ ಇಂಗ್ಲೀಷರು ಭಾರತಕ್ಕೆ ವ್ಯಾಪಾರ ಮಾಡುವ ಉದ್ದೇಶದಿಂದ ಬಂದು ಎಲ್ಲಿ ಟೀಕಾಣ ಹೂಡಿದರು. ಮತ್ತೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ ಸನ್ನಿವೇಶಗಳನ್ನು ಎಳೆ ಎಳೆಯಾಗಿ ಚಿತ್ರಿಸಿರುವನು.

"ಕುಂತ ಕೇಳರಿ ಆಂಗ್ಲಜನಾ ಬಂದು ಹಾಕ್ಯಾರ ಠಾಣಾ
ಬಲವಾದ ಹಿಂದುಸ್ಥಾನಾ ।ಪ।
(ಏರ) ಮೊದಲು ಬಂದು ಮದ್ರಾಸಕ್ಕೆ । ಬಂದರ ಕಟ್ಟಿ ಸಮುದ್ರಕ್ಕೆ
ಹಡಗ ಇಳಶಾರೋ ನಾನಾ । ತರದ ಸಾಮಾನಾ ।
ಮುಂದ ನಡಶಿದಾರ । ಚಂದ ವ್ಯಾಪಾರ ।
ಸ್ವತಂತ್ರ ಜಾಗಾ ಮಾಡಿಕೊಂಡಾರೊ ತಮ್ಮ ಸ್ವಾಧೀನಾ॥೧॥
ಸುರತವೆಂಬು ಪಟ್ಟಣಕ್ಕೆ। ಕೋಟೆ ಒಂದು ಕಟ್ಟಿ ಶ್ಯಾರ ಚೊಕ್ಕ ।
ಕಾವಲಿಟ್ಟಾರೋ ಸೈನಾ ।೨।
(ಏರ) ತಿಳಿಯಗುಡದೆ ವಳಗಿಂದವಳಗ। ವ್ಯಾಪಾರ ಡಂಗ ನಡೆಸಿದರಾಗ
ಕೈಲಾಕೋ ತರದ ಬಾರಿ ಬಂಧೂಕ ರಚನಾ ।೩।
ಅಪರಂಪರಾ ನೀರ। ದಾಟಿ ಬಂದಾರ ದೂರ ॥
ಸೇರಿ ಬಿಟ್ಟಾರೋ ಹಿಂದುಸ್ಥಾನದೊಳಗ ಪೂರ್ಣ ।೪।"[೩]

ವ್ಯಾಪಾರದ ಉದ್ದೇಶಕ್ಕಾಗಿ ಕಾಲಿಟ್ಟ ಬ್ರಿಟಿಷರು ಸುರತ್ ನಗರದಲ್ಲಿ ಭದ್ರವಾದ ನೆಲೆಯೂರುತ್ತಾರೆ. ಹಡಗಿನ ಮೂಲಕ ಆಗಮಿಸಿದ ಬ್ರಿಟಿಷರು ಇಡೀ ಹಿಂದುಸ್ಥಾನವನ್ನೇ ಸುತ್ತುವರೆಯುತ್ತಾರೆ. ದೇಶದ ಸಂಪತ್ತಿನ ಮೇಲೆ ಕಣ್ಣ ಹಾಕುವರು.

"(ಏರ) ಹೊಳಿಯ ಹಳ್ಳದ ಮೇಲೆ ಸಿಸ್ತ। ಪೂಲಕಟ್ಟಿಸಿ ಬಂದೋಬಸ್ತ
ತಾರಾಯಂತ್ರದ ಕಂಬ ಇಟ್ಟರೋ ಸವನಾ ।೫।
ಅನೇಕ ತರದ ಇಂಜಿನ ತೆಗೆದು। ಹಿಂದುಸ್ಥಾನದೊಳಗ
ಮೊದಲಿನುದ್ಯೋಗ ಮರಸ್ಯಾರಂಣಾ ।೬।
(ಏರ) ಹತ್ತುವಷ್ಟು ಹಾಕಿಲ್ಯೆನಾ। ಮೋಟಾರ ಗಾಡಿ ಒಂದೇ ಸವನಾ
ಆಕಾಶದೊಳು ಅಂತ್ರ ಹಾರಿಸ್ವಿಮಾನಾ ।೭।
ಎಂಥ ಚಮತ್ಕಾರಾ। ರಾಜ್ಯವಾಳಿದಾರಾ ।
ಹಾರೂಗೇರಿಯ ವಳಗ ಹಚ್ಚಿ ಬಿಟ್ಟಾರೋ ಕೂನಾ ॥೮॥"[೪]

ಆಂಗ್ಲರು ಆಕಾಶದಲ್ಲಿ ವಿಮಾನಯಾನ ಸೌಕರ್ಯವನ್ನು ಮಾಡಿ ಭಾರತಕ್ಕೂ ತಮ್ಮ ದೇಶಕ್ಕೂ ನಿಕಟ ಸಂಬಂಧವನ್ನು ಏರ್ಪಡಿಸುತ್ತಾರೆ. ಮುಂದೆ ಈ ದೇಶದ ಸರ್ವಾಧಿಕಾರತ್ವವನ್ನ ಪಡೆದುಕೊಳ್ಳುವರು.

"ಬರಿದಾತೋ ಹಿಂದುಸ್ಥಾನ" ಈ ರಿವಾಯತ್ ಪದದಲ್ಲಿ ಅಲಭ್ಯೆರಿ ಬ್ರಿಟಿಷರ ಆಗಮನದಿಂದ ಭಾರತೀಯರು ಸೋಮಾರಿಗಳಾಗಿ ಇಡೀ ದೇಶದಲ್ಲಿ ಒಗ್ಗಟ್ಟು ಇಲ್ಲದಂತಾಗುತ್ತದೆ. ಇದೇ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ದೇಶದ ಸಂಪತ್ತನ್ನೇ ಕೊಳ್ಳೆ ಹೊಡೆಯುತ್ತಾರೆ.

"ಚಿರಂಜೀವ ನಮ್ಮ ಹಿರಿಯರ ವಚನಾ।
ಚಿರಕಾಲ ಮೆರೆವ ಹಿಂದುಸ್ಥಾನಾ
ಪರದೇಶದವರ ಸ್ವಾಧೀನವಾಗಿ।
ಬರಿದಾಯ್ತು ಸಿರಿಯು ಸಂಪತ್ತು ಹೋಗಿ
ನೆರೆಹೊರೆಯವರಿಗೆ ಆನಂದ ಭುವನಾ।
ಬಂತೋ ಅನ್ಯದೇಶದಿಂದ ಸಂಪೂರ್ಣಾ।
ಯಂತ್ರ ಕೆಲಸ ಕಬ್ಬಿಣ ಸ್ವಾಮಾನಾ
ತಂತಿಮಾರ್ಗದಿಂದ ತಿಳಿದವರಾಗಿ।
ಅಂತರಲೆ ಹಾರಿ ಹೋದರು ಸಾಗಿ
ಎಂಥ ಚಮತ್ಕಾರ ನೋಡಿದು ರಚನಾ
ಕಾಲುಗಾಡಿ ಮೋಟಾರುಗಳು ಕಂಡು ಜನಾ
ಕಾಲ್ಹೋಗಿ ಕೂಡ್ರುವರು ಸುರವಿಹಣಾ
ಮೂಲ ಚೈನಿ ಖಾತೆಗೆ ಬೀಳುವರಾಗಿ
ಸಾಲೊಳು ಏಳುವರು ಮುಳು ಮುಳುಗಿ
ಕಾಲ ಮಹಿಮೆ ಬತ್ತೋ ಬಹು ಕಠಿಣಾ"

ಅನ್ಯದೇಶದ ಪ್ರಭಾವದಿಂದ ಇಡೀ ದೇಶದಲ್ಲಿಯೇ ಬದಲಾವಣೆ ಕಂಡಿತು. ತಂತಿ ಮಾರ್ಗದಿಂದ ದೂರ ದೂರ ಕಡೆಗೆ ಮಾಹಿತಿಯನ್ನು ತಿಳಿಸಲು ಅನುವು ಮಾಡಿಕೊಂಡರು. ವಾಹನಗಳ ಅನುಕೂಲತೆಯಿಂದ ಭಾರತೀಯರು ನಡೆಯುವುದನ್ನೇ ಮರೆತರು. ಶೋಕಿ ಜೀವನಕ್ಕೆ ಅಂಟಿಕೊಂಡು ಸಾಲಭಾದೆಯಲ್ಲಿ ಕಾಲ ಕಳೆಯತೊಡಗಿದರು.

"ಒಕ್ಕಲತಾನದುದ್ಯೋಗ ತಾಳಿ ಅಭಿಮಾನಾ ।
ಲೆಕ್ಕವಿಲ್ಲದೆ ಆದರೋ ಹೈರಾಣಾ
ಚಿಕ್ಕಮಕ್ಕಳು ಸಹಿತ ಚಹಾ ಕುಡಕರಾಗಿ

ಸೊಕ್ಕಲಾರದೆ ದೇಹ ಸೊರಗಿ ಸಣ್ಣಾಗಿ।
ಪಕ್ಕಾ ಇರಲಿ ಹಾರೂಗೇರಿಯ ಖೂನಾ"[1]

ವ್ಯವಸಾಯವೇ ನಮ್ಮ ದೇಶದ ಜನರ ಕಸುಬು, ರೈತನೆ ದೇಶದ ಬೆನ್ನೆಲುಬು ಸಕಾಲಕ್ಕೆ ಮಳೆಯಾಗದೆ ರೈತ ಸಾಕಷ್ಟು ತೊಂದರೆಯನ್ನು ಅನುಭವಿಸುವನು. ಬ್ರಿಟಿಷರ ಆಗಮನದಿಂದ ಭಾರತದಲ್ಲಿ ಚಹಾ ಕುಡುಕರು ಹೆಚ್ಚಾದರು. ಚಹಾದಿಂದ ದೇಹಕ್ಕೆ ತೊಂದರೆ ಎಂಬ ಸಂಗತಿಯನ್ನು ತಿಳಿಸುತ್ತಾನೆ.

"ರೈತನ ದೃಷ್ಟಿ" ಈ ಪದ್ಯದಲ್ಲಿ ಅಲಭ್ಯೆರಿ ಬ್ರಿಟಿಷರ ಆಗಮನದಿಂದ ರೈತರೆಲ್ಲ ಸೋಮಾರಿಗಳಾಗಿ ಸಾಲದ ಭಾದೆಯಲ್ಲಿ ಕಾಲ ಕಳೆಯ ತೊಡಗಿದರು. ದುಡಿತವೇ ದುಡ್ಡಿನ ತಾಯಿ ಎಂಬ ನೀತಿಯನ್ನು ತಿಳಿಯದೆ ಖಾಲಿ ಕುಂತು ತಿಂದು ಜೀವನ ಸಾಗಿಸತೊಡಗಿದರು.

"ಚೈನಿ ಖಾತೆಗೆ ಬಿದ್ದ ಜನರೆಲ್ಲಾ।
ಒಕ್ಕಲತನಕ ತಂದರಳಗಾಲಾ ।
ನೀತಿ ಕೆಡಕತಾನ ಬಡತನ ಮೂಲಾ।
ಕಂಡು ಕೇಳರಿ ಬಿದ್ದರ ಅಡವಿಪಾಲಾ ।
ಹಿಂದಿನ ಹಿರಿಯರ ಪಾಠ ಉಳಿಯಲಿಲ್ಲಾ ।
ಹೊತ್ತು ಉದಯವಾಗಿತಾ ಸೇರಿದಮ್ಯಾಲಾ ।
ಉದ್ದ ಕುತ್ತ ನೋಡ್ಯಾರವರಿವರೆಲ್ಲಾ।
ನಿತ್ಯನೇವಾದಿ ಚಹಾ ಕುಡಿವ ಚಾಲಾ ।
ಹೊತ್ತ ಏರಿ ಹೊಲಕ ಹ್ವಾದಮ್ಯಾಲಾ ।
ಗಳಿಯ ಸಾಗಲಿಲ್ಲ ಬಿಡದ ಬಿಸಲಾ ।
ಹಸಿದು ಹಲ್ಲಾಣಿ ಹಾರಿ ಕಿಸಿವರಪ್ಪಾ ಹಲ್ಲಾ ।
ಮನಿಗೆ ಬಂದಾರ ಓಡಿ ಖಬರ ಇಲ್ಲಾ ।
ದುಡಿತ ದುಡ್ಡಿನ ತಾಯಿ ತಿಳಿಯಲಿಲ್ಲಾ।
ಖಾಲಿ ಕುಂತ ತಿಂದಾರ ಮಾಡಿ ಸಾಲಾ ।
ಸಾಲ ಮಾಡಿ ಸಿಗಬಿದ್ದರೋ ಹುದಲಾ।
ಹಾರೂಗೇರಿ ಹಾದಿ ಕಸರ ಇಲ್ಲಾ॥"[2]

ಈ ರೀತಿಯಾಗಿ ಅಲಭ್ಯೆರಿ ದೇಶದ ಕಾಳಜಿಯನ್ನು ವ್ಯಕ್ತಪಡಿಸುತ್ತಾನೆ. ವ್ಯಾಪಾರ ನೆಪದಿಂದ ಬಂದ ಬ್ರಿಟಿಷರು ಅಖಂಡ ಭಾರತದಲ್ಲಿ ಏಕ ಚಕ್ರಾಧಿಪತ್ಯವನ್ನೇ ಸ್ಥಾಪಿಸುತ್ತಾರೆ. ಮುತ್ತು-ರತ್ನಗಳಿಂದ ತುಂಬಿ ತುಳುಕುತ್ತಿದ್ದ ದೇಶ ಖಾಲಿ ಮನೆಯಾಯಿತು. ಬ್ರಿಟಿಷರ ಆಗಮನದಿಂದ ದೇಶ ಪ್ರಗತಿ ಕಂಡಿತಾದರೂ ಒಂದು ಕಡೆಗೆ ಅವನತಿಯನ್ನು ಪಡೆಯಿತು.

ಅವರು ಸಂಪತ್ತನ್ನೆ ಲೂಟಿ ಮಾಡಿದರು. ತಂತ್ರಗಾರಿಕೆಯಿಂದ ನಮ್ಮನ್ನಾಳಿದರು. ನಮ್ಮ ಜನತೆ ಸಿಡಿದೇಳಬೇಕಾಯಿತು.

೨. ಸಂಸಾರ ನಿರಸನದ ಪದಗಳು :

ಅಲಭ್ಯೆರಿ ಶಾಶ್ವತವಲ್ಲದ ಶರೀರದ ಚಿಂತನೆಗೈದಿದ್ದಾನೆ. ನರಮಾಂಸದಿಂದ ತುಂಬಿದ ಈ ಶರೀರದ ಮೇಲೆ ಅತಿಯಾದ ಆಶೆ ಸಲ್ಲದು. ಕ್ಷಣಿಕವಾದುದು ಈ ದೇಹ. ನಮ್ಮಲ್ಲಿಯ ಕಪಟ ಗುಣಗಳನ್ನು ಕಳೆದಾಗ ಮಾತ್ರ ಈ ಶರೀರಕ್ಕೆ ನೆಮ್ಮದಿ ಸಾಧ್ಯ.

"ಆರು ಮೂರು ವೈರಿ ಗುಣಗಳು ಕಟ್ಟಿ
ಆರಾರರಿಯದೆ ಗುರುತಕೆ ಮುಟ್ಟಿ ।
ಆರಿಸಿ ಅಷ್ಟಮದ ಕ್ರೂರದಿ ಮೆಟ್ಟಿ
ಹಾರಿಸಿ ಹುಕೆ ಹುರುಪದಿ ಜಗಜಟ್ಟಿ॥
ಧಿನ್ನ ದಿನ್ನ ಕೆಸ್ಸೈ ಧಿನ್ನ ಧಿನ್ನನ್ನೊ ಘಟ್ಟಿ
ಅನುಮಾನ ಮಾಡದೆ ಕುಣದಾಡು ಕಟ್ಟಿ ।
ಕ್ಷಣ ಭಂಗುರ ಕನಸಿನ ಬಾಳ್ವೆ ದಾಟಿ।
ಘನ ಉನ್ಮನಿಯೊಳು ನಡಿಸೊ ಖಟಪಟ್ಟಿ ।
ನರದೇಹ ಅಂಬುದು ಹಸಿ ತೊಗಲಿನದೊಟ್ಟಿ ।
ನರ ಮಾಂಸ ಅಸ್ತರ ರಕ್ತ ತುಂಬಿದ ಕೊಟ್ಟಿ ।
ಹಾರೂಗೇರಿ ಧೀರಗ ಒಪ್ಪಿಸೊಯೊಟ್ಟಿ
ಅರಭೈರವನ ಮಾತು ಕೇಳದೆ ಕೆಟ್ಟಿ"[೮]

ಅರಿಷಡ್ವರ್ಗಗಳ ಬೆನ್ನು ಹತ್ತಿ ಮಾನವ ಇಂದು ತನ್ನ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾನೆ. ಅದಕ್ಕಾಗಿ ಹಾರೂಗೇರಿಯ ಧರ್ಮಗುರುವಿಗೆ ತನ್ನನ್ನು ಅರ್ಪಿಸಿಕೊಳ್ಳಲು ಕೇಳಿಕೊಳ್ಳುವನು.

"ಹೋಗುತಿಹುದು ಕಾಯ ವ್ಯರ್ಥ" ಈ ಪದದಲ್ಲಿ ಶರೀಫರು ಸಹ ಇದೇ ಸಂದೇಶವನ್ನು ನೀಡಿದ್ದಾರೆ.

"ಹೋಗುತಿಹುದು ಕಾಯ ವ್ಯರ್ಥ ಇದರ
ಲಾಘವ ತಿಳಿದವ ಯೋಗಿ ಸಮರ್ಥ ॥ಪ॥
ಏಳು ಜನ್ಮಾಂತರ ದಿನವು ಹೀಂಗ
ಹೇಳದೆ ಹೋಗ್ಯಾವೋ ನಿನಗಿಲ್ಲೊ ನೆನಹು
ಭೋಗಲಂಪಟ ಸುಖ ಘನವು – ಭವ

ರೋಗಾದಿ ಮರಣಕ್ಕೆ ಆಯಿತೊ ಅನುವು
ಇನ್ನಾರ ತಿಳಿಕಂಡ್ಯಾ ತಮ್ಮಾ ನುಡಿ
ಓ ನಮಃ ಶಿವಯೆಂಬ ಮಂತ್ರದ ಮರ್ಮ
ಪುಣ್ಯಾ ಪಾಪಗಳ ಕರ್ಮ ಕಳೆ"[೯]

ಮನುಷ್ಯನಿಗೆ ಅತಿಯಾದ ಭೋಗ ಜೀವನ ಸೌಖ್ಯವಲ್ಲ. ಅದು ಹಲವು ರೋಗಗಳಿಗೆ ಅಣಿಮಾಡಿಕೊಡುವದು. ಅದಕ್ಕಾಗಿ ಈ ಕಾಯ (ಶರೀರ) ವ್ಯರ್ಥವಾಗಿ ಹೋಗುತ್ತಿದೆ. ಗುರು ಮಂತ್ರವನ್ನು ಪಠಿಸದ ಹೊರತು ಮನುಷ್ಯ ಪಾಪಗಳಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲ ಎನ್ನುವನು.

ರಾಮಾಯಣ – ಮಹಾಭಾರತ ಪದಗಳು :

ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಸಾಹಿತ್ಯದಲ್ಲಿ ರಾಮಾಯಣ ಹಾಗೂ ಮಹಾಭಾರತದ ಗಾಢ ಪ್ರಭಾವ ಇರುವುದು ಕಾಣುತ್ತೇವೆ. ಜನಪದರು ಈ ಪೌರಾಣಿಕ ವಸ್ತುಗಳನ್ನೇ ಹೆಚ್ಚಾಗಿ ತಮ್ಮ ಕಾವ್ಯದ ವಸ್ತುವಾಗಿ ಬಳಸಿದ್ದಾರೆ. ಇಂತಹ ಹಲವಾರು ವಸ್ತುಗಳನ್ನು ಅಲಭ್ಯೆರಿ ತನ್ನ ರಿವಾಯತ್ ಪದಗಳಲ್ಲಿ ಅಳವಡಿಸಿಕೊಂಡಿದ್ದಾನೆ. ಅರಗಿನ ಮನೆ, ಗಾಂಧಾರಿ ಆಗಮನ, ವನವಾಸ, ಗಂಡುಗಲಿ ಬಬ್ರುವಾಹನ ಹಾಗೂ ಅಭಿಮನ್ಯು ಮುಂತಾದ ಪದಗಳು ಪ್ರಮುಖವಾಗಿವೆ.

"ಅರಗಿನ ಮನೆ" ಈ ರಿವಾಯತ್ ಪದದಲ್ಲಿ ದುರ್ಯೋಧನ ಪಾಂಡವರನ್ನು ಕೊಲ್ಲಲು ಮಾಡಿದ ಕುತಂತ್ರ ಹಾಗೂ ದುರಂತದಿಂದ ಪಾರಾದ ವಿಷಯವನ್ನು ಅಲಭ್ಯೆರಿ ಸೊಗಸಾಗಿ ಹೇಳಿದ್ದಾನೆ.

"ಸರಸದಿಂದಲಿ ಸಾರಿ ಹೇಳುವೆ ಸರ್ವಜನರಿಗೆ ಮಾಡಿ ಕತನಾ ।ಪ।
ಕಪಟಯುಕ್ತಿಗೆ ಶಕುನಿ ಇದ್ದಾ । ಶಾಸ್ತರ ಸರಿಯಾಗಿ ಬರೆದದ್ದು ಶುದ್ಧಾ।
ಒಳಗಿಂದೊಳಗ ರಚಿಸಿದ್ದಾ । ಕೌರವ ಅರಗಿನ ಮನಿ ಕಟ್ಟಿಸಿದ್ದಾ ।
ಪರಮ ಹರುಷ ಭರಿತನಾಗಿ । ಕರದನಾಗಲೆ ಪುಲೋಚನಾ ।
ಬೆಂಕಿ ಹಚ್ಚಾನ ಶಂಖಾ । ಮಾಡದೆ ಕೃಷ್ಣ ಚತುರ್ದಶಿ ದಿನಾ ।
ಗೊತ್ತ ಆಂವ ಮಾಡಿಕೊಂಡಿದ್ದಾ । ಶಾಸ್ತ್ರ॥"[೧೦]

ಶಕುನಿ ತನ್ನ ಮನಸ್ಸಿನಲ್ಲಿ ಅರಗಿನ ಮನೆಗೆ ಬೆಂಕಿ ಹಚ್ಚಿ ಪಾಂಡವರನ್ನು ಸಂಪೂರ್ಣವಾಗಿ ಸಂಹರಿಸಬೇಕೆಂದು ಆಲೋಚಿಸಿದ್ದನು.

"ವಿದುರ ಇದನ್ನೆಲ್ಲಾ ತಿಳಿದಿದ್ದಾ। ಆ ಮನಿಗೆ ಸುರಂಗದ ಮಾರ್ಗ ಮಾಡಿಸಿದ್ದಾ।
ನೀತಿವಿದುರನು ದೂತನಿಂದಲೇ । ಮಾತು ತಿಳಿಸಿದ ಪುಣ್ಯವಾನಾ।

ವ್ಯರ್ಥವಾಗಿ ಅನರ್ಥವಾದೀತ । ಗೊತ್ತನಿಲ್ಲದೆ ಕಾಣು ಕಾಣಾ।
ರಾತ್ರಿ ಹೋಗಲೆಬೇಕೊ ಎದ್ದಾ।"[೧೧]

ಧೂತನಿಂದ ವಿಷಯ ತಿಳಿದ ವಿದುರ ಅರಗಿನ ಮನೆಗೆ ಸುರಂಗ ಮಾರ್ಗವನ್ನು ನಿರ್ಮಿಸುವನು. ವಿದುರ ಒಬ್ಬ ಸೂಕ್ಷ್ಮ ಮುಂದಾಲೋಚನೆಯುಳ್ಳವನಾಗಿದ್ದನು. ಕೌರವರ ಉಪಾಯವು ಮಣ್ಣುಗೂಡಿ ಪಾಂಡವರು ಪಾರಾಗುವರು.

"ಪುಲೋಚನಾ ಅಲ್ಲೆ ಇರತಿದ್ದಾ। ಗೊತ್ತಿನ ಹೊತ್ತನು ಆಂವ ನೋಡತ್ತಿದ್ದಾ।
ಅವನ ತಂಗಿಯು ಪಂಚ ಪುತ್ರಿಕೆ । ಅವಳ ಮಕ್ಕಳು ಐದು ಸವನಾ
ಹೊಟ್ಟೆ ತುಂಬ ಊಟ ಮಾಡ್ಯಾರ । ಪಂಚಾಮೃತ್ ಬೋಜನಾ
ಮದವೇರಿ ಮಲಗ್ಯಾರೊ ಕಾಡೂದಾ। ಶಾಸ್ತ್ರ।
ಭೀಮಸೇನನು ಅಪ್ಪಣೆ ಪಡದಾ। ಆವಾಗ ಹುರಪಿನೊಳಗ ಕುಣಕುಣದಾ।
ರಾತ್ರಿ ಕಾಲಕ ಹೊರಗ ಹಾಕ್ಯಾರ ಅಣ್ಣತಮ್ಮರ ಸರ್ವರನ್ನಾ ।
ಕಳ್ಳಮನಿಗೆ ಕೊಳ್ಳಿ ಕೊಟ್ಟು – ಹೊಂಟ ಹೋದಾನ ಭೀಮಸ್ಯೆನಾ
ಮಾಡುದೇನವರ ಪ್ರಾರಬ್ಧಾ। ಶಾಸ್ತರ ಸರಿಯಾಗಿ ಬರದದ್ದು ಶುದ್ಧಾ
ತನ್ನ ಮಂತ್ರವ ತನಗೆ ತಿರುಗಿತ ದುರುಳ ಜನರನು ಭಗವಾನಾ
ನಾಶ ಮಾಡಲು ಸದಾಸಿದ್ಧಾ। ಶಾಸ್ತರ। ಸರಿಯಾಗಿ ಬರೆದದ್ದು ಶುದ್ಧಾ।
ಹಾರೂಗೇರಿ ಅಲಭ್ಯೆರಿ ಮಾಡಿ ಹೇಳ್ಯಾನ ಕವಿಯ ರಚನಾ
ನಾಮಸ್ಮರಣೆಯ ಮಾಡಿರಿ ಸದಾ। ಶಾಸ್ತರ। ಸರಿಯಾಗಿ ಬರೆದಿದು ಶುದ್ಧಾ।"[೧೨]

ಶಕುನಿ ಪಾಂಡವರನ್ನು ನಾಶಪಡಿಸಲು ಅರಗಿನ ಮನೆ ನಿರ್ಮಿಸುವನು. ಆದರೆ ದೂತನಿಂದ ಸುದ್ದಿ ತಿಳಿದ ವಿದುರನು ಅದಕ್ಕೆ ಸುರಂಗ ಮಾರ್ಗ ಮಾಡಿ ಪಾಂಡವರನ್ನು ಪಾರು ಮಾಡುವನು. ಹೀಗೆ ಶಕುನಿ ದುರ್ಯೋಧನರು ಎಷ್ಟೇ ಕುತಂತ್ರ ಹೂಡಿ ಪಾಂಡವರನ್ನು ಕೊಲ್ಲಬೇಕೆಂದರೂ ಅವರ ಮೇಲೆ ಭಗವಂತನ ಕರುಣೆಯಿತ್ತು. ಅಂತಲೇ ಅಷ್ಟೆಲ್ಲ ಕಷ್ಟದಿಂದ ಪಾರಾದರು.

"ಗಂಡುಗಲಿ ಬಬ್ರುವಾಹನಾ" ಈ ರಿವಾಯತ್‌ದಲ್ಲಿ ತಂದೆ ಅರ್ಜುನನ ಪ್ರಾಣವನ್ನು ತೆಗೆದ ಚಿತ್ರಣವಿದೆ.

"ಹೊಡೆದಾನೊ ಪ್ರಾಣವ ತಡಿಯದೆ ಕೋಪವ ಕಡುಗಲಿ
ಬಬ್ರುವಾಹನಾ। ಆದಿನಾ। ಕಡುಗಲಿ ಬಬ್ರುವಾಹನಾ।
ಬಿಲ್ಲನು ಧರಿಸಿ। ಹೊಡದಾನೊ ಏರಿಸಿ। ಅರ್ಧಚಂದ್ರಾಸ್ತ್ರ ಬಾಣಾ।
ಆದಿನಾ। ಅರ್ಧಚಂದ್ರಾಸ್ತ್ರ ಬಾಣಾ।

ನಕ್ಷತ್ರ ಉತ್ತರಾ – ಮಂಗಳವಾರಾ – ಆಗಿದ್ದ ಅಸ್ತಮಾನಾ।
ಸೂರ್ಯನು ಆಗಿದ್ದ ಅಸ್ತಮಾನಾ। ಹರಿಸ್ಮರಣಾ – ಮಾಡಿಗೋಣಾ।
ಬಿತ್ತ ರುಂಡ ಭೂಮಿಗೆ ಏಕಾದಶಿ ಬಳಿಕಾ ಶುದ್ಧ ಕಾರ್ತಿಕದಿನಾ।"[೧೩]

ಸೂರ್ಯನಂತಿದ್ದ ಅರ್ಜುನ ಮಂಗಳವಾರ ದಿನ ಅಸ್ತನಾಗುತ್ತಾನೆ. ಬಬ್ರುವಾಹನ ಅರ್ಧಚಂದ್ರಾಸ್ತ್ರವನ್ನು ಪ್ರಯೋಗಿಸಿ ತಂದೆಯ ರುಂಡವನ್ನೇ ಉರುಳಿಸುವನು. ದೇವರು, ದೈತ್ಯರು, ಮುನಿಗಳು ಇಡೀ ಸ್ವರ್ಗಕ್ಕೆ ಸ್ವರ್ಗವೇ ಕಣ್ಣೀರಿಡುವುದು.

"ಅಳತಾರ ಉಲುಪಿ ಚಿತ್ರಾಂಗದೆಯರು ಸವಡಿಲ್ಲೊ ಮನ್ನಾ ।
ಕಂದನು ಬೆರಗಾಗಿ ಪಾದಕ್ಕೆ ಎರಗಿ – ಅಳುವುವ ಕಾರಣಾ ।
ತಾಯಿಯೇ ಅಳವುವ ಕಾರಣಾ। ತಿಳಿಯೊ ತೂಗಿ ನಿಜವಾಗಿ ।
ಎನ್ನಕಡೀಗೆ ಅಪರಾಧವೇನೇನು ಇಲ್ಲಾ ಸಾಕ್ಷಿಯು ಭಗವಾನಾ ।
ಹೋಗಲು ಶರಣಾ ತಂದೆಯು ಎನ್ನಾ। ಬಾರದೆ ಅಂತಃಕರಣಾ ।
ಆದಿನಾ ಬಾರದೆ ಅಂತಃ ಕರಣಾ। ನಿಂತ ತಿರುಗಿ ಎದುರಾಗಿ।
ಅದರಿಂದೆ ಕೋಪಾಗಿ ಹಾರಿಸಿ ಬಿಟ್ಟೆನ್ನೆವ್ವಾ ತಂದೆಯ ಶಿರನ್ನಾ।
ತಪ್ಪಿಲ್ಲರೆ ಅಪ್ಪನ ಪ್ರಾಣಾ। ಹೊಡೆದದ್ದು ಬಬ್ರುವಾನಾ। ಆದಿನಾ।
ಹೊಡೆದದ್ದು ಬಬ್ರುವಾನಾ। ಹಾರೂಗೇರಿ ಅಲಭೈರಿ ಜೈಮಿನಿ
ಭಾರತ ನೋಡಿದ ಪುರಾಣಾ। ಮಾಡಿದ ಈ ಕತನಾ।"[೧೪]

ಅಶ್ವಮೇಧ ಯಾಗವನ್ನು ಕೈಗೊಂಡ ಪಾಂಡವರು ದೇಶ ಸುತ್ತುತ್ತ ಮಣಿಪುರವನ್ನು ಪ್ರವೇಶಿಸುತ್ತಾರೆ. ಮಣಿಪುರದ ರಾಜಕುಮಾರ ಬಬ್ರುವಾಹನಾ ತನ್ನ ಪರಿಚಯವನ್ನು ಮಾಡಿಕೊಂಡು ಶರಣಾಗಲು ಮುಂದಾಗುವನು. ಕ್ಷತ್ರೀಯರಲ್ಲಿ ಶರಣಾಗುವ ಪ್ರಶ್ನೆಯೇ ಬರುವುದಿಲ್ಲ. 'ನೀನು ನನ್ನ ಮಗನೇ ಆಗಿದ್ದರೆ ಇಂತಹ ಮಾತುಗಳನ್ನು ಆಡುತ್ತಿರಲಿಲ್ಲ' ಎಂದು ಬಬ್ರುವಾಹನನ್ನು ಅರ್ಜುನನು ಮೂದಲಿಸುವನು. ಈ ಮಾತನ್ನು ಕೇಳಿದ ಬಬ್ರುವಾಹನನು ಕೋಪಿಸಿಕೊಂಡು ತಂದೆಯ ವಿರುದ್ಧ ಯುದ್ಧಕ್ಕೆ ನಿಂತು ತಲೆಯನ್ನೇ ಹೊಡೆದುರುಳಿಸುವನು.

'ವನವಾಸ' ಈ ರಿವಾಯತದಲ್ಲಿ ರಾಮಾಯಣದ ವಿಷಯವನ್ನು ಚಿತ್ರಿಸಿರುವನು. ರಾಮ–ಲಕ್ಷ್ಮಣ ಹಾಗೂ ಸೀತೆ ವನವಾಸಕ್ಕೆ ಹೋಗುವ ಕರುಣಾಜನಕ ಪ್ರಸಂಗವನ್ನು ಮಾರ್ಮಿಕವಾಗಿ ವ್ಯಕ್ತಪಡಿಸಿರುವನು.

"ಕೈಕೇಯಿಯ ಮಾತಿನಂತೆ ನಡದಾನೋ ಸುಗುಣಾ

ಬಿಟ್ಟಾರಾದಿನಾ ಬಿಟ್ಟಾರಾದಿನಾ। ಅಯೋಧ್ಯಾ ಪಟ್ಟಣಾ ।ಪ।
(ಏರ) ರಾಮಲಕ್ಷ್ಮಣ ಸೀತಾ ಸಕಲಾ। ನಡೆದಾರಾಗರಣ್ಯ ಮ್ಯಾಲಾ।
ತೆಗೆದುಕೊಂಡಾರೋ ಬಿಲ್ಲಬಾಣಾ। ತೆಗೆದುಕೊಂಡಾರೋ ಬಿಲ್ಲಬಾಣಾ।
ಬಂತೊವ್ಯಾಳೆ ಕಠಿಣಾ । ರಾಮನ ದಶರಥ ನೋಡಿದ್ರೋ ಪೂರ್ಣಾ।
ಬಿಟ್ಟಾನೋ ಪ್ರಾಣಾ ಬಿಟ್ಟಾನೋ ಪ್ರಾಣಾ। ಎಂಥಾ ಅಂತಃಕರುಣಾ।"[೧೫]

ಕೈಕೇಯಿಗೆ ದಶರಥನು ಕೊಟ್ಟ ವಚನದಂತೆ ರಾಮನು ಅರಣ್ಯದ ದಾರಿ ಹಿಡಿಯುವನು. ಅವನ ಜೊತೆಗೆ ಲಕ್ಷ್ಮಣ ಹಾಗೂ ಸೀತೆಯೂ ಕಾಡಿಗೆ ಹೋಗಲು ಸಿದ್ಧರಾಗುವರು. ರಾಮನು ಕಾಡಿಗೆ ಹೋದ ಕೆಲವೇ ದಿನಗಳಲ್ಲಿ ದಶರಥನು ಪುತ್ರ ವ್ಯಾಮೋಹದಲ್ಲಿ ಪ್ರಾಣ ನೀಗಿದನು. ಆದರೆ ಇಲ್ಲಿ ಕ್ಷತ್ರೀಯರು ಪ್ರಾಣ ಕೊಡುತ್ತಾರೆಯೇ ವಿನಃ ವಚನ ಭ್ರಷ್ಟರಾಗುವುದಿಲ್ಲ ಎಂಬ ಸಂಗತಿಯನ್ನು ತಿಳಿದುಕೊಳ್ಳಬಹುದು.

"ಮಾತೋಶ್ರೀಯಳು ಕೌಸಲ್ಯಾ। ಕಂಣ ನೀರನು ಸುರಶಾಳಲ್ಲಾ।
ಎಂಥಾದಿದು ಮೋಹಜಾಲಾ। ಎಂಥಾದಿದು ಮೋಹಜಾಲಾ।
ತೀರಿಸಲು ತಂದೆಯ ವತನಾ। ಜಾನಕಿಯು ನಡಿಯದೆ ಆಗಿ ನಿತ್ರಾಣಾ।
ಆದಳೋ ಹೈರಾಣಾ।ಆದಳೋ ಹೈರಾಣಾ। ಮಾಡುವದಿನ್ನೇನಾ।
(ಏರ) ಕಾಣದವಳೆಂದಿಗಿಬಿಸಲಾ। ಬೆವರ ಸುರಿತಿತ್ತಮೈಯ್ಯ ಮ್ಯಾಲಾ।"[೧೬]

"ಅಭಿಮನ್ಯು" ಎಂಬ ಮತ್ತೊಂದು ರಿವಾಯತ್‌ದಲ್ಲಿ ಅಭಿಮನ್ಯುವಿನ ಪರಾಕ್ರಮ, ಕೆಚ್ಚೆದೆಯ ಪ್ರಸಂಗವನ್ನು ಕಾಣುತ್ತೇವೆ. ವಯಸ್ಸಿನಲ್ಲಿ ಚಿಕ್ಕವನಾದರೂ ಶೌರ್ಯಕ್ಕೆ ಯಾರಿಗೂ ಕಡಿಮೆ ಇರಲಿಲ್ಲ. ಹಿರಿಯರ ಆಶೀರ್ವಾದ ಪಡೆದು ಕುರುಕ್ಷೇತ್ರ ಭೂಮಿಯನ್ನು ಪ್ರವೇಶಿಸಿ ಕಾದಾಡುವನು.

"ಸುಗುಣಾ-ಭರಣಾ ಕೇಳಿ ಧರ್ಮ ರಾಜನಾ
ರಣಮ್ಯಾಲೆ ನಡದೊ ಅಭಿಮನ್ಯು ।ಪ।
(ಏರ) ಬಾಣ ಬರಚಿ ಬಾಲಿ ಚೂರಿ । ಏಣಕಿ ಇಲ್ಲದಾನಿ ಕುದರಿ
ಕ್ಷಣಕಾಲದಲ್ಲಿ ಮಿತಿ ಮೀರಿ। ರಣ ಹಲಿಗಿದನಿಯದಯದೋರಿ
ಶಪಥವ ಮಾಡಿ ಸಂಶಯದೂಡಿ। ಸೈನ್ಯವ ಕೂಡಿ।
ರಣಮ್ಯಾಲೆ ನಡದೊ ಅಭಿಮನ್ಯು।"[೧೭]

ವೈರಿ ಪಡೆಯನ್ನೇ ನಾಶಪಡಿಸುವ ಪ್ರತಿಜ್ಞೆಯನ್ನು ಅಭಿಮನ್ಯು ತಾಳಿ ಚಕ್ರವ್ಯೂಹವನ್ನು ಭೇದಿಸುವನು. ಕೌರವ ಸೈನ್ಯವನ್ನು ಚೆಂಡಾಡುವಂತೆ ಆಡಿ ಕೊನೆಗೆ ಯುದ್ಧದಲ್ಲಿ ತನ್ನ ಪ್ರಾಣವನ್ನೇ ಕಳೆದುಕೊಳ್ಳುವನು.

ಈ ರೀತಿಯಾಗಿ ಅಲಭೈರಿ ಪೌರಾಣಿಕ ವಸ್ತುಗಳನ್ನುಳ್ಳ ಹಲವಾರು ಪದಗಳನ್ನು ರಚಿಸಿದ್ದಾನೆ. ಜನಪದ ಕವಿಗಳ ಪೌರಾಣಿಕ ಪಾತ್ರಗಳು ಜನಪದದಿಂದ ದೂರ ನಿಲ್ಲುವುದಿಲ್ಲ. ಪೌರಾಣಿಕ ಪಾತ್ರಗಳು ಜನರನ್ನು ಆಕರ್ಷಿಸುತ್ತವೆ. ಆದುದರಿಂದ ಅವರನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ಅಲಭೈರಿ ಸೊಗಸಾಗಿ ರಚಿಸಿದ್ದಾನೆ.

ಮೊಹರಂ ಆಚರಣೆಯ ಸಂದರ್ಭದಲ್ಲಿ, ಜಾತ್ರೆ ಉರುಸುಗಳಲ್ಲಿ ಇಂತಹ ಪೌರಾಣಿಕ ಅಂಶಗಳನ್ನೊಳಗೊಂಡ ಹೆಜ್ಜೆ ಪದಗಳು ಇತ್ತೀಚೆಗೆ ಸಾಕಷ್ಟು ರೂಢಿಯಲ್ಲಿವೆ. ಇವುಗಳಲ್ಲಿ ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ಪದಗಳು ವಿಫುಲವಾಗಿವೆ.

ಹೀಗೆ ತ್ಯಾಗ, ಸಹನೆ, ಭಕ್ತಿ, ವಿಶ್ವಾಸ, ಸಾಧನೆ, ಹೋರಾಟ ಮೊದಲಾದ ಗುಣಗಳನ್ನು ಜನಸಾಮಾನ್ಯರಿಗೆ ತಿಳಿಸಲು ಮೊಹರಂ ಪದಗಳು ಮಾನವೀಯ ಮೌಲ್ಯಗಳನ್ನು ತಿಳಿಸುತ್ತವೆ. ಇವು ಮುಸ್ಲಿಮರ ಹಾಡು ಹಿಂದುಗಳ ಹಾಡು ಎಂಬ ಬೇಧವನ್ನು ಕಲ್ಪಿಸುವುದಿಲ್ಲ.

ಹಿಂದೂ – ಮುಸ್ಲಿಮರ ಸಮರಸ ಪದಗಳು :

ಮೊಹರಂ ಆಚರಣೆಯ ಸಂದರ್ಭದಲ್ಲಿ ರಿವಾಯತ್ ಪದಗಳನ್ನು ಹಿಂದೂ-ಮುಸ್ಲಿಂರು ಸಮರಸ ಭಾವದಿಂದ ಹಾಡಿ ಕುಣಿಯುತ್ತಾರೆ. ಹೆಜ್ಜೆ ಪದಗಳು ಭಾವೈಕ್ಯದ ಬೆಸುಗೆಯಾಗಿ ಕರ್ನಾಟಕದಲ್ಲಿ ಪ್ರಚಲಿತದಲ್ಲಿವೆ. ಹಿಂದು-ಮುಸ್ಲಿಂ ಕವಿಗಳು ಇಂತಹ ಸಾಕಷ್ಟು ಪದಗಳನ್ನು ರಚಿಸಿದ್ದಾರೆ. ಆ ಸಾಲಿನಲ್ಲಿ ಅಲಭೈರಿಯೂ ಒಬ್ಬ.

ರಿವಾಯತ ಪದವೊಂದರಲ್ಲಿ ಸರ್ವ ಜನರಿಗೆ ಒಬ್ಬನೆ ದೇವರು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ಹಿಂದೂಗಳಿಗೆ ಈಶ್ವರ ಮುಸ್ಲಿಮರಿಗೆ ಫೀರಾ ಎಂಬ ಬೇರೆ ಬೇರೆ ನಾಮಗಳಿದ್ದರೂ ದೇವರು ಮಾತ್ರ ಒಬ್ಬನೆ. ನೂರೆಂಟು ಜಾತಿಗಳಲ್ಲಿ ನೂರಾರು ದೇವರನ್ನು ಪೂಜಿಸುತ್ತ ಧರ್ಮದ್ವೇಷವನ್ನು ಮಾಡುತ್ತಿರುವರು. ಅದಕ್ಕಾಗಿ ಅಲಭೈರಿ ಏಕೇಶ್ವರ ತತ್ವವನ್ನು ಹೇಳುತ್ತ ಸಾಮರಸ್ಯದಿಂದ ಇರಲು ತಿಳಿಸುವನು.

"ಮೂರು ಲೋಕಕ್ಕೆ ಗುರುವೆ ಆಧಾರಾ।
ಅಲ್ಲಾ ಮೌಲಾಲಿ ಮುಖ್ಯ ಫೀರಾ ।ಪ।

(ಏರ) ಸರ್ವ ಸಾಕ್ಷಿ ಒಬ್ಬ ದೇವರಾ।
ಏಕ ಅಲ್ಲಾ ನಾಮ ಹಜಾರಾ
ಪಾಲನ ಉತ್ಪತ್ತಿ ಲಯ ಪರಮೇಶ್ವರಾ।
ಕಾರಣ ತೊಟ್ಟ ತ್ರಿಮೂರ್ತಿ ಅವತಾರಾ ।

(ಏರ) ಬಡ್ಡಿ ಲೆಕ್ಕದೊಳು ಜಾತಿ ಮುನ್ನೂರಾ।

ಬೇರೆ ಬೇರೆ ಎತ್ತಿದ ತಾನೆ ಹೆಸರಾ
ಹಿಂದು ಜನರಿಗನಸಿದ ಈಶ್ವರಾ।
ಮುಸಲ್ಮಾನರಿಗಾದಾನೊ ಫೀರಾ।
(ಏರ) ಹೇಳಿದ ಅಲಭೈರಿ ಆನಂದದ ಲಹರಾ।
ಆತನಿರುವುದು ಹಾರೂಗೇರಿ ಊರಾ"[೧೮]

ಅದಕ್ಕಾಗಿ ಅಲಭೈರಿ ಮೂರು ಲೋಕಕ್ಕೆ ಗುರುವೆ ಆಧಾರ. ಅವನು ಬೇರೆ ಬೇರೆ ನಾಮಗಳನ್ನು ಹೊಂದಿದರೂ ಉದ್ದೇಶ ಮಾತ್ರ ಜನ ಕಲ್ಯಾಣ ಎಂಬ ತಿಳುವಳಿಕೆಯನ್ನು ನೀಡುತ್ತಾನೆ.

೫. ಕರ್ಬಲಾ ಕಥಾನಕ ಪದಗಳು :

"ಹಸೇನ-ಹುಸೇನ" ಈ ಕರ್ಬಲ್ ಪದದಲ್ಲಿ ಮದಿನಾ ಪಟ್ಟಣವನ್ನು ಬಿಟ್ಟು ಕರ್ಬಲ್ ರಣಭೂಮಿಗೆ ಹೊರಟ ಚಿತ್ರಣವಿದೆ. ಹಸೇನ-ಹುಸೇನರು ಯುದ್ಧ ಸಾಮಗ್ರಿಗಳೆಲ್ಲವನ್ನು ತೆಗೆದುಕೊಂಡು ಕರ್ಬಲ ಭೂಮಿಯಲ್ಲಿ ಹಸಿರು ನಿಶಾನಿ ನೆಡುವರು.

"ಶರಣಾರ ಸ್ವಾಮಿ ಕತನ ಕೇಳರಿ ಕುಂತ ಸಭಿಕರೆ ಎಲ್ಲಾ ।ಪ।
(ಏರ) ಬಂಧು ಬಳಗ ಬಿಟ್ಟ ನಡದಾರೋ ದುಃಖ ಅಳತಿಲ್ಲಾ
ಬಿಟ್ಟಾರ ತಮ್ಮ ಶಾರ ತಯ್ಯಾರ ಆಧಾರ ಆಧಾರ। ಹಸೇನ ಹುಸೇನ
ತೇಜಿನ ಬೆನ್ನಿನ ಹಚ್ಚಿಡಾಲಾ। ಕಯ್ಯಾಗ ಹಿಡಿದ ಫಿಸ್ತುಲಾ
ಜಂಡೆ ನಡಸಿ ಹಸರ ನಿಶಾನಿ ಹಚ್ಚ್ಯಾರೋ ಸಾರಿ ವೈರಿ ಮ್ಯಾಲಾ।
(ಏರ) ನೋಡಿ ಏಜಿದ ಫಿತುರ ಮಾಡಿದ ತಂದ್ರೋ ಮಾರ್ಬಲಾ।
ದಮ್‌ಶಾನ - ಹಿಡಶಾನ ಮಾರ್ವಾನಾ - ಬೈಮಾನ।
ಬಾಲಿ ಬರಚಿ ಬಂಧೂಕ ಹತಿಯಾರ ನೆರಳಗವಿಕಲ್ಲಾ।
ತೋಪ ಹಾರುದು ಅಳತಿಲ್ಲಾ।
ಶರಣಾರ ಸ್ವಾಮಿ ಹೊಕ್ಕ ಕಡದಾರ ಹೆಣಗಳ ಸುತ್ತಲೆಲ್ಲಾ
(ಏರಿ) ವೈರಿ ಮುರದ ಅಂಜಿ ಓಡಿದ ಧೈರ್ಯ ಉಳಿಯಲಿಲ್ಲಾ।
ಅಲಭೈರಿ ಹೇಳಿದ ಶರಣರ ಲೀಲಾ।"[೧೯]

ಹಸೇನ - ಹುಸೇನರು ಬಂಧು ಬಳಗವನ್ನು ಬಿಟ್ಟು ಯುದ್ಧಕ್ಕೆ ನಡೆಯುತ್ತಾರೆ. ಮನೆ ಮಂದಿಯೆಲ್ಲ ದುಃಖ ಸಾಗರದಲ್ಲಿ ಇರುವಾಗಲೆ ಯುದ್ಧ ಸಾಮಾನು ತೆಗೆದುಕೊಂಡು ಕುದುರೆ ಏರಿ ಕರ್ಬಲ್ ಪ್ರದೇಶವನ್ನು ಪ್ರವೇಶಿಸುತ್ತಾರೆ. ಧ್ವಜ ನೆಟ್ಟು ವೈರಿಯನ್ನು ಆಹ್ವಾನಿಸುತ್ತಾರೆ.

ಏಜಿದನು ಸಹ ಭಾರಿ ಪ್ರಮಾಣದಲ್ಲಿ ಸೈನ್ಯವನ್ನು ಕಟ್ಟಿಕೊಂಡು ಯುದ್ಧಕ್ಕೆ ಸಿದ್ಧನಾಗಿ ಬಂದ. ಎರಡು ಸೈನ್ಯದಲ್ಲಿ ಭಾರಿ ಪ್ರಮಾಣ ಕಾಳಗ ನಡೆಯುತ್ತದೆ. ಹಸೇನ–ಹುಸೇನ ಧೈರ್ಯಗೆಡದೆ ವೈರಿಗಳ ರುಂಡ ಚೆಂಡಾಡುತ್ತಾರೆ. ಇದನ್ನು ಕಂಡ ಏಜಿದನ ಸೈನ್ಯ ಅಂಜಿ ಓಡಿ ಹೋಯಿತು. ಮೊದಲ ಯುದ್ಧದಲ್ಲಿ ಹಸೇನ – ಹುಸೇನ ಜಯಗಳಿಸುತ್ತಾರೆ.

ಸೋತ ಏಜಿದನು ದುಷ್ಟ ಮಾರ್ಗವನ್ನು ಅನುಸರಿಸಿದನು. ವೈರಿ ಪಡೆಗಳಿಗೆ ಅನ್ನದಲ್ಲಿ, ನೀರಿನಲ್ಲಿ ವಿಷ ಬೆರೆಸಿ ಕೊಲ್ಲಲು ಉಪಾಯ ಹೂಡುವನು. ಅವರ ಸೈನ್ಯ, ಅನುಯಾಯಿಗಳನು ಹಾಗೂ ಮಕ್ಕಳೆಲ್ಲವನ್ನು ಮೋಸದಿಂದಲೆ ಕೊಂದು ನಂತರ ಇವರನ್ನು ಕೊಲ್ಲಲು ಸಿದ್ಧನಾದ. ಹಜರತ್ ಇಮಾಮ ಹುಸೇನರ ಒಂದು ವರ್ಷದ ಮಗ ಅಸ್ಗರ ನೀರಿಲ್ಲದೆ ಪರಿತಪಿಸುತ್ತ ಏಜಿದ ಬಾಣಕ್ಕೆ ಬಲಿಯಾದ ಪ್ರಸಂಗ ಮನ ಕರಗುವಂತಿದೆ.

ಕುಂತ ಕೇಳರಿ ಬಾನು ಲೀಲಾ ಆಗ ಇದ್ದೋ ಅಸಗರಸಂಣಬಾಲಾ ।ಪ।

(ಏರ) ಸುಂಬ್ರೆ ಅಬದೂಲಾ। ಮಾಡಿದೋ ಹಲ್ಲಾ।

ಹಾಹಾ ಜುಲ್ಮಿ ಆದಿತ ಬಾಳಾನ ಪ್ರಾಣ ಹೋದಿತ
ನೋಡಿ ತಾಯಿ ಅಳತ ದುಃಖಿತಾಗಿ ಬಿದ್ದಾಳೋ ಧರಣಿ ಮ್ಯಾಲಾ
ಅಂಗಿ ಟೊಪ್ಪಿಗಿಜರದ ಮಂದಿಲಾ।
ಖಡಿತೋಡಿ ಉಡದಾರ ಬೆರಳಿಗೆ ಗೋಲಾ

(ಏರ) ನೋಡಿ ಸರವೆಲ್ಲಾ ದುಃಖ ಅಳವಿಲ್ಲಾ

ಬಾನು ತೋರಿಸಿ ಮಂದಿಗಿ ಮಗನ ಅವಚಿ ಎದಿಗಿ

ಬಾಳಾ ಹೋದ್ಯೋ ಇಂದಿಗಿ।

ಹ್ಯಾಂಗ ಮರತ ಇರಲಿ ಅನಗಾಲಾ।

ಕುಡಿಯಲಿಲ್ಲೋ ತಾಯಿಯ ಮೊಲಿಹಾಲಾ ।

ಪುಣ್ಯ ವದಗಿ ಬಂದಿತ ಅಂತ್ಯಕಾಲಾ ।

(ಏರ) ಭೋಗದ ಫಲಾ ತೀರಿತೊ ಎಲ್ಲಾ

ಆಹಾ ಸಂಣಬಾಲಕ ಬುದ್ಧಿಲಿಂದ ಚಾಲಕ ಮಾಡುದೇನ ಕಾಲಕ

ಮುನದೊ ಭಗವಾನಾ ಸಾಕ್ಷಾಂತ ಅಲ್ಲಾ[೨೦]

ನೀರಿಲ್ಲದೆ ಅಸ್ಗರನ ಪ್ರಾಣ ಪಕ್ಷಿ ಹಾರಿಹೋಯಿತು. ಈ ಚಿತ್ರಣವನ್ನು ಕಣ್ಣಾರೆ ಕಂಡ ತಾಯಿ ಬಾನು ಮಗನ ಬಾಲಲೀಲೆಗಳನ್ನು ತೋಡಿಕೊಳ್ಳುವಳು. ತನ್ನ ಮಗನನ್ನು ಎದೆಗೆ ಅವಚಿಕೊಂಡು ಬಾಳಾ ತೀರಿಹೋದ ! ಹೇಗೆ ನಾ ಬದುಕಿರಲಿ ಎಂಬ ನೋವನ್ನು

ವ್ಯಕ್ತಪಡಿಸಿದ್ದಾಳೆ. ಅಸ್ಗರ ಸಣ್ಣ ಹುಡುಗನಾಗಿದ್ದರೂ ಸಹ ಬುದ್ಧಿಯಲ್ಲಿ ಮಾತ್ರ ಅತಿ ಚುರುಕು ಮತಿಯುಳ್ಳವನಾಗಿದ್ದ. ಅಲ್ಲಾ ನನ್ನ ಮಗನ ಮೇಲೆ ಕರುಣೆ ತೋರಲಿಲ್ಲಾ ಎಂದು ಹಲುಬುವಳು.

"ಎಷ್ಟು ಹೇಳಲಿ ವರಣಿಸಿ ಲೀಲಾ
ಶ್ರೇಷ್ಠ ಶರಣಾರ ವನವಾಸಕಳತಿಲ್ಲಾ
(ಏರ) ಸುಂಬ್ರೆ ಅಬದೂಲಾ। ಶರಣಾರ ಮ್ಯಾಲಾ
ಕಾಡಿದಳತಿಲ್ಲ ಅರಿಯದೆ ನ್ಯಾಯ ಮೂಲಾ ।
ಮಾಡಿದಡವಿಪಾಲಾ ಮಾಡಿ ಹೇಳಿದೋ ಅಲಭೈರಿ ಖ್ಯಾಲಾ।"[೨೧]

ಎಷ್ಟು ಹೇಳಿದರೂ ಮಗನ ಲೀಲೆ ಕಡಿಮೆ. ಹಸೇನ–ಹುಸೇನರ ಕಷ್ಟಕ್ಕೆ ಲೆಕ್ಕವಿಲ್ಲ. ನ್ಯಾಯ ಅನ್ಯಾಯ ಲೆಕ್ಕಿಸದೆ ಅಡವಿ ಪಾಲಾಗಬೇಕಾಯಿತು. ಹೀಗೆ ಹೆತ್ತ ತಾಯಿ ಮರುಗಿದ ಆರ್ದ್ರ ಸನ್ನಿವೇಶ ಎಂಥ ಕಲ್ಲೆದೆಯನ್ನೂ ಕರಗಿಸುತ್ತದೆ. ಮಾತೃ ಹೃದಯದ ಅಳಲು ಈ ಪದದಲ್ಲಿ ಹಾಸುಹೊಕ್ಕಾಗಿದೆ.

ಕರ್ಬಲ್ ಪದಗಳು ಕಾರ್ಯ ಸಾಹಸದ ಚಿತ್ರಣವನ್ನು ವರ್ಣಿಸಿದಂತೆ ಹೃದಯವಿದ್ರಾವಕ ಸನ್ನಿವೇಶಗಳನ್ನು ಚಿತ್ರಿಸಿ ಶ್ರೋತೃವರ್ಗಗಳ ಕಣ್ಣೀರಿನ ಹೊಳೆಯನ್ನೇ ಹರಿಸಿವೆ. ನೀರಿಗಾಗಿ ಹಂಬಲಿಸುವ ಬಾಲ ಅಸಗರನು ಯಜೀದನ ಸೈನಿಕರ ಬಾಣಕ್ಕೆ ತುತ್ತಾದ ದೃಶ್ಯ ಹರಿಶ್ಚಂದ್ರ ಕಾವ್ಯದ ಚಂದ್ರಮತಿಯ ಪ್ರಲಾಪವನ್ನು ನೆನಪಿಸುತ್ತದೆ. ಸತ್ಯ, ನ್ಯಾಯ, ಧರ್ಮ ಪ್ರತಿಷ್ಠೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ಇಮಾಮ ಹಸೇನ್ – ಹುಸೇನ್ ಹಾಗೂ ಅವರ ಅನುಯಾಯಿಗಳ ನೆನಪು ಜನರ ಮನದಲ್ಲಿ ಶಾಶ್ವತವಾಗಿ ಉಳಿಯಲು ಕರ್ಬಲಾ ಪದಗಳ ಪಾತ್ರ ಮಹತ್ತರವಾಗಿವೆ.

೬. ಗುರುಸ್ತುತಿ ಪದಗಳು :

ಅನುಭಾವ ಕವಿಗಳು ಗುರುಸ್ತುತಿಗೆ ಆದ್ಯತೆ ನೀಡಿದ್ದಾರೆ. ವಚನಕಾರರು ಸಹ ಪ್ರಥಮದಲ್ಲಿ ಗುರುವಿನಲ್ಲಿ ಅನನ್ಯ ಭಕ್ತಿಯಿಂದ ಬೇಡಿಕೊಂಡಿರುವದನ್ನು ಕಾಣುತ್ತೇವೆ. "ಶಿಪಥವನರಿವೊಡೆ ಗುರುಪಥವೆ ಮೊದಲು" ಎಂದು ಬಸವಣ್ಣ, "ಗುರುವಿನ ಮುಖದಿಂದ ಲಿಂಗವ ಕಂಡೆ" ಎಂದು ಅಕ್ಕಮಹಾದೇವಿ ಹೇಳುತ್ತಾರೆ. ಗುರು ಮನಸ್ಸಿನಲ್ಲಿಯ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನು ತುಂಬುವನು ಎಂಬ ದೃಢವಾದ ನಂಬಿಕೆ. ಇಂತಹ ಹಲವಾರು ಗುರುಸ್ತುತಿ ಪದಗಳು ಅಲಭೈರಿ ರಿವಾಯತ್ ಪದಗಳಲ್ಲಿ ಸಿಗುತ್ತವೆ.

"ಗುರುವಿನ ಭಜಿಸೊ ಮಾನವಾ ಮೂಢಾ। ನೀ ಕೇಳೋ ಬೈಮಾನ
ಕಾಮಕ್ರೋಧ ಮದ ಮತ್ಸರ ಲೋಭಾ। ಮೋಹಾ ಬಿಡೋ ಅಜ್ಞಾನ।
ಮಾಡೋ ಶಿವಧ್ಯಾನಾ। ಬ್ಯಾಡೋ ಅಭಿಮಾನ।"[೨೨]

ಇಲ್ಲಿ ಅಲಭ್ಯೈರಿ ಗುರುವಿಗೆ ಮೊದಲ ಸ್ಥಾನ ನೀಡುವನು. ಗುರುವಿನ ಮೂಲಕ ಪಡೆಯುವ ಜ್ಞಾನವನ್ನು ಎತ್ತಿ ಹಿಡಿಯುತ್ತಾನೆ. ಅರಿಷಡ್ವರ್ಗಗಳನ್ನು ತ್ಯಜಿಸಿ ಭಕ್ತಿಯಿಂದ ಗುರು ನಾಮ ಸ್ಮರಣೆಯನ್ನು ಮಾಡಿದರೆ ಅದು ಮುಕ್ತಿಗೆ ದಾರಿಯನ್ನು ತೋರುವುದು ಎಂಬ ಆಶಯಯನ್ನು ವ್ಯಕ್ತಪಡಿಸುತ್ತಾನೆ.

೭. ಸಾಮಾಜಿಕ ಪದಗಳು :

ಸಮಾಜದಲ್ಲಿಯ ಸುಖ-ದುಃಖಗಳನ್ನು ಅಲಭ್ಯೈರಿ ಕಂಡು ಹಲವಾರು ಪದಗಳನ್ನು ರಚಿಸಿದ್ದಾನೆ. ಸಮಾಜದಲ್ಲಿ ನಡೆಯುವ ನಿತ್ಯ ಘಟನೆಗಳೆ ಆಕರಗಳು. ಅಲಭ್ಯೈರಿ ತನ್ನದೇ ಆದ ರೀತಿಯಲ್ಲಿ ಶಬ್ಧಗಳನ್ನು ಬಳಸಿದ್ದಾನೆ. ಈತನ ಪದಗಳು ನೇರವಾಗಿ ಕೇಳುಗರ ಹೃದಯವನ್ನು ತಟ್ಟುತ್ತವೆ. ಮೊಹರಂ ಆಚರಣೆಯಲ್ಲಿ ಜಾತ್ರೆ, ಇನ್ನಿತರ ಸಂದರ್ಭಗಳಲ್ಲಿ ಈ ರಿವಾಯತ್ ಪದಗಳನ್ನು ಹಾಡುವರು. ರಿವಾಯತ್ ಪದಗಳು ಜನರ ಸಮಸ್ಯೆ ಹಾಗೂ ನೀತಿ ಬೋಧನೆಯನ್ನು ಒಳಗೊಂಡಿವೆ. ಅಲಭ್ಯೈರಿಯ ಸಾಮಾಜಿಕ ರಿವಾಯತ್ ಪದಗಳು ಕುಟುಂಬ ಜೀವನವನ್ನು ಒಳಗೊಂಡಂತೆ ಸಮಕಾಲೀನ ನೈಜ ಬದುಕಿನ ಚಿತ್ರಣವನ್ನು ಬಿಡಿಸುತ್ತವೆ. ದಾಂಪತ್ಯ ಜೀವನ, ಕಾಮದ, ಹಣದ, ಮೂಢನಂಬಿಕೆ, ಚಹಾದ ಚಾಲಿ, ಇನ್ನು ಹಲವಾರು ತರಹದ ವಸ್ತುಗಳನ್ನೇ ಬಳಸಿಕೊಂಡಿದ್ದಾನೆ.

"ಅಸ್ಪೃಶ್ಯತೆ" ಎಂಬ ರಿವಾಯತ್ ಪದದಲ್ಲಿ ಅಲಭ್ಯೈರಿ ಅಸ್ಪೃಶ್ಯತೆಯನ್ನು ಕುರಿತು ಗಂಭೀರವಾದ ಚಿಂತನೆಗೈದಿದ್ದಾನೆ. ಮಾನವ ಇಂದು ಜಾತಿಯ ಹೆಸರಿನಲ್ಲಿ ಸಂಕುಚಿತನಾಗಿದ್ದಾನೆ. ಮಾನವರೆಲ್ಲ ನಾವು ಒಂದೇ ಜಾತಿಗೆ ಸೇರಿದವರು. ಒಬ್ಬನೆ ದೇವರ ಮಕ್ಕಳು ನಾವು. ಉದ್ಯೋಗಕ್ಕಾಗಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಎಂಬ ನಾಲ್ಕು ಪ್ರಕಾರ ಮಾಡಿಕೊಂಡು ಲೋಕವ್ಯವಹಾರವನ್ನು ನಡೆಸಿದರು. ಆದರೆ ಇದನ್ನೇ ಮುಂದೆ ನೂರಾರು ಜಾತಿಗಳನ್ನು ಮಾಡಿಕೊಂಡು ಸ್ವಾರ್ಥದ ನೆರಳಿನಲ್ಲಿ ಕಾಲ ಕಳೆಯ ತೊಡಗಿದರು.

"ಲಿಂಗವಂತರಾ ಜೈನ ಮುಸಲ್ಮಾನ ಪಂಚಾಳ ಬಡಿಗ ಪತ್ತಾರ।
ಕೂಡ ಒಕ್ಕಲಿಗ್ಯಾ ಕುರಬ ಆರ್‍ಯಾರ ಬ್ಯಾಡ್ರ ಉಪ್ಪಾರ
ಹೊಲೆಯ ಮಾದಿಗ ಮೊದಲ ಮಾಡಿ ವಡದ ನೂರಾರ।"[೨೩]

ಹೀಗೆ ಎಷ್ಟೋ ಧರ್ಮದಲ್ಲಿ ಮಹಾತ್ಮರು ಹುಟ್ಟಿ ಬಂದು ಸಮಾಜ ಉದ್ಧಾರ ಮಾಡಿದ್ದಾರೆ. ಅವರಲ್ಲಿ ಜಾತಿಯ ಭೀತಿಯಿಲ್ಲ. ಅವರು ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಂಡವರು. ಲೋಕದ ಉದ್ಧಾರಗೈದ ಪಾವನ ಪುರುಷರು.

ಅದಕ್ಕಾಗಿ ಅಲಭ್ಯೈರಿ ಗುರು ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತಾನೆ. ಸಾಮಾಜಿಕ ಪಿಡುಗಾದ ಜಾತಿಯನ್ನು ಬೇರು ಸಮೇತ ಕಿತ್ತು ಹಾಕಲು ಅಂತಹ ಮಹಾತ್ಮರ

ಆಗಮನವಾಗಬೇಕು. ೧೨ ನೆಯ ಶತಮಾನದಲ್ಲಿ ಬಸವಣ್ಣನವರು ಸಮಾಜದಲ್ಲಿನ ಜಾತಿಯ ಪಿಡುಗನ್ನು ಹೋಗಲಾಡಿಸಲು ಕ್ರಾಂತಿಯನ್ನೇ ಮಾಡಿದ್ದಾರೆ. ಆಯಾ ಕಾಲಕ್ಕೆ ಉದಯಿಸಿದ ಮಹಾತ್ಮರು, ಸಂತರು, ಶರಣರು, ಅವಧೂತರು ಸಮಾಜವನ್ನು ಹಸನುಗೊಳಿಸಿರುವರು.

"ಗುರುವೆ ಗಂಭೀರಾ ಹಾರೂಗೇರಿಗೆ ವಾಸಮಾಡಿದ ಚನ್ನವೃಷಭರಾ
ತೋರಿದಂಥ ಮೀರಿದನುಭವ ಶುದ್ಧ ಸುವಿಚಾರಾ
ಹೇಳಿದಲಭೈರವನು ಕೇಳರಿ ಧರ್ಮವಂತರಾ।"[೨೪]

ಹೀಗೆ ಅಲಭೈರಿ ಗುರುವಿನ ಮಹಿಮೆ ದೊಡ್ಡದು. ಅವನು ಸಮಾಜದ, ಸರ್ವರ ಏಳಿಗೆಯನ್ನು ಬಯಸುವನು ಎಂಬುದನ್ನು ತಿಳಿಸಿದ್ದಾನೆ. ಮತ್ತೊಂದು ರಿವಾಯತ್ ಪದದಲ್ಲಿ

"ಭವದೊಳು ಹುಟ್ಟಿಬಂದ ಮಹಾತ್ಮರೆಲ್ಲಾ
ಶಿವನ ಅವತಾರಿವರು ಜೀವರೆಲ್ಲಾ
ಶಿವ ಜೀವರೈಕ್ಯದ ವ್ಯವಹಾರವನೆಲ್ಲಾ
ತಿಳಿದವರು ಮಾಯವಾದಿ ಮತಗಳೆಲ್ಲಾ
ಶುದ್ಧ ಅವಧೂತ ಮಾರ್ಗಕೆ ಹತ್ತಲಿಲ್ಲಾ।
ಸೂತಕವಿದು ಅಜ್ಞಾನವೆಂಬ ಕತ್ತಲಾ"[೨೫]

ಅದಕ್ಕಾಗಿ ಕವಿ ಮಹಾತ್ಮರ ಉಪದೇಶವನ್ನು ಕೇಳಿ ಸನ್ಮಾರ್ಗದಲ್ಲಿ ನಡೆಯಬೇಕು. ಮಾಯಾ ಪ್ರಪಂಚಕ್ಕೆ ಗಂಟು ಬಿದ್ದು ಅಡವಿ ಪಾಲಾಗುವುದು ಅಪ್ರಯೋಜಕ ಎಂದು ತಿಳಿಸುವನು.

"ಹಣೆಬರಹ" ಎಂಬ ರಿವಾಯತ್‌ದಲ್ಲಿ ಅಲಭೈರಿ ಬ್ರಹ್ಮ ಲಿಖಿತವನ್ನು ತಪ್ಪಿಸಲಿಕ್ಕೆ ಯಾರಿಗೂ ಸಾಧ್ಯವಿಲ್ಲ. "ಬಾರದು ಬಪ್ಪದು-ಬಪ್ಪುದು ತಪ್ಪದು" ಎಂಬ ಮಾತಿನಂತೆ ರಾಜಾಧಿರಾಜರು ಇದರಿಂದ ಹೊರತಾಗಿಲ್ಲ.

"ಭೋಗದ ಫಲಾ ಉಂಡಕ್ಯಾರಿ ನೀಗದ ಹೊರತಾ।
(ಏರ) ಹೋಗಿಲ್ಲೇ ಯಾರಾದರೇನು ಮೋಕ್ಷ ಮಾರ್ಗದ ಸರತಾ॥
ಬಾರದು ಬಪ್ಪದು ಬಪ್ಪುದು ತಪ್ಪದು ಯಾರ ಉಪಾಯವಿಲ್ಲಾ
ಬ್ರಹ್ಮನು ಬರೆದಂಥಾ ಲೀಲಾ।
ಹರಿಶ್ಚಂದ್ರ ನಳಾಚಕ್ರವರ್ತಿ ಕೃಷ್ಣ ಪಾಂಡವರಾ।
ದೇವರ ಅವತಾರ ಆದರೇನು ಮೀರಿಲ್ಲ ಹಣೆಬಾರಾ॥

(ಏರ) ವಿಷ್ಣು ವರಾಹನಾಗಿ ಬ್ರಹ್ಮನ ನಡುದೆಲಿ ಹೋಗಿ
ನಹುಷರಾಜಾದನು ಹೆಬ್ಬಾಂವಾ
ಪ್ರಾರಬ್ಧ ಮೀರಿಲ್ಲ ಯಾಂವ್ಯಾವಾ ಇದಕೆಲ್ಲಾ
ಕಾರಣ ಕೇಳುತಿನ ನಮಗ ಗೊತ್ತನಿಲ್ಲಾ"[೨೭]

"ಕಲಿಗಾಲ" :

ರಿವಾಯತ್ ಪದದಲ್ಲಿ ಮನುಷ್ಯರ ಗುಣ ಸ್ವಭಾವವನ್ನು ಚಿತ್ರಿಸಿದ್ದಾನೆ. ಗುರು – ಹಿರಿಯರ ಮಾತು ಕೇಳದೆ ಧರ್ಮ ಭ್ರಷ್ಟರಾಗಿ ಜನಾ ಇಂದು ಅನ್ಯಾಯದ ಮಾರ್ಗ ಅನುಸರಿಸುತ್ತಿದ್ದಾರೆ. ಬಾಯಿಗೆ ಬಂದ ಹಾಗೆ ಮಾತನಾಡಿ ಮತಿ ಭ್ರಷ್ಟರಾಗಿದ್ದಾರೆ. ನ್ಯಾಯ – ಅನ್ಯಾಯ ತಿಳಿಯದೆ ಕಡದಾಟ – ಬಡಿದಾಟ ಕಲಿಯುಗದಲ್ಲಿ ಹೆಚ್ಚಾಗಿದೆ.

"ಸತ್ಯವಂತರು ಅಡಗಿ ಸದ್ಯಕ್ಕೆ ದುರುಳರು ಹೆಚ್ಚಾದರು ಹುಚ್ಚಾಟಾ
ಮದವೇರಿ ತಿರುಗುವರೇ ಮಾನಗೆಟ್ಟಾ ಆಗಿ ಭ್ರಮಿಷ್ಟಾ
ಕಬರ್ದಾರಿ ಸ್ವಂತ ಅಬ್ರುಬಿಟ್ಟಾ ಕಾಲ್ಕೆದರಿ ನಿಂತಾರೋ ಖಟ್ಲೆಕಾ
ಧರ್ಮಶಾಸ್ತ್ರದ ಮಹಿಮಾ ತಿಳಿಯದ ಕಾರಣ ದುಃಖ ಹೇಳಲೆಷ್ಟಾ
ಸ್ವಂತದೇವರ ಬಂದ ಕಲಿಯೊಳಗ ಗಾಂಧಿ ಅವತಾರ ತೊಟ್ಟಾ
ಹಾರೂಗೇರಿ ಕವಿ ಹಸನಕಟ್ಟಾ ಅಲಭೈರಿ ಹೇಳಿದ ಪರಿಪಾಟಾ।"[೨೮]

"ಗಿರಣಿ ಕುರಿತು"

ಮಾನವನ ನಾಗರಿಕತೆ, ಸಂಸ್ಕೃತಿ ಸಂವರ್ಧನೆಗೆ ಮಹಿಳೆಯರ ಕೊಡುಗೆ ಅನನ್ಯವಾದದು. ಮಹಿಳೆ ಸಮಾಜದಲ್ಲಿ ಗೌರವಿಸಲ್ಪಡುವಳು. ಜನಪದ ಸಾಹಿತ್ಯದಲ್ಲಿ ಮಹಿಳೆ ತನ್ನ ಜಾಣ್ಮೆಯಿಂದ ತನ್ನ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾಳೆ. ಮುಂಜಾನೆ ನಸುಕಿನಲ್ಲಿ ಎದ್ದು ಬೀಸುವ ಕಲ್ಲಿನಿಂದ ಹಿಟ್ಟು ಬೀಸುವ ಪರಿಪಾಠವಿತ್ತು. ಮನೆಯಲ್ಲಿಯೇ ಹಿಟ್ಟು ಬೀಸುವದರಿಂದ ಅದು ಶ್ರೀಮಂತಿಕೆಯ ದ್ಯೋತಕವಾಗಿತ್ತು. ಯಾವಾಗ ಬ್ರಿಟಿಷರು ಭಾರತಕ್ಕೆ ಬಂದರೋ ಅಂದಿನಿಂದ ಭಾರಿ ಪ್ರಮಾಣದ ಬದಲಾವಣೆಯನ್ನು ನಮ್ಮ ದೇಶದಲ್ಲಿ ಕಾಣುತ್ತೇವೆ. ಮಾನವ ಮಾಡುತ್ತಿದ್ದ ಕಾರ್ಯಗಳನ್ನು ಯಂತ್ರಗಳು ಮಾಡಿದವು. ಇದರಿಂದ ಜನರೆಲ್ಲಾ ಸೋಮಾರಿಗಳಾಗತೊಡಗಿದರು. ಹೆಣ್ಣು ಮಕ್ಕಳು ಮನೆಯಲ್ಲಿ ಬೀಸುವುದನ್ನೇ ಮರೆತರು.

"ಒಂದಕೊಂದರ ಸಂಗತಿಲ್ಲದೆ ತಿರಗುವರಂಣಾ।
ಮಾಡಿ ಕಲ್ಪನಾ ಬೀಸುಗಿರಣಿ ತಂದರೆರಡು ಸುರವಿ ಹಣಾ।
ಛಂದ ಕಂಡ ಕೂಡ್ಯಾವೋ ಗಂಡು ಹೆಣ್ಣಾ
ಹೆಣ್ಣು ಮಕ್ಕಳು ಮರೆತು ಬಿಟ್ಟಾರೋ ಬೀಸೂದು ಪುನ್ನಾ।"[೨೮]

ಹೆಣ್ಣು ಮಕ್ಕಳು ಸೋಗ ಹಾಕಿ ಬೀಸುವುದನ್ನೇ ಬಿಟ್ಟು ಗಂಡ ಬೀಸಿ ತರುವ ಕಾಲ ಸುರುವಾಯಿತು.

"ಬಲ್ಲಕ್ಕಿಗಿನ್ನಾ ಬಾಳ ಹೇಳುವ ಕಾರಣಿಲ್ಲ ತಿಳಿರೀ ಖೂನಾ।
ಮನಿಯವಳಗ ಬೀಸುದ ಬಿಟ್ಟ ಕೆಡಕತಾನಾ
ತಾನಾಗಿ ಬಂದ ಸೇರತತಿ ಬಡತಾನಾ।
ಆಗಿ ಹೈರಾಣಾ ಹೋಗಬೇಡರಿ ನಮ್ಮ ಮಾತು ಕೇಳಿ ಇನ್ನಾ
ಹಾರೂಗೇರಿ ವಳಗ ಕವಿ ಮಾಡಿ ರಚನಾ
ಅಲಭೈರಿ ಹೇಳ್ಯಾನೋ ಅಮರ ವಚನಾ।"[೨೯]

ಈಗಲೂ ನಮ್ಮ ಗ್ರಾಮೀಣ ಪರಿಸರದಲ್ಲಿ ಮನೆಯನ್ನು ಕಟ್ಟುವಾಗ ಬೀಸುಕಲ್ಲು ಹಾಗೂ ವಳಕಲ್ಲು ಮನೆಯೊಳಗೆ ಹಾಕುವುದು ರೂಢಿಯಲ್ಲಿದೆ. ಇದು ಅನ್ನದ ಸಂಕೇತ. ಯಾವ ಮನೆಯಲ್ಲಿ ಬೀಸುವ ಕಲ್ಲು, ವಳಕಲ್ಲುಗಳಿರುತ್ತವೆಯೋ ಅಲ್ಲಿ ಅನ್ನಕ್ಕೆ ಕೊರತೆ ಇರುವುದಿಲ್ಲ ಎಂಬ ನಂಬಿಕೆ. ಈ ಎರಡು ವಸ್ತುಗಳು ಯಾವ ಮನೆಯಲ್ಲಿ ಇರುವುದಿಲ್ಲವೋ ಅಲ್ಲಿ ಬಡತನ ತನ್ನಿಂದ ತಾನೆ ಆವರಿಸುತ್ತದೆ ಎಂದು ಕವಿಯ ಅಭಿಪ್ರಾಯವಾಗಿದೆ.

"ಅಳಗವಾಡಿಯ ಮೊಹರಂ ಆಚರಣೆ" ಎಂಬ ರಿವಾಯತ್ ಪದದಲ್ಲಿ ಅಲಭೈರಿ ಅಳಗವಾಡಿಯಲ್ಲಿ ಜರುಗುವ ಮೊಹರಂ ಕುರಿತು ವಿವರಿಸುತ್ತಾನೆ.

"ಕುಂತ ಕೇಳರಿ ಅಳಗೋಡಿ ಊರಾ।
ಸುತ್ತ ನಾಡಾಗ ಆಯ್ತು ಜಾಹಿರಾ।
ಬಂತ ಮೊಹರಂ ತಿಥಿ ಗರ್ದಿಭಾರಾ।
ನಿಂತ ಸೇವಾ ಮಾಡ್ವರು। ಸರ್ವಜನರಾ।"[೩೦]

"ಡಾಂಬಿಕ ಪೂಜೆ" ಈ ರಿವಾಯತ್‌ದಲ್ಲಿ ಕವಿ ಡಾಂಬಿಕತೆಯನ್ನು ಖಂಡಿಸುತ್ತಾನೆ. ಮೋಕ್ಷ ಪ್ರಾಪ್ತಿಯಾಗಬೇಕಾದರೆ ಅಂತರಂಗ ಬಹಿರಂಗ ಶುದ್ಧರಾಗಿರಬೇಕು. ಅಂದಾಗ ಮಾತ್ರ ಮುಕ್ತಿ ಪಡೆಯಲು ಸಾಧ್ಯ.

“ಆರು–ಮೂರು ಗುಣಗಳಳಿಯದೆ ನೆನಿಯ ಬ್ಯಾಡ ಬಹಿರಂಗ।
ತುಕಾರಾಮಗಜ್ಞಾನದೇವಗ ವಿಠಲನಾಮದಗುಂಗ
ಏಹೊ ವಿಠಲನಾಮದ ಗುಂಗ
ಅವರ ಭಕ್ತಿಗಿ ಮೆಚ್ಚಿ ಸದ್ಗತಿ ಕೊಟ್ಟಾನೋ ಪಾಂಡುರಂಗ।”[೩೧]

“ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ ಬಡವನಯ್ಯಾ
ಎನ್ನ ಕಾಲವೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯಾ।”[೩೨]

ಬಸವಣ್ಣನವರ ವಚನದಂತೆ ಉಳ್ಳವರು ದೇವಾಲಯವನ್ನೇ ಕಟ್ಟುತ್ತಾರೆ. ಅವರನ್ನು ಕಂಡು ನಾವು (ಬಡವರು) ಮಾಡುವುದು ಸರಿಯಲ್ಲ ಎಂದು ಕವಿಯ ನಿಲುವು.

॥ಏರ॥ “ತನುವೇ ಕ್ಷೇತ್ರಾ ಮನವೇ ದೇವಾ ಮಿನುಪಜೀವ ಶಿವಲಿಂಗ
ಏಹೋ ಮಿನುಪಜೀವ ಶಿವಲಿಂಗ।
ಕಣ್ಣಿವೆ ಕಾಶಿ ಹಣಿಯಸ್ತಾನಾ ನಾದಲಿಶ್ವರಲಿಂಗ ।
ಬ್ರಹ್ಮ ರಂಧ್ರವೆ ಗುಡಿ ಶ್ರೀಗಿರಿ ತೆಲಿಯಲಿ ತಿಳಿಹಿಂಗ।
॥ಏರ॥ ಪಾರಮಾರ್ಥ ಪ್ರಪಂಚ ಮಾಡುತ ಪರಮಾತ್ಮನ ಸಂಗ।
ಏಹೊ ಪರಮಾತ್ಮನ ಸಂಗ
ಮರುವಿನ ಮನುಜಾ ಅರುವಿನಿಂದ ನಡಿ ಒಲಿಯುವನೊ ಶಂಭುಲಿಂಗ।”[೩೩]

‘ನಂಬಿ ಕರೆದರೆ ಓ ಎನ್ನನೆ ಶಿವನು’ ಎಂಬಂತೆ ಪರಮಾತ್ಮನಲ್ಲಿ ಅಚಲವಾದ ನಂಬಿಕೆ ಬೇಕು. ಕಪಟ ವೇಷವನು ಧರಿಸುವದರಿಂದ ಪ್ರಯೋಜನವಿಲ್ಲ. ಶಿವ ಶಿವ ಅಂದರೆ ಶಿವ ಒಲಿಯುವುದಿಲ್ಲ. ತಿಳಿ ಮರುಳ ಮಾನವನೆ, ಅಂತರಂಗದಲ್ಲಿರುವ ಆತ್ಮವನ್ನು ಪರಿಶುದ್ಧಗೊಳಿಸಿಕೊಳ್ಳಲು ಉಪದೇಶಿಸುವನು.

ಉಪಸಂಹಾರ :

ಈ ರೀತಿಯಾಗಿ ಅಲಭ್ಯೆರಿಯ ಮೊಹರಂ ಪದಗಳು ಹೇರಳ ಹಾಗೂ ವೈವಿಧ್ಯಮಯವಾಗಿವೆ. ಮೊಹರಂ ಪದಗಳಿಗೆ ಮೊಹರಂ ಘಟನೆ, ಹಾಗೂ ಇಸ್ಲಾಂ ಧರ್ಮ ತತ್ವಗಳು ಆಕರವಾದಂತೆ ಸನಾತನ ಹಿಂದೂ ಧರ್ಮವು ಆಕರವಾಗಿದೆ. ರಾಮಾಯಣ, ಮಹಾಭಾರತ, ಚಾರಿತ್ರಿಕ, ಸಾಮಾಜಿಕ ವಸ್ತುಗಳು ಆಕರವಾಗಿ ಹಿಂದೂ–ಮುಸ್ಲಿಂರಲ್ಲಿ

ಮತೀಯ ಸಾಮರಸ್ಯ ಸ್ಥಾಪಿಸಲಿಕ್ಕೆ ಸಹಕಾರಿಯಾಗಿವೆ. ಸೂತಕ ಆಚರಣೆಯಾಗಿ ಆಚರಿಸಲ್ಪಡುವ ಮೊಹರಂ ಇಂದು ಸಾಮರಸ್ಯದ ಬೆಸುಗೆಯಾಗಿದೆ. ಮೊಹರಂ ಪದಗಳ ಕರ್ತೃಗಳು ಸಾಮಾನ್ಯವಾಗಿ ಇಸ್ಲಾಂ ಧರ್ಮಿಯರು. ಅವರ ಭಾಷೆ ಉರ್ದು. ಆದರೆ ಕೆಲವರು ಕನ್ನಡದಲ್ಲಿಯೂ ಪದ ರಚಿಸಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಅಲಭೈರಿ ಕವಿಯ ಮಾತೃ ಭಾಷೆ ಕನ್ನಡ. ಈತ ರಚಿಸಿದ ಪದಗಳನ್ನು ಗಮನಿಸಿದಾಗ ಮರಾಠಿ, ಉರ್ದು ಹಾಗೂ ಕನ್ನಡ ತ್ರಿಭಾಷಾ ಪ್ರಭಾವವನ್ನು ಕಾಣುತ್ತೇವೆ. ಇದರಿಂದ ಮೊಹರಂ ಪದಗಳು ಮತೀಯ ಬಾಂಧವ್ಯದ ಜೊತೆಗೆ ಭಾಷಾ ಬಾಂಧವ್ಯವನ್ನು ಕಟ್ಟುವಲ್ಲಿ ಸಹಕಾರಿಯಾಗಿವೆ. ಮೊಹರಂ ಪದಗಳು ಕ್ರಮವಾಗಿ ತೌಲನಿಕ ಧರ್ಮ ಹಾಗೂ ಭಾಷಾ ಅಧ್ಯಯನಕ್ಕೆ ಸಹಕಾರಿಯಾಗಿವೆ. ಜೊತೆಗೆ ಹಿಂದೂ – ಮುಸ್ಲಿಂರಲ್ಲಿ ಪ್ರೀತಿ ವಿಶ್ವಾಸ ಬೆಳೆಯಲು ಸ್ನೇಹ ಸೇತುವೆಯಾಗಿವೆ. ಇದುವೇ ಭಾರತೀಯ ಭಾಷೆ – ಸಾಹಿತ್ಯ ಹಾಗೂ ಸಂಸ್ಕೃತಿಗೆ ಮೊಹರಂ ಪದಗಳು ನೀಡಿದ ಕೊಡುಗೆ ಎನ್ನಬಹುದು.

೫.೩ ಲಾವಣಿಗಳು :

ಆಧುನಿಕ ಕನ್ನಡ ಸಾಹಿತ್ಯ ಇಂದು ಸಮೃದ್ಧವಾಗಿದೆ. ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ. ಶಿಷ್ಟ ಸಾಹಿತ್ಯ ಕಲಿತವರ ಸಾಹಿತ್ಯವಾದರೆ ಜನಪದ ಸಾಹಿತ್ಯ ಕಲಿಯದವರ, ಅಲ್ಪ ಸ್ವಲ್ಪ ಕಲಿತವರ ಸಾಹಿತ್ಯ. ಶಿಷ್ಟ ಸಾಹಿತ್ಯ, ಕಥೆ, ಕಾದಂಬರಿ, ಕಾವ್ಯ, ನಾಟಕ, ವಿಮರ್ಶೆ ಈ ಮುಂತಾದ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಜನಪದ ಸಾಹಿತ್ಯ ಜನರಿಂದ ಜನರಿಗೆ ಸಾಗಿ ಬಂದ ಸಾಹಿತ್ಯ. ತತ್ವ ಸಾಹಿತ್ಯ, ಡೊಳ್ಳಿನ ಹಾಡು, ಕರ್ಬಲ್ /ರಿವಾಯತ್, ಹಂತಿ, ಅಭಂಗ, ಲಾವಣಿ, ಜನಪದ ಆಟ, ಸೋಬಾನ ಹಾಡು, ಚೌಡಕಿ ಪದ ಈ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಜನಪದ ಗುರುತಿಸಿಕೊಳ್ಳುತ್ತದೆ. ಇಂತಹ ಅಪಾರ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಲಾವಣಿ ಸಾಹಿತ್ಯ ಪ್ರಕಾರವೂ ಒಂದು.

ಜಾನಪದ ಒಂದು ವಿಶಾಲ ಕ್ಷೇತ್ರ. ಮನುಷ್ಯ ಜೀವನಕ್ಕೆ ಹತ್ತಿರವಾದ ಒಂದು ಸಾಹಿತ್ಯ ಪ್ರಕಾರ. ಈ ನಿಟ್ಟಿನಲ್ಲಿ ಲಾವಣಿ ತುಂಬಾ ಪ್ರಸಿದ್ಧವಾದ ಜನಪದ ಗೀತ ಸಾಹಿತ್ಯ. ಕರ್ನಾಟಕದ ಅದರಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ವಿಶಿಷ್ಟ ಸಾಹಿತ್ಯ ಪ್ರಕಾರ ಇದಾಗಿದೆ. ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪೂರ ಜಿಲ್ಲೆಗಳು ಲಾವಣಿ ಸಾಹಿತ್ಯದಲ್ಲಿ ಅತಿ ಹೆಚ್ಚು ಸೇವೆಯನ್ನು ಮಾಡಿವೆ. ಈ ಜಿಲ್ಲೆಗಳಲ್ಲಿ ವೃತ್ತಿ ಗಾಯಕರು ಹಾಗೂ ಹವ್ಯಾಸಿ ಗಾಯಕರು ಸಿಗುತ್ತಾರೆ. ಸ್ವತಃ ಲಾವಣಿ ರಚನಕಾರರ ಸಂಖ್ಯೆಯೂ ಸಾಕಷ್ಟಿದೆ. ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನಲ್ಲಿ ಹಲವಾರು ಲಾವಣಿ ರಚನೆಗಾರರಿದ್ದರು. ಅದರಲ್ಲಿ ಹಾರೂಗೇರಿಯ ಅಲಭೈರಿಯೂ ಒಬ್ಬ. ಈ ಭಾಗದಲ್ಲಿ ತೇರದಾಳ ಹಾಗೂ ಜಮಖಂಡಿ ಲಾವಣಿ

ಸಂಪ್ರದಾಯಕ್ಕೆ ಪ್ರಸಿದ್ಧ ತಾಣಗಳು ತೇರದಾಳ ಹರಿದೇಶಿ ಸಂಪ್ರದಾಯವನ್ನು ಹಾಗೂ ಜಮಖಂಡಿ ನಾಗೇಶಿ ಸಂಪ್ರದಾಯವನ್ನು ರೂಢಿಸಿಕೊಂಡು ಲಾವಣಿಯಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಈ ಸಂಪ್ರದಾಯವನ್ನು ಖಚಿತಪಡಿಸಿಕೊಳ್ಳಲು ಇಲ್ಲಿನ ಹುಡುಗರು ಈಗಲೂ ಹಾಡುವ ಲಾವಣಿಯ ಸಾಲುಗಳನ್ನು ನೋಡಬಹುದು.

"ನಾಗಿ ನಿನ್ನ ತವರ ಮನಿ ಜಮಖಂಡಿ
ತೇರದಾಳ ತುಕಾರಾಮನ ಇಟ್ಟಕೊಂಡಿ।"[೧]

ಹರದೇಶಿ ಎಂದರೆ ಗಂಡು ಸಂಪ್ರದಾಯ. ಗಂಡನ್ನು ಹೆಚ್ಚು ಮಾಡಿ ಹೇಳುವದು. ನಾಗೇಶಿ ಎಂದರೆ ಹೆಣ್ಣಿನ ಸಂಪ್ರದಾಯ. ಹೆಣ್ಣನ್ನು ಹೆಚ್ಚು ಮಾಡಿ ಹೇಳುವುದು. ಇವುಗಳನ್ನು ಕಲ್ಗಿ–ತುರಾಯಿ ಎಂದು ಕರೆಯುವರು. ತೇರದಾಳ ಲಾವಣಿ [ಕನ್ನಡ] ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಈ ಭಾಗದ ಲಾವಣಿಕಾರರೂ ಸಹ ಸ್ವಾತಂತ್ರ್ಯ ಸಂಗ್ರಾಮದ ಆಶೋತ್ತರಗಳನ್ನು ಬಿಂಬಿಸುವ ದೇಶಭಕ್ತಿ ಗೀತೆಗಳಿಂದ ಸಾಕಷ್ಟು ಪ್ರಸಿದ್ಧರಾಗಿದ್ದಾರೆ. ಜಾತಿಮತ ದ್ವೇಷಗಳನ್ನೆಲ್ಲ ಮರೆತು ಲಾವಣಿಗಳ ಮೂಲಕ ಭಾವೈಕ್ಯತೆ ಮೆರೆದಿರುವರು. ಹಿಂದೂ ಮುಸ್ಲಿಂರು ಎಂಬ ಭೇದಭಾವ ತೋರದೆ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

"ತೇರದಾಳ ತುಕಾರಾಮ, ತೇರದಾಳದ ದುರದುಂಡಿ ಹಾಗೂ ವಸ್ತಾದ ಸೌದಾಗರ ಎಂಬ ಮೂವರು ಲಾವಣಿಕಾರರ ಹೆಸರನ್ನು ಗುರುತಿಸಬಹುದು. ಇಲ್ಲಿ ದುರದುಂಡಿ ಗೋಪಾಲನ ಕಾಲವನ್ನು ಸು.ಕ್ರಿ.ಶ. ೧೮೨೦ ಎಂದು ಗುರುತಿಸಿದ್ದಾರೆ. ಇದೇ ಸುಮಾರಿಗೆ ಆಗಿ ಹೋದವರು ತುಕಾರಾಮ ಹಾಗೂ ಸೌದಾಗರರು"[೨] ತುಕಾರಾಮ ಹರದೇಶಿ ಪದಕಾರ. ವಿಚಾರಶೀಲನಾಗಿದ್ದ ಈತ ಜಾತಿಯಿಂದ ಸಮಗಾರ. ಈತ ಅಪಾರ ಶಿಷ್ಯ ಪರಂಪರೆಯನ್ನು ಹೊಂದಿದ್ದನು. ತೇರದಾಳ ಗ್ರಾಮದ ಲಾವಣಿಗಳು ಸುತ್ತ–ಮುತ್ತೆಲ್ಲ ಪ್ರಸಿದ್ಧ. ತೇರದಾಳದ ದಟ್ಟ ಪ್ರಭಾವ ಬಾಗೆನಾಡಿನ ಮೇಲೆಯೂ ಆಗಿರುವುದನ್ನು ಕಾಣುತ್ತೇವೆ. ಅಲಭೈರಿಯೂ ಮೇಲಿಂದ ಮೇಲೆ ತೇರದಾಳ ಗ್ರಾಮಕ್ಕೆ ಹೋಗುತ್ತಿದ್ದರೆಂದು ಇಲ್ಲಿನ ಹಿರಿಯರು ಹೇಳುತ್ತಾರೆ. ಹಾರೂಗೇರಿಯ ಅಲಭೈರಿ, ಜಲಾಲಪುರದ ರಾಚೋಟಿ, ಮುಗಳಖೋಡದ ರಾಚಯ್ಯಾ, ಪರಮಾನಂದವಾಡಿಯ ಮೀರಾಸಾಬ ಮುಲ್ಲಾ, ಕುಡಚಿ ಶರಿಭೈರಿ, ದಿಗ್ಗೇವಾಡಿ ಬಾಬಾಜಿ ಜಮಾದಾರ ಮುಂತಾದವರು ಈ ನಾಡಿನ ಪ್ರಸಿದ್ಧ ಲಾವಣಿಕಾರರು. ಕವಿ ರಾಚೋಟಿ ತೇರದಾಳದ ತುಕಾರಾಂನನ್ನು ಗುರುವನ್ನಾಗಿ ಸ್ವೀಕರಿಸಿಕೊಂಡದ್ದು ಅವನ ಒಂದು ಲಾವಣಿಯಿಂದ ಗುರುತಿಸಬಹುದು.

"ಈಸಿ ಈಸಿ ನೀ ದಣಕೊಂಡ್ಯೋ
ತಮ್ಮಾ ಸನೇಕ ಬರವಲ್ಲತ ಆಚಿದಂಡ್ಯೋ ॥ಪ॥
ತೇರದಾಳದ ತುಕಾರಾಮ ಮಹಾವೀರಾ ॥

ದಣುವಿಲ್ಲದ ಈಸಿ ಪಾರಾದಾ ।
ಅಂವನ ಪರಮ ಶಿಷ್ಯ ಜಲಾಲಪುರದಾ ।
ರಾಚೋಟಿ ಕವಿ ಹೀಂಗ ತಿಳಿಸಿ ಹೇಳಿದಾ।"[೩]

ಈ ಪದ್ಯವನ್ನು ಗಮನಿಸಿದಾಗ ತೇರದಾಳದ ಲಾವಣಿಕಾರರು ಬಾಗೆನಾಡಿನಲ್ಲಿ ದಟ್ಟವಾದ ಪ್ರಭಾವ ಬೀರಿರುವದು ಖಚಿತವಾಗುತ್ತದೆ. ಒಟ್ಟಿನಲ್ಲಿ ತೇರದಾಳ ಭಾಗದ ಲಾವಣಿಕಾರರು ಈ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಅಪಾರ.

ಈ ಮೂವರ ಅನಂತರದಲ್ಲಿ ಅಂಥ ಹೇಳಿಕೊಳ್ಳುವ ಲಾವಣಿಕಾರರು ಸಿಗುವುದಿಲ್ಲ. "ಬಹುಶ: ಲಾವಣಿ ಕ್ಷೇತ್ರದಲ್ಲಿ ಅದೊಂದು ಸಂಧಿಕಾಲ. ಅನಂತರದ ಘಟ್ಟ ಲಾವಣಿಯ ರಚನೆ ಹಾಗೂ ಹಾಡುಗಾರಿಕೆಯ ವಸಂತಕಾಲ. ಆ ಸಮಯಕ್ಕೆ ಇಡೀ ಕನ್ನಡ ಸಾಹಿತ್ಯವೇ ನವೋದಯ ಕಂಡ ಕಾಲ. ಜಾನಪದ ಸಾಹಿತ್ಯದ ವೈವಿಧ್ಯಮಯಗಳೆಲ್ಲವೂ ನವಿಲಾಗಿ ನರ್ತಿತಿಸಿದ ಉತ್ಸಾಹ ಪೂರ್ವಕಾಲ. ಮಧುರಚೆನ್ನ, ಬೇಂದ್ರಯವರಂಥ ಧೀಮಂತ ಕವಿ ಚೇತನಗಳಿಗೆ ಸರ್ವಸ್ವವೂ ಆದ ಸುವರ್ಣಕಾಲ".[೪]

ಹೀಗೆ ಪ್ರಸಿದ್ಧಿ ಪಡೆದ ಲಾವಣಿ ಕ್ಷೇತ್ರದ ಮೂಲವನ್ನು ಕುರಿತು ಇನ್ನೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. "ಕೆಲವರು ಮರಾಠಿಯ ಪೋವಾಡದ ಪ್ರಭಾವ ಎಂದೂ ಕೆಲವರು ಕನ್ನಡದ್ದೇ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿರುವರು. ಇದಕ್ಕೆ "ಡಪ್ಪಿನ ಹಾಡು, ಗೀಗೀಹಾಡು, ಶಾವಿರಕಿ, ಜೀಜೀಪದ ಎಂದು ಹೆಸರು ಬಂದಿತು".[೫] ಒಟ್ಟಿನಲ್ಲಿ ಲಾವಣಿಯ ಮೂಲ ಹಾಗೂ ಹೆಸರಿನ ಕುರಿತು ಏನೇ ಭಿನ್ನಾಭಿಪ್ರಾಯಗಳಿದ್ದರೂ ಇದೊಂದು ಶ್ರೀಮಂತ ಜನಪದ ಪ್ರಕಾರವಾಗಿ ಮಡುಗಟ್ಟಿದ್ದು, ಹಲವಾರು ಲಾವಣಿಕಾರರ ಹುಟ್ಟಿಗೆ ಕಾರಣವಾಗಿದೆ. ಈ ದಿಸೆಯಲ್ಲಿ ಹಾರೂಗೇರಿಯ ಅಲಭ್ಯೆರಿಯೂ ಸಹ ತೇರದಾಳದ ಲಾವಣಿಕಾರರ ಜೊತೆಗೆ ಒಡನಾಟ ಇಟ್ಟುಕೊಂಡು ಹಲವಾರು ಲಾವಣಿಗಳನ್ನು ರಚಿಸಿದ್ದಾನೆ.

ಅಲಭ್ಯೆರಿ ಸಾಹಿತ್ಯ ಶೋಧನಾ ಸಂದರ್ಭದಲ್ಲಿ ೭೦ ಲಾವಣಿಗಳು ದೊರೆತಿವೆ. ಅವನ ರಚನೆಗಳೆಲ್ಲ ಅಪ್ರಕಟಿತವಾಗಿದ್ದು ಕವಿಯ"ಜಿನಭಕ್ತಿಗೀತೆಗಳು" ಕೃತಿಯಲ್ಲಿ 'ಲ' ಲಾವಣಿಗಳು ಮಾತ್ರ ಪ್ರಕಟಿತವಾಗಿವೆ.

ಲಾವಣಿಗಳ ವರ್ಗೀಕರಣ :

೧. ಪೌರಾಣಿಕ ಲಾವಣಿಗಳು

೨. ಧಾರ್ಮಿಕ ಲಾವಣಿಗಳು

೩. ಸಪ್ತಧಾತೋತ್ಪತ್ತಿ ಲಾವಣಿಗಳು

೪. ಹರದೇಶಿ ನಾಗೇಶಿ ಲಾವಣಿಗಳು

೫. ಸಾಮಾಜಿಕ ಲಾವಣಿಗಳು

೬. ಉಪಸಂಹಾರ

೧] ಪೌರಾಣಿಕ ಲಾವಣಿಗಳು :

ಪ್ರತಿಯೊಂದು ಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳ ಪ್ರಭಾವ ಒಂದಿಲ್ಲೊಂದು ಹಂತದಲ್ಲಿ ಕಾಣಿಸಿಕೊಳ್ಳುತ್ತದೆ. ಅವು ಮಾನವನ ಬದುಕಿನ ಅವಿಭಾಜ್ಯ ಅಂಗಗಳು. ಜನರಲ್ಲಿ ಅಧ್ಯಾತ್ಮದ ಅರಿವು ಮೂಡಿಸಲು ಜನರು ಪೌರಾಣಿಕ ವಸ್ತುಗಳನ್ನು ಪ್ರಮುಖವಾಗಿ ಬಳಸುತ್ತ ಬಂದಿರುವರು. ಅಲಭ್ಯೆರಿಯು ಸಹ ಸಾಕಷ್ಟು ಪೌರಾಣಿಕ ವಸ್ತುಗಳನ್ನು ಬಳಸಿ ಲಾವಣಿ ರಚಿಸಿರುವುದು ಕಂಡು ಬರುತ್ತದೆ. ಕೆಲವು ಪೌರಾಣಿಕ ಪದಗಳು ದೊರಕಿದ್ದು ಅವುಗಳನ್ನೇ ಇಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಅವೆಲ್ಲವೂ ಅಪ್ರಕಟಿತ. "ಅಶ್ವಮೇಧಯಜ್ಞ" ಎಂಬ ಲಾವಣಿಯಲ್ಲಿ ಪಾಂಡವರು ಕುರುಕ್ಷೇತ್ರ ಯುದ್ಧದ ನಂತರ ಅಶ್ವಮೇಧ ಯಾಗವನ್ನು ಮಾಡಲಿಕ್ಕೆ ಕುದುರೆಯನ್ನು ಬಿಟ್ಟು ಅದು ಸುತ್ತುತ್ತ ಮಣಿಪುರ ಎಂಬ ನಗರವನ್ನು ಪ್ರವೇಶಿಸುತ್ತದೆ. ಅಲ್ಲಿ ಅರ್ಜುನನಿಗೂ ಬಬ್ರುವಾಹನಿಗೂ ಭಯಂಕರ ಕಾಳಗವಾಗಲು ಕುಂತಿಯ ಪುತ್ರ ಅರ್ಜುನ ಮಡಿದ ಕಥೆಯನ್ನು ಈ ಲಾವಣಿ ತಿಳಿಸುತ್ತದೆ.

> "ಭೀಷಣರಾಕ್ಷಸನನ್ನು ಜಯಿಸಿ ಕುದುರೆಯ ಮುಂದೆ
> ಮಾಡಿ ಅರ್ಜುನ ಸೈನ್ಯ ಸಹಿತ ಮಣಿಪೂರಕ್ಕೆ ಮುಟ್ಟ ಲಾವಾಗ।
> ಅಲ್ಲಿ ಬಬ್ರುವಾಹನಗ ತಿಳಿದು
> ಕುದುರೆಯ ಕಟ್ಟಿಸಿ ಮುಂದೆ ಆಜ್ಞೆ ಮಾಡಿದ ತನ್ನದಂಡಿಗ ।
> ಬಂದು ಕೂಡಿದರು ಒಂದು
> ಕ್ಷಣದೊಳಗ ಬಂಧು ಬಳಗ ಆವಾಗ ।"[೨]

ಯುದ್ಧ ಸುರುವಾಗುವುದಕ್ಕಿಂತ ಮುಂಚೆ ಬಬ್ರುವಾಹನ ತಾಯಿಯ ಅಪ್ಪಣೆಯನ್ನು ತೆಗೆದುಕೊಳ್ಳಲು ಚಿತ್ರಾಂಗದೆಯ ಹತ್ತಿರ ಬರುವನು. ಆಗ ತಾಯಿ ಬಂದ ಬಂಟ ಬೇರೆ ಯಾರೂ ಅಲ್ಲ, ನಿನ್ನ ಹೆತ್ತ ತಂದೆ ಎಂದು ಅರಹುವಳು. ಅಷ್ಟೇ ಅಲ್ಲದೆ ಬೇಗನೆ ಹೋಗಿ ಶರಣಾಗಲು ತಿಳಿಸುವಳು. ಬಬ್ರುವಾಹನ ಶರಣ ಹೋಗಲಾಕ ಆಗ ಅರ್ಜುನ ಹೇಳಿದ್ದು ಹೀಗೆ,

“ಹೇಳಿದನು ನಿಷ್ಠೂರ ಮಾತು ನನ್ನ ಮಗ
ಆದರೆ ನೀನು ಬರತಿದ್ದಿಲ್ಲ ಹೀಂಗ
ಶರಣಾಗತ ನನಗ । ಹೇಡಿತನದೊಳಗ ।”[೭]

ಈ ಮಾತನ್ನು ಕೇಳಿದಾಗ ಕೋಪ ನೆತ್ತಿಗೇರಿ ಯುದ್ಧಕ್ಕೆ ಆಜ್ಞೆ ಮಾಡುವನು. ಕ್ಷಣಾರ್ಧದಲ್ಲಿ ರಥ, ಕಾಲಾಳು, ಸಂಖ್ಯೆ ಗಟ್ಟಲೆ ಮೇಳ ಕೂಡಿತು. ಪರಶು, ಚಕ್ರ, ಬಾಣ, ತೋಮರ, ಸರ್ವ ಹತಿಯಾರ ಸಾಹಿತ್ಯ ಒಡಗೂಡಿತು. ಕೋಪಗೊಂಡ ಬಬ್ರುವಾಹನ ಹೀಗೆಂದನು.

“ಹೇ ಅರ್ಜುನ ಈ ರಣಾಗ್ರದಲ್ಲಿ ಕೆಡಹುವೆನು ನಿನಗ ।
ಈ ಸಮಯದಲ್ಲಿ ಸೋತದ್ದಾದರ ನಾನು ನಿನಗ
ಹುಟ್ಟಿದವನಲ್ಲವೆಂದು ತಿಳಕೊಂಬುವೆನಾಗ ।”[೮]

ಇಷ್ಟು ಹೇಳಿಯಾದ ನಂತರ ಬಬ್ರುವಾಹನ ಬಾಣವನ್ನು ಏರಿಸಿದನು. ಬಬ್ರುವಾಹನನ ಕಡೆಯಿಂದ ಬರುವ ನೂರಾರು ಬಾಣಗಳನ್ನು ಸಾಲ್ವವೆಂಬ ರಾಕ್ಷಸನು ಒಂಬತ್ತು ಬಾಣಗಳನ್ನು ಬಿಟ್ಟು ಆಕಾಶದಲ್ಲಿಯೇ ಪುಡಿ ಪುಡಿ ಮಾಡುವನು. ಹೀಗೆ ಒಬ್ಬರಿಗೊಬ್ಬರು ಯುದ್ಧ ಮಾಡಿ ಕೊನೆಗೆ ರಾಕ್ಷಸನು ಮರಣ ಹೊಂದುವನು. ಆಗ ಧನಂಜಯನ ಕಡೆಯಿಂದ ಕೃಷ್ಣನ ಬಾಲ ಪ್ರದ್ಯುಮ್ನ ಸಾಲೈದು ಬಾಣಗಳನ್ನು ಏರಿಸಿದನು. ಭೂಮಿ ಆಕಾಶ ದಶ ದಿಕ್ಕುಗಳೇ ನಡುಗಿತು. ಪ್ರತಿಯಾಗಿ ಬಬ್ರುವಾಹನ ಕರಕರನೆ ಹಲ್ಲು ತಿಂದು ಹತ್ತು ಸಾವಿರ ಶರಗಳ ಜಾಲವನ್ನು ಸುರಿಸುವನು.

ಭಯಂಕರ ಕಾಳಗ ನಡೆಯಲು ದಶ ದಿಕ್ಕುಗಳೇ ಬಾಣಗಳಿಂದ ಮುಚ್ಚಿಕೊಂಡವು. ಆಕಾಶ ಶರಚ್ಛಾಯೆಯಿಂದ ಮುಚ್ಚಿ ಹೋಯಿತು. ಈ ಇಬ್ಬರ ಕಾಳಗ ನೋಡಿ ದೇವತೆಗಳು ತಾವೇ ಕೊಂಡಾಡಿದರು. ಎತ್ತ ನೋಡಿದತ್ತ ಹೆಣಗಳು. ರಕ್ತದ ಮಡುವಿನಲ್ಲಿ, ರುಂಡ, ಕೈಕಾಲು ತೇಲುತ್ತಿದ್ದವು.

“ಮಜ್ಜಮಾಂಸ ಮೆದುಳು ತಲೆಯ ಡವಗಿ ಭಯಂಕರವಾಗಿ ।
ಬಿದ್ದೀತು ದೊಡ್ಡ ರಾಶಿ । ಭೂತ ಬೇತಾಳ ಬಂದವು ಅಡರಾಶಿ ।
ಯಕ್ಷ ರಾಕ್ಷಸರದು ಕೂಡಿಮೇಳ ಕುದುರೆಯ ಖುರದಾಳ ಮಾಡಿ ಬಾರಸಿ ।
ಕುಣ ಕುಣದ ಹಾಡಿದವು ಬೇಸಿ ।
ಹಾರಾಡುವ ಪಕ್ಷಿ ಹದ್ದು ಕಾಗಿ ಆಕಾಶದಿಂದ ಎರಗಿ ಕೂತವು ಧಿಟಕಾಸಿ ।
ಜಗ್ಗ್ಯಾಡಿ ತಿಂದವು ಜ್ಯಾಡ ಜ್ಯಾಡಸಿ”[೯]

ಭಯಂಕರ ಕಾಳಗದ ದೃಶ್ಯವನ್ನು ಕಂಡ ಅರ್ಜುನನ ಕಡೆಗಿದ್ದ ವೀರರೆಲ್ಲ ಅಂಜಿ ಓಡಿ ಹೋದರು. ಪ್ರದ್ಯುಮ್ನನ ಇಪ್ಪತ್ತು ರಥಗಳನ್ನು ಬಬ್ರುವಾಹನ ನಾಶ ಮಾಡಿದನು. ಇಬ್ಬರು

ಸೋಲದಿದ್ದವರಾಗಿ ಒಬ್ಬರಿಗೊಬ್ಬರು ಬಾಣಗಳಿಂದ ಎಸೆದರು. ಹೋರಾಡಿ ಹೋರಾಡಿ ಆಗ ಇಬ್ಬರು ಬಾಣ ಹತ್ತಿ ಮೂರ್ಛೆಗೊಂಡು ಭೂಮಿಗೆ ಬೀಳುವರು. ಆದರೆ ಬಬ್ರುವಾಹನ ಬೀಳದೆ 'ಕಾಡಾನೆ ಬಂದು ಬಾಳೆಯ ಗಿಡಕ್ಕೆ ತುಡುಕಿದಂತೆ' ಬಿಲ್ಲಿಗೆ ಬಾಣವನ್ನು ಹೂಡಿ ಧನಂಜಯನ ಸೈನ್ಯವನ್ನು ಸಮುದ್ರದಲ್ಲಿ ಮುಳುಗಿಸಿ ಚತುರಂಗಬಲವನ್ನು ಸಂಹಾರ ಮಾಡಿದನು. ಹೀಗೆ ಅರ್ಜುನನ ಕಡೆಯಿಂದ ಬಂದ ಅನುಸಾಲ್ವ, ವೃಷಕೇತು ಮೊದಲಾದ ಭಂಟರೆಲ್ಲ ಸೋತು ಹೋದರು. ಆ ಹಂಸಧ್ವಜ, ಅನಿರುದ್ಧ, ಸಾತ್ಯಕಿ, ಕೃತುವರ್ಮ, ನೀಲಧ್ವಜ ಮುಂತಾದ ವೀರರು ಒಂದಾದ ಮೇಲೊಂದರಂತೆ ಎಲ್ಲರೂ ಪಲಾಯನಗೈದರು.

ಕೋಪೋದ್ರಿಕ್ತನಾಗಿ ಅರ್ಜುನನ ಅಕ್ಷಯ ಬಾಣಗಳು ಒಂದಕ್ಕೆ ನೂರು, ನೂರಕ್ಕೆ ಸಾವಿರ, ಸಾವಿರಕ್ಕೆ ಲಕ್ಷ, ಲಕ್ಷಕ್ಕೆ ಕೋಟಿ ಈ ಪ್ರಕಾರವಾಗಿ ಬಬ್ರುವಾಹನನ ಮೇಲೆ ಎರಗಲು, ಆಗ ಬಬ್ರುವಾಹನ ಅರ್ಧಚಂದ್ರಾಸ್ತ್ರವನ್ನು ಹೂಡುವನು. ಇದನ್ನು ಸೂರ್ಯ, ಚಂದ್ರ , ನವಗ್ರಹಗಳು, ಇಂದ್ರಾದಿ ದೇವತೆಗಳು ನೋಡಿ ನಡುಗಿದರು.

[ಚ್ಯಾಲ] "ಗಂಗಾಶಾಪವು ವದಗಿದ ಕಾರಣಾ ।
ತಪ್ಪಲಿಲ್ಲ ಅರ್ಜುನನಿಗೆ ಮರಣಾ ।೧।
ಹೊಡೆದು ಹಾರಿಸಿದ ಅರ್ಜುನನ ಗೋಣಾ ।
ವೀರ ಧೀರ ಗಂಭೀರ ಬಬ್ರುವಾಹನಾ ।೨।
ಧರಣಿಗೆ ಬಿದ್ದ ಅರ್ಜುನ ಹೋಗಿ ಪ್ರಾಣಾ ।
ಧ್ಯಾನವು ಮಾಡುತ್ತಾ ಮಾಧವ ಕೃಷ್ಣಾ ।೩।
[ಕೂಡ್ನುಡಿ] ಹಾರೂಗೇರಿಯ ಗ್ರಾಮದೊಳು ದೇವರಕೊಂಡ
ಸದ್ಗುರುನಾಥ ಆಜ್ಞಾ ಮಾಡಿದ ಪ್ರಕಾರಾ
ಅಲಭೈರವ ಪೂರಾ । ಹೇಳಿದ ಕಥಾಂತರಾ ।"[೧೦]

ಈ ರೀತಿಯಾಗಿ ಅಲಭೈರಿ ಜೈಮಿನಿ ಭಾರತದ ಹಿನ್ನಲೆಯಲ್ಲಿ ಕಥೆಯನ್ನು ಸೃಷ್ಟಿಸಿರುವನು. ಮುಂದುವರೆಯುತ್ತ ಅರ್ಜುನ ಅಸ್ತನಾದ ವಾರ ತಿಥಿ ನಕ್ಷತ್ರಗಳನ್ನು ಗುರುತಿಸುತ್ತಾನೆ.

"ಉತ್ತರಾನಕ್ಷತ್ರ ಶುದ್ಧ ಕಾರ್ತಿಕ ಏಕಾದಶಿ ಬಳಿಕ ।
ಮಂಗಳವಾರ ದಿನಕ ಆಗಿದ್ದ ಅಸ್ತಮಾನಾ ।
ರುಂಡ ಬಿತ್ತ ಮಾಡುತ್ತ ಹರಿ ಸ್ಮರಣಾ ।
ಹಾರೂಗೇರಿ ಗ್ರಾಮದೋಳು ಸಾರಿ ।
ಅಲಭೈರವ ತೋರಿದಾವಾಗ ಚಲುದಾರಿ ।
ಹಿಂದಿನ ಪುರಾಣಾ । ಜೈಮಿನಿ ಭಾರತ ಮಾಡಿ ಗ್ರಹಣಾ ।"[೧೧]

"ಪಗಡೆಯಾಟ" ಎಂಬ ಲಾವಣಿಯಲ್ಲಿ ಪಾರ್ವತಿ ಶಂಕರರ ಪಗಡೆಯಾಟದ ಪ್ರಸಂಗವಿದೆ. ಜಿದ್ದು ಇಟ್ಟು ಪಗಡೆಯಾಟ ಆಡಿ ಪಾರ್ವತಿ ಶಂಕರನ ಎಲ್ಲ ವಸ್ತುಗಳನ್ನು ಕಿತ್ತುಕೊಳ್ಳುವಳು. ಖಾಲಿಯಾದ ಶಂಕರ ಅರಮನೆಯನ್ನು ಬಿಟ್ಟು ಅಡವಿ ಪಾಲಾಗುತ್ತಾನೆ. ಪಾರ್ವತಿ ವೇಷ ಮರೆಸಿಕೊಂಡು ಕಾಡಿಗೆ ಹೋಗಿ ಶಂಕರನನ್ನು ಕರೆದುಕೊಂಡು ಬಂದ ಬಗೆಯನ್ನು ಅಲಭೈರಿ ಸೊಗಸಾಗಿ ಚಿತ್ರಿಸಿದ್ದಾನೆ. ಅದು ಹೀಗಿದೆ.

"ಪಾರ್ವತಿ ಗೂಡ ಪಗಡಿಯಾಡಲಿಕ್ಕೆ ಕೂತಾನಾವಾಗ
ಶಂಕರ ಭೂಪಾ । ಆಗಿ ವಳೆ ಹುರುಪಾ ।
ಪಗಡಿಯಾಟಕೆ ಶರತು ಹೂಡಿದಾರ ಸೋತ ಪಾರ್ವತಿಗೆ ।
ಆಂವ ಅಪರೂಪಾ । ಕಳಕೊಂಡ ಕೈಪಾ ।ಪ।
ಪಾಸಿ ವಗದ ಪಗಡಿ ಹಚ್ಚಿ ಕಡಿದಾಳ ಪಾರ್ವತಿಗೆ ತುಸು ಸವಡಿಲ್ಲಾ ।
ಆದಳು ಮೇಲಾ । ಪರಮಾತ್ಮನ
ಆಟವು ಅಪೇಸಿ ನಡದಿತ ತಟ್ಟ ಬತ್ತ ಅವನ ತಲಿಮ್ಯಾಲಾ ।"[೧೨]

ಹೀಗೆ ಪಾರ್ವತಿ ಶಂಕರರ ಪಗಡೆಯಾಟದಲ್ಲಿ ಪಾರ್ವತಿ ಕೈ ಮೇಲಾಗಿ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳುವಳು.

"ಫಣಕೆ ಹಚ್ಚಿದ್ದೆಲ್ಲಾ ಗೆದ್ದಾಳ ಪಾರ್ವತಿ
ಡಮರು ರುಂಡ ಮಾಲಾ ಕಮಂಡಲಾ । ನಂದಿ ತ್ರಿಶೂಲಾ ।
ಭಿಕ್ಷಾ ಬೇಡುವ ಜೋಳಗಿ ಬಗಲಿಗಿರ್ಪ ಹುಲಿಯ ತೊಗಲಾ ।
ಏನೂ ಬಿಡಲಿಲ್ಲಾ ।
ಶಂಕರ ಸೇವಟಕ ಹಚ್ಚಿದ ಲಂಗೋಟಿ ಸಿಟ್ಟಿಗೇರಿ ತಿಂತಾನ ಹಲ್ಲಾ ।
ಆಗಿ ರಂಗ ಲಾಲಾ । ದವಡಿ ಕಚ್ಚಿ ಕವಡಿ ವಗದ ಖಾಲಿ ಆತ ಎಲ್ಲಾ ।
ಕಸಗೊಂಡಾಳ ಸಾಮಾನ ಸಕಲಾ । ಪಾರ್ವತಿ ಎಲ್ಲಾ ।"[೧೩]

ಶಂಕರನಿಗೆ ಹೊಟ್ಟೆ ಕಿಚ್ಚು ಹುಟ್ಟಿ ಕೈಲಾಸವನ್ನು ಬಿಟ್ಟು ಅಡವಿಯನ್ನು ಸೇರುತ್ತಾನೆ. ವೈರಾಗ್ಯ ಚಿತ್ತನಾಗಿ ತಪವನ್ನು ಮಾಡುತ್ತ ಸಂಸಾರವನ್ನೇ ಮರೆಯುವನು. ಅತ್ತ ಕಡೆಗೆ ಬಂದ ಚಾಡಿಕೋರ ನಾರದ ನಡೆದ ಘಟನೆಯನ್ನು ಪಾರ್ವತಿಗೆ ತಿಳಿಸುವನು.

"ಎಂಥಾದವ್ವಾ ಪಾರ್ವತಿಯೇ ನಿನ್ನ ಹಣಿಯಬಾರಾ ।
ಕಾಂತಾರ ಹೋಗಿ ಸೇರಿದ ಮ್ಯಾಲ ನಿನ್ನ ಗಂಡ ಶಂಕರಾ ।
ಕೋಪ ಮಾಡಿಕೊಂಡು ಆತನ ಗ್ಯರಾ । ಬೇಗ ಬಿಡಿಸ ಪಾಲಿಸು ತ್ವರಾ ।"[೧೪]

ನಾರದನು ಹೇಳಿದ ಮಾತನ್ನು ಕೇಳಿ ತೊಟ್ಟಾಳ ಬಿಲ್ಲಿಗಿ ರೂಪಾ ಅನೇಕ ತರಹದ ಶೃಂಗಾರವನ್ನು ಮಾಡಿಕೊಂಡು ಕಾಡನ್ನು ಪ್ರವೇಶಿಸುವಳು. ಸುಸ್ವರ ಗಾಯನದಿಂದ ಕಾಂತಾರವನ್ನು ತುಂಬಿ ಪರಮಾತ್ಮನನ್ನು ಒಲಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುವಳು.

"ಪರಮಾತ್ಮ ಸೇವಟಕ ಮಾಡಿ ನಿಂತ ಮನಪಾಕಾ ।
ಕಬುಲಾದ ಹೇಳಿದುದಕ್ಕ ಕಂಡಳಾವಾಗ ಪಾರ್ವತಾ ।
ದಯಬಂದ ಕೂಡಿದಾಳ ಸ್ವಂತಾ ।
ಆಲಿಂಗನ ಮಾಡಿದಮ್ಯಾಲೆ ಭಗವಂತಾ ।
ಮೊದಲಿನ ರೂಪ ತೋರ್ಯಾಳ ಪಾರ್ವತಾ ।
ನೋಡಿ ಗಾಬರಿ ಆಗಿ ಕೈ ಮುಗದ ನಿಂತಾ ।
ಆದಿಶಕ್ತಿ ನೀನೆ ಶ್ರೇಷ್ಠ ಅಂದ ಖಚಿತಾ ।
ಹಾರೂಗೇರಿಯೊಳು ಮಾಡಿದ ಕವಿತಾ ।
ಅಲಭೈರವ ಹೇಳಿದ ನಗನಗತಾ ।"[೧೫]

ಹೀಗೆ ಅಲಭೈರಿ ಇಡೀ ಲಾವಣಿಯನ್ನು ಕಥೆಯ ಹಂದರದಂತೆ ಕಟ್ಟಿ ವಿಷಯವನ್ನು ಸ್ಪಷ್ಟವಾಗಿ ಹೇಳುವುದರಲ್ಲಿ ಕಲಾವಂತಿಕೆಯನ್ನು ಮೆರೆದಿದ್ದಾನೆ.

"ಜಮದಗ್ನಿ ಜನ್ಮ ವೃತ್ತಾಂತ" ಎಂಬ ಲಾವಣಿಯಲ್ಲಿ ಅಲಭೈರಿ ಜಮದಗ್ನಿ ಋಷಿಯ ಜನ್ಮ ವೃತ್ತಾಂತವನ್ನು ತಿಳಿಸುತ್ತಾನೆ.

"ಜನ್ಮವೃತ್ತಾಂತ ಜಮದಗ್ನಿಯ ಜನ್ಮದ ವೃತ್ತಾಂತ ।
ಕೇಳರಿ ನೀವು ಶಾಂತ । ಮನದಿ ಸಂಪೂರ್ಣ ।
ಆಧಾರಿಟ್ಟಾ ಆತನ ಪುರಾಣಾ । ಹೇಳುವೆನು ಮಾಡಿ ಗುರು ಸ್ಮರಣಾ ।
ಭೃಗು ಋಷಿಯ ಮಗನ ಮೊಮ್ಮಗನು ರೇಣುಕೆಯ ರಮಣಾ ।
ರೇಣುಕೆಯ ರಮಣಾ । ಪಲ್ಲವಿ ।
ತ್ರಿಪುರಾರಿ ಕಶ್ಯಪ ಮುನಿ ಭೂಪಗೆ ।
ಇಬ್ಬರು ಒಂದೇ ರೂಪವಾಗಿ ಭೃಗುರುಷಿಗೆ ।
ಮಗನಾದ ಚವನ ರುಚಿಕನಿಗೆ ।
ಮಗನಾಗಿ ಬಂದವನು ಧರೆಗೆ ।
ಜಮದಗ್ನಿಯನ್ನಿಸಿಕೊಂಡು ತಂದೆಯಾದನು ಶ್ರೀಹರಿಗೆ ।
ಆದನು ಶ್ರೀಹರಿಗೆ"[೧೬]

ಮಹಾನ್ ಪವಿತ್ರ ತಪಸ್ವಿಯಾದ ಭೃಗುಋಷಿ ಹಾಗೂ ಮೂರು ಲೋಕದೊಳಗೆ ಪತಿವೃತೆಯಾದ ಪುಲೋಮೆಯರ ಮಗ ಚವನ. ಚವನನ ಮಗ ರುಚಿಕ. ರುಚಿಕನ ಮಗನೇ ಜಮದಗ್ನಿಯೆಂದು ಜನ್ಮ ವೃತ್ತಾಂತವನ್ನು ಸ್ಪಷ್ಟಪಡಿಸಿರುವನು.

"ರೇಣುಕಾ ಜನ್ಮ ವೃತ್ತಾಂತ" ಲಾವಣಿಯಲ್ಲಿ ಅಲಭೈರಿ ಆದಿಮಾಯಿಯ ಅವತಾರವಾದ ರೇಣುಕಾದೇವಿಯ ಜನ್ಮ ವೃತ್ತಾಂತವನ್ನು ಹೇಳುವನು.

"ಪೂರ್ವದಲ್ಲಿ ಕಾನ್ಯಕುಬ್ಜ ನಗರಕೆ ಅಧಿಪತಿ
ಯಾದವನು । ಪರಾಕ್ರಮಿ ರೇಣುರಾಜ ತಾನು ।
ಆಳುತ್ತಿರೆ ತನ್ನ ರಾಜ್ಯವನ್ನು ॥
ಪುತ್ರ ಸಂತತಿಯು ಇಲ್ಲದ ಕಾರಣ ಶಿವನಿಗೆ ತಪವನ್ನು ।
ಮಾಡಿ ಬೇಡಿದನು ॥"[೧೭]

ತಪಕೆ ಮೆಚ್ಚಿದ ಶಿವನು ಬೇಡಿದ ವರವನ್ನು ಕೊಡುತ್ತೇನೆಂದು ತಿಳಿಸುತ್ತ ನಿನಗೆ ಕನ್ಯಾರತ್ನವೊಂದು ಉದಯಿಸುವುದು. ಹತ್ತು ದಿಕ್ಕಿನಲ್ಲಿ ಆಕೆಯ ಕೀರ್ತಿ ಹಬ್ಬುವುದು, ಬಳಿಕ ನಿನಗೊಂದು ಗಂಡು ಮಗು ಹುಟ್ಟುವದು ಎಂದು ಹೇಳಿ ಮಹಾದೇವ ಅಲ್ಲಿಂದ ಮಾಯವಾಗುವನು.

[ಕೂಡಪಲ್ಲ] – ಪುತ್ರಪ್ರಾಪ್ತಿಯ ಸಲುವಾಗಿ ಮುಂದೆ ಯಜ್ಞವನ್ನು ತ್ವರಿತಾ ।
ಮಾಡಲಿಕ್ಕೆ ನಿಂತ ಪುಣ್ಯವಂತಾ ।"[೧೮]

ಧರ್ಮದಾತನಾದ ರೇಣು ಮಹಾರಾಜನು ಕೈಗೊಂಡ ಯಜ್ಞಕಾರ್ಯಕ್ಕೆ ವಶಿಷ್ಠ ಭಾರ್ಗವರು, ಭಾರದ್ವಾಜ, ಕೌಂಡಿಣ್ಯ , ವಿಭಾಂಡಕ, ಮಾಂಡವ್ಯಾದಿ, ಮುಂತಾದ ಶ್ರೇಷ್ಠ ಋಷಿಗಳು ಇನ್ನೂ ಅನೇಕ ಮಂದಿ ವಿದ್ವಾನ್ ಪಂಡಿತರು, ಬ್ರಾಹ್ಮಣರು, ಗರುಡ ಗಂಧರ್ವರು, ಇಂದ್ರ, ಚಂದ್ರ, ಮುಂತಾದ ದೈವತರು ಸ್ವರ್ಗದಿಂದ ಧರೆಗಿಳಿದರು. ಯಜ್ಞ ಕಾರ್ಯವನ್ನು ಸಮಾಪ್ತಿಗೊಳಿಸಿ ಎಲ್ಲರೂ ಜಯ ಘೋಷ ಮಾಡಿದರು.

"ಯಜ್ಞ ಕುಂಡದೊಳು ಕನ್ಯಾ ರತ್ನವಂದು ಹೊರಟುದು
ನೋಡಿದರು । ಸ್ತೋತ್ರ ಮಾಡಿದರು ।
ಸರ್ವ ರುಷಿಯಗಳಾ ಹೆಣ್ಣು ಕೂಸಿನ ।
ರೇಣುರಾಜನ । ತೊಡಿಯ ಮೇಲಿರಸಿ ।
ಆಶೀರ್ವಾದ ಮಾಡಿದರು ತಿಳಿಸಿ ।

ರೇಣುರಾಜ ರೇಣುಕಾವೆಂಬ । ಹೆಸರು ಇಟ್ಟ ತುಂಬು ಹೂವಿನ ಮಳೆಗರಸಿ ।
ಭೇರಿದುಂಧುಬಿಗಳು ಭಾರಿಸಿ।"[೧೯]

ಈ ರೀತಿಯಾಗಿ ಅಲಭ್ಯೆರಿ ರೇಣುಕೆಯ ಜನ್ಮ ವೃತ್ತಾಂತವನ್ನು ತಿಳಿಸುವನು. ಮುಂದೆ ಅವಳೇ ಎಲ್ಲಮ್ಮನಾಗಿ ಹಲವಾರು ಪವಾಡಗಳನ್ನು ಮಾಡುವಳು.

[ಕೂಡಪಲ್ಲ] "ಹಾರೂಗೇರಿಯೊಳು ಹರಗುರು
ವಶಿಷ್ಠ ಪ್ರೇಮಿ ರಾಮದೂತಾ ।
ಸಹಜ ಪ್ರಸನ್ನನ್ನಾದ ಸದ್ಗುರುನಾಥಾ ।
ಅಲಭ್ಯೆರವ ಹೇಳಿದನಿದು ಕವಿತಾ।
ಜಗದೋದ್ಧಾರಿಣಿ ಜಮದಗ್ನಿಗೆ ಸತಿಯಾಗಿ ಬಂದವಳು ತಾ।
ಮೂಲ ಪಾರ್ವತಾ।"[೨೦]

ಹೀಗೆ ಅಲಭ್ಯೆರಿ ಹಲವಾರು ವಸ್ತುಗಳನ್ನು ತೆಗೆದುಕೊಂಡು ಪೌರಾಣಿಕ ಲಾವಣಿ ರಚಿಸಿರುವನು.

೨. ಧಾರ್ಮಿಕ ಲಾವಣಿಗಳು :

ದೇವರ ಕುರಿತಾಗಿ ಹಲವಾರು ಲಾವಣಿಗಳನ್ನು ಅಲಭ್ಯೆರಿ ರಚಿಸಿದ್ದಾನೆ. ಇವುಗಳನ್ನು ಸ್ತುತಿ ಲಾವಣಿಗಳೆಂದು ಕರೆಯುವರು. ಗಣಪತಿ ಸ್ತುತಿ, ವೀರಶೈವ ತತ್ವ ನಿರ್ಣಯ, ಶಕ್ತಿದೇವ, ಇಂಚಗೇರಿ ಕ್ಷೇತ್ರ, ಆದಿಶಕ್ತಿ, ಶಾರದಾ ಸ್ತುತಿ ಮುಂತಾದವು ಪ್ರಮುಖವಾಗಿವೆ.

"ಗಣಪತಿ ಸ್ತುತಿ" ಲಾವಣಿಯಲ್ಲಿ ಅಲಭ್ಯೆರಿ ಗಣಪತಿಯ ಅನಂತ ರೂಪಗಳನ್ನು ವರ್ಣಿಸಿದ್ದಾನೆ. ಅನನ್ಯ ಭಕ್ತಿಯಿಂದ ವಿಘ್ನೇಶ್ವರನನ್ನು ಭಜಿಸುವನು.

"ಆದಿ ಅನಾದಿ ಆಚೆಗಿದ್ದ ಗಣಪತಿ । ಆತನಿಂದ ಉತ್ಪತ್ತಿ ।
ಆದವರು ಶಿವಶಕ್ತಿ ಸರ್ವಕಾರ್ಯಕೆಲ್ಲಾ ಕಾರಣಾ ।
ಆದವನ ಮಾಡುವೆ ಧ್ಯಾನಾ ॥ಪ॥
ತ್ರಿಪುರ ಸಂಹಾರ ಮಾಡುವಾಗ ಹರಿಹರ
ಮೊದಲಾದ ದೈವತರು ಪೂಜಿಸಿದ ಗಣಪಣ್ಣಾ ।
ಭಜಿಸುವೆ ನಾನು ಪರಿಪೂರ್ಣಾ।"[೨೧]

ಗಣಪತಿಯ ಕೀರ್ತಿ ಮಹಿಮೆ ಹಿರಿದು, ಯಾವುದೆ ಕಾರ್ಯವನ್ನು ಕೈಗೊಳ್ಳುವಾಗ ವಿಘ್ನವಿನಾಶಕನನ್ನು ನೆನೆಯದೆ ಯಾರೂ ಯಾವ ಕೆಲಸವನ್ನು ಕೈಗೊಳ್ಳುವುದಿಲ್ಲ. ದೇವಾನು ದೇವತೆಗಳು ಇದಕ್ಕೆ ಹೊರತಾಗಿಲ್ಲ. ತ್ರಿಪುರ ಸಂಹಾರ ಮಾಡುವ ಸಂದರ್ಭದಲ್ಲಿ ದೇವತೆಗಳೂ ಗಣಪನನ್ನು ಭಜಿಸಿರುವುದನ್ನು ಕಾಣುತ್ತೇವೆ.

"ಹಾರೂಗೇರಿಯೊಳಗಿದ್ದ ಹರಿದಾಸ ಮ್ಯಾಳ ।
ಡಪ್ಪ ತುಣ ತುಣಿಯತಾಳ।
ಹಿಡಿದ ಹಾಡುವರು ಕೇಳ ।
ಗುರುರಾಜ ಅಲಭೈರವನಾ ।
ಅನುದಿನ ಮಾಡುವೆ ಆತನ ಧ್ಯಾನಾ।"[೨೨]

ಇದರಿಂದ ಹಾರೂಗೇರಿಯಲ್ಲಿ ಇದ್ದದ್ದು ಹರದೇಶಿ ಸಂಪ್ರದಾಯವೆಂದು ಹಾಗೂ ಅಲಭೈರಿಯೂ ಸಹ ಗಂಡಿನ ಸಂಪ್ರದಾಯವನ್ನು ಹೆಚ್ಚು ಮಾಡಿ ರಚಿಸಿರುವದು ತಿಳಿದು ಬರುತ್ತದೆ. ಅಲಭೈರಿ ಮತ್ತೊಂದು ಲಾವಣಿಯಲ್ಲಿ

"ಶಕ್ತಿಪತಿ ಶ್ರೀ ಶಂಭೋಲಿಂಗ ಭೂಪಾ
ಭಕ್ತಿಯಿಂದ ಬೇಡಿಕೊಂಬುವೆನಪ್ಪಾ ॥ಪ॥
ತ್ರಿಪುರ ಸಂಹಾರಕ ಸದ್ರೂಪಾ ।
ಕೃಪಾಕರ ರಕ್ಷಿಸೊ ಚಿದ್ರೂಪಾ ।"[೨೩]

"ಇಂಚಗೇರಿ ಕ್ಷೇತ್ರ" ಈ ಲಾವಣಿಯಲ್ಲಿ ಅಲಭೈರಿ ಕ್ಷೇತ್ರದ ಮಹತ್ವನ್ನು ಸಾರುತ್ತಾನೆ.

"ಬಿಜಾಪೂರ ಜಿಲ್ಲಾ ಇಂಡಿ ತಾಲೂಕ ಇಂಚಗೇರಿ ಯಾತ್ರಾ ।
ನಿಜಾನಂದ ಕಂದ ಗುರುಲಿಂಗ ಜಂಗಮರ ಕ್ಷೇತ್ರಾ ।ಪ।
ಅಜ್ಞಾನಿ ಜೀವಿಗಳನುದ್ಧರಿಸಿದ ಸರ್ವತ್ರಾ ।
ಸುಜ್ಞಾನ ಕೊಟ್ಟು ಭಕ್ತರನ್ನು ಮಾಡಿದ ಪರಿಪಾತ್ರಾ ।೨।
ಜಗದೊಳಗೆ ಜನ್ಮಿಸಿದ ನೋಡಿ ಉತ್ತಮ ಕುಲಗೋತ್ರಾ ।
ಸಗುಣರೂಪ ಈಶನುಪಲಕ್ಷಣ ಸುರವರ ಗಾತ್ರಾ ।೩।
ಅಜರಾಮರ ಪದವಿಯೊ ಕೊಡುವ ಸ್ಥಾನ ಸುಪವಿತ್ರಾ
ನಿಜಾನಂದ ಕಂದ ಗುರುಲಿಂಗ ಜಂಗಮರ ಕ್ಷೇತ್ರಾ ।೧ ।ಚೌಕ।"[೨೪]

ಬಿಜಾಪೂರ ಜಿಲ್ಲೆಯ ಇಂಚಗೇರಿ ಕ್ಷೇತ್ರ ಜಂಗಮರು ವಾಸಿಸಿರುವ ಪವಿತ್ರ ಸ್ಥಳ, ಅಜ್ಞಾನಿಗಳನ್ನು ಉದ್ಧರಿಸಿ ಭಕ್ತಿರಿಗೆ ಸುಜ್ಞಾನವನ್ನು ನೀಡಿದ ಪವಿತ್ರ ತಾಣ. ಅಮರ

ಪದವಿಯನ್ನು ನೀಡಿ ಅವರ ಜೀವನವನ್ನು ಪಾವನಗೊಳಿಸಿದವರು ನಿಜಾನಂದ ಕಂದ ಗುರುಲಿಂಗ ಜಂಗಮರು. ಅಲ್ಲದೇ ಈ ಕ್ಷೇತ್ರದಲ್ಲಿ ನಿತ್ಯ ಅನ್ನದಾಸೋಹವೇ ನಡೆಯುತ್ತದೆ.

"ಅನ್ನ ಸಂತರ್ಪವು ನಿತ್ಯ ಮಾಡಿದರು ಅನ್ನಹೋತ್ರಾ
ಪುಣ್ಯ ಪ್ರಭಾವ ತೋರಿದ ಲೋಕದೊಳಗೆ ವಿಚಿತ್ರಾ।"[೨೫]

ಹೀಗೆ ಅಲಭೈರಿ ಈ ಕ್ಷೇತ್ರದ ಮಹಿಮೆಯನ್ನು ಕೊಂಡಾಡಿದ್ದಾನೆ. 'ಸಾಧು ಶಿರೋಮಣಿ' ಈ ಲಾವಣಿ ಪದದಲ್ಲಿ ಅಲಭೈರಿ ಹಾರೂಗೇರಿ ಲೀಲಾಮಠದ ಅಧಿದೈವ ಶ್ರೀ ಚನ್ನವೃಷಭೇಂದ್ರನ ಉಪದೇಶ ಕೇಳಲು ಆಹ್ವಾನಿಸುತ್ತಾನೆ.

"ಭೇದ ಕೆಡಿಸುವಂಥ ಸಾಧನ ನಾಲ್ಕನು ಸಾಧಿಸಿಕೊಳ್ಳಲು
ಬರತೀರ್ಯಾ ಇಲ್ಲೆ ಇರತೀರ್ಯಾ ।೧।
ಹಲವು ಮತಗಳ ಹಗರಣವನು ಬಿಟ್ಟು
ಸಲೆಭಕ್ತಿಯಿಂದಲಿ ಬರತೀರಾ ಇಲ್ಲೆ ಇರತೀರಾ ।೨।
ಬಲವುಳ್ಳ ಹಾರೂಗೇರಿ ಒಡೆಯ ಅಲಭೈರಿ
ಒಡಗೂಡಿ ಛಲದಿಂದ ಹೋಗುವನು ಬರತೀರಾ
ಇಲ್ಲೆ ಇರ ತೀರ್ಯಾ ।೩।"[೨೬]

ಹಾರೂಗೇರಿಯ ಜನರ ಜೀವನ ಪಾವನಗೊಳಿಸಿದ ಚನ್ನವೃಷಭೇಂದ್ರನನ್ನು ಬೇಡಿಕೊಂಡರೆ ಬೇಕಾದ ಫಲವನ್ನು ಕೊಡುತ್ತಾನೆ ಎಂಬುದು ಜನರ ನಂಬಿಕೆ. ಅಂತಹ ಸದ್ಗುರನಾಥನ ಉಪದೇಶ ಕೇಳಲು ಜಾತಿ-ಮತ ಎಂಬ ಭೇದವಿಲ್ಲ. ಭಕ್ತಿಯಿಂದ ಬೇಡಿಕೊಂಡರೆ ಉನ್ನತ ಸ್ಥಾನ ದೊರೆಯುವುದು ಎಂಬ ನಂಬಿಕೆಯಿದೆ.

'ಶಾರದಾಸ್ತುತಿ" ಲಾವಣಿಯಲ್ಲಿ ಅಲಭೈರಿ ವಿದ್ಯಾದೇವತೆಯಾದ ಶಾರದೆಯನ್ನು ಗುಣಗಾಣಿಸಿದ್ದಾನೆ.

"ಶ್ರೀ ಶಾರದಾಂಬೆ ಗುಣವತಿ ।ಪ।
ವೇದಾಗಮ ಶ್ರುತಿ
ಮಾಡಿದೆವು ಸ್ತುತಿ ಸರಸ್ವತಿ ।೧।
ಗಣನಾಥ ಬರದಂಥ ಆ ಕೃತಿ
ವಿಸ್ತಾರವಾದ ಹಾರೂಗೇರಿ ಗ್ರಾಮ ಶುಭಮತಿ।"[೨೭]

ವಿಸ್ತಾರವಾದ ಹಾರೂಗೇರಿ ಗ್ರಾಮ ಶಾರದೆಯಿಂದ ಶೋಭಿಸುವುದು. ಅವಳು ಗುಣವತಿ; ವೇದ, ಆಗಮ, ಶ್ರುತಿಬಲ್ಲವಳೆಂದು ಅವಳನ್ನು ಸ್ತುತಿಸುವನು. ಆದಿಶಕ್ತಿ ಲಾವಣಿಗಳಲ್ಲಿ ಅಲಭೈರಿ ಎಲ್ಲಮ್ಮನನ್ನು ಸ್ತುತಿಸಿರುವನು.

"ನೋಡ ನಮ್ಮ ಶಕ್ತಿ ಮಾಡಿದ ಲೀಲಾ ನಾಡವಳಗೆ ಮೇಲಾ
ಬಂಡ ದೈತ್ಯರ ಚಂಡಾಡಿ ಬಿಟ್ಟಳು ಕೂಡಿ ಕೋಪ ಜ್ವಾಲಾ ।೧।
ಹರಿಹರ ಬ್ರಹ್ಮರು ನರಸುರ ಮುನಿಗಳು ವರಣಿಸಿ ಇವರೆಲ್ಲಾ
ಮರೆಯದೆ ಪೂಜಿಸಿ ವರವ ಬೇಡಿಕೊಂಡು ಗುರುಭಕ್ತಿಯ ಸಲ್ಲಾ ।೨।"[೨೮]

ಹರಿಹರ ಬ್ರಹ್ಮರು ನರಸುರ ಮುನಿಗಳು ಆದಿಶಕ್ತಿಯ ಮಹಿಮೆಯನ್ನು ಗುಣಗಾನಿಸುತ್ತಿದ್ದಾರೆ. ಬಂಡ ದೈತ್ಯರನ್ನು ಚಂಡಾಡಿದ್ದಾಳೆ.

ಆದಿನಾಥ ಜಿನಪತಿ ಎರಡು ಲಾವಣಿಗಳಲ್ಲಿ ಕವಿ ಆದಿನಾಥನಲ್ಲಿ ಭಕ್ತಿಯ ಆರ್ತ ಧ್ವನಿಯನ್ನು ತೋಡಿಕೊಂಡಿರುವನು.

"ಆದಿನಾಥ ಅರಹಂತ ಶ್ರೀಜನ ಭಗವಂತಾ
ಜಗದೊಳು ಅನಂತ ಮಹಿಮಾ ತೋರಿದ ದೇವಾ ।
ಭಕ್ತರಿಗೆ ಮುಕ್ತಿಯ ವೈಭವಾ ॥೧॥"
ಸ್ಮರಿಸುವೆ ನಿಮ್ಮ ನಾಮ ಪೂರ್ಣ ಭಕ್ತಿ ಇಟ್ಟು
ಪ್ರೇಮ ಹಾರೂಗೇರಿ ಎಂಬ ಗ್ರಾಮದೊಳಗಿರುವ
ಜಿನದೇವಾ । ಅಲಭೈರವ ಹೇಳಿದರನುಭಾವಾ ।೨।"[೨೯]

ಆದಿನಾಥನ ಮಹಿಮೆ ಅನಂತ ಭಕ್ತರಿಗೆ ಮುಕ್ತಿಯ ದಾರಿ ತೋರಿದವನು. ಸ್ಮರಿಸುವೆ ನಿನ್ನಲ್ಲಿ ಅಚಲ ಭಕ್ತಿಯಿಟ್ಟು ತಪ್ಪದೆ ಮಾಡುವೆನು ನಿನ್ನ ಸೇವಾ ಅದಕ್ಕಾಗಿ ಕೃಪೆ ತೋರಲು ಬೇಡಿಕೊಳ್ಳುವನು.

"ಜಿನಪತಿ" ಈ ಲಾವಣಿಯಲ್ಲಿಯೂ ಸಹ ಅಲಭೈರಿ ಜಿನನನ್ನು ಬೇಡಿಕೊಳ್ಳುವ ಪ್ರಸಂಗವಿದೆ.

"ಆದಿ ದೇವ ದೇವ ಜಗಪತಿ –ಮಾಡುವೆನು ಸ್ತುತಿ
ಕೇಳೊ ವಿನಂತಿ। ಜಿನಪತಿ ।೧।
ಗುರು ಚನ್ನವೃಷಭ ಭಾರತಿ ಶಿಷ್ಯರಿಗೆ ಗತಿ
ಕುಡರಿ ಸಂಪತಿ । ಜಿನಪತಿ ।೨।"[೩೦]

ಜಗದಾದಿ ದೇವನಾದ ಜಿನಪತಿ ವಿನಂತಿಯಿಂದ ಬೇಡಿಕೊಳ್ಳುವೆನು. ಹಾರೂಗೇರಿಯ ಚನ್ನವೃಷಭೇಂದ್ರರರ ಶಿಷ್ಯರಿಗೆ ಸಂಪತ್ತನ್ನು ಸುಖದ ದಾರಿಯನ್ನು ಕೊಡಬೇಕೆಂದು ವಿನಂತಿಸಿಕೊಳ್ಳುವನು.

ಈ ರೀತಿಯಾಗಿ ಧಾರ್ಮಿಕ ಅಥವಾ ಸ್ತೋತ್ರ ಲಾವಣಿ ಎನ್ನುವುದು ದೇವರು ಅಥವಾ ದೈವವನ್ನು ಕುರಿತು ಮಾಡುವ ಕ್ರಿಯೆ. ಭಕ್ತನಾದವನು ಪರಮಾತ್ಮನನ್ನು ಭಕ್ತಿ ಪೂರ್ವಕವಾಗಿ ಬೇಡಿಕೊಳ್ಳುವನು. ಇದು ಪ್ರತಿಯೊಂದು ಆಸ್ತಿಕ ಧರ್ಮದಲ್ಲಿ ಕಂಡು ಬರುತ್ತದೆ. ಅದರಲ್ಲಿ ಹಿಂದೂ ಧರ್ಮದಲ್ಲಿ ಅತಿ ಹೆಚ್ಚು. ಹಾಗೆಯೇ ಅಲಭೈರಿ ಸಹ ಅನೇಕ ಧಾರ್ಮಿಕ ಲಾವಣಿಗಳನ್ನು ರಚಿಸಿ ತಮ್ಮ ಅಧಿದೈವಗಳನ್ನು ಬೇಡಿಕೊಂಡಿರುವನು.

೩. ಸಪ್ತಧಾತೋತ್ಪತ್ತಿಯ ಲಾವಣಿಗಳು :

"ಸಪ್ತಧಾತೋತ್ಪತ್ತಿ" ಲಾವಣಿಯಲ್ಲಿ ಅಲಭೈರಿ ಕಾಯ ಹುಟ್ಟಲಿಕ್ಕೆ ಕಾರಣವಾದ ಸಪ್ತಧಾತುಗಳ ವರ್ಣನೆಯನ್ನು ಮಾಡಿರುವನು. ಮತ್ತೆ ಒಂಬತ್ತು ತಿಂಗಳ ಶರೀರ ಯಾವ ತಿಂಗಳಲ್ಲಿ ಯಾವ-ಯಾವ ಆಕಾರವನ್ನು ಪಡೆಯುತ್ತಿದೆ ಎಂಬುದನ್ನು ಅತೀ ಸ್ಪಷ್ಟವಾಗಿ ಅರ್ಥೈಸಿರುವನು.

"ಪೂರ್ವದಲ್ಲಿ ಪರವಸ್ತು ಅದರೊಳು ಸತ್ತು ಬಿತ್ತು ।
ಪ್ರಕೃತಿ ಪುರುಷ ದ್ವೈತಾದ್ವೈತ ಭೇದಗೊಂಡಿತು ।
ಪೂರ್ಣ ಲಕ್ಷರೂಪ ಪರಮಾತ್ಮನ ಲಕ್ಷಣ ತೋರಿತು ।
ಒಂದೆ ಸ್ವರೂಪ ಉಪಾದಿಯಿಂದೆ ನಾನಾ ಸೋಂಗ ಧರಿಸಿತು।
ಮೂಲ ಪ್ರಕೃತಿಯಿಂದೆ ಮಹಾ ಪಂಚಭೂತಗಳು ಹುಟ್ಟಿತು।
ಭೂತದೊಳು ಸರ್ವತರದ ಅನ್ನ ಹುಟ್ಟಿತು ।
ಅನ್ನದರ ಸವೆ ತಾಯಿ ತಂದೆಯಲ್ಲಿ ಪಚನ ಹೊಂದಿತು ।
ಮುಂದೆ ಸಪ್ತದಿವಸಕ್ಕೆ ಸಪ್ತಧಾತು ರಕ್ತಮಾಂಸ ಹುಟ್ಟಿತು।"[೨೧]

ಪೂರ್ವದಲ್ಲಿ ಒಂದು ವಸ್ತು ಸತ್ತುಬಿದ್ದು ಅದರಿಂದ ದ್ವೈತ-ಅದ್ವೈತ ಭೇದಗೊಂಡಿತು. ಅನಂತರ ಪರಮಾತ್ಮನ ಪೂರ್ಣ ಸ್ವರೂಪ ಪಡೆದು, ನಾನಾ ರೂಪ ಧರಿಸಿತು. ಮೂಲ ಪ್ರಕೃತಿಯಿಂದಲೆ ಪಂಚಭೂತಗಳು ಹುಟ್ಟಿದವು. ಪಂಚಭೂತಗಳಿಂದ ಅನ್ನ ಹುಟ್ಟಿತು. ಅನ್ನದಿಂದ ತಾಯಿ-ತಂದೆಯಲ್ಲಿ ಪಚನ ಹೊಂದಿ ಸಪ್ತ ದಿವಸಕ್ಕೆ ಸಪ್ತಧಾತುಗಳು ಉದಯಿಸಿತು. ಸಪ್ತಧಾತುಗಳಲ್ಲಿಯೇ ಒಂದಾದ ರೇತು ಸ್ತ್ರೀ ಗರ್ಭದಲ್ಲಿ ಸಹಜವಾಗಿ ಕೂಡಿ ಅಲ್ಲಿ ಪಿಂಡ ಬೆಳೆಯಲಿಕ್ಕೆ ಹತ್ತಿತು.

"ಧಾತು ಹೆಚ್ಚಿದರೆ ಗಂಡು ರಕ್ತ ಹೆಚ್ಚಿದರೆ ಹೆಣ್ಣು
ಎರಡು ಸಮಾನವಾದರೆ ಷಂಡವಾಗಿ ಹುಟ್ಟಿತು ।
ಮೊದಲಿನ ದಿವಸಕ್ಕೆ ಆಲದಾಕೃತಿ ಆಗಿ ನಿಂತಿತು ।
ಐದು ದಿವಸಕ್ಕೆ ಬಬ್ಬುಳಿಕೆ ಎನಿಸುತ್ತ ಮತ್ತುಹೊಂದಿತು ।

ಮುಂದೆ ಏಳು ದಿವಸಕ್ಕೆ ಘನದಾಕೃತಿ ಹೊಂದಿತು ।
ಹತ್ತನೆಯ ರಾತ್ರಿಗೆ ಪಿಂಡಾಕಾರ ಕಂಡಿತು ।
ದಂಡಾಕೃತಿಯಂತೆ ಹದಿನೈದು ರಾತ್ರಿಗೆ ತಾಳೀತು ।"[೩೨]

ಈ ರೀತಿ ವೈಜ್ಞಾನಿಕ ಜ್ಞಾನದ ಅರಿವನ್ನು ಹೊಂದಿದ್ದನು. ಹಿಂದಿನ ಜನಪದರು ಅನುಸರಿಸಿದ ಕ್ರಮವೇ ಇಂದಿನ ವಿಜ್ಞಾನ ಪ್ರಗತಿಗೆ ಸಾಧ್ಯವಾಯಿತು ಎಂಬುದನ್ನು ಅರಿತುಕೊಳ್ಳಬಹುದು.

[ಚ್ಯಾಲ] "ಒಂದು ತಿಂಗಳಿಗೆ ತಲೆ ಬುರುಡಿ ಆಗಿ ತಯ್ಯಾರಾ ।
ಒಂದು ತರದ ವಿಚಿತ್ರ ಆಕಾರಾ ।೧।
ಎರಡು ತಿಂಗಳಿಗೆ ಹುಟ್ಟಿದವು ಭುಜಗಳು ಪೂರಾ ।
ಮೂರು ಮಾಸಕ್ಕೆ ಹೊಟ್ಟೆಯಾಕಾರಾ ।೨।
ನಾಲ್ಕು ತಿಂಗಳಿಗೆ ಪಾದ ಸರ್ವಾಂಗದ ವಿಸ್ತಾರಾ।
ಐದು ಮಾಸಕ್ಕೆ ರೋಮಾವಳಿಯ ಸರಾ ।೩।
ಆರು ತಿಂಗಳಿಗೆ ಎಲುಬು ಉತ್ಪತ್ತಿಯಾಗುವದು ಮುಂದೆ
ಏಳ ತಿಂಗಳಿಗೆ ಸೇರುವುದು ಪ್ರಾಣಾ । ಚೇತನ ಭಾವದೊಡ
ಗೂಡಿ ನಡೆಸುವದು ಚಲನಾ ।
ಅದುವೆ ಜೀವನೆನಸಿಕೊಂಡಿತು।"[೩೩]

ಈ ರೀತಿಯಾಗಿ ಪಿಂಡ ಒಂದೊಂದು ತಿಂಗಳಲ್ಲಿ ಪಡೆದ ರೂಪವನ್ನು ಅಲಭೈರಿ ವಿವರಿಸುತ್ತ

"ಎಂಟನೆಯ ತಿಂಗಳದೊಳು ತನಗಲ್ಲಿ
ವದಗಿದ ಪ್ರಸಂಗದಾ ಸ್ಮರಣವು ಆಗಿ ಮುಂದೆ।
ಬಹು ಸೋಜಿಗವೆಂದು ಅಳಲುವುದು ಭ್ರಮೆಯಿಂದೆ ।
ಅಲ್ಲಿಂದ ಹೊರಬಿದ್ದ ಬರುವಂಥಾ ದ್ಯಾವ ಮಾರ್ಗ ತೋರದೆ ।
ಒಂಭತ್ತು ತಿಂಗಳ ಬಳಿಕ ಕಾಲತ್ರಯ ಜ್ಞಾನವಾಗಿ
ಸಕಲ ವಿಷಯಗಳು ಕೂಡುವವು ಭಾದೆ ।
ಹೀಗೆ ತಿಳಿದು ಶಿವನಾಮ ಸ್ಮರಣೆ ನಡೆಸಿತು ಬಿಡದೆ ।"[೩೪]

ಹೀಗೆ ಜೀವಾತ್ಮದ ರೂಪ ತಾಳಿತು. ಆದರೆ ಅದು ಹೊರಗೆ ಬರುವ ದಾರಿ ಕಾಣದೆ ಶಿವನಾಮ ಸ್ಮರಣೆಯನ್ನು ಬಿಡದೆ ನಡೆಸಿತು. ಕೊಡದಲ್ಲಿಯ ಕುಂಭಳ ಕಾಯಿಯನ್ನು ಹೇಗೆ

ಹೊರ – ತೆಗೆಯುವುದು ಎಂಬ ಚಿಂತೆಯಲ್ಲಿದ್ದಾಗ ಪರಮಾತ್ಮನು ಅದಕ್ಕೊಂದು ಮಾರ್ಗವನ್ನು ಸೂಚಿಸಿರುವನು.

"ಹೇಳಲಾರದಷ್ಟು ಹೇಸಿಕೆಯೊಳಗೆ ಕೂತು ಜೀವಾತ್ಮನು
ಶೋಚನೆಯಗೊಂಡು ಅನೇಕ ಪ್ರಕಾರದಿಂದೆ ।
ಹೊರಬಿದ್ದ ಬಂದಿದ ದಂತಾನ ಇನ್ನು ಸಾಕು ಹುಟ್ಟುವದೆ ।
ಹಿಂದ ಮುಂದಿನ ಜನ್ಮದೊಳಗಿನ ದು:ಖದ ಅನುಭವದಿಂದೆ ।
ಇನ್ನೆಂದು ಇಂಥಾ ಗರ್ಭದಿಂದೆ ।
ಮರ ಮರಳಿ ಹುಟ್ಟಿ ಬಂದರೆ
ನಾಚಿಕೆಗೇಡಿ ಯಾರು ನನ್ನ ಮುಂದೆ ।"[೨೫]

ತಾಯಿಯ ಗರ್ಭದಲ್ಲಿ ಜೀವಾತ್ಮನು ಅನುಭವಿಸಿದ ನೋವು ಅನನ್ಯ. ಅದಕ್ಕಾಗಿ ಎಂದೆಂದಿಗೂ ಇಂಥ ಗರ್ಭದಿಂದ ಮರಳಿ ಹುಟ್ಟಲಾರೆನು ಎಂದು ದು:ಖಿಸುವುದು.

"ಹೊರಬೀಳುವ ಸಮಯ ಬರಲು । ಕೋಟಿಸಿಡಿಲು ಆವಾಜದಂತೆ
ಪ್ರಸೂತಿ ವಾಯುವೆಂಬ ಗಾಳಿ ಹೊಡೆತದಿಂದೆ ।
ಎಚ್ಚರ ತಪ್ಪಿತಾಗ ಪೂರ್ವ ಸ್ಮರಣಾ ಏನೂ ಉಳಿಯದೆ ।
ತಲೆಯ ಕೆಳಗೆ ಮಾಡಿ ಬಿದ್ದ ಯೋನಿಯ ರಂಧ್ರದಿಂದೆ।
ಬಿದ್ದ ಬಳಿಕ ಠ್ಯಾ ಅಂದ ಜೀವನು ತ್ರಾಸ ತಾಳಲಾರದೆ ।
ಪರಾಧೀನದಲ್ಲಿ ಅನ್ನ ಪಾನಂಗಳಿಂದೆ ।
ಬೆಳೆದನು ತನುವೆ ತಾನೆಂಬ ಮರವಿನೊಳಗೆ ಬರಿದೆ ।"[೨೬]

ಹೀಗೆ ಅಲಭ್ಯೆರಿ ಧಾತು–ರಕ್ತ ಸಂಯೋಗದಿಂದ ಪಿಂಢಾಕೃತಿ ಪಡೆದು ನಂತರ ಜೀವವಾಗಿ ಅದು ಪಟ್ಟ ಪಾಡು ಹಾಗೂ ಭೂಮಿಗೆ ಇಳಿದ ಪ್ರಸಂಗಗಳನ್ನು ಮಾರ್ಮಿಕವಾಗಿ ವಿವರಿಸಿದ್ದಾನೆ.

ಮತ್ತೆ ಅಲಭ್ಯೆರಿ ಅನೇಕ ಅವಸ್ಥೆಯಿಂದ ಬಂದ ನರಜನ್ಮ ಪರಮಾತ್ಮನ ಅನುಗ್ರಹ ಇಲ್ಲದಿದ್ದರೆ ಅದರ ಜನ್ಮ ಸಾರ್ಥಕವಾಗುವುದಿಲ್ಲ. ಅದಕ್ಕಾಗಿ ಪರಮಾತ್ಮನ ನಾಮಸ್ಮರಣೆ ಮಾಡುತ್ತ ಕಾಲ ಕಳೆದರೆ ಶರೀರಕ್ಕೆ ಮುಕ್ತಿ ಪ್ರಾಪ್ತವಾಗುತ್ತದೆ ಎಂದು ಸಾರುತ್ತಾನೆ.

[ಚಾಲ] "ಪಂಚಭೂತದೊಳಗೆ ತೋರುವಂಥ ಜಗದವಿಸ್ತಾರಾ
ದೊಡ್ಡದಿರುವದು ಅಪರಂಪಾರಾ ।೧।
ಇರುವಿ ಮೊದಲ ಮಾಡಿ ಬ್ರಹ್ಮನ ಪರ್ಯಂತ ಸಂಸಾರಾ
ಮೀರಿ ಹೋಗಲಿಲ್ಲ ಆಗಿ ಜೇರಾ ।೨।

ನರಜನ್ಮ ಬಂದು ಪರಮಾತ್ಮನರಿಯದಿರೆ ಘೋರಾ।
ಹೊಂದುವದು ಜೀವನು ಪಾಮರಾ ।೩।"[೩೭]

ಪಂಚಮಹಾಭೂತಗಳಿಂದ ಆದ ಜಗತ್ತು, ವಿಸ್ತಾರವಾದದ್ದು. ಇಲ್ಲಿ ಪರಮಾತ್ಮನ ಅನುಗ್ರಹ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಸಹ ಅಲುಗಾಡಲಿಕ್ಕೆ ಸಾಧ್ಯವಿಲ್ಲ. ಇಂತಹ ಪವಿತ್ರ ಸ್ಥಳದಲ್ಲಿ ಜನಿಸಿದ ನರರು ಪರಮಾತ್ಮನನ್ನು ಅರಿಯದಿದ್ದರೆ ವ್ಯರ್ಥವಾಗಿ ಹೋಗುವರು ಎಂಬುದು ಕವಿಯ ವಿಚಾರ. ಮುಕ್ತಿಯ ಸ್ಥಾನವೆಂದೇ ಪ್ರಸಿದ್ಧವಾದ ಹಾರೂಗೇರಿಯಲ್ಲಿ ಅಚಲವಾದ ನಂಬಿಕೆಯಿಂದ ಶಿವನನ್ನು ನೆನೆದರೆ ಈ ದೇಹವು ಧನ್ಯವಾಗುವುದು ಎಂದು ಕವಿ ಒತ್ತಿ ಹೇಳಿರುವನು.

"ಬೀಜಾ" ಶೀರ್ಷಿಕೆ ಹೊಂದಿದ ಲಾವಣಿಯಲ್ಲಿ ಅಲಭೈರಿ ಗಂಭೀರವಾದ ವಿಷಯಗಳನ್ನು ಕುರಿತು ಚರ್ಚಿಸಿದ್ದಾನೆ. ಎಲ್ಲಕ್ಕೂ ಮೂಲವಾದದ್ದು ಬೀಜವೇ ಎಂಬುದು ಅಲಭೈರಿಯ ಅಭಿಪ್ರಾಯ.

[ಚ್ಯಾಲ] "ಗುರುವಿಗೆ ಶಿಷ್ಯ ಬೀಜಾ॥ ಶಿಷ್ಯರಿಗೆ ಗುರುವು ಬೀಜಾ ॥೧॥
ಸತ್ಯರಿಗೆ ತಪವೆ ಬೀಜಾ । ಸದಾಚಾರ ಸಾಧು ಬೀಜಾ ॥೨॥
ಶ್ರವಣಕ್ಕೆ ಶಾಸ್ತ್ರ ಬೀಜಾ । ಶಾಸ್ತ್ರಕ್ಕೆ ಶ್ರವಣ ಬೀಜಾ ॥೩॥
ಬ್ರಹ್ಮ ಮಾಯೆಕೂಡಿ ಮಹೇಶ್ವರ ಹುಟ್ಟುವಾಗ ಬೇಕಾದ ಬೀಜಾ ॥
ಶಿವನೊಳು ಶಕ್ತಿ ನಿರ್ಮಾಣಾಗುವಾಗ
ಇಚ್ಛಾ ಮಾತ್ರ ಕಾರಣ ಬೀಜಾ ॥
ಅಹಂಕಾರ ಕೂಡಿ ಜೀವ ನೆನಸಿಕೊಂಡ
ಅನಾದಿಗೆ ಅಜ್ಞಾನವೇ ಬೀಜಾ ॥
ಆದಿ ಅನಾದಿಗೆ ಮೀರಿದ ಸದ್ಗುರು
ಪಾದ ಮುಟ್ಟಿ ಪಾರಾದ ಬೀಜಾ॥"[೩೮]

ಹೀಗೆ ಬೀಜದ ಮಹತ್ವ ಕುರಿತು ವಿವರಿಸುತ್ತ;

"ಮುಕ್ತಿಗೆ ವಿರತಿ ಬೀಜಾ । ವಿರಕ್ತಿಗೆ ವಿವೇಕ ಬೀಜಾ ।
ಅವಿವೇಕ ಅಜ್ಞಾನದ ಬೀಜಾ। ಭಕ್ತರಿಗೆ ದೇವ ಬೀಜಾ।
ದೇವರಿಗೆ ಭಕ್ತ ಬೀಜಾ
[ಕೂಡ್ನುಡಿ] ಒಂದರಲ್ಲಿ ಎರಡಾಗಿ ಅದರೊಳು
ಅನಂತ ರೂಪಾದದ್ದು ಬೀಜಾ ।
ಚೇತನಾ ಅವಚೇತನ ರೂಪ ಜಗವಿದು
ಪರಮೇಶ್ವರ ನಿರ್ಮಿತ ಬೀಜಾ।

ಒಂದೇ ಬೀಜದೊಳು ಬಹು ಬೀಜಾದದ್ದು
ಬೀಜಕ್ಕೆ ಮೂಲ ಪ್ರಕೃತಿ ಬೀಜಾ।
ಬೀಜ ಇದ್ದು ಇಲ್ಲಂತ ಹೇಳುತ್ತಿ
ಇದ್ದಲ್ಲೆ ಇಲ್ಲಂದಿಯೊ ಬೀಜಾ ।೧।
ಬೀಜ ಅಬೀಜಕ ಸಾಕ್ಷಿ ಸದ್ಗುರು
ಗುಪ್ತ ರೂಪಕೆ ತೋರಿದ ಬೀಜಾ।
ಅಲಬೈರವ ತಾ ಸಾರಿ ಹೇಳಿದನು
ಸಹಜಾನಂದ ಧರಿಗೂಳಿಯ ಬೀಜಾ ।೨।
ವರದ ಹಾರೂಗೇರಿ ಪುರದೊಳ್ಮೆರೆಯುವ
ಗರ್ದಿಮ್ಯಾಳ ಸದಾಶಿವ ಬೀಜಾ।
ಸದಾಶಿವ ವಲ್ಲಭ ಸದ್ಗುರು ಚನ್ನನ ಹಸ್ತದಿಂದಾಸ್ತಿಕವಾದ ಬೀಜಾ।
[ಚ್ಯಾಲ] ಮರವಿಗೆ ಅರವು ಬೀಜಾ। ಶರಣರಿಗೆ ಶಾಂತಿ ಬೀಜಾ ।೧।
ಶುದ್ಧ ಭಾವ ಬ್ರಹ್ಮದ ಬೀಜಾ। ಬದ್ಧ ಮೋಕ್ಷ ಮತ್ತು ಕಲ್ಪಿತ ಬೀಜಾ।೨।
ಕಲ್ಪಿತ ಕವಿಗೆ ಬೀಜಾ । ಕವಿಗಳಿಗೆ ಕೇಳಾಂವ ಬೀಜಾ ।೨।"[೫೯]

ಹೀಗೆ ಕವಿ ಬೀಜದ ಮಹತ್ವವನ್ನು ಹೇಳುತ್ತ ವಿವೇಕಕ್ಕೆ ಮುಕ್ತಿಗೆ, ಭಕ್ತರಿಗೆ, ದೇವರಿಗೆ, ಚೇತನ, ಅಚೇತನ ಮತ್ತು ಕವಿಗೆ ಹೀಗೆ ಪ್ರತಿಯೊಂದು ವಸ್ತುವಿಗೂ ಬೀಜದ ಅವಶ್ಯಕತೆಯನ್ನು ಪಟ್ಟಿ ಮಾಡಿರುವುದನ್ನು ಕಾಣುತ್ತೇವೆ.

೪. ಹರದೇಶಿ ನಾಗೇಶಿ ಲಾವಣಿಗಳು :

ಗಂಡು ಹೆಣ್ಣಿನ ಕುರಿತಾದ ಲಾವಣಿಗಳನ್ನು ಹರದೇಶಿ- ನಾಗೇಶಿ ಪದಗಳೆಂದು ಕರೆಯುವರು. ತುರಾಯಿ ಸಂಕೇತ ಗಂಡಿನದು, ಕಲ್ಗಿ ಸಂಕೇತ ಹೆಣ್ಣಿನದು. ಇವು ಸವಾಲ್- ಜವಾಬ್ ಮಾದರಿಯಲ್ಲಿ ಇರುವುದರಿಂದ ಇವುಗಳನ್ನು ಸವಾಲ್-ಜವಾಬ್ ಪದಗಳೆಂದು ಕರೆಯುವರು. ಇಂತಹ ಸಾಕಷ್ಟು ಲಾವಣಿಗಳನ್ನು ಕವಿ ಅಲಭೈರಿ ರಚಿಸಿರುವನು. ನಡತೆಗೆಟ್ಟ ಹೆಣ್ಣು, ಹೆಣ್ಣು-ಗಂಡು ಒಂದು, ಸ್ತ್ರೀ ಕುಲದ ಶ್ರೇಷ್ಠತೆ. ಗಂಡಿನ ವರ್ಣನೆ ಹೀಗೆ ನಾನಾ ರೂಪದಲ್ಲಿವೆ. ಇವೆಲ್ಲವೂ ಅಪ್ರಕಟಿತ.

ಲಾವಣಿ [೫೨] ರಲ್ಲಿ ಅಲಭೈರಿ ಹಲವಾರು ಆಧಾರಗಳನ್ನು ಕೊಟ್ಟು ಗಂಡಿನ ಮಹಿಮೆಯನ್ನು ಸಾಧಿಸಲು ಪ್ರಯತ್ನ ಪಡುವನು.

"ಹೆಣ್ಣ ಹೆಚ್ಚ ಮಾಡಿ ಹೇಳುವದಲ್ಲಲ್ಲಾ ಸ್ವಲ್ಪ ಕೇಳೋತಮ್ಮಾ
ಅಡಗಿಯ ಮನಿ ಬಿಟ್ಟ ಹೊರಗ ಬರುವದಕೆ
ಬೇಕ ನೋಡ ಗಂಡಿನ ಹುಕಮಾ ॥ಪಲ್ಲ॥"[೬೦]

ಹೆಣ್ಣು ಸಣ್ಣವಳಿದ್ದಾಗ ತವರು ಮನೆಯಲ್ಲಿ ತಾಯಿ-ತಂದೆಯರ ನದರಾ, ಮದುವೆಯಾದ ಮೇಲೆ ಗಂಡನ ಕೈಯಲ್ಲಿ, ಮುಪ್ಪಿನ ಕಾಲಕ್ಕೆ ಮಕ್ಕಳ ಆಜ್ಞೆಯಲ್ಲಿ ಈ ರೀತಿಯಾಗಿ ಹೆಣ್ಣಿನ ಜನ್ಮಕ್ಕೆ ಸ್ವತಂತ್ರವೆಂಬುದೇ ಇಲ್ಲ.

[ಚಾಲ] "ಸ್ತ್ರೀ ಕೈಯೊಳು ಕಾರಭಾರ ಕೊಟ್ಟರುಳಿಯಲಿಲ್ಲ ಬಾಕಿ
ಅದಕೆಲ್ಲಿಂದ ಬಂದೀತ ತಿಳವಳಿಕಿ ॥೧॥
ಸ್ತ್ರೀ ಬುದ್ಧಿ ಪ್ರಳಯದಾಂಗೈತಿ ನೋಡಲು ತಾಳಬಂದಿ ಹಾಕಿ
ನಂಬಿದವರು ತಿಂದ್ರೋ। ಧಕ್ಕಾಮುಕ್ಕಿ ॥೨॥"[೪೧]

ಪೌರಾಣಿಕ ವಸ್ತುವನ್ನು ತೆಗೆದುಕೊಂಡು ಗಂಡಿನ [ಹರದೇಶ] ಪಕ್ಷವನ್ನು ಹೆಚ್ಚು ಮಾಡಿ ಹೇಳಲು ಯತ್ನಿಸಿರುವನು. ಅರಣ್ಯದಲ್ಲಿದ್ದಾಗ ಜಿಂಕೆಯ ಮರಿಯನ್ನು ಕಂಡ ಸೀತೆ ಅದನ್ನು ಬಯಸಿ ಶ್ರೀರಾಮನನ್ನು ಕಳುಹಿಸುವಳು. ರಾಮನು ಜಿಂಕೆಯ ಬೆನ್ಹತ್ತಿ ಹೋಗುವನು. ಬಹಳ ಹೊತ್ತಾದರೂ ಬಾರದೇ ಇರುವದನ್ನು ಕಂಡ ಸೀತೆಗೆ ಲಕ್ಷ್ಮಣನಿಗೆ ಹೋಗಲು ಹೇಳುವಳು. ಆಗ ಲಕ್ಷ್ಮಣನು.

"ಲಕ್ಷ್ಮಣ ಹೇಳಿದ ಸೀತಾಜಾನಕಿಗೆ ಗಾಬರ್ಯಾಗದ ತುಸುಹಿಡಿಖಬರಾ
ಮಂಡಲ ಬಿಟ್ಟನೀ ಹೊರಗೆ ಬಂದರೆ ಸದ್ಯಕ್ಕಾಗುವುದು ಬಲುಘೋರಾ।
[ಚಾಲ] ಬಾಯಿಗೆ ಬಂದಾಂಗ ಬೈದಾಳವಾಗ ಹಟಕಾಸಿ
ಬಿಟ್ಟ ಹೋದ ಲಕ್ಷ್ಮಣನು ಸಂಶಿ ॥೧॥
ಮಹಾಕಪಟ ರಾವಣನು ಓಡಿ ಬಂದ ಅಡರಾಶಿ
ಹೆಗಲಮೇಲೆ ಒಕ್ಕೊಂದಾಕಿನ ಎಬಿಸಿ ೨।
ಹೆಂಣ ಭಾರ್ಗಿ ಲಕ್ಷ್ಮಣನ ಮಾತು ಕೇಳಲಿಲ್ಲ ಹೇಸಿ
ಅನೇಕ ಮಂದಿದ ಮಾಡಿತು ಜೀವ ಘಾಸಿ ॥೩॥"[೪೨]

ಯಾವಾಗಿದ್ದರೂ ಹೆಣ್ಣಿನ ಜಾತಿಗೆ ಅಕಲಕಮ್ಮಿ ಇರುವುದು. ಅವಳು ಯಾವಾಗಲೂ ಗಂಡಿನ ಸಹಾಯ ಪಡೆಯಲೇಬೇಕು.

"ಪತಿಯ ಸೇವಾ ಮಾಡಿ ಗತಿಯ।
ಹೊಂದದಿದ್ರೆ ಹೆಣ್ಣಿನ ಜನ್ಮ ಬಂದೂ ವ್ಯರ್ಥಾ ।
ಪುರುಷನ ಬಿಟ್ಟ ಹೆಂಣಿಗೆ ಅಧಿಕಾರ ।
ಇಲ್ಲ ಪದವಿ ಹೊಂದುವದು ತನ್ನ ಸ್ವತಾ ।
ಗಂಡಿಗೆ ಹೆಣ್ಣಿನ ಅಗತ್ಯವಿಲ್ಲಾ ।

ಧರಿಸಿಕೊಂಡು ಬ್ರಹ್ಮಚರ್ಯ ವೃತಾ।
ಶುಕ್ರಾಚಾರ್ಯರಂತೆ ಪಾರಾಗಾಣವದಕ್ಕೆ ।
ಸ್ವಾಧೀನ ಇರುವುದು ಕಿಮ್ಮತ್ತಾ"[೪೩]

ಈ ರೀತಿಯಾಗಿ ಹೆಣ್ಣಿನ ಕಿಮ್ಮತ್ತು ಕಡಿಮೆ ಗಂಡಿನ ಪಕ್ಷವನ್ನು ಹೆಚ್ಚು ಮಾಡುವುದು ಹರದೇಶಿಯ ಮುಖ್ಯ ಉದ್ದೇಶವಾಗಿದೆ.

ಲಾವಣಿ [೯], ರಲ್ಲಿ ಅಲಭ್ಯೆರಿ ಹೆಣ್ಣನ್ನು ಕಡೆಗಣಿಸಿರುವುದನ್ನು ಕಾಣುತ್ತೇವೆ. ಹೆಣ್ಣು ಅಂದರೆ ಹುಂಣ ಎಂಬ ಪದವನ್ನು ಬಳಸುತ್ತಾನೆ.

"ಮಣ್ಣ ಕಚ್ಚಿದಿ ಕಚ್ಚಿದಿ । ಹೆಣ್ಣಿನ ಮೋಹಿಸಿ ಮಣ್ಣ ಕಚ್ಚಿದಿ ಕಚ್ಚಿದಿ ॥ಪ॥
ಅಚ್ಚ ಹೇಸಿಕಿ ಪುಚ್ಚಿಗೆ । ಮೂರ್ಖಾ ಮೆಚ್ಚಿದಿ ತಿಳಿ ಮೂಲಾ ।
ಹುಚ್ಚನ ಪರಿ ನಿನ್ನ ಎಚ್ಚರ ತಪ್ಪಿಸಿ । ಹಚ್ಚಿತೋ ಅಳಗಾಲಾ ೨।
ನಾರಿ ನಾಗೇಶವರ ಪೋರಿ । ಮೋಕ್ಷದ ದಾರಿ ಕೆಡಸಿತಲ್ಲಾ ।
ಹಾರೂಗೇರಿಯೋಳು ಮೀರಿದ ಹರಿದಾಸ ಮುರದ ನಾಗಿ ಹಲ್ಲಾ ॥೩॥"[೪೪]

ಲಾವಣಿ [೨೮], ರಲ್ಲಿ ಕವಿ ಅನೇಕ ದೃಷ್ಟಾಂತಗಳನ್ನು ಕೊಟ್ಟು ಹೆಣ್ಣಿನ ಪಕ್ಷ [ನಾಗೇಶ] ವನ್ನು ಹೆಚ್ಚಿಸಲು ಪ್ರಯತ್ನಿಸಿದ್ದಾನೆ. ಇಲ್ಲಿ ಗಂಡನನ್ನು ಕಡೆಗಣಿಸುವುದು ಕವಿಯ ಉದ್ದೇಶವಾಗಿದೆ.

[ಚಾಲ] "ಸಂಣಕೂಸ ಇದ್ದಾಗ ಹೇಲ ಉಚ್ಚಿವಳಗ ಹೊರಳ್ಯಾಡಿ।
ಬಾಳ ಸೀಪೆದಿ ಸವಿಯ ಮಾಡಿ ಮಲಿಹಾಲಕುಡಿಸಿದಾಕಿನೋಡಿ। ತೊಳದಾಳ
ನಿನ್ನ ಮೈರಾಡಿ॥೨॥ ಜೋಪಾನ ಮಾಡಿದಾಕಿನೋಡಿ
ಉಪಕಾರ ನೆನಿಸಲಿಲ್ಲ ಕಿಡಗೇಡಿ । ಗಂಡಸ ಜಾತಿ ಬಲು ಖೋಡಿ।
[ಕೂಡ್ನುಡಿ] ಹೆಂಣಿನ ಮಹಿಮಾ ತಿಳಿಯಲೆ ತಮ್ಮಾ ಆಗಿಶುದ್ಧ ಅನುಭವಿಕಾ ॥"[೪೫]
[ಚೌಕ]

ಹೆಣ್ಣಿನಿಂದ ಜೋಪಾನಾದಿ, ಹೆಣ್ಣಿನಿಂದ ಎಣ್ಣೆ ಬೆಣ್ಣೆ, ಹೆಣ್ಣಿನಿಂದ ಬಣ್ಣದ ತೊಟ್ಟಿಲಾ, ಹೆಣ್ಣಿನಿಂದ ಜೋಗುಳ ಹೀಗೆ ಹಲವಾರು ಸವಲತ್ತುಗಳು ಸಿಗುವುದು ಹೆಣ್ಣಿನಿಂದ ಮಾತ್ರ

[ಕೂಡ್ನುಡಿ] "ದಯಾ ಮಾಯಾಗುಣಾ ಹೆಣ್ಣಿಗೆ ಇದ್ದದ್ದು ಗಂಡಿಗಿಲ್ಲ
ಕಕಲಾತಿ ಅದಕಾ"[೪೬]– [ಚೌಕ]

ಹೀಗೆ ಎಲ್ಲ ದೃಷ್ಟಿಯಿಂದ ನೋಡಲಾಗಿ ಹೆಣ್ಣು ಶ್ರೇಷ್ಠ ಎಂಬ ವಾದವನ್ನು ಮಂಡಿಸುತ್ತಾನೆ.

ಹರಿಹರ ಬ್ರಹ್ಮ ಮೊದಲಾದ ದೇವರಿಗೆ ಜನ್ಮ ನೀಡಿದವಳು ಹೆಣ್ಣು. ಹೆಣ್ಣಿನಿಂದಲೇ ಈ ಹೊತ್ತು ಗಂಡಿಗೆ ಕಿಮ್ಮತ್ತು .

"ವಿಷ್ಣು ಹುಟ್ಟಿ ಬಂದ ಹೆಂಣಿನ ಹೊಟ್ಟಿಲೇ । ಅನೇಕ ತೊಟ್ಟೊ ಅವತಾರಾ ।
ಹರಿಹರ ಬ್ರಹ್ಮರು ಮೊದಲಾದ ಸರ್ವರು ಹೆಂಣಿನಲ್ಲೆ ಹುಟ್ಟಿ ಬಂದವರಾ ॥೧॥
ಹೆಚ್ಚಿಗೆ ಹೇಳಲೇನು ನಿನ್ನಂಥ ಲುಚ್ಚ್ಯಾರು ಉಚ್ಚಿ ಬಿದ್ದದ್ದು ಎಣಿಸಿವರ್ರ್ಯಾರಾ ।
ಹಿಂದಿನ ಎಚ್ಚರ ಹಿಡಿಯದೆ ಬೊಗಳುವಿ ಕೂಡಿ ಬರಿದೆ ಡಂಬಾಚಾರಾ"॥೨॥[೪೭]

ಅಲಭ್ಯೆರಿ ಹರದೇಶಿ ಮೇಳದವರಿಗೆ ನೀನು ಹುಟ್ಟಿದು ಹೆಣ್ಣಿನಿಂದ. ಅದಕ್ಕಾಗಿ ಡಂಬಾಚಾರ ಮಾಡದೆ ಎಚ್ಚರದಿಂದ ನಡೆ ಎಂಬ ಬುದ್ಧಿ ಹೇಳುತ್ತಾನೆ. ಮತ್ತೆ ಮುಂದುವರೆದು ಹೆಣ್ಣನ್ನು ಭೂಮಿಗೆ ಗಂಡನ್ನು ಮಳೆ ಹನಿಗೆ ಹೋಲಿಸುತ್ತಾನೆ.

[ಚಾಲ] ಸಮುದ್ರನಾಥನಿಂದ ಮೇಘರಾಜ ಬಸರಾದಾ।
ಮಳಿ ಹನಿ ಭೂಮಿಗೆ ಹರದಾ ॥೧॥
ಹರದಿಂದ ಭೂದೇವಿ ನಾನಾತರದ ಫಲಭೇದಾ।
ಹಿರದ ವಗದಾಳ ಬಲು ಸಿವಿಸ್ವಾದಾ ೨।
ಸರ್ವ ಪ್ರಾಣಿಗಳಿಗೆ ಅನ್ನಾತಿಂದಾಗ ಆನಂದಾ ।
ಆಗುದೇನ ಬರಿದೆ ನೀರ ಕುಡದಾ ।೩।
ಮೂಲಕಾಲ ತಿಳಿಯದೆ ನಮ್ಮ ಕೂಡ ನಿನ್ನ ವಾದಾ ।
ಹಾಕಿದರ ಅಲ್ಲ ಇದ ಚಂದಾ ।೪।"[೪೮]

ಸರ್ವ ಜೀವರಾಶಿಗಳಿಗೆ ಅನ್ನದಿಂದಲೇ ನಿತ್ಯದ ಕಾರ್ಯ-ಚಟುವಟಿಕೆಗಳು ನಡೆಯುತ್ತದೆ. ಅನ್ನ ಸಿಗುವುದೆ ಭೂಮಿ ತಾಯಿಯಿಂದ. ಭೂದೇವಿ ನಾನಾ ತರದ ಫಲ ಬೆಳೆದು ಸರ್ವಪ್ರಾಣಿಗಳನ್ನು ಸಲುಹುವಳು. ಬರಿ ನೀರ ಕುಡಿದು ಯಾವ ಜೀವಿಯೂ ಬದುಕಲಾರದು. ಮೂಲ ಕಾಲ ತಿಳಿಯದೆ ವಾದ ಮಾಡುವುದು ಸರಿಯಲ್ಲ ಎಂದು ಹರದೇಶಿಯವರಿಗೆ ತಾಕೀತು ಮಾಡುವನು.

ಲಾವಣಿ [೧೮೮], ರಲ್ಲಿ ಅಲಭ್ಯೆರಿ ಗಂಡು-ಹೆಣ್ಣು ಎರಡು ಒಂದು ಎಂದು ಹೇಳುತ್ತಾನೆ.

"ಹರಿದಾಸ ನಾಗೇಶ ಅಂಬುವ ಭೇದಾ ಯಾವ ಆಧಾರ ಲೇಖಾ।
ನಿಂದ ನಿನಗೆ ನಾ ತಿರುಗಿ ಕೇಳತಿನ ಹೇಳೋ ಹಿಡಿದ ತರ್ಕಾ ॥ಪ॥
ಹರಿ ಅಂದರ ಹರಿದಾಸ ಹರಾ ಅಂದರ ನಾಗೇಶ ಹೌದ ಅಲ್ಲೋ ಮೂರ್ಖಾ ।
ಭೇದ ಮಾಡಿ ಬೀಳಬ್ಯಾಡ ನರ್ಕಾ॥೧॥"[೪೯]

ಹರಿ ಎಂದರೆ ಗಂಡು ಹರಾ-ಅಂದರೆ ಹೆಣ್ಣು ಅದಕ್ಕಾಗಿ ಹರಿಹರಾ ಎಂದು ಭೇದ ಮಾಡಿ ನರಕದಲ್ಲಿ ಬೀಳದಿರಲು ಕವಿ ಹೇಳುವನು. ಹರಿಹರ ಭೇದವು ಮಹಾಪಾಪಕ್ಕೆ ಗುರಿಯಾಗುವುದು. ಅದಕ್ಕಾಗಿ ಮೊದಲು ಇದನ್ನು ತಿಳಿದು ನಡೆಯಲು ಪ್ರೇರೆಪಿಸಿಸುವನು.

[ಚ್ಯಾಲ] "ಶ್ರೀಹರಿ ಆದ ಹೆಂಣು ಕೂಡಿಕೊಂಡು
ಹರನು ಮಾಡಿದ ಉತ್ಪನ್ನ ತಿಳಿಯೋ ಮೂರುಲೋಕಾ ।
ಕೂಗುವವು ವೇದ ನಾಲ್ಕಾ।
ಹರಿಹರಾ ನೋಡಲಾ ಇರುದ ।
ಜ್ಞಾನ ದೃಷ್ಠಿ ತೆರದ ಬರಾಬರಿ ಝೋಕಾ ।
ಅಲ್ಲಿ ತೂಗುವದು ಸಮತೂಕಾ ।
ಶ್ರೀ ಅಂದದ ಶಕ್ತಿ ಹಾಕಿ ಬರಿಯತಿ ಮೊದಲಿನ ಅಕ್ಷರಕಾ।"
ನಿಂದ ನಿನಗ ನಾ------ ।೧। [ಚಾಕ]"[೫೦]

ಶ್ರೀಹರಿಯು ಹೆಣ್ಣಾಗಿ ಹರನು ಗಂಡಾಗಿ ಕೂಡಿಕೊಂಡು, ಈ ಮೂರು ಲೋಕವನ್ನೇ ಸೃಷ್ಟಿಸಿರುವರು ಎಂದು ವೇದಗಳು ಸಾರಿ ಹೇಳುತ್ತವೆ. ಹೆಣ್ಣು-ಗಂಡಿನಲ್ಲಿ ಭೇದವಿಲ್ಲ.

[ಕೂಡ್ನುಡಿ] "ಜ್ಞಾನ ಶಕ್ತಿಯನು ಭಕ್ತಿಲಿಂದ ಕೂಡ ಮುಕ್ತಿ
ಆಗುದು ನಿರಕಾ । ನಿಂದ ನಿನಗ ನಾ ।೨।" [ಚಾಕ][೫೧]

ದಡ್ಡ ವೇದಾಂತಿಗಳು, ಮಡ್ಡ ಸಿದ್ಧಾಂತಿಗಳು ನಾಡಿನಲ್ಲಿ ಸಾಕಷ್ಟು ಜನರಿರುವರು. ಇದರಿಂದ ಗೋಳು ತಪ್ಪಿದ್ದಲ್ಲ.

"ಪುಸ್ತಕದಲ್ಲಿ ಆತ್ಮನ ಹುಡುಕತಾರ ಕವಿಕಟ್ಟುವದು ಚಾಳಾ ।
ತುಡುಗಿಗಿ ಹೋಗಿ ಕಳ್ಳಾ ಕೆಮ್ಮಿದಾಂಗ ಕಳ್ಳಾ ॥೨॥
ನಾಗೇಶಿ ಹರಿದಾಸವಳಿ ಹಿಡುವತಾರ ಪಾದ ಹಾಕುವದು ಸರಳಾ.
ಸಭಾದಾಗ ತಗುವತಾರ ಜಗಳಾ ॥೩॥
[ಚ್ಯಾಲ] ಹಾರೂಗೇರಿ ಗ್ರಾಮ ಮಾರುತಿ ಕೊಟ್ಟ ಮಹಾಮತಿ
ಮಾಡತಿವ ಸ್ತುತಿ ನಾವು ಹಗಲಿರುಳಾ।
ಅಪ್ಪಾ ಗೌಡನದು ರಂಗಮ್ಯಾಳಾ।
ಅಲಭೈರಿ ಹೇಳತಾನ ಖಾಲಿ ವಾದ ಯಾಕೋ ।
ಪ್ಯಾಲಿ ಹರಿದಾಸ ಮೀಮುಲಿ ಸಾಂಗತೋಯೇ ಜವಳಾ ।
ತೂ ಆಹೆಗಾ ಆದಿಚ ಅಂಧಳಾ

[ಕೂಡ್ನುಡಿ]   ಗುರುಕೃಪಾ ಇದ್ದಾಂವಗ ತಿಳಿವದು ಇಲ್ಲದಾಂವಗ
ಆತರಿ ದು:ಖಾ । ನಿಂದ ನಿನಗೆ ನಾ ॥೩॥" [ಚೌಕ][೫೨]

ಸಾಮಾಜಿಕ ಲಾವಣಿಗಳು :

ಲಾವಣಿ ಸಾಹಿತ್ಯ ಪ್ರಕಾರಗಳಲ್ಲಿ ಸಾಮಾಜಿಕ ಲಾವಣಿಗಳು ಒಂದು ಪ್ರಕಾರ. ಸಮಾಜದಲ್ಲಿ ನಡೆಯುವ ನಿತ್ಯ ಘಟನೆಗಳೇ ಇದಕ್ಕೆ ವಸ್ತು. ಇಲ್ಲಿ ಬರುವ ಪಾತ್ರಗಳು, ವ್ಯಕ್ತಿಗಳು, ಸನ್ನಿವೇಶಗಳು ಕಲ್ಪಿತವಾಗಿದ್ದರೂ ಅವು ಸಮಾಜದ ಜೀವಂತ ಘಟನೆಗಳು. ಇಂಥ ವಿಷಯಗಳನ್ನು ಎತ್ತಿಕೊಂಡು ಜನಸಾಮಾನ್ಯರ ಜೀವನ ಗುಣಮಟ್ಟವನ್ನು ಸುಧಾರಿಸುವುದರ ಜೊತೆಗೆ ನಿರ್ಮಲ ಸಮಾಜದ ನಿರ್ಮಾಣವೇ ಈ ಲಾವಣಿಗಳ ಮುಖ್ಯ ಉದ್ದೇಶ. ಈ ನಿಟ್ಟಿನಲ್ಲಿ ಸಮಾಜದಲ್ಲಿ ದಿನನಿತ್ಯ ನಡೆಯುವ ಹಲವಾರು ಘಟನೆಗಳನ್ನು ಕವಿ ಅಲಭ್ಯೆರಿ ತೆಗೆದುಕೊಂಡು ಹಲವಾರು ಸಾಮಾಜಿಕ ಲಾವಣಿಗಳನ್ನು ರಚಿಸಿದ್ದಾನೆ, ಅವುಗಳ ಮೂಲಕ ಸಮಾಜ ಶುದ್ಧೀಕರಿಸಲು ಪ್ರಯತ್ನಿಸಿರುವನು. ಅವೆಲ್ಲವೂ ಅಪ್ರಕಟಿತ. ಅಧ್ಯಯನದ ಅನುಕೂಲಕ್ಕಾಗಿ ಕೆಲವು ಲಾವಣಿಗಳನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ.

"ಕಲಿಯುಗದ ಆಟ" ಈ ಲಾವಣಿಯಲ್ಲಿ ಕವಿ ಸಮಾಜದಲ್ಲಿ ನಿತ್ಯ ನಡೆಯುವ ಕೆಲವು ಗಂಭೀರಗಳನ್ನು ನಡಾವಳಿಗಳನ್ನು ಕ್ರೂಡಿಕರಿಸಿದ್ದಾನೆ.

"ಚಿತ್ತಿಟ್ಟು ಕೇಳರಿ ಈ ಮಾತು ಮರೆಯದೆ ಮನಗಂಡ ಮಜಕೂರಾ ॥ಪ॥
ನೋಡಿರಿ ಕಲಿಯುಗದ ಕಡೆ ಆಟ ಜಡತಿ ನಡಿತ ಪಾಪದ ಜೋರಾ।
ನಡಿಸುಡಿ ತಪ್ಪಿದರೆ ನಿವಾರಾ। ಪುಣ್ಯಲಕ್ಷ ಇಡಲಿಲ್ಲ ಯಾರಾ ॥೧॥
ತಂದಿನ ಕೊಂದು ತಾಯಿ ಸೋಬತಿ ಮಾಡುವ ಘಟಿಂಗರಾ ।
ಸೋಸ್ತ್ಯಾರದು ಹತ್ತಲಿಲ್ಲರಿ ಖಬರಾ।
ಅಳಿಯಾಗ ಅತ್ತಿ ಆದಾಳ ಬಸರಾ ।
ಹಲಿ ಉಳಿಸಿ ಹಸಗೂಸು ಕೊಲ್ಲವರಾ ॥೨॥
ಭೀತಿಯ ತಾಳಲಿಲ್ಲ ಏನೇನು ಹೆಂಣಿಗೆ ಯಾರ ದರಕಾರಾ।
ಸಾವಿರಕೊಬ್ಬಾಕಿ ಉತ್ತಮ ಜಗದೊಳು ಉಳಕಿಯ ಹೆಂಗಸರಾ।
ಸಂಣ ದೊಡ್ಡ ಸರ್ವತ್ರ ಕುಲದವರಾ ।
ಒಂದ ಹೆಂಣಿನ ಮೇಲೆ ಸಾಗೋಳಿ ಮಾಡ್ಯಾರ ಇಬ್ಬರು ಅಣ್ಣ-ತಮ್ಮರಾ ॥೩॥"[೫೩]

ಸಮಾಜದಲ್ಲಿನ ನೀತಿಗೆಟ್ಟ ಗಂಡು-ಹೆಂಗಸಿನ ವರ್ತನೆಗಳನ್ನು ಕವಿ ಖಂಡಿಸಿದ್ದಾನೆ. ಈ ರೀತಿಯಾಗಿ ಕವಿ ಖಂಡ ತುಂಡವಾಗಿ ವ್ಯಕ್ತಪಡಿಸಿರುವಲ್ಲಿ ಸರ್ವಜ್ಞನ ಪ್ರಭಾವವು ಆಗಿರುವುದನ್ನು ಕಾಣುತ್ತೇವೆ.

ಆಕಳನ್ನು ಸಂಪತ್ತಿನ ಪ್ರತೀಕವೆಂದು, ದೇವತೆಯ ಸ್ವರೂಪವೆಂದೂ ಪೂಜಿಸಿಕೊಂಡು ಬಂದ ನಾಡು ನಮ್ಮದು. ಆದರೆ ಅದೇ ನಾಡಿನಲ್ಲಿ ಇಂದು ಗೋವನ್ನು ಭಕ್ಷ್ಯವಾಗಿ ಆಹಾರಕ್ಕಾಗಿ ಸಾವಿರ ಆಕಳುಗಳನ್ನು ಇಂದು ಕೊಲ್ಲುತ್ತಿದ್ದಾರೆ.

"ಆಕಳ ಕುತ್ತಗಿ ಕೊಯ್ಯುವ ಕೈಲಾಖೋ ಮುಂಬೈ ಕಟಕರಾ ।
ನಿತ್ಯ ತಪ್ಪದೆ ಐನೂರಾ। ಕೊಲ್ಲುವರು ಪಾಪಕಂಜದವರಾ ॥೫॥
ಛತ್ತಿಸಕೋಟಿ ದೈವತರಿರುವಂಥ ಗಾಯತ್ರಿ ಶರೀರಾ ।
ಭೂಮಿಯ ಹೊತ್ತ ಬಸವ ಹುಟ್ಟಿ ಬಂದನು ಗಂಭೀರಾ ।
ಸರ್ವಕ್ಕೂ ಕೊಟ್ಟನುಆಧಾರಾ। ಜೀವರಿಗೆ ನೀಡಿ ಅನ್ನನೀರಾ ॥೬॥
ಈಗಿನ ಕಾಲಕ ಬಸವಣ್ಣ ಗಾಯತ್ರಿ ನಿಂತು ನಿರಾಧಾರಾ ।
ಕುತ್ತಿಗಿ ಕೊಟ್ಟಾರ ದುಷ್ಟರಕೈಯೋಳು ಎಂಥ ಸಂಕಟ ಘೋರಾ ।
ದಯಾ ಸ್ವಲ್ಪ ಬಾರದೆ ನೀಚಾತ್ಮರು ಕೊರಳ ಕೊಯ್ದರು ಕರಕರಾ" ॥೩॥[೫೪]

ಛತ್ತಿಸಕೋಟಿ ದೇವಾನು ದೇವತೆಗಳನ್ನು ಹೊಂದಿರುವ ಆಕಳನ್ನು ಇಂದು ಮುಂಬೈ ಕಟುಕರು ಹಾಗೂ ಇಲ್ಲಿಯ ಕಟುಕರು ಹತ್ತೆಗೈಯುತ್ತಿದ್ದಾರೆ. ಆಕಳ ಹೊಟ್ಟೆಯಿಂದ ಬಸವ ಹುಟ್ಟಿ ಬಂದು ಸರ್ವ ಕಾರ್ಯಕ್ಕೆ ರೈತರ ಭೂಮಿಯ ಸಾಗುವಳಿಗೆ ಆಧಾರವಾದ. ಬಸವಣ್ಣನನ ಮೇಲೆ ಸ್ವಲ್ಪವೂ ಕಣಿಕರ ತೋರದೆ ನೀಚರು ಕೊಂದು ತಿನ್ನುತ್ತಿದ್ದಾರೆ. ಗೋಪತಾಯಿ ಇವರ ಉಪದ್ರವ ಸಹಿಸಲಾರದೆ ನೀಡುವಳು ಶಾಪ. ಮಕ್ಕಳ ಮರಿ ವಂಶಪರಂಪರವಾಗಿ ಅನ್ನ , ನೀರು ಸಿಗಬಾರದೆಂದು ಶಪಿಸುವಳು. ಹೀಗೆ ಅನೇಕ ಪಾಪ ಪ್ರಕರಣಗಳು ನಡೆಯಲು ಶಿವನು ಅವತರಿಸುವನು.

"ಯಾಹೊತ್ತು ಅನ್ಯಾಯ ನಡದು ಕಲಿಯೊಳು ಬೆಳೆದು ಅಹಂಕಾರಾ ।
ಗೋ ಬ್ರಾಹ್ಮಣ ಬಾಲಹತ್ಯಾ ಮೊದಲಾದ ಅನಂತ ಪ್ರಕಾರಾ ।
ಪಾಪಾಚಾರಕಿಲ್ಲರಿ ಬೇಸರಾ। ಮಾನಗೆಟ್ಟು ಮಾಡಿದರು ಸಂಸಾರಾ ।೧।
ದುಷ್ಟರ ಸಲುವಾಗಿ ತೊಟ್ಟಾನ ಶಿವನು ಯಮ ರಾಜನವತಾರಾ ।
ಸ್ಮರಣ ಮಾಡುತ್ತ ನಗರಕ್ಕೆ ಬೀಳುವುದು ನಾಲ್ಕು ಕಡಿಯ ಜನರಾ ।
ಹಾರೂಗೇರಿ ಪುರದೋಳು ಸಾಧೂರಾ ।
ಹೇಳಿದರು ಸಾಕ್ಷಾತನುಭವ ಸಾರಾ ।"[೫೫]

ಹೀಗೆ ಅಲಭೈರಿ ಇಂತಹ ಅನೇಕ ಘಟನೆಗಳನ್ನು ಲಾವಣಿಯಲ್ಲಿ ಸೆರೆ ಹಿಡಿದಿದ್ದಾನೆ.

ಲಾವಣಿ [೩೩], ನೀತಿ ಪದವಾಗಿದ್ದು ನರಜನ್ಮದ ಸಾರ್ಥಕ್ಯವನ್ನು ಕುರಿತು ವಿವರಿಸುತ್ತದೆ. ನರಜನ್ಮವೆಂಬುದು ಎಲ್ಲ ಜನ್ಮಗಳಲ್ಲಿಯೇ ಶ್ರೇಷ್ಠ. ಇದಕ್ಕೆ ಕಾಳಜಿ ಕೊಡದೆ ಮನುಷ್ಯ ಇಂದು ಪಾಪಾತ್ಮನಾಗಿದ್ದಾನೆ.

"ನರಜನ್ಮಕ್ಕಿಂತಲೂ ಕೆಳಗಿರ್ದ । ಜನ್ಮಗಳು ಶುದ್ಧ ಮೂರ್ಖ ।
ಪ್ರಾಣ ಬದ್ಧ ಅವಸ್ಥೆಯೊಳು ಮುಳುಗಿ । ಬರೆ ಪಾಪದ ಜ
ನ್ಮ ವೆನಸಿಕೊಂಡದಕಾಗಿ ॥೧॥
ಸುರರಾದರೇನು ಹೆಚ್ಚಲ್ಲ । ನರನಕ್ಕಿಂತ ಮೇಲ । ಅವರಿಗೆ
ಹೇಳಿಲ್ಲ ಮೋಕ್ಷವು ನಿಜವಾಗಿ । ಹಗಲಿರುಳು ದುಡಿಯುತ್ತ
ವೆ ನರಜನ್ಮವು ಬೇಕಾಗಿ" ೨।[೫೬]

ಅದಕ್ಕಾಗಿ ದಾಸರು ಸಹ ತಮ್ಮ ಕೀರ್ತನೆಗಳಲ್ಲಿ ನರಜನ್ಮವನ್ನು ಕುರಿತು "ಮಾನವನ ಜನ್ಮ ದೊಡ್ಡದು ಇದ ಹಾಳ ಮಾಡಬೇಡರಿ ಹುಚ್ಚಪ್ಪಗಳಿರಾ" ಎಂಬ ನೀತಿಯ ಸಲಹೆಯನ್ನು ಕೊಟ್ಟಿರುವರು.

ಸುರರಾದರೇನು ಹೆಚ್ಚಿನವರಲ್ಲ, ಅವರಿಗೆ ಮೋಕ್ಷದ ಕುರಿತು ಗೊತ್ತಿಲ್ಲ. ಅವರು ಸಹ ನರಜನ್ಮ ಧರಿಸುವದಕ್ಕಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಅದಕ್ಕಾಗಿ ಮನುಜಾ ತಿಳಿದು ಬಾಳುವೆ ಮಾಡು ಎಂದು ತಿಳಿಸುವನು. ಹೆಣ್ಣು, ಹೊನ್ನು , ಮಣ್ಣಿಗಾಗಿ ಆಸೆ ಪಟ್ಟ ಮನುಷ್ಯ ಇಂದು ತೃಪ್ತಿಹೀನ ಬದುಕನ್ನು ಸಾಗಿಸುತ್ತಿದ್ದಾನೆ. ಇದರಿಂದ ಅವನಿಗೆ ಸಿಗುವುದೇ ಯಮಲತ್ತಿ ಎಂದು ಕವಿ ವ್ಯಂಗಿಸಿದ್ದಾನೆ.

[ಚ್ಯಾಲ] "ಹೆಣ್ಣು ಮಣ್ಣು ಹೊನ್ನಿಗೆ ಆಶಾ ಮಾಡಿ ।
ತೃಪ್ತಿ ಹೊಂದಲಿಲ್ಲೆಂದು ಕೈಗೂಡಿ ॥೧॥
ಅಡವಿಯೊಳು ರಣ ಆಡುವುದು ನೋಡಿ ।
ನೀರವೆಂದು ಹೋದಿತ ಚಿಗರಿ ಓಡಿ ೨।
ಅಲ್ಲಿ ಸಿಗದಕ್ಕೆ ನೀರು ಮುಖಬಾಡಿ ।
ಪ್ರಾಣವೆ ಬಿಟ್ಟಿತು ಬಿಸಲೋಳು ವದರ್‍ಯಾಡಿ ॥೩॥"[೫೭]

ಅದರಂತೆ ತಿಳಿಯೋ ನೀನು ಸಂಸಾರ ಎಂಬುದು ಮಾಯೆಯ ಆಟ. ಅದರ ಬೆನ್ಹತ್ತಿ ಓಡಿದರೆ ಚಿಗರಿಗೆ ಬಂದ ಪರಿಸ್ಥಿತಿ ಆಗುವುದು. ಚಿತ್ತಿಟ್ಟು ನಡೆ ಮನುಜಾ ಎಂದು ಬುದ್ಧಿವಾದ ಹೇಳುವನು.

"ಮಡದಿ ಮಕ್ಕಳು ಕೂಡಿಕೊಂಡು ಕಷ್ಟ ।
ಸೋಸಿದಣವಾಟ ಇಲ್ಲ ಸೌಖ್ಯಯಳ್ಳಿನಷ್ಟ ।
ಸಿಗದೆ ಸದ್ಗತಿ । ದುರ್ಗತಿಗೆ ಪಾ ।
ತ್ರವಾಗಿ ತಪ್ಪಲಿಲ್ಲ ಯಮ ಭೀತಿ ।
[ಚ್ಯಾಲ] ಮೂಗ ಕೊಟ್ಟಾತನನ್ನು ಮರೆತು ಬಿಟ್ಟೆ

ಮೂಗಬಟ್ಟ ಮಾಡಿದವನ ನೆನಪ ಇಟ್ಟಿ ॥೧॥
ಅದರೊಳು ನಿಂದೇ ನಿಲ್ಲೆಲೋ ಮಳ್ಳಗೊಟ್ಟಿ ।
ನಾನು ನನ್ನದೆಂಬಭಿಮಾನವ ತೊಟ್ಟಿ ॥೨॥
ಸರ್ವೇಶ್ವರನೇ ರಚಿಸಿದೀ ಸೃಷ್ಟಿ ।
ಬ್ರಹ್ಮಾಂಡ ಗನಂತ ಕೋಟಿ ॥೩॥"[೫೮]

ಸೃಷ್ಟಿಕರ್ತನಾದ ಪರಮೇಶ್ವರನಲ್ಲಿ ಅನಂತಕೋಟಿ ಅಭಿಮಾನ ಇಡು. ಭಕ್ತಿ ಇಡು. ಆಗ ಮಾತ್ರ ನಿನಗೆ ಮುಕ್ತಿ ಸಾಧ್ಯವೆಂದು ಈ ಲಾವಣಿಯು ಸಕಲ ಮನುಕುಲಕ್ಕೆ ಹೇಳುತ್ತದೆ. ಮನುಷ್ಯನ ಮನಸ್ಸು ಚಂಚಲ. ಅದು ಹೇಳಿದಂತೆ ನಡೆದರೆ ನಮ್ಮನ್ನು ಮಣ್ಣು ಮುಕ್ಕಿಸುತ್ತದೆ. ಅದಕ್ಕೆ ಬಂಧನವಿರಬೇಕು.

"ಮನಸದ ಮಂಗನಂತೆ ಚಪಲ । ವಿಷಯದೊಳು ಚ್ಯಾಲಿ।
ಮಾಡುತ್ತನುಗಾಲಿ । ಕಾಡುವುದು ಬೆಂಕಿ । ಕಟ್ಟಿದನ ನಾಮ
ಸ್ಮರಣ ಎಂಬ ಮೂಗದಾಣ ಹಾಕಿ ॥೨॥
ಮನಸಾಗ್ವದಕ್ಕೆ ಸಮಾಧಾನ ।ಸಕಲ ಸಾಧನ । ಬೇಕಾದದ್ದು
ಶ್ರವಣ ಮನನವೆಂಬ ದುಡಕಿ ಮನ ಉನ್ಮನಿ ಹೊಂದಲು
ದು:ಖ ಉಳಿಯಲಿಲ್ಲ ಬಾಕಿ" ॥೩॥[೫೯]

ಶ್ರವಣ ಮನನವೆಂಬ [ದುಡಕಿ] ಸೇವೆಯನ್ನು ಮಾಡಿದರೆ ಮನಸ್ಸು ಉಲ್ಲಾಸ ಭರಿತಗೊಳ್ಳುವುದು ಮನಸ್ಸು ದು:ಖದಿಂದ ಮುಕ್ತಿ ಹೊಂದುವದು.

[ಚ್ಯಾಲ] "ತಾನು ತನ್ನನ್ನು ತಿಳಿಯದ ಪಾಮರನು ।
ಮಾನವ ಜನ್ಮದಿ ಹುಟ್ಟಿ ಫಲವೇನು ॥೧॥
ಪಶು ಪಕ್ಷಿಗಿಂತಲೂ ಕನಿಷ್ಠವನು ।
ಹೇಸಿ ಮೂಳನುಪಯೋಗ ಜಗಕ್ಕೇನು ॥೨॥
ಹಾರೂಗೇರಿಯೊಳಗೆ ಗುರುದೇವನು ।
ಅಲಭ್ಯೆರವಗ್ಹೇಳಿದ ನೀತಿಯನು ॥೩।"[೬೦]

ಮಾನವ ಜನ್ಮಕ್ಕೆ ಹುಟ್ಟಿಬಂದ ಮೇಲೆ ಮನುಷ್ಯ ತನ್ನನ್ನು ತಾನು ತಿಳಿದುಕೊಳ್ಳಬೇಕು. ತಿಳಿಯದಿದ್ದರೆ ಪಶುಪಕ್ಷಿಗಿಂತಲೂ ಕನಿಷ್ಠನಾಗುವನು. ಈ ಜನ್ಮದಲ್ಲಿ ಹುಟ್ಟಿ ಫಲವೇನೆಂದು ಕೇಳುವನು. ಹೀಗೆ ಅಲಭ್ಯೆರಿ ಹಲವಾರು ತಿಳುವಳಿಕೆಯನ್ನು ನೀಡಿ ನರಜನ್ಮ ಸಾರ್ಥಕ ಪಡಿಸಿಕೊಳ್ಳಲು ಉಪದೇಶಿಸುವನು.

ಲಾವಣಿ [೬೩], ಹಣ ಇದ್ದರೇನು ಗುಣ ಒಂದಿರಬೇಕು. ಗುಣವಿಲ್ಲದೆ ಬರೆ ಹಣವುಳ್ಳವ ಹೆಣದ ಸಮಾನವೆಂದು ತಿಳಿಸುತ್ತದೆ. ಸನ್ಮಾರ್ಗದ ನಡಾವಳಿಕೆಯನ್ನು ಬಿಟ್ಟು ದುರ್ಮಾರ್ಗದೊಳಗೆ ಮನಸ್ಸಿಟ್ಟು ಮಿತಿ ಮೀರಿದ ಅಹಂಕಾರದಿಂದ ನಡೆಯುವರು. ಹಣದ ಆಸೆಯಿಂದ ಸಾಕಷ್ಟು ಪಾಪ ಕಾರ್ಯಗಳನ್ನು ಎಸಗುವರು. ಇಂತಹವರು ಎಂದಿಗೂ ಸದ್ಗತಿ ಹೊಂದಲಿಕ್ಕೆ ಸಾಧ್ಯವಿಲ್ಲ.

[ಕೂಡ್ನುಡಿ] "ಅಣು ಮಹಾಕಾರ್ಯದಿ ದಣಿಯುತ
ಮೂರ್ಖರು ಅನುದಿನ ಪಡೆವರು ಅತಿಕಷ್ಟಾ ।
ಗುಣವಿಲ್ಲದೆ ಬರೆ ಹಣವುಳ್ಳವನು
ಹೆಣದ ಸಮಾನ ವನತಿ ಭ್ರಷ್ಟಾ ॥೨॥ [ಚೌಕ]
ಬುದ್ಧಿವಂತರ ಬಳಿ ಬುದ್ಧಿಯ ಕಲಿಯದೆ
ಹೊದ್ದುಕೊಂಡು ಬರೆ ಅಹಂಕಾರಾ।
ಎದ್ದರು ಬಿದ್ದರು ಜಿದ್ದ ವರ್ಮದೊಳು
ಇದ್ದಷ್ಟು ಕಳಕೊಂಡ ಮನಿಮಾರಾ ।೧॥
ಸೂಳಿಯರಿಗೆ ದ್ರವ್ಯ ಹಾಳು ಮಾಡಿ ಹುಚ್ಚ
ಮೂಳರಾದ ಶುದ್ಧ ಮೂರ್ಖರಾ ।
ಬಾಳುಗೆಡಕರಾಗಿ ಕೂಳಸಿಗದೆ ಮುಂದ
ಏಳೂರು ಕಾಗಿಯ ಹಾರಿಸುವವರಾ ॥೨॥"[೬೧]

ಬುದ್ಧಿವಂತರ ಬಳಿ ಜಿದ್ದ ವರ್ಮಗಳು ಸಲ್ಲದು. ವಿನಯಶೀಲರಾಗಿ ಜ್ಞಾನಿಗಳ ಕಡೆಯಿಂದ ವಿವೇಕ ಕಲಿಯಬೇಕು. ಹಿರಿಯರು ಹೇಳುವಂತೆ "ಇದ್ದಾಗ ತೊಡೆ ಮರಿಮಾಡಿ ತಿನ್ನಬೇಕು" ಅದನ್ನು ಬಿಟ್ಟು ಮನಿ ಹೆಂಡತಿಯನ್ನು ಬಿಟ್ಟು ಸೂಳಿಗೇರಿಗೆ ಸೇರಿದರೆ ಮುಂದೆ ಸಿಗುವುದು ಒಣಪಟ್ಟಿ.

"ಹಿಂದಕ ತಮ್ಮ ತಾಯಿ-ತಂದಿಯು ಘಳಿಸಿಟ್ಟ
ಬಿಂದಿಗಿ ಹೊನ್ನ ಉಳಿಯದೆ ಚೂರಾ ।
ದುಂದಗಾರಿಕೆಯೊಳು ಮುಂದಿನ ಪರಿಣಾಮ
ಕೆಂಧೂಳ ಹಾರಿತ ಸಂಸಾರಾ ॥೩॥

[ಜ್ಯಾಲ] "ಅದರಿಂದಲೆ ಸದ್ಗುಣ ಮಹಿಮಾ
ಮುದದಿಂದ ಹೇಳಿದ ಅಲ್ಲಮಾ ॥೧॥
ಅಲ್ಲಮನ ಮಾತು ಕೇಳಿತಮ್ಮಾ
ಬಲ್ಲವನು ಆದ ಬಹು ಪ್ರೇಮಾ೨॥
ಹಾರೂಗೇರಿಯೊಳಿರುವದು ನೇಮಾ

ಸ್ಮರಿಸುತ್ತಲೆ ಸದ್ಗುರು ನಾಮಾ ॥೩॥"[೬೨]

ಹೀಗೆ ಅಲಭೈರಿ ಲೋಕದಲ್ಲಿ ಹಣವಿದ್ದು ಗುಣವಿಲ್ಲದಿದ್ದರೆ ಪಶು-ಪಕ್ಷಿಗಿಂತಲೂ ಕನಿಷ್ಠವೆಂದು ಹೇಳಿರುವನು.

ಲಾವಣಿ [೨೦], ರಲ್ಲಿ ಕವಿ ಮಣ್ಣಿನ ಶ್ರೇಷ್ಠತೆಯನ್ನು ಸಾರುತ್ತಾನೆ. ಹಲವು ಆಧಾರಗಳ ಪಟ್ಟಿಯನ್ನೇ ಬೆಸೆಯುತ್ತಾನೆ. ಸಕಲ ಚರಾಚರ ಜೀವ ರಾಶಿಗೆ ಆಧಾರ ಮಣ್ಣು. ಲಕ್ಷ ಚೌರ್‍ಯಾಂಸಿ ಜನ್ಮ ಜಾತಿಗಳು ಆದದ್ದು ಮಣ್ಣಿಂದ, ಪಿಂಡದಿಂದ ಉತ್ಪತ್ತಿ ಆಗುವುದು ೩೪ ಲಕ್ಷ ಮಣ್ಣಾ ಹತ್ತೊಂಭತ್ತು ಲಕ್ಷ ತತ್ತಿಯೊಳಗ ಹುಟ್ಟುವುದು ಮಣ್ಣಾ, ಹನ್ನೊಂದು ಲಕ್ಷ ಜಲಚರ ಪ್ರಾಣಿಗಳು, ಸಣ್ಣ ಕ್ರಿಮಿ ಜಂತುಗಳು ಆದದ್ದು ಮಣ್ಣಿಂದ, ಇಪ್ಪತ್ತು ಲಕ್ಷ ಸ್ಥಾವರ ಜಾತಿ ಗಿಡ ಕಲ್ಲು ಹುಲ್ಲು ಆದದ್ದು ಮಣ್ಣಿನಿಂದ,

[ಚ್ಯಾಲ] "ಈಶ್ವರನು ಹಿಡಿದ ಮಂಣಾ ಮಂಣಿಗೊಳಗೆ ಸರ್ವ ನಿರ್ಮಾಣ ।
ಎಂಭತ್ತು ನಾಲ್ಕು ಲಕ್ಷ ಜೀವರಾಶಿ ಉತ್ಪನ್ನಾ ।
ತೋರಿ ಅಡಗುವದು ಮಂಣಾ ।
ಸೃಷ್ಠಿ ಆಗಿ ಕುಂತದ್ದು ಈ ಮಂಣಾ ।
ಅದಿದೇವ ಬ್ರಹ್ಮನ ಸ್ವಾಧೀನಾ ।
[ಕೂಡ್ನುಡಿ] ಅನೇಕ ತರಾ ಆತ ಮಣ್ಣಿನೊಳಗೆ
ತಿಳಿ ಚಿತ್ರ ವಿಚಿತ್ರ ಆದದ್ದು ಮಂಣಾ" ॥೧॥ (ಚೌಕ)[೬೩]

ಬಂಗಾರ, ಬೆಳ್ಳಿ, ತ್ರಾಮ, ಹಿತ್ತಾಳಿ, ಮಾಣಿಕ್ಯ ಹುಟ್ಟಿಸಿದ್ದು ಈ ಮಣ್ಣು, ರೊಕ್ಕ , ರೂಪಾಯಿ, ಜೀನಸುಗಳು ಆದದ್ದು ಮಣ್ಣಿಂದ. ಕಬ್ಬಿಣ, ಕಲ್ಲು, ಕಟ್ಟಿಗಿ ಸರ್ವಕೆಲ್ಲ ಆಧಾರ ಕೊಟ್ಟ ಈಶ್ವರ ಮಂಣಾ.

[ಚ್ಯಾಲ] "ಕಲ್ಲಿಗೆ ಹಚ್ಚಿ ಉಕ್ಕಿನ ಚಾಣಾ ।
ಬಲ್ಲಾಂಗ ಮಾಡಿದ ಕಲ್ಪನಾ ॥೧॥
ಕಲ್ಲಿಗೆ ತಾಯಿ ಮಂಣಾ ।
ಮಂಣಿನವಿಸ್ತಾರ ಗಹನಾ ॥೨॥
ಮಂಣಿಗೆ ಜಾತಿವರಣಾ ।
ಓದಿ ನೋಡರಿ ಪಂಚಿಕರಣಾ ॥೩॥"[೬೪]

ಕಲ್ಲಿಗೆ ಉಕ್ಕು ಹಚ್ಚಿ ನಾನಾ ತರಹದ ಕಲ್ಪನೆಗಳನ್ನು [ಮೂರ್ತಿ] ತಯಾರಿಸುವರು. ಕಲ್ಲಿಗೆ ಮಣ್ಣೆ ತಾಯಿ, ಮಣ್ಣಿನ ವಿಸ್ತಾರ ಶ್ರೇಷ್ಠವಾದದ್ದು ಅದನ್ನು ವರ್ಣಿಸಲು ಅಸಾಧ್ಯ. ಮಣ್ಣಾಗ ಹುಟ್ಟು ಅದರಲ್ಲಿಯೆ ಬೆಳವಣಿಗೆ ಕೊನೆಗೆ ಸುಡಗಾಡ ಸೇರುವುದು ಮಣ್ಣಿನಲ್ಲಿಯೆ.

"ಊಟಕ್ಕೆ ಜೀವ ಆಹಾರ ಮಾಡಿ ತಾ ಬೇರೆಯಾಗಿ ಉಳಿದದ್ದು ಮಂಣಾ ।
ಕಾರ್ಯ ಕಾರಣಾ ಕತ್ರು ಅನಿಸಿಕೊಂಡು ಮೃತ್ಯುನಾಮ ಪಡೆದದ್ದು ಮಂಣಾ ॥೧॥
ಬೀಸುಕಲ್ಲು ಒಳಕಲ್ಲ ವಲಿಗಲ್ಲ ಕಲ್ಲುತಿಕಲ್ಲ ಮಾಡಿದ ರಚನಾ ।
ಬೀಸಿ ಕಾಸಿ ಕುಟ್ಟಿ ಅರದ ತಿಂದು ಪಂಚ ಭೂತ ಶರೀರವು ಮಂಣಾ ॥೨॥
ಜೀವನ ಸೃಷ್ಟಿ ಜೀವನು ಮಾಡಿದ ಈಶ ಸೃಷ್ಟಿ ಆದಿತು ಕಾರಣಾ ।
ದೇವರ ಸೃಷ್ಟಿಯೊಳು ಕಲ್ಲು ಹುಟ್ಟಿ ಬಂದದ್ದು ತಿಳಿಯೋ ಪೂರ್ಣಾ ॥೩॥"[೬೫]

ಮಣ್ಣಿನಿಂದ ಬ್ರಹ್ಮ, ಬ್ರಹ್ಮನಿಂದ ಸೃಷ್ಟಿ, ಸೃಷ್ಟಿಯಿಂದ ಜೀವರಾಶಿ, ಹೀಗೆ ಮಣ್ಣಿನ ಅನಂತ ರೂಪಗಳನ್ನು ಕವಿ ಸಂಗ್ರಹಿಸಿರುವನು.

ಲಾವಣಿ [೧೧], ರಲ್ಲಿ ಕವಿ ಬುತ್ತಿಗಳ್ಳರ ಬೆನ್ಹತ್ತಿ ಪ್ರಯೋಜನವಿಲ್ಲ. ಸುಳ್ಳ ಗೊತ್ತಿ ಕುಡಿಯದೆ ನೀನು ಮಣ್ಣ ಸೇರುವುದು ಖಚಿತ. ಅದಕ್ಕಾಗಿ ಸತ್ಯ ಸಾಧುರ ಸಂಗ ಮಾಡಲು ಪ್ರೇರೆಪಿಸುವನು.

[ಚ್ಯಾಲ] "ದತ್ತಗೇಡಿಯ ಜನ್ಮ ಹಾಳಗುಡಿಗುಡಿ ।
ಸುತ್ತಮುತ್ತ ಬಿದ್ದಾಂಗ ಕಸ ಕಡ್ಡಿ ಕಡ್ಡಿ ॥೧॥
ಸತ್ಪುರುಷರ ಬಳಿ ಒಡ್ಡಿವುಡಿವುಡಿ ।
ಸತ್ಪತ ಪಡಿಯಲಲ್ಲ ಬೇಡಿ ಬೇಡಿ ॥೨॥
ಪತ್ತಿಟ್ಟು ಗುರುವಿನೊಳು ದುಡಿದುಡಿ ಉತ್ತಮವಿಚಾರ ಪಡಿಪಡಿ" ॥೩॥
[ಕೂಡ್ನುಡಿ] ಮಿಥ್ಯಾವಾದ ಅಭಿಮಾನ ಸತ್ತುಹೋದ ಮೇಲೆ
ವಸ್ತುಶಿಸ್ತು ಕಾಣುವದು ಕಂಡು ಹಿಡಿಹಿಡಿ ಬುತ್ತಿ –॥೧॥" [ಚೌಕ][೬೬]

ಗುರುವಿನ ಬಳಿಯಿದ್ದು ಉತ್ತಮ ವಿಚಾರ ಪಡೆಯದೆ ಇದ್ದರೆ ಮಾನವನ ಜನ್ಮ ಹಾಳುಗುಡಿಯಂತೆ, ಸುತ್ತ–ಮುತ್ತ ಬಿದ್ದ ಕಸಕಡ್ಡಿಯಂತೆ ಎಂದು ಅದಕ್ಕಾಗಿ ಸತ್ಪುರುಷರ ಬಳಿಯಿದ್ದು ಸತ್ಪತ ಪಡೆಯಲು ಹೇಳುವನು. ಹತ್ತು ಸಾವಿರಗಟ್ಲೆ ಪದಗಳನ್ನು ಹಾಡಿದರು ಉಪಯೋಗವಿಲ್ಲ ಚಿತ್ತ ಚಂಚಲ. ಉತ್ತಮರು ಹೇಳಿದ ಯುಕ್ತಿಯನ್ನು ಅರಿಯಲಿಲ್ಲ. ಇದರಿಂದ ನಿನಗೆ ಯುಕ್ತಿನೂ ಇಲ್ಲ, ಭಕ್ತಿನೂ ಇಲ್ಲ. ಕಿತ್ತು ಹೋಗಲಿಲ್ಲ ನಿನ್ನ ಅಹಂಕಾರ ಎಂದು ಹೇಳುತ್ತ ಉತ್ತಮರ ಸಂಗ ಮಾಡಲು ಹೇಳುವನು.

ಲಾವಣಿ [೫], ರಲ್ಲಿ ಹಾಡುಗಾರರಿಗೆ ಗರ್ವಸಲ್ಲದು ಎಚ್ಚರದಿಂದ ರಂಗದ ಮೇಲೆ ತಮ್ಮ ಕಲೆಯನ್ನು ಪ್ರದರ್ಶಿಸಬೇಕು. ಇಲ್ಲದಿದ್ದರೆ ಆಗುವದು ಅನಾಹುತವೆಂದು ಹೇಳುತ್ತ

"ರಂಗ ಮಂಟಪಕೆ ಬಂದ ಮ್ಯಾಲಾ ।
ಮಂಗನಂತೆ ಕುಣಿವುದು ಥರವಲಾ ॥೧॥
ಗರ್ವದಿಂದೇನೇನು ಫಲವಿಲ್ಲಾ ।

ಸರ್ವರಿಗೆ ಸರಿಯಾಗದು ಮೂಲಾ ॥೨॥
ಸಭಾದೊಳಗಾಗಿ ಸವಿಯ ಬೆಲ್ಲಾ ।
ಅಬರುದಿಂದೆ ಪಡಿಯಬೇಕ ಸಲ್ಲಾ ॥೩॥
ಎಚ್ಚರಿಲ್ಲದ ಕಿಸಿಯ ಬ್ಯಾಡ ಹಲ್ಲಾ ।
ಹುಚ್ಚನೆಂದು ವಗಿವರೋ ಗುಂಡಕಲ್ಲಾ ।೪।[೬೭]

ಹೀಗೆ ಅಲಭೈರಿ ಹಾಡುಗಾರರಿಗೆ ಸೂಚನೆಗಳನ್ನು ನೀಡುವನು.

ಲಾವಣಿ [೧೩], ರಲ್ಲಿ ಗುರುಭಕ್ತಿಯನ್ನು ಮಾಡಿ ಮುಕ್ತಿ ಪಡೆಯಲು ಸಲಹೆ ನೀಡುವನು.

"ತಿಳಿಯದನೇಕ ಜನ್ಮ ತಿರುಗುತ ನೀ ಹೊಂಟಿ।
ಮಾಯಾಜಾಲದೊಳಗೆ ಪೂರಾಸಿಕ್ಕ ಬಿಟ್ಟಿ ॥೨॥
ಕಾಮಕ್ರೋಧಾದಿ ಇವು ಮೂರು ಗುಣಾ ಖೊಟ್ಟಿ ।
ತಗಿಲಿಲ್ಲ ಹಸನ ಅಷ್ಟ ಮದಾ ಹಿಡಿದ ಕೆಟ್ಟಿ ॥೩॥
ಭ್ರಾಂತಿಯ ಸಂಸಾರ ಸುಳ್ಳ ಅಹಂಕಾರ ತೊಟ್ಟಿ ।
ವಿರಕ್ತಿ ಹೊಂದಿ ವರ ಮುಕ್ತಿ ಪಡಿಯೋ ಘಟ್ಟಿ" ॥೧॥ [ಚೌಕ][೬೮]

ಮನುಷ್ಯ ಇಂದು ಕಾಮ ಕ್ರೋಧಾಧಿಗಳಿಗೆ ಬಲಿಯಾಗಿ ತನ್ನ ಜನ್ಮವನ್ನು ಸಂಪೂರ್ಣ ಹಾಳು ಮಾಡಿಕೊಂಡಿರುವನು. ಭ್ರಾಂತಿಯ ಸಂಸಾರಕ್ಕೆ ದಾಸನಾಗಿ ಅಹಂಕಾರದಿಂದ ಕಾಲ ಕಳೆಯುವನು. ಹೆಣಾ ಶೃಂಗಾರ ಮಾಡಿದ ಹಾಗೆ ಬೆಳ್ಳಿ-ಬಂಗಾರ ಇಟ್ಟು ಉಡಿಗಿ-ತೊಡಗಿ ತೊಟ್ಟು ಹಗಲಿರುಳು ಬಯಸಿದಿ ಹುಚ್ಚಗೊಟ್ಟಿ ಇದರಿಂದ ನಿನಗೆ ಆಗುವುದಿಲ್ಲ ಮುಕ್ತಿ ಇನ್ನು ಮುಂದೆಯಾದರು ಗುರುಭಕ್ತಿ ಹೊಂದಲು ತಿಳಿಸುವನು.

"ಹಾರೂಗೇರಿ ಪ್ರಾಣೇಶನ ಪಾದವ ಬಿಟ್ಟಿಗಿಟ್ಟಿ
ಶ್ರೀಗುರು ಚನ್ನವೃಷಭನ ಕೃಪಾ । ಇರುವುದು ಘಟ್ಟಿ ॥೩॥
ಅಲಭೈರವ ಹೇಳಿದ ತಿನಬ್ಯಾಡ ಹೇಲಪಾಟ್ಟಿ ।
ವಿರಕ್ತಿ ಹೊಂದಿ ವರ ಮುಕ್ತಿ ಪಡಿಯೋ ಘಟ್ಟಿ ॥೫॥ [ಚೌಕ][೬೯]

ಈ ರೀತಿಯಾಗಿ ಕವಿ ಹಾರೂಗೇರಿ ಚನ್ನವೃಷಭನ ಪಾದ ಮುಟ್ಟಿ ಮುಕ್ತಿ ಪಡೆಯಲು ಹೇಳುವನು.

ಲಾವಣಿ [೪೬], ರಲ್ಲಿ ಅಲಭೈರಿ ಸಂಸಾರ ಎಂಬುದು ಎರಡು ದಿನದ ಸಂತೆ ಇದ್ದಂತೆ; ಇದು ದಡ ಸೇರುವುದು ಖಚಿತವಿಲ್ಲ. ಅದಕ್ಕಾಗಿ ಸದ್ಗುರುಗಳ ಬಳಿ ಮುಕ್ತಿ

ಪಡೆಯಲು ಹೇಳುವನು. ಇದು ಹಿಂದಿಯಲ್ಲಿ ರಚಿತವಾಗಿರುವುದರಿಂದ ಕವಿ ಹಿಂದಿ ಭಾಷೆಯನ್ನು ಬಲ್ಲವನಾಗಿದ್ದನೆಂದು ತಿಳಿಯುತ್ತದೆ.

"ದೇಖ ಲೇವ್ ಬಜಾರ ದೋದಿನಕಾ ।
ಭರೋಸ್ ನಹಿ ಜೆ ಯೇಹಿ ತನಕಾ ।
ಜಾಕರ ಸದ್ಗುರು ಮುರಶಿದಕಾ ।
ಪಡೋ ಪೌಂ ದಾತಾ ಹೈ ಸಬಕಾ ।
ಮೋಕ್ಷ ಪದ ಆನಂದ ಮಿಲನೇಕಾ ।
ಬೋಲೆ ಅಲಭೈರವ ಯೋ ಶೋಕಾ ।"[೭೦]

ಅದಕ್ಕಾಗಿಯೇ ದಾಸರು " ಸಂಸಾರ ನೀರ ಮೇಲಿನ ಗುಳ್ಳೆ ನಿಜವಲ್ಲ " ಎಂದು ಹಾಡಿರುವರು. ಲಾವಣಿ [೩] ಇದೊಂದು ಚಕ್ಕಡ ಪದವಾಗಿದ್ದು ಮರಾಠಿ ಭಾಷೆಯಲ್ಲಿದೆ.

"ದಹಿ ದೂದಾಚಿ ಕರ್ಣಿಸ ವಿಕ್ರಿ । ಆಮಿ ಜಾತೆ ಗೋಕುಲ ನಗರೀ ॥ಪಲ್ಲ॥
ಹಾ ಗೋಕುಲಾಂತ ಹಾಹೇ ಅವಿಚ್ಯಾರಿ ।
ಗೋಪಾಲ ಧಾವಾ ಧಾವಾಕರೀ । ದಾಖ ವಿಣೆ ತ್ಯಾಸ ಮಹತ್ವರೀ ॥೧॥
ಹಾ ಮಾಜೆ ದಯ ದೂದಾಚಿ ಗಾಗರೀ ।
ಕೃಷ್ಣ ಏವೋ ನಿಕಾಲೇ ತರಜೋರಿ ।ತೋ ಬಾಪದೇವೂನಿ ತೊಂಡಾವರಿ ॥೨॥
ಹೂವುನಿ ವಿವೇಕ ಅಂತರೀ ।
ಚಾಲೂಧಿಲೇ ನಾಹಿ ಮಸ್ಕರೀ । ಅಲಭೈರವ ಚಕ್ಕಡ ಕರೀ ॥೩॥"[೭೧]

ಲಾವಣಿ [೬೮], ರಲ್ಲಿ ಅಲಭೈರಿ ಸಾಧು ಸಂತರು ದೇವರ ಹುಚ್ಚರು ಮನುಜರೆಲ್ಲರು ಸಂಸಾರದ ಹುಚ್ಚರೆಂದು ಸಾರುವನು. ಜಗದ ಮೇಲೆ ಸಾವಿರಕ್ಕೊಬ್ಬರು ದೇವರನ್ನು ಭಜಿಸಿ ದೇವರಾಗಿ ಹೋಗಿರುವರು ಉಳಿದವರೆಲ್ಲರೂ ಪರತಂತ್ರರೆ.

"ದೇವರ ಹುಚ್ಚ ಹತ್ತಿದಂಥಾ ಮಹಾತ್ಮರೆಲ್ಲಾ ಆಟ ಆಡುವುದು ಸ್ವತಂತ್ರಾ ।
ಸಂಸಾರದ ಹುಚ್ಚರಾಟ ಪರತಂತ್ರಾ ।
ಅವರವರ ಪ್ರಾರಬ್ಧ ಭೋಗದ ಸೂತ್ರಾ ।
ಯಾರಿಗೆ ಹೆಂಣಿಂದು ಯಾರಿಗೆ ಮಣ್ಣಿಂದು
ಯಾರಿಗೆ ಹೊನ್ನಿಂದಿರುವುದು ಏಕತ್ರಾ ಹುಚ್ಚರ ಯಾತ್ರಾ ॥೧॥"[೭೨]

"ಅನುಗಾಲವು ಚಿಂತೆ ಜೀವಕೆ" ಎಂಬ ದಾಸರ ನುಡಿಯಂತೆ ಕೆಲವರಿಗೆ ಹೆಣ್ಣಿನ ಚಿಂತೆ ಕೆಲವರಿಗೆ ಮಣ್ಣಿನ ಚಿಂತೆ ಮತ್ತೆ ಕೆಲವರಿಗೆ ಹೊನ್ನಿನ ಚಿಂತೆ. ಒಟ್ಟು ಈ

ಲೋಕದಲ್ಲಿರುವ ಪ್ರತಿಯೊಬ್ಬರಿಗೂ ಒಂದೊಂದು ಚಿಂತೆ ಕಾಡುತ್ತಿರುತ್ತದೆ. ಇದೊಂದು ಹುಚ್ಚರ ಜಾತ್ರೆಯೆಂದು ಹೇಳಿರುವುದು ಯಥೋಚಿತವಾಗಿದೆ.

ಲಾವಣಿ [೧೫], ರಲ್ಲಿ "ದೇವರು ಹೇಳುವ" ವಂಚಕರನ್ನು ಕವಿ ಖಂಡ ತುಂಡಾಗಿ ಟೀಕಿಸಿದ್ದಾನೆ. ವಿಜ್ಞಾನ ಇಂದು ಇಷ್ಟು ಮುಂದುವರೆದರೂ ದಿನದಿಂದ ದಿನಕ್ಕೆ ದೇವರು ಹೇಳುವರ ಸಂಖ್ಯೆ ಹೆಚ್ಚುತ್ತಿದೆ. ದೇವರ ಹೆಸರಿನಲ್ಲಿ ಮುಗ್ಧ ಜನರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಅನೀತಿ, ಅಕಾರ್ಯಗಳು ಇಂದಿನ ಸಮಾಜದಲ್ಲಿ ಹೆಚ್ಚುತ್ತಿವೆ.

"ಮಂತ್ರ ತಂತ್ರ ಚೀಟಿ ತಾಯಿತ ಸರ್ವಸಾಹಿತ್ಯ
ತರಿಸುವುದು ಒಂದೊಂದಾ । ಆರ್ಭಾಟರಂಗಾಗಿಂಗ ಹೋದಾ।
ದೆವ್ವ ಬಿಡಿಸುವುದು ಬಲು ಚೆಂದಾ ।
ಬೆತ್ತ ಹಿಡಿದ ಜಾಡಿಸಿದ ಭೂತಬಿಟ್ಟ ಹೋತ ಹುಚ್ಚೆದ್ದಾ ।
[ಚ್ಯಾಲ] ಇದರಂತೆ ಇರುವನು ತಿಳಿರಿ ಬಲ್ಲವರು ಭೇದಾ ।
ಸದ್ಭೋದಾ ಇವರಿಂದ ಆಗದು ಸುಖವು ಜಯದಿಂದಾ ।
ಇಲ್ಲ ಎಂದೆಂದಾ ।"[೨೩]

ಇಂತಹ ಡಾಂಬಿಕರಿಂದ ಏನು ಪ್ರಯೋಜನವಿಲ್ಲ ಮತ್ತೇ ಮುಂದುವರೆದು

"ಮೈಯೊಳಗ ಬರುವದು ದೇವರಾ ನಡಗಿ
ಥರಥರಾ ನಡಸತಾರ ಗತ್ತಾ।
ಡೊಳ್ಳು ತಾಳ ಹಾಡುವರು ಜತ್ತಾ ।
ದೇವರಗಾದಿ ಎದುರಿಗೆ ಕುಳಿತಾ।
ಒಬ್ಬೊಬ್ಬರ ನ್ಯಾಯ ಹರಿತಾರ ತಿಳದ ಅವರ ಬೇತಾ ॥೨॥
ಮಳಿ ಬೆಳಿ ಬ್ಯಾನಿ ಬ್ಯಾಸರಕಿ ಆದಿವ
ಹ್ಯಾಂಗ ಜೋಕಿ ಕೇಳುವರು ಇಟ್ಟು ಚಿತ್ತಾ ।
ಅತಿ ವಿನಯದಿ ಶಿರಬಾಗು ತಾ। ಕಾಯಿ ಇಟ್ಟು ಕೈಮುಗದ ನಿಂತಾ ।
ಆವಾಗ ದೇವರುಸಿ ಹೇಳಿದ ನಡಗುತ ಇಟ್ಟರ ಮಾತಾ ॥೩॥"[೨೪]

ಕವಲು [ದೇವರು] ಕೇಳುವುದು ನಿರಂತರ ನಡೆದೇ ಇದೆ. ಎಷ್ಟೋ ಕಡೆಗೆ ದೇವರುಸಿಯ ಕೈಕೆಳಗೆ ಪ್ರತಿನಿಧಿ [ಏಜೆಂಟ] ಗಳಿದ್ದಾರೆ. ಜನರು ದುಡಿಯದೆ ಮೋಸ ಮಾರ್ಗಕ್ಕೆ ಬಲಿಯಾಗುತ್ತಿದ್ದಾರೆ. ಇದರಿಂದ ಏನು ಪ್ರಯೋಜನವಿಲ್ಲ. ಅದಕ್ಕಾಗಿ ದೇವ ಗುರುವಿನ ಬಳಿ ಹೋಗಿ ಪಾವನವಾಗಲು ಬುದ್ಧಿವಾದ ಹೇಳಿರುವನು.

"ಇದರೊಳಗೆ ದೇವ ಗುರು ಹೆಚ್ಚ ಆತನಿಗೆ ಮೆಚ್ಚಿ ತಿಳಿಯೋ ಗುರುಕೀಲಾ॥
ಗಟ್ಟಿ ಮುಟ್ಟಿ ಹಿಡಿಯೋ ಪಾದ ಕಮಲಾ । ವಾಕ್ಯದಲ್ಲಿ ಇಟ್ಟು ಹಂಬಲಾ ।
ಸಂಸಾರಾರಣ್ಯದಹಿಸಿ ಮುಕ್ತಿಕೊಡುವ ಭೂಪಾಲಾ ।

[ಚ್ಯಾಲ] "ಗುರುವೆಂದು ಭಾವಿಸಿ ಪೂಜಿಸಿ ಅಳಿಯೋ ಮುಮ್ಮಲಾ ಕುಲಚಲಾ।
ಚಿನ್ಮಯ ಚೆನ್ನ ಮನ ಹೊಂದಿದಾವಾಗ ಬತ್ತ ಆಕಲಾ-ಬೋಲ್‌ಬಾಲಾ।
ಹಾರೂಗೇರಿ ಗ್ರಾಮ ಪ್ರಾಣೇಶ ಇರುವಂತ ಸ್ಥಳಾ ರಂಗಲಾಲಾ॥
[ಚ್ಯಾಲ] ಗುಲಾಬದಾಸ ಮಹಾರಾಜನ ಅನುಕೂಲಾ ।
ಪ್ರಸನ್ನನಾಗಿ ಕೊಟ್ಟ ನಮಗ ಫಲಾ।
ಅಲಭೈರವ ಸಾರಿದ ಸಂಣಬಾಲಾ।"[೭೫]

ಹೀಗೆ ಹಾರೂಗೇರಿ ಗ್ರಾಮ ಪ್ರಾಣೇಶ ಇರುವಂತಹ ಸ್ಥಳವಾಗಿದೆ. ಗುಲಾಬದಾಸ್ ಮಹಾರಾಜನ ಅನುಕೂಲದಿಂದ ಅಲಭೈರಿ ಇಷ್ಟು ಪ್ರಖ್ಯಾತನಾಗಲು ಸಾಧ್ಯವೆಂದು ಗುರುವನ್ನು ಸ್ತುತಿಸುವನು.

ಲಾವಣಿ [೭೦], ರಲ್ಲಿ ನೀತಿಗೆಟ್ಟ ಗಂಡ-ಹೆಂಗಸಿನ ಕುರಿತು ಕವಿ ಕಠೋರವಾಗಿ ಟೀಕಿಸಿದ್ದಾನೆ.

[ಚ್ಯಾಲ] "ತನ್ನ ಹೆಂಡತಿ ಮಾತಿಗೆ ಮರುಳವಾಗಿ ಮತಿಭ್ರಷ್ಟಾ ।
ತಾಯಿ ತಂದಿನಿ ಬೈಯುವವ ಬಲು ಹಲಕಟ್ಟಾ
ಅಣ್ಣ ತಮ್ಮರೆಲ್ಲಾ ಕಣ್ಣು ತಪ್ಪಿಸಿ ಅಡಮುಟ್ಟಾ ।
ಹಣಾ ತುಡುಗ ಮಾಡಾಂವ ಬಲು ಹಲಕಟ್ಟಾ ॥೨॥
ಅತ್ತಿ ಮಾವ ಮೈದುನ ಗಂಡನೊಡ ಬಡದಾಟಾ
ಮಾಡುವಂಥ ಹೆಂಗಸು ಹಲಕಟ್ಟಾ ॥೩॥
[ಕೂಡ್ನುಡಿ] ಗುರು ಹಿರಿಯರ ಮಾತು ಮನಸಿಗೆ ಬಾರದೆ
ಮರವಿನೊಳ್ಗಿರಗಾಂವ ಹಲಕಟ್ಟಾ ।
ಆದಿ ಅಂತ್ಯ ಮಧ್ಯ ತಿಳಿಯದೆ ವಾದ
ಹಾಕಾಂವ ಬಲು ಹಲಕಟ್ಟಾ"[ಚೌಕ][೭೬]

ಇಂದು ಎಷ್ಟೋ ಕುಟುಂಬಗಳು ಮದುವೆಯಾದ ವರ್ಷದಲ್ಲಿ ಹೆಂಡತಿಯನ್ನು ಕರೆದು ಬೇರೆ ಜೀವನ ಸಾಗಿಸುವುದನ್ನು ಕಾಣುತ್ತೇವೆ. ವಯಸ್ಸಾದ ತಾಯಿ-ತಂದೆ ತುತ್ತು ಕೂಳಿಗೆ ಪರದಾಡುವ ಪರಿಸ್ಥಿತಿಯಿದೆ. ದುಡಿಯದೇ ಅಣ್ಣ ತಮ್ಮಂದಿರ ಕಣ್ಣು ತಪ್ಪಿಸಿ ಹಣ ತುಡುಗ ಮಾಡುವ ಎಷ್ಟೋ ಕಳ್ಳರಿದ್ದಾರೆ. ಹೆಣ್ಣು ಸಾಕ್ಷಾತ್ ದೇವತೆ, ಲಕ್ಷ್ಮೀ, ಮನೆ ಬೆಳಗುವ

ದೇವತೆಯೆಂದು ನಾನಾ ರೀತಿಯಾಗಿ ಸಂಭೋದಿಸುತ್ತಾರೆ. ಸುಮಾರು ಕುಟುಂಬಗಳಲ್ಲಿ ಇಂದು ಹೆಣ್ಣು, ಅತ್ತೆ, ಮೈದುನ ಗಂಡನೊಡನೆ ಜಗಳ ಕಾದು ತವರು ಮನೆಯಲ್ಲಿ ಇರುವುದನ್ನು ಕಾಣುತ್ತೇವೆ. ಆದಿ ಅಂತ್ಯ ತಿಳಿಯದೆ ವಾದ ಹಾಕುವ ಸಾಕಷ್ಟು ಜನರಿದ್ದಾರೆ. ಗುರು ಹಿರಿಯರ ಮಾತು ಇಂದು ಲೆಕ್ಕಕ್ಕೆ ಬಹುದೂರ. ಪ್ರಾಪಂಚಿಕ ಜೀವನ ನಡೆಸಿ ಪರಮಾರ್ಥವ ತಿಳಿಯದಿದ್ದರೆ ಮಾನವ ಜನ್ಮಕ್ಕೂ ಬಂದು ವ್ಯರ್ಥವೆಂದು ಉಪದೇಶಿಸುವನು.

"ತನ್ನೊಳಿರುವಂಥ ನಾನಾ ವಾಸನೆಗಳು ಚನ್ನಾಗಿ ಬಿಡದಲೆ ಅಡಮುಟ್ಟಾ।
ಸನ್ಯಾಸಿ ಆಶ್ರಮ ತೊಟ್ಟು ಪರಸ್ತ್ರೀಯ ಕಣ್ಣೆತ್ತಿ ನೋಡಾಂವ ಹಲಕಟ್ಟಾ" ॥೨॥"[೭೭]

ಹೀಗೆ ಅಲಭ್ಯೆರಿ ಹಲವಾರು ವಿಚಾರಗಳಿಂದ ಮುಟ್ಟಾಳರಿಗೆ ಚಾಟಿ ಏಟು ಕೊಟ್ಟಿರುವನು.

ಲಾವಣಿ [೪೯], ರಲ್ಲಿ ಅಲಭ್ಯೆರಿ ತನ್ನ ತಾ ಅರಿಯದವರನ್ನು ಹಲವಾರು ಪ್ರಾಣಿಗಳಿಗೆ ಹೋಲಿಸಿದ್ದಾನೆ. ಇದ್ದ ವಸ್ತು ಇದ್ದಾಂಗ ತಿಳಿಯದೆ ಗುದ್ಯಾಟ ಮಾಡುವವ ಗೂಗಿಮರಿ, ಧಡ್ಡರ ಮೇಲೆ ಖಟ್ಲೆ ಬೆಳೆಸಿ ದುಡ್ಡ ತಿನ್ನಾಂವ ಬೆಂಡಲನರಿ, ಗೊಡ್ಡ ನ್ಯಾಯ ಮಾಡಿಕೊಂಡು ತಿರುಗುವ ದೊಡ್ಡ ಬಾಯಿ, ಜಿಡ್ಡ, ತೋಳಿನ ಮರಿ, ಬುತ್ತಿಗಳ್ಳರಿಗೆ ತತ್ವ ಹೇಳುವವ ಮಳ್ಳ ಚಿಗರಿ ಮರಿ, ಅರ್ಥ ಅರಿಯದೆ ಕಲಿತ ಮಾತನಾಡುವವ ಕತ್ತಿಮರಿ,

[ಜ್ಯಾಲ] "ಮೈತುಂಬ ನಡಗಿ ಒದರಿ । ದೇವ್ರಾ ಹೇಳಾಂವ ಮಂಗ್ಯಾನಮರಿ।
ಶೆರೆ ಕುಡದ ಗದ್ದಗಿ ಏರಿ । ವಾಕ್ಯ ಹೇಳಾಂವ ಹೋತಿನ ಮರಿ।
ಮುಂದಿಟ್ಟು ಕಾರಿಕ ಕೊಬ್ಬರಿ । ದೇವ್ರ ಕೇಳಾಂವ ಮಳ್ಳ ಕುರಿಮರಿ"[೭೮]

ಹೀಗೆ ಕವಿ ಹಲವಾರು ಪ್ರಾಣಿಗಳನ್ನು ಉಪಯೋಗಿಸುತ್ತಾನೆ. ಮತ್ತೆ ಬಲ್ಲಿನೆಂದು ಬರೆಗೋಣ ಹಾಕುವವ ಒರಟ ಮೂಡ ಒಂಟಿ ಮರಿ, ನೆಟ್ಟಗೆ ನಿಶಾನಿ ಹಚ್ಚಿ ತಿರುಗುವವ ತೇಟನೋಡ ಚಿಟ್ಟಾನಿ ಮರಿ, ಜೀವ ಶಿವ ತಿಳಿಕೊಂಡ ಭಕ್ತಿಯಿಂದ ನಡೆಯುವವ ವಕ್ರಮೂರ್ತಿ ಸಿಂಹನಮರಿ, ಚದುರ ತಾನದಿಂದ ವದರಿ ಮಾತನಾಡುವವ ಬೆದರಗಡಕ ಕುದರಿಮರಿ,

"[ಜ್ಯಾಲ] "ಸಾಧು ಸಂತರನ ಕಂಡ ವಾರಿ।
ಬಿದ್ದ ಹೋಗಾಂವ ಇಲಿಮರಿ
ದಾನ ಧರ್ಮ ಇಲ್ಲ ಖರ್ಚಿನ ಮಾರಿ ।
ನೋಡಾಂವ ಚಂಡಾಳ ಕಾಗಿಮರಿ ।
ತಾಯಿ ತಂದಿ ಮಾತ ಕೇಳ್ದ ಮೀರಿ ।
ಮುಂದ ಹೋಗಾಂವ ಅಡವಿ ಮೊಲದಮರಿ

[ಕೂಡುಪಲ್ಲ] ಗುರು ಹಿರ್‍ಯಾರಿಗಿ ಅಂಜಿ ನಡೆದಾಂವ ಅಂವನೋಡ
ಕಣಕಪ್ಪಲಿ ಮರಿ"[೭೯]

ಮಾನ ಅಪಮಾನದ ಖೂನ ತಿಳಿಯದವನ ಹೀನಜಾತಿ ಹೇನಿನ ಮರಿ, ಅಕ್ಕ ತಂಗಿಯರ ಮೇಲೆ ಸೊಕ್ಕಾ ಮಾಡುವವ ಚಿಕ್ಕಾಡಮರಿ, ಅಣ್ಣ-ತಮ್ಮರಿಗೆ ಅಣಕ ಆಡುವವ ಅಂಗದೊಳಗಿರುವ ಕುರಿಮರಿ, ಕುಂದ ಹಚ್ಚಿ ಪರನಿಂದೆ ಮಾಡುವವ ನರ್ಕದಲ್ಲಿ ಬಿದ್ದ ಹಂದಿಮರಿ, ತನ್ನ ಹೆಂಡತಿಯನ್ನು ಬಿಟ್ಟು ಮಂದಿ ಹೆಂಗಸರ ಮ್ಯಾಲ ಮನಸ್ಸಿರುವವ ಮೆಕ್ಯಾನಾಯಿಮರಿ,

"[ಚ್ಯಾಲ] "ನಮ್ಮ ಊರ ಕೇಳ ಹಾರೂಗೇರಿ।
ಅಲ್ಲಿ ನೆನದಾನ ಲಂಕಾಸುಟ್ಟ ಮರಿ
ಅಲ್ಲಿ ಇರತಾನ ಅಲಭ್ಯೆರಿ ।
ಸಾಧುರ ಕಲಾನ ಕಾಲಮರಿ ।
ಅಂವ ಹೇಳೂದ ಬರಾಬರಿ ।
ಕೇಳಿದಾಂವ ಬಾಳಿಯ ಮರಿ।

[ಕೂಡುಪಲ್ಲ] ಚನ್ನವೃಷಭೇಶ್ವರನ ಬೋಧ ಕೇಳಿದಾಂವ ಅಂವ ನೋಡ
[ಕಾಳಿಂಗಮರಿ] ಗುರುವಿನ ಮರಿ" ।"[೮೦]

ಹೀಗೆ ಕವಿ ನೀತಿಗೆಟ್ಟ ಕೆಡುಕರನ್ನು ಬಿಡದೆ ಜಾಲಾಡಿಸಿರುವನು.

ಲಾವಣಿ [೩೧], ರಲ್ಲಿ ಜೋಗತಿ ಬಿಡುವುದನ್ನು ಖಂಡಿಸುತ್ತಾನೆ. ಜೋಗತಿ ಬಿಡುವುದನ್ನು ಯಾವ ಶಾಸ್ತ್ರ ವೇದಗಳಲ್ಲಿ ಹೇಳಿಲ್ಲ. ಆದಿಶಕ್ತಿಯ ಹೆಸರು ಮುಂದುಮಾಡಿ ಮನೆ ಮನೆ ತಿರುಗುವವರನ್ನು ಖಂಡಿಸುತ್ತಾನೆ.

"ಭಂಡಾರ ಲಗಾಕುಮ್ ಭೀಕ್ಷಾಮಾಂಗೆ ಘರಘರ ಫಿರತೆ ।
ಗಾನೆ ಗಾತಾ। ಸುತಿ ಚೌಡಕಿ ಕೊರಳಾಗ ಮುತ್ತಾಕಟ್ಟಿ ತೆಲಿ
ಮ್ಯಾಲ ಜಗಹೊತ್ತಾ ॥೩॥

[ಚ್ಯಾಲ] ಐಂಸೆ ಸೋಂಗ ಕರಕೆ ನಾರಿ। ಊರಾಗ ಬೀಸಿದಾಳ ಸ್ವಾರಿ ॥೧॥
ದೇಖಿ ಖರಾಬ ಲೋಕ ಸಾರಿ। ಹೋಗಿ ಬಿದ್ರ ನೋಡಿ ಖಬರ್ದಾರಿ ॥೨॥
ಅವರ ಬೈತಲಕ ಪ್ಯಾರಿ । ಪಟಿಂಗ ತಾನ ಗುಂಗ ಸೇರಿ ॥೩॥"[೮೧]

ಹೀಗೆ ಸೋಗು ಹಾಕಿ ತಿರುಗುವರು ಊರೂರು. ಇವರ ವೈಯ್ಯಾರಕ್ಕೆ ಬಲಿಯಾಗಿ ಎಷ್ಟೋ ಗಂಡಸರು ಮನೆಯನ್ನು ತೊರೆದರು. ಈಗಲೂ ಇಂತಹ ಉದಾಹರಣೆಗಳು ಸಾಕಷ್ಟು ದೊರಕುತ್ತವೆ.

[ಕೂಡ್ನುಡಿ] "ಇಸೆವಾಸ್ತೆ ಸರಕಾರ ಹುಕುಮ್ ಬಂದೋ ಬಸ್ತ ದಿಯಾ
ಹೈ ಸುನೋ ಪೂರ್ತಾ। ವೇದ --- ॥೨॥" [ಚೌಕ][೮೨]

ಸರಕಾರ ಜೋಗತಿ ಬಿಡುವುದನ್ನು ಬಂದೋಬಸ್ತಿ ಮಾಡಿದಾಗ, ಎಷ್ಟೋ ಜೋಗತಿಯರು ಮುಂಬೈ ಮದ್ರಾಸದಂತಹ ಶಹರದಲ್ಲಿ ಇರಲು ಪ್ರಾರಂಭಿಸಿದರು. ಕುಲಜಾತಿ ಲೆಕ್ಕಿಸದೆ ಕಂಡ-ಕಂಡ ಗಂಡಸರನ್ನು ಕೂಡಿ ಹಣಗಳಿಸಲು ಪ್ರಾರಂಭಿಸಿದರು. ಎಷ್ಟೋ ಗಂಡಸರ ಮನೆಗಳು ಬೀದಿ ಪಾಲಾದವು. ಇದರಿಂದ ಪಾಪ ಹೆಚ್ಚಿತು.

[ಚ್ಯಾಲ] "ಏ ಬಾತ ಸಮಜೆ ಸುವಿಚ್ಯಾರಿ ।
ಪಾಪವಾದೀತ ಮಿತಿಮೀರಿ ॥೧॥
ಫಿರಣೆ ಲಗೆ ನರ್ಕಫೇರಿ ।
ಮರಿ ಬ್ಯಾಡ ನೆಂಪ ಹಿಡೀರಿ ॥೨॥
ಮಾರುತಿ ದೇವ ಹಮಾರಿ।
ನಮ್ಮ ಊರ ಹಾರೂಗೇರಿ ॥೩॥"[೮೩]

ಹೀಗೆ ಜೋಗತಿ ಬಿಡುವುದನ್ನು ಖಂಡಿಸುತ್ತ ಅದರಿಂದ ಆಗುವ ಅನಾಹುತಗಳನ್ನು ಕ್ರೋಢಿಕರಿಸಿದ್ದಾನೆ. ಇಂಥಲ್ಲಿ ವೈಚಾರಿಕತೆಯನ್ನು ಗುರುತಿಸಬಹುದು. ಲಾವಣಿ [೨೫], ರಲ್ಲಿ ಸಹ ಹಾಡುಗಾರರಿಗೆ ಹಾಡುಗಾರಿಕೆ ಕುರಿತು ಬುದ್ಧಿವಾದ ಹೇಳುವನು.

"ಮಾತಾಡಿ ಮಾತಾಡಿ ಖಾಲಿ । ತಿಳಿದ ನೋಡ ಹುಚ್ಚಪ್ಯಾಲಿ ।
ಬಾಯಿ ಮಾಡಬ್ಯಾಡ ಕಲಬಿಲಿ ಕಲಾಲ । ಹಾಡಬೇಕ ರಂಗಲಾಲ ।
ಒಗುತಾರ ಗುಲಾಲ । ಬೆಂಡಬೆತ್ತಾಸ ಬೆಂಡಬೆತ್ತಾಸ । ಬೆಂಡಬೆತ್ತಾಸ"[೮೪]

ಹಾಡುಗಾರರು ತಾಳಕ್ಕೆ ತಕ್ಕಂತೆ ಹಾಡಬೇಕು. ಆವಾಗ ಮಾತ್ರ ರಂಗ ಶಾಲೆಗೆ ಒಂದು ಮೆರಗು. ಹೂಬಾಣ ಸುರಿದ ಹಾಗೆ ಅವರ ಹಾಡು ಲೀಲಾಜಾಲವಾಗಿ ಸಾಗುತ್ತಿರಬೇಕೆಂದು ಸಲಹೆ ಸೂಚಿಸುವನು.

ಲಾವಣಿ [೨೧], ರಲ್ಲಿ ಅಲಭ್ಯೆರಿ ಒಬ್ಬ ಬಡವನ ಕಥೆಯನ್ನು ಹೇಳುತ್ತಾನೆ. 'ಬಾರದು ಬಪ್ಪದು, ಬಪ್ಪುದು ತಪ್ಪದು' ಎಂಬ ನೀತಿ ವಾಕ್ಯವನ್ನು ಗಮನಿಸುತ್ತ ಅತಿ ಆಶೆ ಸಲ್ಲದು ಎಂಬ ತಿಳುವಳಿಕೆಯನ್ನು ನೀಡುತ್ತದೆ. ಒಂದು ಗ್ರಾಮದಲ್ಲಿ ಒಬ್ಬ ಬಡವನಿದ್ದನು. ಅವನಿಗೆ ಏಳೆಂಟು ಜನ ಮಕ್ಕಳಿದ್ದರು. ಒಮ್ಮೆ ಊಟ ಸಿಕ್ಕರೆ ಒಮ್ಮೊಮ್ಮೆ ಉಪವಾಸ. ಆತನ ಕಾಯಕ ನಿತ್ಯ ಕಟ್ಟಿಗೆ

ಕಡೆಯುವದು. ಹೀಗೆ ಸುಮಾರು ದಿವಸ ಅನೋಲಿ ಸವೆಸಿದ್ದನು. ಒಮ್ಮೆ ಗಟ್ಟಿ ಮನಸ್ಸು ಮಾಡಿ ಗುಡ್ಡದಲ್ಲಿ ಉಪವಾಸ ಕೂಡ್ರುವನು. ಅವನ ನಿಜಭಕ್ತಿಗೆ ಶಿವನು ಪ್ರತ್ಯಕ್ಷನಾಗಿ ಬೇಕಾದ ಒಂದು ವರ ಬೇಡಿಕೊಳ್ಳಲು ಕೇಳಿಕೊಳ್ಳುವನು.

"ಬಡವಗ ಬೇಕಾದ ಬೇಡ ಅಂದ ಭಗವಂತ
ಜಾಸ್ತಿ ಇಲ್ಲ ಒಂದೆ ಮಾತಾ ।
ಬಡವ ಬೇಡಿಕೊಂಡ ಸರ್ವಕಾರ್ಯಕ್ಕೆಲ್ಲಾ ಹುಲಸ
ಕೊಡು ನನಗ ಭಗವಂತಾ॥೩॥"[೮೫]

ಈ ರೀತಿಯಾಗಿ ಭಗವಂತನು ವಚನಕೊಟ್ಟು ಮಾಯವಾಗುತ್ತಾನೆ. ಬಡವ ಹರ್ಷಚಿತ್ತನಾಗಿ ತಲೆಯ ಮೇಲೆ ಕಟ್ಟಿಗೆ ಹೊರಿ ಹೊತ್ತು ದಾರಿ ಹಿಡಿವನು. ಪ್ಯಾಟಿಯೊಳಗೆ ಹೊರಿ ತಂದು ಇಳಿಸುತ್ತಾನೆ. ಒಂದು ಗಿರಾಕಿ ಬಂದು ಅದನ್ನು ಠರಾವು ಮಾಡಿ ಹೊರಿ ಒಯ್ಯಲಾಗಿ ಮತ್ತೇ ಅದೇ ಜಾಗದಲ್ಲಿ ಮತ್ತೊಂದು ಹೊರಿ ಉಳಿದಿತ್ತು. ಹೀಗೆ ಎಷ್ಟು ಮಾರಿದರೂ ಹೊರಿ ಉಳಿದೇ ಬಿಟ್ಟಿತು. ಕೊನೆಗೆ ಬ್ಯಾಸರಸಿ ಸಂಜೆ ಪೇಟೆ ಕಡೆಗೆ ಹೋಗಿ ಅಕ್ಕಿ, ಜೋಳ ತೆಗೆದುಕೊಂಡನು, ಆದರೂ ಕಿಸೆ ತುಂಬ ಹಣ ಉಳಿದಿದ್ದವು. ಸಂತೋಷಭರಿತನಾಗಿ ಬಡವ ಮನೆಗೆ ಬಂದು ಅಡಿಗೆ ಮಾಡಲು ಹೆಂಡತಿಗೆ ಹೇಳುವನು. ಹೆಂಡತಿ ಅತಿ ಉಮೇದಾರಿಕೆಯಿಂದ ಬೀಸಲು ಕೂಡ್ರುವಳು. ಎಷ್ಟು ಬೀಸಿದರೂ ತೀರವಲ್ಲವು. ಮೊದಲಿನ ಮುಕ್ಕ ಕೊನೆಗೆ ಬೇಸತ್ತು ಹಿಟ್ಟು ತುಂಬಿಕೊಂಡು ರೊಟ್ಟಿ ಬಡಿಯಲು ಸಿದ್ಧಳಾಗುವಳು. ಮರದ ತುಂಬ ಜೋಳ ಕಲ್ಲ ತುಂಬ ಹಿಟ್ಟು ಇದ್ದಾಂಗ ಇತ್ತು. ಹಿಟ್ಟ ನಾದಿ ಒಂದು ರೊಟ್ಟಿಯನ್ನು ಮಾಡಿ ತೆವಿಯಲ್ಲಿ ಹಾಕುತ್ತಾಳೆ. ಮತ್ತೊಂದು ಉಳ್ಳಿ ಲಟ್ಟಿಸಿ ತಯ್ಯಾರ ಮಾಡಿ ಎಡಗಯ್ಯಾಗ ಹಿಡಿಯುತ್ತಾಳೆ.

[ಚ್ಯಾಲ] "ತೆವ್ಯಾಗಿಂದ ತಗದಾಳ ಕಡಿಕಾ।
ಮತ್ತೊಂದು ಉಳದಿತ್ತ ಕೇಳರಿ ಕೌತುಕಾ ॥೧॥
ಹಿಂಗ ತಗದಾಳ ತಾಸ್ಹೊತ್ತನಕಾ ।
ಸವಡಿಲ್ಲ ಕಯ್ಯಾಂದ ಹಾಕುದಕಾ ॥೨॥
ಹೆಂಗ ಮಾಡಲಿ ಇದಕಾ ।
ಬ್ಯಾಸತ ಬಿದ್ದಾಳ ಬಿಟ್ಟ ಜೀವಕಾ ॥೩॥
[ಕೂಡ್ನುಡಿ] ಇದ್ಯಾಕ ಇದ್ಹಾಂಗ ಉಳದಿತ ಹಾಂಗ ಹೇಳತಾಳ
ಗಂಡನ ಕರದಾ। ಬಾರದು --- ।೪॥" [ಚೌಕ][೮೬]

ಎಷ್ಟು ರೊಟ್ಟಿ ತೆಗೆದರೂ ತೆವ್ಯಾಗ ಮತ್ತೊಂದು ರೊಟ್ಟಿ ಉಳಿದಿತ್ತು. ಹೀಗೆ ಕೊನೆಗೆ ಹೆಂಡತಿ ಬೇಸತ್ತು ಊಟಕ್ಕೆ ಏಳುತ್ತಾಳೆ. ಗಂಡ ಹೆಂಡತಿ ಮಕ್ಕಳು ಗರ್ದಿಲೆ ಉಣ್ಣಲಿಕ್ಕೆ

ಕೊಡ್ರುತ್ತಾರೆ. ಮನೆಯೊಳಗೆ ಒಂದು ಮುದುಕಿಯಿತ್ತು ಅದು ಅನ್ನ ಸಿಗದೆ ಬಹಳೇ ಸೊರಗಿತ್ತು. ಮೊದಲಿಗೆ ಒಂದ ತುತ್ತ ಅನ್ನ ಹಾಕುತ್ತಾರೆ. ಆ ಮುದುಕಿಗೆ ಅದು ಹುಲಸಾತ ಮುದುಕಿಗೆ ಹೊಟ್ಟೆ ತುಂಬಿ ಗಂಟಲಕ ಬಂತು ಒಳ್ಳೆ ಸಂಕಟಾ. ಇಷ್ಟರೊಳಗೆ ಮುದುಕಿಯ ಆಟ ನಿಂತಿತು. ಒದ್ದ್ಯಾಡಿ ಒದ್ಯಾಡಿ ಮುದುಕಿ ಪ್ರಾಣ ಬಿಟ್ಟಿತು. ಮಣ್ಣು ಕೊಡುವುದಕ್ಕೆ ಹೆಣ ಹೆಗಲ ಮೇಲೆ ಹಾಕುತ್ತಾರೆ.

[ಕೂಡ್ನಾಡಿ] "ಬಂಧುಬಳಗದವರೆಲ್ಲರು ಕೂಡಿ
ಅಳುವುತ ಹೊರಟಾರ ಹಿಂದಿಂದಾ ।
ಬಾರದು --- ॥೫॥ [ಚೌಕ]
ಬಡವ ಗಾಬರಿ ಆಗಿ ಓಡ್ಯಾಡಿ ಕರಿತಾನ
ಮಂದಿದ ಬೀಳತಾನ ಕೈಕಾಲಾ।
ಬಂದವರೆಲ್ಲಾ ಒಂದೊಂದು ಹೊತ್ತಾರ
ಜಾಗಾದಾನ ಹೆಣಾ ತೀರಲಿಲ್ಲಾ ॥೧॥
ಹಿಂಗ ನೂರಾ ಮಂದಿ ಗೊತ್ತಿ ಕುಡಿಯುತಾರ
ಊರಾಗ ಎದ್ದಿತ ದಂಗಲ್ಲಾ ।
ಎತ್ತ ನೋಡಿ ದತ್ತ ಹೆಣಗೊಳಾದಾವ ಬಡವಗ
ಬೈವರು ಅಳತಿಲ್ಲಾ ॥೩॥"[೮೭]

ಹೀಗೆ ಇಷ್ಟೆಲ್ಲ ಅನಾಹುತವಾದ ಮೇಲೆ ಬಡವನು ಶಿವನನ್ನು ಪ್ರಾರ್ಥಿಸುವನು.

"ಆಗ ಬಡವ ತಾ ಸ್ಮರಣೆ ಮಾಡತಾನ ಸಂಬ
ಆಗೋ ನೀ ಅನಕೂಲಾ ।
ಮದಲ ಹ್ಯಾಂಗ ಇತ್ತ ಹಾಂಗ ಆಗಲಿ
ಬ್ಯಾಡೊ ನನಗೆ ಹುಲಸಿನ ಮೂಲಾ ॥೩॥
[ಚ್ಯಾಲ] ಆಗ ಕೇಳಿ ಗೌರಿನಲ್ಲಾ । ತಿರುಗಿಕೊಟ್ಟ ಪೈಲೆದ ಫಲಾ ।"[೮೮]

ಹೀಗೆ ಅಲಭೈರಿ ಬಡವನ ಕಥೆಯ ಮೂಲಕ ಅತಿ ಆಶೆಯಿಂದ [ಹುಲಸು] ಆಗುವ ಅನಾಹುತಗಳನ್ನು ಚಿತ್ರಿಸಿದ್ದಾನೆ.

ಲಾವಣಿ [೫೫], ಕವಿ ಅಲಭೈರಿ ಚಹಾ ತಂಬಾಕದ ದುಷ್ಪರಿಣಾಮಗಳನ್ನು ಹೇಳುವನು. ಇದು ಪರದೇಶದಿಂದ ಬಂದು ಸೇರಿಕೊಂಡಿತು. ಥಂಡಿ ವಾತಾವರಣ ಇದ್ದ ಪ್ರದೇಶಕ್ಕೆ ಚಹಾ ತಂಬಾಕದ ಅವಶ್ಯಕತೆಯಿದೆ. ಸಮಶಿತೋಷ್ಣ ವಾತಾವರಣವಿರುವ ಭಾರತಕ್ಕೆ ಯಾವ ಪದಾರ್ಥದ ಅವಶ್ಯಕತೆಯೂ ಇಲ್ಲ.

"ಕ್ರಿಸ್ತಶಕೆ ಪಂದರಾಶಿ ಚ್ಯಾರಿ ವಳಗ
ಬಂದ ಬಾಬರಖಾನ ಹಿಂದೂಸ್ತಾನಕಾ।
ಬಂತೊ ತಂಬಾಕಾ । ಪರಘನ ದೇಶದಿಂದ
ಆತನೆ ತಂದವ ಸೇದುವದು
ಗುಡಗುಡಿ ಗುಟಕಾ ರೋಗಕಾರಕಾ ॥೨॥

[ಚ್ಯಾಲ] ಅಜೀರ್ಣಾಗಿ ಚಹಾದಿಂದ ಸೇರುವದು
ರೋಗಬಂದ ಕಾಯದೊಳು ಮುಂದ
ಕಾಣಾಕಾಣಾ ವ್ಯಸನ ಬಿದ್ದ ಬಿಟ್ಟಿತು ಘನಾ।"[೮೯]

ಕ್ರಿ.ಶ. ೧೫೦೪ ರಲ್ಲಿ ಭಾರತಕ್ಕೆ ಬಂದ ಬಾಬರಖಾನ ಪರಘನದೇಶದಿಂದ ತಂಬಾಕು ಹಾಗೂ ಗುಡಗುಡಿಯನ್ನು ತಂದಿರುವನು. ಚಹಾ ಕುಡಿಯುವದು ಆರೋಗ್ಯಕ್ಕೆ ಹಿತವಲ್ಲಾ, ಅಜೀರ್ಣವಾಗಿ ಮುಂದೆ ಕಾಯದಲ್ಲಿ ರೋಗ ಸೇರುವುದು ಖಚಿತ. ಹಾಗೆ ನಿರಂತರವಾಗಿ ಚಹಾ ಕುಡಿಯುವುದರಿಂದ ಅಶಕ್ತತನ ಪ್ರಾರಂಭವಾಗುವುದು. ಹೀಗೆ ಹಲವಾರು ವಿಚಾರಗಳನ್ನು ವ್ಯಕ್ತಪಡಿಸಿರುವನು.

ಈ ಲಾವಣಿ [ಕಲಿಯುಗದ ಮಹಿಮೆ] ಯಲ್ಲಿ ಜನರ ಸೋಕಿ ಬದುಕನ್ನು ಪಟ್ಟಿ ಮಾಡಿದ್ದಾನೆ.

"ಕಲಿಯುಗ ಮಹಿಮೆ ಕೊಲೆ ಮಾಡಿ ಬಿಟ್ಟಿತು ಪಾಪಾ।
ಹಿಂದುಸ್ಥಾನವೆಂದರೆ ಹಿಂದು ಜನರು ಇರುವಂಥಾ ।
ಮಹಾಪುಣ್ಯ ಸ್ಥಲವಿದೆಂದು ವರ್ಣಿಸಿದರು ದೈವತಾ।
ವ್ಯಾಸ ವಾಲ್ಮೀಕಿ ಬರೆದಿಟ್ಟ ರಾಮಾಯಣ ಭಾರತಾ।
ಸಾಕಷ್ಟು ತಿಳಿಯಲೆಂದು ವಿಷಯಗಳು ಸಮಸ್ತಾ ।"[೯೦]

ಹಿಂದೂಸ್ಥಾನವೆಂದರೆ ಹಿಂದೂ ಜನರು ಇರುವಂತಹ ಮಹಾ ಪುಣ್ಯ ಸ್ಥಳ. ರಾಮಾಯಣ, ಮಹಾಭಾರತ ನಮ್ಮ ದೇಶದ ಮಹಾನ್ ಕಾವ್ಯ ಗ್ರಂಥಗಳು. ಇವು ನಮ್ಮ ದೇಶದ ಸಾಂಸ್ಕೃತಿಕ ಇತಿಹಾಸವನ್ನೇ ಬಿಂಬಿಸುತ್ತವೆ. ಆದರೆ ಇಂದು ನಮ್ಮ ದೇಶದಲ್ಲಿ ಪರರಾಷ್ಟ್ರದ ಪ್ರಭಾವ ಗಾಢವಾಗಿ ಬೇರೂರಿ ಬಿಟ್ಟಿದೆ. ಇಂಗ್ಲೀಷ ಕಲಿಯುವ ಚಿತ್ತದಿಂದ ಮಾತೃಭಾಷೆಯನ್ನು ಕೊಲ್ಲುತ್ತಿದ್ದಾರೆ. ಎಲ್ಲಿ ನೋಡಿದಲ್ಲಿ ಲಂಚದ ವಾತಾವರಣ ತುಂಬಿಕೊಂಡಿದೆ. ಕವಿಯ ದೇಸಿಯ ಪ್ರಜ್ಞೆಯನ್ನು ಇಲ್ಲಿ ಗಮನಿಸಬಹುದಾಗಿದೆ.

"ಪರದೇಶದವರ ಪೋಷಾಕ ಮಾಡುವ ಪರಿಪಾಟಾ ।
ಅರ್ಧಮರ್ದ ಇಂಗ್ಲೀಷ ಕಲಿತವರಿಗೆ ಬಹುಚಲ್ಲಾಟಾ ।

ಕ್ರಾಪ ಕಾಯ್ದು ತಲೆಯ ಹಿಕ್ಕಿ ಬೈತಲ ತೆಗೆದರು ಥೇಟಾ
ಮೀಸಿ ಬೋಳಿಸಿಕೊಂಡರು ಹೆಂಣಿನ ರೂಪವು ತೊಟ್ಟಾ ।"[೧]

ಇಂದು ನಮ್ಮ ದೇಶದಲ್ಲಿ ಪಾಶ್ಚಾತ್ಯರ ಪ್ರಭಾವ ಎಷ್ಟಾಗಿದೆ ಎಂದರೆ ಗಂಡು ಯಾವುದು ಹೆಣ್ಣು ಯಾವುದು ಎಂದು ಗುರುತಿಸುವುದೆ ಕಠಿಣವಾಗಿದೆ. ಒಕ್ಕಲುತನವೇ ನಮ್ಮ ಮುಖ್ಯ ಉದ್ಯೋಗ. ಆದರೆ ಇಂದು ಹೊಲದಲ್ಲಿ ದುಡಿಯದೆ ಹಳ್ಳಿ ಬಿಟ್ಟು ಪ್ಯಾಟಿ ಸೇರುವರು. ಹಿಂದಿನ ಹಿರಿಯರು ಗಳಿಸಿದಂತಹ ಸಂಪತ್ತನ್ನು ಲೂಟಿ ಮಾಡುವರು.

[ಚ್ಯಾಲ] "ಸಂಸಾರ ಮಾಡುವಂಥ ಅಕಲಾ ।
ಇಲ್ಲದಾಗಿ ತಿಂಬುವರೋ ಹೇಲಾ ॥೧॥
ದುಂದಗಾರಿಕೆಯೊಳಗೆ ತೂಗಿ ಮೇಲಾ ।
ಮಂಣುಗೂಡಿಸಿ ಬಿಟ್ಟರು ಬಾಳುವೆ ಎಲ್ಲಾ ॥೨॥
ಕಂಡಕಡಿಯ ಮಾಡಿದರು ಸಾಲಾ ।
ಸಾಲದೊಳಗೆ ಕಳೆದರು ಮನಿಯ ಹೊಲಾ" ॥೩॥[೨]

ಈ ರೀತಿಯಾಗಿ ಕಲಿಯುಗದಲ್ಲಿ ಸಾಕಷ್ಟು ಘಟಿಂಗ ಜನರೇ ಸಂಸಾರವನ್ನು ಮಣ್ಣುಗೂಡಿಸಿದರು. ಇಂತಹ ಸಾಕಷ್ಟು ನಿದರ್ಶನಗಳನ್ನು ಕವಿ ಅಲಭೈರಿ ನೀಡಿರುವನು.

೬. ಉಪಸಂಹಾರ :

ಅದೆಷ್ಟೊ ಜನಪದ ಕವಿಗಳಿಂದ ರಚಿಸಲ್ಪಟ್ಟ ಲಾವಣಿ ಇಂದು ಅವಸಾನದ ಅಂಚಿನಲ್ಲಿದೆ. ನವನಾಗರಿಕತೆಯ ಜಾಡಿನಿಂದ ಹಿಂದೆ ಪ್ರಸಿದ್ಧವಾದ ಅದೆಷ್ಟೋ ಅನುಭವಿಕ ಲಾವಣಿ ರಚನೆಕಾರರು ಹಾಗೂ ಅವರ ಹಾಡುಗಳು ಇಂದು ಒಂದೊಂದಾಗಿ ಕಣ್ಮರೆಯಾಗುತ್ತಿವೆ. ಹೊಸಬರಲ್ಲಿ ಇಂತಹ ಜನಪದ ಸಾಹಿತ್ಯ ಕುರಿತು ಆಸಕ್ತಿಯಿಲ್ಲ. ಜನಪದ ಸಾಹಿತ್ಯ ಸಂಗ್ರಹಣೆ ಈಗ ತೀವ್ರಗತಿಯಲ್ಲಿ ನಡೆಯಬೇಕಾಗಿದೆ. ಅಲ್ಲದೇ ಜನಪದ ಹಾಡುಗಳನ್ನು ಧ್ವನಿ ಮುದ್ರಣ ಮಾಡುವುದು. ಕೃತಿರೂಪದಲ್ಲಿ ಹೊರ ತರುವುದು ಹಾಗೂ ಇಂತಹ ವಿಷಯಗಳ ಕುರಿತು ಸಂಶೋಧನೆ ಕೈಗೊಳ್ಳಲು ವಿಶ್ವವಿದ್ಯಾಲಯಗಳು, ಪರಿಷತ್ತಿನಂತಹ ಸಂಘ ಸಂಸ್ಥೆಗಳು , ಸರಕಾರವೂ ಹೆಚ್ಚಿಗೆ ಜವಾಬ್ದಾರಿ ವಹಿಸಿಬೇಕು. ನಶಿಸಿ ಹೋಗಬಹುದಾದ ವ್ಯಕ್ತಿ ಹಾಗೂ ಅವರ ಸಾಹಿತ್ಯವನ್ನು ಉಳಿಬೇಕಿದೆ. ಕವಿಯ ಲಾವಣಿಗಳಲ್ಲಿ ಪ್ರಾದೇಶಿಕ ನುಡಿಗಟ್ಟುಗಳ ಮೈತ್ರಿಯಿದೆ. ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ನಿದರ್ಶಿಸುವಂತಿವೆ.

ಈ ನಿಟ್ಟಿನಲ್ಲಿ ಅಲಭೈರಿ ಹಾಗೂ ಆತನ ಸಾಹಿತ್ಯವೂ ಸಹ ನಶಿಸುವ ಹಂತದಲಿದ್ದು, ಆತನ ಸಾಹಿತ್ಯವನ್ನು ಉಳಿಸುವ ಕಾರ್ಯ ನಡೆಯಬೇಕಾಗಿದೆ.

೫.೪ ತತ್ತ್ವ ಪದಗಳು (ಭಜನಾ ಪದಗಳು) :

"ತತ್ತ್ವಪದ ಎಂಬುದು ತತ್ತ್ವ ಮತ್ತು ಪದಗಳಿಂದ ಕೂಡಿದೆ. ತತ್ತ್ವ ಪದದ ನಿಷ್ಪತ್ತಿಯನ್ನು ಗಮನಿಸುವುದಾದರೆ ತತ್ವಯೆಂದರೆ ಯಥಾರ್ಥತೆ, ನಿಜಸ್ಥಿತಿ, ಬ್ರಹ್ಮ, ಸಾರ ಸ್ವರೂಪ, ಸ್ವಭಾವ, ವಸ್ತು, ಪಂಚಭೂತ, ಮೂಲಪದಾರ್ಥ, ಸಿದ್ಧಾಂತ, ದರ್ಶನ ಎಂಬ ವಿಭಿನ್ನ ಅರ್ಥಗಳನ್ನು ಹೊಂದಿದೆ. ಪದ ಎಂದರೆ ಹಾಡು, ಹದಗೊಂಡ ಶಬ್ಧ ಎಂಬ ಅರ್ಥವನ್ನು ನೀಡುತ್ತದೆ. ಒಟ್ಟಿನಲ್ಲಿ ತತ್ವಪದ ಎಂದರೆ ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆ ಎಂದೆನಿಸಿಕೊಳ್ಳುತ್ತದೆ. ತತ್ವಪದಗಳು ಮೊತ್ತ ಮೊದಲಿಗೆ ಅನುಭಾವ ಗೀತೆಗಳು, ಆತ್ಮ ಮತ್ತು ಪರಮಾತ್ಮರ ನಡುವಿನ ಸಂಬಂಧವನ್ನು ಅಧ್ಯಾತ್ಮಿಕ ತತ್ವಗಳನ್ನು ಇವು ಪ್ರತಿಪಾದಿಸುತ್ತವೆ. ಅಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಕೊಂಡ ಭಕ್ತನ ಅಂತರಂಗದಲ್ಲಿನ ತಳಮಳ, ಶ್ರದ್ಧೆ, ಭಕ್ತಿ, ಜ್ಞಾನ, ವೈರಾಗ್ಯ, ಮುಕ್ತಿಯ ಹಂಬಲ, ಅಂತರಂಗ ಶುದ್ಧಿ, ಗುರು ಕಾರುಣ್ಯ, ಧರ್ಮನಿಷ್ಠೆ, ಜೀವದಯೆ, ಸಾಮಾಜಿಕ ಕಾಳಜಿ, ನೀತಿಬೋಧೆ ಮುಂತಾದ ಭಾವಗಳನ್ನು ಹಾಡಿನ ರೂಪದಲ್ಲಿ ಅಭಿವ್ಯಕ್ತಿಸುವ ಕ್ರಮವೇ ತತ್ವಪದಗಳ ರಚನೆಗೆ ಕಾರಣವಾಗಿವೆ. ಅಧ್ಯಾತ್ಮದ ನೆಲಗಟ್ಟಿನ ಮೇಲೆ ರಚನೆಯಾದ ಈ ತತ್ವಪದ ಸಾಹಿತ್ಯ ಅಷ್ಟಕ್ಕೆ ಸೀಮಿತವಾಗಿರದೆ ಸಾಮಾಜಿಕ, ರಾಜಕೀಯ, ಆಚರಣಾತ್ಮಕ, ಸಾಹಿತ್ಯಿಕ, ಸಾಂಸ್ಕೃತಿಕ ನೆಲೆಗಳನ್ನು ಪಡೆದುಕೊಂಡಿದೆ. ತತ್ವಪದ ಸಾಹಿತ್ಯವು ಶರಣರು, ದಾಸರು, ಸೂಫಿಗಳು, ಜೈನಧರ್ಮೀಯರು, ಆರೂಢ, ಅವಧೂತರು, ಸಿದ್ಧರು, ನಾಥರು, ಪಂಚಾಳರು ಮುಂತಾದ ಅನೇಕ ಅನುಭಾವ ಪಂಥದ ಸಾಧಕರಿಂದ ರಚನೆಯಾದ ಗೇಯಾತ್ಮಕ ಗೀತೆಗಳಾಗಿವೆ. ಹೀಗಾಗಿ ಯಾವುದೇ ಧಾರ್ಮಿಕ ಅಥವಾ ಅನುಭಾವಿಕ ಸಿದ್ಧಾಂತಗಳನ್ನು ಪದಗಳ (ಹಾಡು) ಮೂಲಕ ವ್ಯಕ್ತಪಡಿಸುವ ಒಂದು ಕ್ರಮವೇ ತತ್ವಪದಗಳೆನಿಸುತ್ತವೆ."[1]

ಇಂತಹ ತತ್ವ ಪದಗಳ ರಚನೆಯಕಾರರಲ್ಲಂತೂ ಕನ್ನಡ ಸಾಹಿತ್ಯ ಎಂದೂ ಬಡವಾಗಿಲ್ಲ. ಹಲವಾರು ತತ್ವಪದಕಾರರಲ್ಲಿ ನಾವು ಮುಖ್ಯ ಗಮನ ಹರಿಸುವುದೇ ಸಂತ ಶಿಶುನಾಳ ಶರೀಫ್ ಸಾಹೇಬರು. ಅವರ ಅಧ್ಯಾತ್ಮಿಕ ಗಟ್ಟಿಯಾದ ನಿಲುವು ಎಂತಹವರನ್ನು ಮಂತ್ರ ಮುಗ್ಧಗೊಳಿಸುವಂತಹದ್ದು. ತತ್ತ್ವ ಪದದ ಕೆಲವು ಆಶಯಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಿದ್ದೇನೆ.

ಇಲ್ಲಿ ಸತ್ಯ ಮತ್ತು ವಾಸ್ತವವಾದಿ ಸಂಶೋಧಕನಿಗೆ ತನ್ನ ಸುತ್ತ ಮುತ್ತಲಿನ ಪರಿಸರದ ಸಾಂಸ್ಕೃತಿಕ ಶ್ರೀಮಂತಿಕೆ ಕಾಣದಂತಾದರೆ ಆತನ ಓದು ಗೋರಿಯ ಮೇಲಿನ ಹೂವೆ ಸರಿ. ನನ್ನಲ್ಲೆ ತುಡಿತವನ್ನು ಈ ಭಾಗದ ಮಹಾಸಂತ ಸಾಮ್ರಾಟ, ತತ್ವಪದ ಶ್ರೇಷ್ಠಜ್ಞ "ಅಲಭ್ಯೆರಿಯನ್ನು ಓದಿಯೇ ದಿಗ್ಭ್ರಮೆಗೆ ಒಳಗಾಗಿದ್ದೇನೆ. ಇನ್ನು ಅವನ ಸಂಗಡ ಒಡನಾಡಿಗಳಾಗಿ ಅವನ ಧ್ವನಿಗೆ ಧ್ವನಿಯ ಸೇರಿಸಿ ಹಾಡಿ ಅವನೊಂದಿಗೆ ಒಂದಿಷ್ಟು ದಿನ

ಬದುಕಿದ ಅವನ ಸಂಗಡಿಗರಿಗೆ ಅದೆಂತಹ ತಾದಾತ್ಮ್ಯ ಮೂಡಿರಬಹುದು. ಇದು ಕಲ್ಪನಾತೀತವೇ ಸರಿ ಎಂದರೂ ಅತಿಶಯವಾಗದು.

ತತ್ವಪದಗಳು ಅನುಭಾವ ಪದಗಳು, ಭಜನಾ ಪದಗಳು, ಏಕತಾರಿ ಪದಗಳು, ಗುರುಶಿಷ್ಯರ ಪದಗಳು ಹೀಗೆ ಹಲವು ಹೆಸರುಗಳನ್ನು ಹೊಂದಿದ್ದು, ತತ್ವಪದ ಎನ್ನುವ ಶೀರ್ಷಿಕೆ ಹೆಚ್ಚು ಬಳಕೆಯಲ್ಲಿದೆ.

ಈ ತತ್ವಸಾಹಿತ್ಯವನ್ನು ಮುಖ್ಯವಾಗಿ "ಗುರು-ಶಿಷ್ಯರ ಪದಗಳು" ಎಂದು ಕರೆಯುತ್ತಾರೆ. ಏಕೆಂದರೆ "ತತ್ವಪದ ಸಾಹಿತ್ಯದಲ್ಲಿ ಪ್ರತಿಯೊಬ್ಬ ಅನುಭಾವಿಗೆ ಒಬ್ಬ ದೀಕ್ಷಾ ಗುರು ಇರಲೇಬೇಕು. ಸೂಫಿಗಳಲ್ಲಿ ಕಂಡು ಬರುವ ಹಾಗೆ ಇಲ್ಲಿ ಗುರುವಿಗೆ ಅಗ್ರಸ್ಥಾನವಿದೆ. ಗುರುವಾದವನು ತಾನು ಅಧ್ಯಾತ್ಮಿಕ ಸಾಧನೆಯನ್ನು ಮಾಡುವುದರ ಜೊತೆಗೆ ಅನೇಕ ಶಿಷ್ಯರಿಗೆ ದೀಕ್ಷೆಯನ್ನು ಕೊಡುವುದರ ಮೂಲಕ ಶಿಷ್ಯ ಪರಂಪರೆಯನ್ನು ಬೆಳೆಸುತ್ತಾರೆ. ಈ ರೀತಿಯ ಗುರು ಯಾವುದೇ ಧರ್ಮ, ಜಾತಿ, ಮತ ಪಂಗಡದವನಾಗಿರಬಹುದು. ಮುಖ್ಯವಾಗಿ ಆತ ಅಧ್ಯಾತ್ಮಿಕ ಸಾಧಕನಾಗಿರಬೇಕು. ತತ್ವಪದಗಳಲ್ಲಿ ಗುರುವನ್ನು ಸದ್ಗುರು, ಗಂಡ, ಮುಂಡ ಇತ್ಯಾದಿಯಾಗಿ ಕರೆಯಲಾಗಿದೆ. ಇಲ್ಲಿ ಗುರು ಮತ್ತು ಶಿಷ್ಯರ ಭಾವ ಸತಿ-ಪತಿಯ ಭಾವ. ಅನುರಾಗದ ಪ್ರೇಮಮಯ ಹಾಗೂ ವಾತ್ಸಲ್ಯ ಮೈವೆತ್ತ ಅನುಭೂತಿಯಾಗಿದೆ. ಹೀಗಾಗಿ ಗುರುವು ಅಧ್ಯಾತ್ಮ ಸಾಧನೆಯ ಮಾರ್ಗದರ್ಶನಕನಾಗಿ, ದೀಕ್ಷಾಗುರುವಾಗಿ, ಪತಿಯಾಗಿ, ತಂದೆಯಾಗಿ ಮಹತ್ತರವಾದ ಸ್ಥಾನವನ್ನು ಪಡೆದಿದ್ದಾನೆ.

ತತ್ವಪದಗಳಿರುವುದೇ ಗುರುವಿನ ಕಾರುಣ್ಯ, ಮಹಿಮೆ, ವಾತ್ಸಲ್ಯ ಸಾರುವುದಕ್ಕಾಗಿ ಎಂಬಂತಾಗಿದೆ.

"ಶ್ರೀ ಗುರು" ಎಂಬ ತತ್ವಪದವು ಅಲಭ್ಯೆರಿಯ ಆರಾಧ್ಯದೈವ ಚನ್ನವೃಷಭೇಂದ್ರನ ಕುರಿತು ಸ್ತುತಿಸುತ್ತದೆ.

"ಶ್ರೀ ಗುರು ಚನ್ನವೃಷಭಾರೂಢ ಶಿವ
ಯೋಗಿಶ್ವರನಿಗೆ ನಮೋ ನಮೋ..... ॥ಪ॥
ಜಗದಾದಿಕಾರಣ ನಿಗಮಾಗಮ ವಂದ್ಯ
ಸಗುಣ ಶಿವನಿಗೆ ನಮೋ ನಮೋ.....॥೧॥
ದೇವಾದಿ-ದೇವನ ದೇವಿ ಜಗದಂಬೆಯ
ಪಾವನ ಪಾದಕೆ ನಮೋ ನಮೋ.....॥೨॥
ಪ್ರಣವಾದಿ ಪುರುಷ-ಸದ್ಗುಣಮಣಿ ಗಣಪಂಗೆ
ಮಣಿದು – ಮಾಡುವೆ ನಮೋ ನಮೋ॥೩॥
ಅಂದೇನು ಇಂದೇನು ಎಂದಿಗಾದರು ಶಿವನ

ಹೊಂದಿದ ಪ್ರಮಥರಿಗೆ ನಮೋ ನಮೋ ॥೪॥
ವಿಮಲ ಹಾರೂಗೇರಿ ಪ್ರಥಮಪಸಾರವು
ನಮಗೂ-ನಿಮಗೂ ನಮೋ ನಮೋ ॥೫॥"[೨]

ಹೀಗೆ ಗುರುವಿನ ಸ್ತುತಿ ತನ್ನ ದೇಹವನ್ನೇ ಅವನಿಗೆ ಅರ್ಪಿಸಿ ಅವನಿಂದ ಬರುವ ಜ್ಞಾನ ಸುಧೆಗೋಸ್ಕರ ಜಾತಕ ಪಕ್ಷಿಯಂತೆ ಕಾಯ್ದುಕೊಳ್ಳಲು ಮುಗ್ಧ ಜ್ಞಾನ ಸಂಪಾದಕರಾಗುತ್ತಾರೆ ಈ ಸಂತ ಪರಂಪರೆ. ಅದಕ್ಕೆ ಅಲಭ್ಯೆರಿ ಹೊರತಲ್ಲವೆಂದು ಹಲವು ಬಾರಿ 'ಸತ್ಯ' ಮಾಡಿ ತೋರಿದಂತಿದೆ.

"ಗುರುವೆ ನಿಮ್ಮ ಕರುಣೆ ಸ್ಥಿರವಾಗಿರಲಿ" ಈ ತತ್ವಪದವು ಕವಿಯ ಪ್ರಕಟಿತ ಸಾಹಿತ್ಯದಲ್ಲಿ ವಿಶ್ಲೇಷಣೆಗೊಂಡಿರುತ್ತದೆ. ಆದರೂ ಮತ್ತೆ ಅಪ್ರಕಟಿತ ಸಾಹಿತ್ಯದಲ್ಲಿ ಇದನ್ನು ಗಮನಿಸಲಾಗಿ ಈ ತತ್ವಪದದ ಮೇಲೆ ಹಲವರ ಪ್ರಭಾವ ಆಗಿದೆ. ದಾಸರ, ವಚನಕಾರ ಹೀಗೆ ಹಲವಾರು ಕಡೆ ಇದೆ. ಮಾದರಿಯ ವಚನ, ಕೀರ್ತನೆಗಳು ಬಂದಿವೆ. ಮಹಾದೇವಿ ಅಕ್ಕನ ಒಂದು ವಚನವು ಈ ಮಾದರಿಯನ್ನೇ ಹೋಲುತ್ತವೆ. ಅಷ್ಟಕ್ಕೂ ಇಲ್ಲಿಯ ತತ್ವಪದಕಾರ ಹೀಗೆ ನಕಾರಾತ್ಮಕತೆಯನ್ನು ನಿರಾಶೆಯನ್ನು ದೈವದಲ್ಲಿ ಬೇಡುತ್ತಾನೆ. ಮಹಾ ಫಲಾಪೇಕ್ಷಿತನಾದ ಮನುಷ್ಯ ಹೀಗೇಕೆ? ಎಂದು ಸಹಜವಾಗಿಯೇ ಅನ್ನಿಸುತ್ತದೆ. ಮನುಷ್ಯ ಅತಿಯಾದ ಸುಖದಲ್ಲಿ ತೇಲಾಡುತ್ತಿದ್ದರೆ ಅವನು ದೈವವನ್ನು ಮರೆತೇ ಬಿಡುತ್ತಾನೆ. ಕಷ್ಟಗಳ ಕೋಟೆಯಲ್ಲಿ ಇದ್ದು ಸದಾ ಗುರುವಿನ ಧ್ಯಾನದಲ್ಲಿದ್ದು ಮನ ಆ ಮೂಲಕ ನಿಜಾನಂದವನ್ನು ಹೊಂದುವಂತಾಗುತ್ತದೆ ಎಂಬ ಅವನ ಮಹಾ ನಂಬಿಕೆ ಇಲ್ಲಿ ಗುರುವನ್ನೇ ದೈವಕ್ಕೆ ಏರಿಸಿ ಅಲ್ಲಿಯೇ ತನ್ನೆಲ್ಲ ಅಹಂಕಾರದ ಶರಣು ತರುತ್ತಾನೆ.

"ಈ ಅರ್ಥದಲ್ಲಿ ಅವಧೂತ ಮಾರ್ಗವು ಜ್ಞಾನಮಾರ್ಗಿಯಾದುದು. ಈ ಜ್ಞಾನಾಸಕ್ತಿಯು ಶಾಸ್ತ್ರ ಪಾಂಡಿತ್ಯದ ಹಸಿವಲ್ಲ, ತನ್ನ ತಾ ತಿಳಿಯುವ ಕ್ರಮವಾಗಿದೆ. ಆದ್ದರಿಂದ ತತ್ವಪದಕಾರರು, ಸಾಧಕರು ಯೋಗಿಗಳೇ ವಿನಾ ಭಕ್ತರಲ್ಲ. ಎಂತಲೇ ಇವರಲ್ಲಿ ಯಾರೂ ಧರ್ಮ ಸ್ಥಾಪನೆ ಮಾಡಲಿಲ್ಲ. ಇವು ಗುರುಪಂಥಗಳು. ಕಬೀರ ಪಂಥ, ನಾನಕ ಪಂಥ, ಗೋರಖ ಪಂಥ, ಹೆಸರುಗಳು ಕೂಡಾ ಇದನ್ನು ದೃಢೀಕರಿಸುತ್ತವೆ. ಸೂಫಿ, ವಾರಕರಿ, ಮಹಾನುಭಾವ ಕೂಡ ಅವಧೂತ ಪಂಥಗಳೇ. ಕರ್ನಾಟಕದ ತತ್ವಪದಕಾರರು ವಿಶಾಲ ನೆಲೆಯಲ್ಲಿ ಗುರುಪಂಥಗಳು, ಗುರು ಇಲ್ಲಿ ಮುಖ್ಯ, ಶಿಷ್ಯನೊಬ್ಬ ಗುರುವನ್ನು ಹುಡುಕಿಕೊಳ್ಳಲು ಗುರುವು ಶಿಷ್ಯನನ್ನು ಒಪ್ಪಿಕೊಳ್ಳಲು ಹುಟ್ಟಿನಿಂದ ಬಂದ ಜಾತಿಮತಗಳನ್ನು ಲೆಕ್ಕಿಸಬೇಕಿಲ್ಲ. ಶಿಶುನಾಳ ಷರೀಫನಿಗೆ ಗೋವಿಂದ ಭಟ್ಟ, ಚೆನ್ನೂರು ಜಲಾಲಸಾಬನಿಗೆ ಕಡಕೋಳ ಮಡಿವಾಳ ಇರುವಂತೆ"[೩] ಜೈನನಾದ ಅಲಭ್ಯೆರಿಗೆ ವೀರಶೈವನಾದ

ಚನ್ನವೃಷಭೇಶನನ್ನೇ ಮಹಾಗುರುವನ್ನಾಗಿ ಅಧಿ ದೈವವಾಗಿ ಸ್ವೀಕರಿಸಿದ್ದಾನೆ. ಹಾಗಾಗಿ ಇಲ್ಲಿ ಅಲಭೈರಿ ಹಲವಾರು ರೀತಿಯಿಂದ ತನ್ನ ದೀಕ್ಷಾಗುರು ಚನ್ನವೃಷಭೇಂದ್ರ ಸ್ವಾಮಿಯನ್ನು ಸ್ತುತಿಸುವಲ್ಲಿಯೇ ತನ್ನೆಲ್ಲ ಮನ – ಹೃದಯ ಸಮರ್ಪಣೆ ಮಾಡಿಕೊಳ್ಳುತ್ತಾನೆ.

ತತ್ವಪದಗಳು ಮತ್ತು ತತ್ವಪದಕಾರರು ಹಿಂದೂ–ಮುಸ್ಲಿಂ ಎಂಬ ಭೇದವಾಗಲಿ ಅನ್ಯಜಾತಿಯವನೆಂದಾಗಲಿ ಇಲ್ಲಿ ಮುಖ್ಯವಾಗುವುದೇ ಇಲ್ಲ. ಒಟ್ಟಾರೆ ಇವರದು ಭಕ್ತಿ ಸಾಹಿತ್ಯದಲ್ಲಿ ಅದು ಅನುಭಾವಿಕ ಸಾಹಿತ್ಯ. ಈ ಅವಧೂತ ಪಂಥದವರೆಲ್ಲ ಹಾಗೆಯೇ ಇವರ ರಚನೆಗಳೆಲ್ಲ ಭಕ್ತಿ ಸಾಹಿತ್ಯವಲ್ಲ; "ಅವಧೂತರು ಮೂಲತಃ ಭಕ್ತಿ ಸಾಹಿತ್ಯ (ತತ್ವ) ವನ್ನು ಒಪ್ಪುವವರಲ್ಲ. ಭಕ್ತಿ ಕವಿಗಳಿಗೆ ಇರುವಂತೆ ಕೆಲವು ಆರೂಢರಿಗೆ ಅಂಕಿತವಿದೆ ಎಂಬ ಕಾರಣಕ್ಕೆ ಅವರನ್ನು ಭಕ್ತರು ಎಂದು ತಿಳಿಯಬೇಕಾಗಿಲ್ಲ. ಗುಹೇಶ್ವರ, ಶಿಶುನಾಳದೀಶ ಇವು ಅಲ್ಲಮನ ಶರೀಫನ ಇಷ್ಟದೇವರ ಹೆಸರುಗಳಲ್ಲ. ಗುಹೇಶ್ವರ, ಶಿಶುನಾಳಧೀಶರು ಅವರ ಒಳಗೆ ಚೈತನ್ಯ ರೂಪದ ಪ್ರತೀಕಗಳು. ಯೋಗ ಸಾಧನೆಯ ಮೂಲಕ ಅವರನ್ನು ಕಾಣಬೇಕಷ್ಟೆ. ಆದರೆ ಭಕ್ತಿಯ ಸ್ವರೂಪವೇ ಬೇರೆ. ನಿರ್ದಿಷ್ಟ ದೈವಕ್ಕೆ ತನ್ನ ಸಮರ್ಪಣೆ ಮಾಡಿಕೊಳ್ಳುವದು ಅದರ ಲಕ್ಷಣ. ಬಸವಣ್ಣ, ಕನಕದಾಸ, ಪುರಂದರದಾಸರದು ಭಕ್ತಿ ಸಾಹಿತ್ಯ. ಆದರೆ ಆರೂಢರ ಅನುಭಾವವು ಮೂಲತಃ ಒಂದು ದರ್ಶನ ಹಾಗೂ ಆದರ್ಶವನ್ನು ಯೋಗ ಸಾಧನೆಯ ಆಚರಣೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಒಂದು ಪಂಥ".[೪] ಹೀಗಾಗಿಯೇ ತತ್ವಪದಕಾರರದು ಒಂದು ರೀತಿಯ ನಾಸ್ತಿಕ ಮಾರ್ಗಿಯಾದ ನಿಲುವಿನದು. ಮತ್ತೆ ಇವರು ಸಾರಿದ್ದೆಲ್ಲವು ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನೇ ಎಂದರೆ ಅತಿಶಯವಿಲ್ಲ. "ಇಲ್ಲಿಯ ಅಹಂಕಾರ" ಎಂದರೆ ತತ್ವಪದಗಳಲ್ಲಿ ಇರುವ ಅದ್ವೈತದ ಅಹಂ. ಬ್ರಹ್ಮಾಸ್ಮಿತನ, ತಾತ್ವಿಕ ಖಚಿತತೆ ಮತ್ತು ಈ ಖಚಿತತೆಯ ಜಗತ್ತನ್ನು ಲೋಕವನ್ನು ಅರ್ಥೈಸಬಲ್ಲ ವಿಮರ್ಶಿಸಬಲ್ಲ. ಸೈದ್ಧಾಂತಿಕ ದಾರ್ಷ್ಟ್ಯ ಐಡಿಯಾಲಜಿಗಳು ಕೊಡುವ ವೈಚಾರಿಕ ಭದ್ರತೆಯಿದು. ಗುರುವಿಗೆ ಮಾತ್ರ ವಿನಯಶೀಲನಾಗಿ ಬದ್ಧನಾಗಿ ಇರಬೇಕಾಗಿರುವ ಗುರುಪಂಥಗಳಲ್ಲಿ ಉಳಿದೆಲ್ಲ ಲೌಕಿಕ ಅಧಿಕಾರಸ್ಥ ಶಕ್ತಿಗಳನ್ನು ತೃಣೀಕರಿಸಿ ನೋಡಬಲ್ಲ ದಿಟ್ಟತನ ತನಗೆ ತಾನೆ ಒದಗಿಬರುತ್ತದೆ. ನನ್ನ ದಾರಿಯನ್ನು ಏಕಾಂಗಿಯಾಗಿ ನಾನೇ ಹುಡುಕಿ ಪಡೆದುಕೊಳ್ಳಬೇಕೆಂಬ ಹೊಣೆಗಾರಿಕೆ ತನ್ನ ಸಾಧನೆಯಲ್ಲಿ ಸಿಗುವ ಅನುಭವದ ಮೂಲಕವೇ ಸತ್ಯವನ್ನು ಅರಸುವ ಗುಣ. ಇವು ಅನುಭವವಾದ ಹಾಗೂ ವ್ಯಕ್ತಿವಾದಗಳನ್ನು ನಿರ್ಮಿಸಿ ಬಿಡುತ್ತದೆ". ಅಲಭೈರಿಯು ಕೂಡಾ ಹೀಗೆಯೇ ತನ್ನ ತತ್ವಪದಗಳಲ್ಲಿ ಸಾರಿಹೇಳುತ್ತಾನೆ.

"ಅಕ್ಷಯಭಾವ ಭೀಕ್ಷೆ" ಬೇಡುವೆನು (೧೨೦), ಎಂಬ ತತ್ವಪದ ಹೇಳುತ್ತದೆ.

"ಅಕ್ಷಯ ಭಾವ ಭಿಕ್ಷವ ಬೇಡುವೆನಾ। ॥ಪ॥
ನಕ್ಷತ್ರರಮಣನ। ಅಕ್ಷಿ ಉಳ್ಳಾತನ

ಲಕ್ಷಿಸಿ ಪರಿಪೂರ್ಣ। ದೇವಾ। ಲಕ್ಷಿಸಿ ಪರಿಪೂರ್ಣ
ಅಕ್ಷಯ ಭಾವ ಭೀಕ್ಷವ ಬೇಡುವೆನಾ॥೧॥
ಬೀಕ್ಷವ ನೀಡಿರಯ್ಯಾ। ದಕ್ಷತೆಯಿಂದಲಿ
ರಕ್ಷಿಸಿ ನಿಜ ಕರುಣಾ। ದೇವಾ। ರಕ್ಷಿಸಿ ನಿಜಕರುಣಾ।
ಅಕ್ಷಯ ಭಾವ ಭೀಕ್ಷವ ಬೇಡುವೆನಾ॥೨॥
ಪ್ರಕ್ಷಾಲಿಪ ಚರಣಾ। ದೇವಾ। ಪ್ರಕ್ಷಾಲಿಪೆ ಚರಣಾ।
ಅಕ್ಷಯ ಭಾವ ಭಿಕ್ಷವ ಬೇಡುವೆನಾ॥೩॥"

ಈ ತತ್ವಪದ ಸೂಕ್ಷ್ಮವು ಅಷ್ಟೇ ಅರ್ಥಗರ್ಭಿತವೂ ಆಗಿದೆ. ಮನುಷ್ಯನ ಭಾವಗಳಿಗೆ ಲೆಕ್ಕವೇ ಇಲ್ಲ. ಅವು ಅಕ್ಷಯದಷ್ಟು ಅವನ್ನು ಕರುಣಿಸುವವ, ದಯಪಾಲಿಸುವವನು ಅವನೊಬ್ಬನೇ. ಆ ಎಲ್ಲ ಭಾವಗಳು ನನ್ನಲ್ಲಿ ಒಲಿಯಲಿ ಎಂದು ಅಕ್ಷಯಭಾವದ ಭಿಕ್ಷೆ ಬೇಡುತ್ತಾನೆ ಅಲಭ್ಯೆರಿ. ಗುರುವನ್ನು ಸ್ತುತಿಸುವ ಅವನ ಕೀರ್ತಿ ಕೊಂಡಾಡುವ ಹಲವಾರು ಗುರು ಸ್ತುತಿಯ ತತ್ವಗಳ ರಾಶಿಯನ್ನೇ ಅಲಭ್ಯೆರಿ ಸೃಷ್ಟಿಸಿದ್ದಾನೆ.

ಸಾಧುರೂಪವ ತೋರುವ, ಪಾಲಿಸು ಗುರುರಾಯ, ಶ್ರೀ. ಗುರುವೇ ಕರುಣದಿಂದ ನನ್ನನ್ನು ನೋಡು, ಶ್ರೀ. ಗುರುವೆ ಎನ್ನನ್ನು ಮನ್ನಿಸು, ಪರಮೇಶಾ ಪಾಪ ವಿನಾಶಾ, ಯತಿರಾಜ ರಕ್ಷಿಸೊ, ಸತ್ಯ ಸ್ಮರಿಸುವ ವರವ ನೀಡು, ಭವ ಮರಣ ಭಯದಿಂದ ರಕ್ಷಿಸು, ಕೃಪಾ ನಿಧಿಯೇ ಕರುಣಿಸು, ಕರುಣದಿಂದ ನೋಡು, ಕರುಣಿಸು ಜಗನ್ನಾಥಾ, ಪಾವನ ಪಾದವ ನಂಬಿರುವೆ, ಬಾಲನ ಪಾಲಿಸು, ಲೋಕನಾಥ ಮುನಿಯದಿರು, ಗುರುಧ್ಯಾನ ಮಾಡು, ಏತಕೆ ಬಳಲುವೆ, ಗುರುದೇವನ ಭಜಿಸು (೪೨) ತಿಳಿದು ಮಾಡಿರಿ ಗುರುಭಕ್ತಿ, ಭಾವದಂತೆ ಮಹಾದೇವ, ಸದ್ಗುರು ಆಜ್ಞಾ ಪಾಲಿಸದವನು, ಗುರುನಿಂದಾ ಮಾಡದಿರು, ಗುರು ಸೇವೆಗೆ ನಡೆಯಿರಿ (೯೪) ಭಾಸುರಾಂಗನೆ ಬೇಗ ಬಾ, ನಂಬಿಗಿಡು ಗುರು ಬೋಧೆಯಲಿ, ಶ್ರೀಗುರು ಉಪದೇಶವನು ಮಾಡಿದನು... ಮುಂತಾದವು ಗುರುಸ್ತುತಿಯನ್ನು ತಿಳಿಸುತ್ತವೆ.

ಅವಧೂತ ಪಂಥದ ವೈಶಿಷ್ಟ್ಯವೆಂದರೆ ದೈವವನ್ನು ತನ್ನ ದೀಕ್ಷಾಗುರುವಿಗೆ, ದೀಕ್ಷಾಗುರುವನ್ನೇ ಹೃದಯದ ಅಂತರಾಳದ ಪೂಜಿಸುವ ದೈವಕ್ಕೆ ಹೋಲಿಸುವುದು ಸರ್ವೆ ಸಾಮಾನ್ಯ. ಹಾಗಾಗಿ ಇಲ್ಲಿ ಗುರುಸ್ತುತಿಯಲ್ಲಿಯೇ ದೈವಾರಾಧನೆಯ ಮಹೋನ್ನತಿ ಅಡಗಿದೆ. ಜ್ಞಾನದ ಕಣ್ಣು ನೀಡುವ ಗುರು ಕಾರುಣ್ಯ ಮಹತ್ತರವಾಗುತ್ತದೆ.

"ಶ್ರೀ. ಗುರುವೆ ನಿಮ್ಮ ಪಾದವ ನಂಬಲು (೧೮), ಈ ತತ್ವಪದದಲ್ಲಿ

ಶ್ರೀ. ಗುರುವೆ ನಿಮ್ಮ ಪಾದವ ನಂಬಲು
ರಾಗ ಭೋಗವು ನೀಗಿ ದವಳಾತ್ಮನಾದೆ ॥ಪ॥

ಕರಣ ವಿಶುದ್ಧಿಗೆ ಕಾರಣವಾಗಿಪ್ಪ
ವರವೇದ ವಿದಿತ ಕರ್ಮೋಪಾಸನೆಗಳು
ಬೆರೆದು ಮಲ ವಿಕ್ಷೇಪದುರಿತ ದೋಷಂಗಳನು
ತೊರೆದು ನಿರ್ಮಲ ಬುದ್ಧಿ ಪರಿಪಕ್ವನಾದೆ ॥೧॥
ಆವರಣ ಭಂಗವಾಗಲು ಮುಂದೆ ಪೇಳಿದಿ
ಕೇವಲ ಜ್ಞಾನ ಯೋಗವನಾಗಲೆ
ಜೀವ ಜಡವರ್ಗದಾಶಪಾಸವನಳಿದು
ಭಾವಿಸಲನುಪದ ಅದ್ವಯನಾದೆ" ॥೨॥[೬]

ಸಂತರು ಗುರುವಿನ ಕಿರೀಟ ನೋಡಲಾರರು. ಅಲ್ಲಿಗೆ ಸೇರುವ ಆಶೆ ವ್ಯಕ್ತಿಪಡಿಸಲಾರರು. ಅವರದು ಕೇವಲ ಗುರುವಿನ ಪಾದದಲ್ಲಿ ಲೀನವಾಗುವುದಷ್ಟೇ ಅವರ ಜೀವ ಧ್ಯೇಯ. ತನ್ನ ಮಲಿನ ಭಾವಗಳ ತಿಳಿಗೊಳಿಸು. ಈ ಜೀವದ ಜಡ–ಆಶ–ಪಾಶಗಳನು ಅಳಿದು ನನ್ನನ್ನು ನಿನ್ನಲ್ಲಿ ಅದ್ವಯಗೊಳಿಸಿಕೊಳ್ಳು. ನಾನು – ನೀನು ಎಂಬ ಭೇದ ಮಾಡದಿರು ಎಂದು ಬೇಡುತ್ತಾನೆ. ಇದು ನಿಸ್ವಾರ್ಥ ಶರಣಾಗತಿ ಅತ್ಯಮೂಲ್ಯವಾದುದು.

ತತ್ವಪದದ ವಸ್ತು ಮತ್ತು ವಿಚಾರದ ಅಂತಿಮ ಹಂತವು ಅಧ್ಯಾತ್ಮವೇ ಆಗಿದ್ದರೂ; ಅವುಗಳ ಪಾಲು ಅಂದಿನ ವಾಸ್ತವ ಪರಿಕಲ್ಪನೆಯಲ್ಲಿಯೇ ಬೇರು ಬಿಟ್ಟು ಸಮಷ್ಠಿ ಪ್ರಜ್ಞೆಯತ್ತ ಸಾಗುತ್ತದೆ. ವರ್ತಮಾನದ ಕನ್ನಡಿಯಂತಿದ್ದೂ, ಆ ದಿನದ ಬದುಕಿನಲ್ಲಿ ಸುಸೂತ್ರ ದಾರಿ ಜೊತೆಯಾಗುವ ಆಸರೆಯ ಊರುಗೋಲು ಆಗಿವೆ. ಸಾಮಾಜಿಕವಾಗಿ ಸ್ಪಂದಿಸುವ ರೀತಿ–ನೀತಿ, ಆಚಾರ–ವಿಚಾರ, ನಡೆ–ನುಡಿ, ಸತ್ಯ ಮಿಥ್ಯದ ಹಾದಿ ತೋರಿಸುವ ಕೈದೀವಿಗಳಾಗಿವೆ.

ಸಂಸ್ಕೃತಿಯ ಜಾಲವನ್ನು ಹರಿಸು (೧೯), ಕವಿ ಪರಮಾತ್ಮ (ಗುರು) ಇವೆರಡಲ್ಲಿ ತನ್ನ ಆತ್ಮ ಸ್ವರೂಪ ಬೇಡಿಕೊಳ್ಳುವ ಪರಿಯಿದೆ.

"ಪಾಲಿಸೆನ್ನನು ಭಕ್ತ ಬಾಂಧವನೆ। ಬಲು ಘೋರ ಸಂಸ್ಕೃತಿ
ಜಾಲವನ್ನು ಹರಿಸಿ। ಶಂಕರನೆ ॥ಪ॥
ವ್ಯಾಲಭೂಷಣ ಇನಿತು ನಿನ್ನೆಯ। ಮೇಲೆ ನಿರ್ದಯ
ವಾದ ಕಾರಣ ಮೂಲ ನಿನ್ನುಪಕಾರ ನೆಣಸದೆ
ಕಾಲನಂಕಿತವಾದೆನಯ್ಯಾ ॥ಅನುಪಲ್ಲ॥
ಮುನಿಗಳಾಡುವ ಜ್ಞಾನದ ಮಾತು। ಕಿವಿಯಿಂದ ಕೇಳದೆ
ಬಿನುಗು ಮನುಜರ ಸಂಗದೊಳು ಬೆರೆತು। ಪರಸತಿಯ ಪರಧನ
ಕನಕದಾಶಾ ಮಾಡಿಯಾಹೊತ್ತು। ಮನೆ ಮನೆಯ ತಿರುಗುವ

ಶುನಕನಂದದಿ ಇಲ್ಲದಲೆ ಗೊತ್ತು। ದುರಿತಕ್ಕೆ ಸೋತು
ಮನ ನಿಶ್ಚಯಗೊಂಡು ನಿಮ್ಮಯ। ನೆನಹಿನೊಳು ನಿಮಿಷಾರ್ಥ ನೆಲೆಸದೆ
ಜನನ – ಮರಣದ ಬಾಧೆ ಹೊಂದಿ। ಘನತರದ ಸಂಕಟ ಪಡುವೆ ॥೧॥
ಹೆತ್ತ ತಾಯ್ತಂದೆಗಳನೊಕ್ಕೊಟ್ಟು। ಹೆಂಡತಿಕೈಯೊಳು
ತೊತ್ತುಗಷ್ಟವ ಮಾಡಿ ಸಾಕಷ್ಟು। ಮತಿಭ್ರಷ್ಟನಾಗಿ
ಹೊತ್ತುಗಳೆದೆ ನಾಚಿಕೆಯ ಬಿಟ್ಟು। ಸ್ವಧರ್ಮ ತಿಳಿಸುವ
ಉತ್ತಮರ ಸಹವಾಸಯೆಳ್ಳಷ್ಟು। ಇಲ್ಲದಲೆ ಗೊತ್ತು ॥[೭]

ಮುನಿಗಳಾಡುವ ಜ್ಞಾನದ ಮಾತು ಕಿವಿಯಲ್ಲಿ ಹೋಗದೆ ಹೀನ, ಅಲ್ಪ ಮಾನವರ ಸಂಗದಿಂದ ಪರಧನ – ಪರಸತಿಗೆ ಮನಸೋತೆ ಹೆತ್ತ ತಾಯಿ – ತಂದೆಯರನ್ನು ನೂಕಿ ಹೆಂಡತಿಯ ಕೈಯಲ್ಲಿ ಗುಲಾಮನಾದೆ. ಉತ್ತಮರ ಸಹವಾಸ ಸ್ವಲ್ಪವು ಪಡೆಯದೆ ನಾಚಿಕೆ ಸಂಸಾರ ಮಾಡಿದೆ. ಮುಂದುವರೆಯುತ್ತ ಈ ತತ್ವಪದ ಮನಸ್ಸು ಪಾಪರೂಪದ ಕರ್ಮದಲ್ಲಿಯಲ್ಲಿಯೇ ತೊಡಗಿದೆ. ನಿನ್ನಲ್ಲಿ ಒಂದಾಗುವಂತೆ ಮಾಡಲು ಪ್ರಾರ್ಥಿಸುತ್ತದೆ ಈ ತತ್ವಪದ.

ವಚನಕಾರರಾಗಲಿ, ಕೀರ್ತನಕಾರರಾಗಲಿ, ತತ್ವಪದಕಾರರಾಗಲಿ ವಿನೀತರಾಗ ಬಯಸುತ್ತಾರೆ. ಅಹಂಕಾರದಿಂದ ಮುಕ್ತರಾಗ ಬಯಸುತ್ತಾರೆ. ಈ ಅಹಂಕಾರದ ಕುರಿತು ದಾಸರಂತು ಮನಮುಟ್ಟುವಂತೆ ಹಾಡಿದ್ದಾರೆ. ಅದೇ ಮಾದರಿಯ ಹಾಡುಗಳಿವೆ.

ಬಿಡುಭ್ರಾಂತಿ (೩೫),

"ಬಿಡುಭ್ರಾಂತಿ ಸಂಸಾರದಭಿಮಾನಾ
ಮಾಡು ಮನುಜಾ ಮಹಾದೇವನಾಧ್ಯಾನಾ।"[೮]

ಎಂದು ಈ ಜೀವ ಭೋಗದ ಭ್ರಮೆಯಲ್ಲಿದ್ದು ದುಃಖದ ಸಾಗರದಲ್ಲಿ ಬಿದ್ದು, ರಾಗ ಭೋಗಗಳ ತ್ಯಾಗ ಮಾಡದಂತಾಗಿದೆ. ಸತಿ–ಸುತ ಬಾಂಧವವೇ ಶಾಶ್ವತ ಎಂದು ನಂಬಿ ವ್ಯರ್ಥಾಘಾತವಾಗುವಂತೆ ಮಾಡಿಕೊಂಡೆ ಒಡೆಯ ಸದ್ಗುರುವೇ ಬೆರತು ಆಡಿದಂತೆ ಬದುಕಬೇಕು ಎಂದು ಸಾರುತ್ತದೆ.

ಬಿಡು ಬಿಡು ಅಹಂಕಾರ (೩೮), ಎಂಬ ತತ್ವಪದದಲ್ಲಿ,

"ಬಿಡು ಬಿಡು ಅಹಂಕಾರ ನುಡಿ ಶಂಕರಾ
ಒಡಗೂಡಿ ದೃಢಭಕ್ತಿ ಸುವಿಚಾರಾ"[೯]

ಜಡೆಯನು ಬೆಳಸಿ ಫಲವೇನು? ಮೀಸೆಯ ತಿದ್ದಿದರೆ ಬಂದುದೇನು. ಗುಣ ಹೇಸಿಗೆಯಾಗಿದೆ. ಕೆಡುಕತನ ಬಿಟ್ಟುಬಿಡು, ಅಹಂಕಾರ ತೊರೆಯಬೇಕು. ನೀನು ಅದಕ್ಕಾಗಿ ನೀ ನುಡಿಯೋ ಶಂಕರಾ ಎಂದು ವೇಷ ಆಭರಣ ತೊಟ್ಟ ಜ್ಞಾನಿ, ಶ್ರೀಮಂತ ಎಂದು ಮೋಸಹೋಗದಿರೊ ಖೋಡಿ ದೇಶ–ಕೋಶ ನಿನ್ನಿಂದ ಬೇಸರಿಸಿದೆ. ಬಿಡು ಅಹಂಕಾರ ನುಡಿ ಶಂಕರಾ ಎಂದು ಅಂಗಕ್ಕೆ ಹಚ್ಚಿದ ಬೂದಿಯಿಂದ ಏನು ಫಲ. ಭಂಗಿಯ ಸೇದಿ ಸೇದಿ ಕೋತಿಯಾದೆ ಅಲ್ಲದೆ ಅದರಿಂದ ಸಿಕ್ಕ ಫಲವೇನು. ಅಹಂಕಾರ ಬಿಡು ನುಡಿಯೋ ಶಂಕರಾ ಎಂದು ಸ್ತ್ರೀ ವ್ಯಾಮೋಹಿಯಾಗಿ ಭಂಡನಾಗುವೆ ಏತಕೆ, ಖಂಡಿತದ ಮಾತು, ಅಹಂಕಾರ, ಬಿಡು ಶಂಕರಾ ಎಂದು ನುಡಿ " ಮಗ್ಗುಲತನ ಸೇರಿ ಮಗ್ಗಲ ಮುರಿಸುವುದರಿಂದ" ಇದು ದುಷ್ಟಸಂಗದಿಂದ ನಿನಗೆ ಆಪತ್ತು ತಪ್ಪಿದ್ದಲ್ಲ. ಅದಕ್ಕೆ ಮತಿನಾಗು ನೀನು, ಬಾಗಿ ಬಿಡೋ ಹಾರೂಗೇರಿಯ ಸ್ವರ್ಗದ ದೇವಗೆ ಬಿಟ್ಟು ಬಿಡೇ ಅಹಂಕಾರ ಎಂದು ತಾತ್ವಿಕತೆಯನ್ನು ಸಾರುತ್ತದೆ.

"ಬ್ರಹ್ಮಸ್ವರೂಪದಲ್ಲಿ ಲೀನವಾಗು" (೩೯), ಈ ತತ್ವಪದವು ಬ್ರಹ್ಮಸ್ವರೂಪವಾಗಲು ಬಯಸುತ್ತದೆ.

"ಬೇಗ ಮಾಡು ಮಾಡೆಲೊ ಭಕ್ತಿ।
ಯೋಗಿವರನೊಳು ಬೇಡು ನೀ ಮುಕ್ತಿ
ಆಗ ಈಗ ಎಂಬುದು ಯುಕ್ತಿ।
ನೀಗಿ ನಿಶ್ಚಯ ಪಡೆಯೋ ವಿರಕ್ತಿ॥೧॥
ಜೀವನದಲ್ಲಿ ಶಿವ ನೀನಿರುವಿ।
ದೇವ ಗುರುವಿನ ಮರತಿಯೋ ಪರವಿ
ಭಾವಿಸಲು ಮಾಯದ ಮರವಿ।
ಭವ ಮರಣಕೆ ತಿರುತಿರುಗಿ ಬರವಿ॥೨॥
ಮರೆಯದಿರು ಮತ್ತೊಂದು ಕೇಳಿ।
ಬೆರೆಯೊ ಬ್ರಹ್ಮನೊಳೆನ್ನದೆ ನಾಳಿ
ಪರಮಾನಂದ ಸ್ಪಂದನದೊಳಗಾಳಿ।
ಹರಗಿರಿ ವೃಷಭನ ಕೃಪೆಯನು ತಾಳಿ" ॥೩॥[೧೦]

ಅವಧೂತ ಪಂಥವೆಲ್ಲ ಹಾಗೆಯೇ ಅದ್ವೈತ ಸಿದ್ಧಾಂತಗಳು ಇಹದ ಭೋಗದ ಕಡೆ ಮುಖಮಾಡದೆ ಮುಕ್ತಿ ವೈರಾಗ್ಯದಲ್ಲಿ ನಂಬಿಕೆ ಇಡುತ್ತಾರೆ. ಸತ್‌ಬ್ರಹ್ಮದಲ್ಲಿ ಲೀನರಾಗಬಯಸುತ್ತಾರೆ. ಬ್ರಹ್ಮದೊಂದಿಗೆ ಎರಡಾಗ ಬಯಸದೆ ಅದರಲ್ಲಿ ಸೇರಿ ಒಂದಾಗಿ ಮುಕ್ತಿ ಕೋರುತ್ತಾರೆ.

ಅದ್ವೈತ ಒಂದೇ ಶ್ರೇಷ್ಠ (೪೭), ಈ ತತ್ವಪದದಲ್ಲಿ ಅದ್ವೈತ ಮತದ ಶ್ರೇಷ್ಠತೆಯನ್ನು ತಿಳಿಸುತ್ತದೆ.

"ಅವಧೂತರಾಡುವ ಆಟಕ್ಕೆ ಲೌಕಿಕರಾಶ್ರಯವ್ಯಾತಕೆ ॥ಪ॥
ಅವಧೂತರದ್ವೈತ ಮತ ಒಂದೇ ಶ್ರೇಷ್ಠ। ದ್ವೈತ ಮತಗಳಾನಂತಕೆ
ರವಿಯಂತೆ ಮೇರೆವದೀ ಲೋಕಕೆ। ಅವಿಚಾರ ಲೌಕಿಕ ಮಾರ್ಗಕೆ॥೧॥
ಮತಭೇದ ಮಾಯಾವಾದಕೆ। ಗತಿದೊರದ್ಯೆದುರ್ಬೋಧಕೆ
ಮತಿ ಸಾಲದೆ ಮಾಯಾವಾದಿಗಳೆಲ್ಲರು। ಪ್ರತಿಪಾದಿಪ ಪುರುಷಾರ್ಥಕೆ
ಅತಿಶಯ ಜ್ಞಾನದ ಪರೋಕ್ಷಕೆ। ಮತವಾಗಲಾರದು ಮೋಕ್ಷಕೆ॥೨॥
ಬೇರಾದ ಮತಗಳು ಸರ್ವಕೆ। ಮೀರಿದ ಬಲ ವೇದಾಂತಕೆ
ತೋರಿಸುವ ಯುಕ್ತಿ ಅನುಭವ ಪ್ರಮಾಣ/ಮೂರರಿಂದ ತತ್ಕಾಲಕೆ
ಸೇರಿಸುವುದು ತನ್ನಾತ್ಮಕೆ। ಹಾರೂಗೇರಿ ವೃಷಭನ ಪಾದಕೆ" ।೩।[೧೧]

ಅವಧೂತ ಪಂಥದವರೆಲ್ಲ ಅದ್ವೈತ ಸಿದ್ಧಾಂತ ಪ್ರತಿಪಾದಕರು. ಇವರದು ಜ್ಞಾನಮಾರ್ಗ. ಇವರು ಬೋಧಿಸಿದ್ದು **"ಅಹಂ ಬ್ರಹ್ಮಾಸ್ಮಿ"** ಸಿದ್ಧಾಂತ. ಇಲ್ಲಿ ಅದ್ವೈತದ ಶ್ರೇಷ್ಠತೆಯನ್ನು ಹೇಳುತ್ತಾರೆ. ಏಕೆಂದರೆ ನಿಜವಾದ ಭಕ್ತರಿಗೆ ಪರಮಾತ್ಮನ ಜ್ಞಾನದ ತಿಳುವಳಿಕೆ ಇರಬೇಕು. ಜ್ಞಾನಯೋಗವೇ ಶ್ರೇಷ್ಠ ಎಂಬುದು. ಅದ್ವೈತವೆಂಬುದು ಸೂರ್ಯನಿದ್ದಂತೆ, ಇಲ್ಲಿ ಜಾತಿ-ಮತಗಳ ಭೇದ ಮೋಕ್ಷಕ್ಕೆ ದಾರಿಯಾಗದು ಎಂದು. ಬೇರಾದ ಮತಗಳು ಸರ್ವಕೆ, ಮೀರಿದ ಬಲ, ವೇದಾಂತಕೆ ತೋರಿಸುವ ಯುಕ್ತಿ ಅನುಭವ ಪ್ರಮಾಣ, ಹಾರೂಗೇರಿ ವೃಷಭನ ಪಾದದಲ್ಲಿ ಒಂದಾಗಿ, ಆ ಚೇತನವೇ ಸ್ವಯಂ ಆಗುವ ಭಾವ ಇಲ್ಲಿ ಅಭಿವ್ಯಕ್ತಿವಾಗಿದೆ.

ನಾ ನಾಶರಹಿತ ನಿರಾಭಾರಿ (೧೨೪), ಈ ತತ್ವಪದವು ಸಹ ನಾ ಎನ್ನುವ ದುರಹಂಕಾರವನ್ನು ತೊರೆದು ಭಗವಂತನಲ್ಲಿ ಲೀನವಾಗಲು ತಿಳಿಸುತ್ತದೆ.

"ನಾ – ಆದಿ ಅಂತ್ಯ ನಿಜವಾಗಿರಿ ಮಧ್ಯದಲಿ ತರಲಿ ॥ಪ॥
ನಾ – ನಾಮ ರೂಪ ಜಗಧಾರಿ
ನಾ – ನಾನತ್ವಕೆ ಸಮತೋರಿ
ನಾ – ನಿರುವೆ ನಿರಂಜನ ವನದಲ್ಲಿ ಮಧ್ಯದಲಿ ತರಲಿ ।೧।
ನಾ – ನಾಲ್ಕು ಮೊದಕಧಿಕಾರಿ
ನನ್ನ ರೂಪ ಹೊಗಳುವದು ಸಾರಿ
ನಾ – ಅಖಿಳ ದೇವರಿಗೆ ವೇದದಲ್ಲಿ ಮಧ್ಯದಲ್ಲಿ ತರಲಿ ।೨।
ನಾ – ನಾದ ಬಿಂದು ಕಲೆ ಮೀರಿ

ನಾ – ನಾಶರಹಿತ ನಿರಾಬಾರಿ

ನಾ – ಚನ್ನವೃಷಭನ ಕುಲದಲ್ಲಿ ಮಧ್ಯದಲ್ಲಿ ತರಲಿ ॥೩॥"[೧೨]

ಇದೂ ಕೂಡಾ ಶರೀಫರ ದಟ್ಟ ಛಾಯೆ ಬಿದ್ದ ತತ್ವ ಪದವೇ ಏಕೆಂದರೆ ಅವರು

"ನಾನಾ ಎಂಬುದು ನಾನಲ್ಲ
ಈ ಮನುಷ್ಯ ಜನ್ಮವು ನಾನಲ್ಲ"[೧೩]

ಎಂಬ ತತ್ವ ಪದಕ್ಕೆ ಸರಿಸಮಾನದ ಛಾಯೆ ಇರುವ ತತ್ವಪದವಾಗಿದೆ. ಶರೀಫರ ಆಲೋಚನೆಗೆ ತಕ್ಕ ಆಲೋಚನಾ ಸಿದ್ಧ ಹಸ್ತರಾಗಿದ್ದರು ಅಲಭ್ಯೆರಿ ಎನ್ನಬಹುದು. ಅಲ್ಲಿಯೂ ನಾನು ಎಂಬ ದುರಹಂಕಾರ ತೊರೆದು ಭಗವಂತನಲ್ಲಿ ಬೆರೆತು ಮುಕ್ತಿಯ ಬೇಡುತ್ತದೆ ತತ್ವಪದ.

"ಜಗತ್ತು ಮಿಥ್ಯ ಪರಮಾತ್ಮನೊಬ್ಬನೇ ಸತ್ಯ". ಆದರೆ ಇದನ್ನು ಮರೆತೂ ಮನುಜನಂತೂ ಮಾಯೆ, ಮೋಹದಲ್ಲಿಯೇ ಬಿದ್ದು ನಾಶವಾಗುತ್ತಾನೆ. ಅದಕ್ಕೆಂದೆ ಅಲಭ್ಯೆರಿ ಸುಳ್ಳನ್ನು ಸತ್ಯವೆಂದು ನಂಬದಿರು ಎಂದು ಸಾರುತ್ತಾನೆ.

"ಮಿಥ್ಯನಂಬದಿರು" ತತ್ವಪದದಲ್ಲಿ ಅಲಭ್ಯೆರಿ ಮನುಷ್ಯ ಡಾಂಬಿಕತೆಗೆ ಮರುಳಾಗಿ ಈ ಕಾಯವನ್ನು ಮಲಿನ ಮಾಡಿಕೊಂಡಿದ್ದಾನೆ. ಪರಮಾತ್ಮನ ಬೋಧಾ ಮೃತವು ಕೇಳಲು ತಿಳಿಸುವನು.

"ನಂಬಿದಿ ಸುಳ್ಳ ಹಂಬಲಗೊಂಡು ಡಾಂಬಿಕವಾ ॥ಪ॥
ಒಂಬತ್ತು ತೂತಿನ ದೇಹಾ। ತುಂಬಿಕೊಂಡಿರುವುದು ಹೇಯಾ।
ಜಂಬ ಮಾಡುವುದಿದು ಏನು? ಏನು? ।೧।
ಮಡದಿ ಮಕ್ಕಳು ಕೂಡಿ। ದುಡಿದು ಜೋಪಾನ ಮಾಡಿ
ಪಡೆಯಲಿಲ್ಲ ಫಲವೇನು ಏನೂ ೨।
ಪರಮ ಸುದ್ಗುರು ಬಳಿ। ಪರಮಂತ್ರ ಬೋಧಕೇಳಿ
ಹಾರೂಗೇರಿಯೊಳಿರು ಪಾಡಾ – ಮೂಡಾ" ॥೩॥[೧೪]

ಮನುಷ್ಯನ ಮನಸ್ಸು ನಿಜವಾದ ಸತ್ಯವನ್ನು ನಂಬುವುದೇ ಇಲ್ಲ. ಸುಳ್ಳನ್ನೇ ನಂಬಿ ಕೊನೆಗೆ ವೇದನೆ ಪಡುವ ಈ ಒಂಬತ್ತು ತೂತಿನ ದೇಹ, ತನ್ನ ಮಡದಿ ಮಕ್ಕಳು ಶ್ರೀಮಂತಿಕೆ, ಶಾಶ್ವತ ಎಂದು ನಂಬಿ ಬಿಡುತ್ತದೆ. ಇಹದ ಎಲ್ಲ ಶ್ರೀಮಂತಿಕೆ, ಸಂಪತ್ತನ್ನು ಬಿಟ್ಟು ಹೊರಟು ನಿಲ್ಲುವ ಈ ಒಂಬತ್ತು ತೂತಿನ ಹೊಲಸು ತುಂಬಿರುವ ಈ ದೇಹ ಮತಿವಂತನಾಗಬೇಕೆಂದು

ಕವಿ ಹಂಬಲಿಸುತ್ತಾನೆ. ಅದಕ್ಕೆ ಈ ಎಲ್ಲ ಸಂಕಟಕ್ಕೆ ಪರಿಹಾರವನ್ನು ಮುಂದಿನ ಒಂದು ತತ್ವ ಪದದಲ್ಲಿ ಹೀಗೆಂದು ಹಾಡುತ್ತಾನೆ.

'ಸತ್ಯ ಸಂಗವ ಮಾಡು' (೩೭), ತತ್ವ ಪದದಲ್ಲಿ ಸತ್ಯವಂತರ ಸಂಗವ ಮಾಡಲು ಕವಿ ಕೇಳಿಕೊಳ್ಳುತ್ತಾನೆ.

"ಸತ್ಯ ಸಂಗವ ಮಾಡುವ। ಮಿಥ್ಯ ಮಾಯಾ ಪ್ರಪಂಚದಭಿ
ಮಾನವ ದೂಡಿದಂಥ ಸತ್ಯರ ಸಂಗವ ಮಾಡು ।ಪ।
ಶ್ರುತಿ ಶಾಸ್ತ್ರಾಗಮದೊಳು ಪ್ರತಿಪಾದನವ ಮಾಡಿ
ಅತಿಶಯದ ಪರೋಕ್ಷ ಸ್ಥಿತಿಯನು ಹೊಂದಿದಂಥ ।೧।
ವರವೈರಾಗ್ಯದಿಂದೆ ಚರಿಸುತ ಧರೆಯೊಳು
ಪರತರ ಪರಿಪೂರ್ಣ ಸ್ಥಿರಮುಕ್ತಿ ಹೊಂದಿದಂಥ
ನಾನತ್ವದಲ್ಲಿದೊಂದೇ ಜ್ಞಾನ ಸೌಭಾಗ್ಯಸೇರಿ
ಘನವಾದ ಹಾರೂಗೇರಿ ಅನಘ ಕೂಡಿದಂಥ"[೧೫]

ಈ ಭವದ ಸುಖ-ಲೋಲುಪತನದ ಮತಿ ಭ್ರಾಂತಿಯಿಂದ ಹೊರಬರಬೇಕೆಂದರೆ ಸತ್ಯ ಸಂಗವ ಮಾಡು, ವಿವೇಕಿಗಳ ಗೆಳೆತನದಲ್ಲಿ ಬಾಳು. ಶಾಸ್ತ್ರ ವೇದ ಆಗಮ ಓದಿ ತಿಳಿದಂಥ ಜ್ಞಾನವಂತರ ಸಂಘದಲ್ಲಿ ಬದುಕು, ಮಿಥ್ಯೆಯ ಅರಿವಾಗುವುದು ಎನ್ನುತ್ತಾನೆ. ನಾನು ಎಂಬ ಅಜ್ಞಾನ ತೊರೆದು ಜ್ಞಾನದ ಸೌಭಾಗ್ಯ ಸೇರಿ ಗುರು ಹಾರೂಗೇರಿಯ ಕೂಡು ಎಂದು ಅರ್ಥೈಸಿ ಹೇಳುತ್ತಾನೆ. ಇಲ್ಲಿ ಮನುಷ್ಯನನ್ನು ಅವನ ಮನಸ್ಸನ್ನು ಅದರೊಳಗೆ ತುಂಬಿರುವ ಹೇಯವನ್ನು ಗುರ್ತಿಸಿಕೊಳ್ಳದೆ ಅಹಂಭಾವದಿಂದ ಜೀವನದಲ್ಲಿ ಮೆರೆದು ಏನೆಲ್ಲ ನೀಚ ಕೃತ್ಯಗಳ ಮಾಡಿ ಶಿಕ್ಷೆಯ ಕೋಪದಲ್ಲಿ ತೊಳಲುವ ಮನುಜರ ಕಂಡ ಅಲಭ್ಯೆರಿ ಅರುವಿಲ್ಲ ನಿನಗೆ ಎಂಬುದನ್ನು (೪೦)ನೇ ತತ್ವಪದದಲ್ಲಿ ಈ ರೀತಿಯಾಗಿ ಹೇಳಿರುತ್ತಾನೆ;

"ಅರುವಿಲ್ಲ ನಿನಗೇನು ಭಾರಿಗೆ।
ಸುಳ್ಳ । ಗುರಿವಿನ ಮಾಡಿಕೊಂಡಿ ಭಾರಿಗೆ ।
ಸೆರೆ ಸಿಂದಿ ಗಾಂಜಗಾಗಿ ಭಾರಿಗೆ ।
ಹಗಲಿರುಳು ಮೋಹಿಸಿದೆಲ್ಲೋ ಭಾರಿಗೆ ॥೧॥
ಸಾಧಿಸಿಕೊಳ್ಳದೆ ಭಾರಿಗೆ ಬೋಧವು ಕೈಕೊಂಡಿ ಭಾರಿಗೆ ।
ನಿನಗಾದದ್ದು ಫಲ ಹೇಳು ಭಾರಿಗೆ ॥೨॥
ಸುಜನರ ವಾಕ್ಯವು ಭಾರಿಗೆ।
ಕೇಳಿ ನಿಜವಾಗಿ ನಂಬಲಿಲ್ಲ ಭಾರಿಗೆ
ಗಜ್ಜಬಿಜ್ಜಿ ಗುಣಕೂಡಿ ಭಾರಿಗೆ।

ಸುಳ್ಳ ಭಜನೆಯ ಮಾಡಿದೆ ಭಾರಿಗೆ ॥೩॥
ಕಪಟ ತನಕೆ ಬಿದ್ದು ಭಾರಿಗೆ।
ಬರಿದೆ ಉಪರಾಟಿ ದಣಕೊಂಡಿ ಭಾರಿಗೆ
ಅಪರೂಪದನುಭವ ಭಾರಿಗೆ।
ತಿಳಿಯದಪವಾದ ಪಡೆದೆಲ್ಲೋ ಭಾರಿಗೆ ॥೪॥
ಯಾರಿಗೆ ಯಾರಿಲ್ಲ ಭಾರಿಗೆ ।
ಸಂಸಾರವು ಸ್ಥಿರವಲ್ಲ ಭಾರಿಗೆ
ಹಾರೂಗೇರಿಯೊಳು ಭಾರಿಗೆ ।
ಅಲಭೈರವನ ಮಾತು ಕೇಳು ಭಾರಿಗೆ ॥೫॥"[೧೬]

ಈ ತತ್ವ ಪದದಲ್ಲಿ 'ಸ್ವಗತ' ನುಡಿದಂತೆ ಅಲಭೈರವನ ಮಾತು ಕೇಳು ಭಾರಿಗೆ ಎಂದು ಮುಗಿಸುತ್ತಾನೆ. ಇಲ್ಲಿ ವ್ಯಕ್ತಿತ್ವವನ್ನು 'ಭಾರಿಗೆ' ಗೆ ಹೋಲಿಸಲು ಕಾರಣ ಮನಸ್ಸು-ಹೃದಯ-ಆತ್ಮದ ಒಳಗಿನ ಅಜ್ಞಾನದ ಕಸ ಗುಡಿಸಲು "ಅರುವಿನ" ಭಾರಿಗೆ ತೆಗೆದುಕೊಂಡು ಅರಿಷಡ್ವರ್ಗಗಳ ಕಸಗೂಡಿಸಬಯಸಿ ಕೊನೆಗೆ ಕವಿಯ ಮಾತುಕೇಳು ಭಾರಿಗೆ ಎಂದು ಹೇಳುತ್ತಾನೆ. ಅರುವಿನ ಜ್ಞಾನವಿಲ್ಲ ಭಾರಿಗೆ ನೀನು ಗುರುವನ್ನು ಮಾಡಿಕೊಂಡೆ ಅಷ್ಟೇ. ಸಿಂಧಿ, ಗಾಂಜಿ, ಸೇದಿ ಅದರ ಮೋಹದಲ್ಲಿಯೇ ಬಿದ್ದೆ. ಸಾಧನೆ - ಸಾಧಿಸಿದಂತಾದೆ. ಬೋಧಕೈಗೊಂಡವರು ಫಲವಾಗಲಿಲ್ಲ. ಸುಜನರ ವಾಕ್ಯ ಕೇಳಿದರೂ ನಿಜವಾಗಿ ನಂಬದೆ ಹೋದೆ ಒಳ್ಳೆಯ ಮನವಿಲ್ಲದೆ ಏಕಾಗ್ರತೆ ಇಲ್ಲದೆ ಬರಿ ಭಜನೆ ಮಾಡಿದೆ. ಕಪಟತನದಲ್ಲಿ ಬಿದ್ದು ವ್ಯರ್ಥವಾಗಿ ದಣಿದುಕೊಂಡೆ. ತಿಳಿಯದೆ ಅಪವಾದ ಪಡಕೊಂಡೆ. ಯಾರಿಗೆ ಯಾರು ಇಲ್ಲ. ನೀನು ಅಲಭೈರಿಯ ಮಾತು ಕೇಳದೆ ವ್ಯರ್ಥವಾಗಿ ಹೋದೆ ಎಂದು ಇಲ್ಲಿ 'ಭಾರಿಗೆ'ಯನ್ನು ಸಾಂಕೇತಿಕವಾಗಿರಿಸಿಕೊಂಡು ಹೋಗದ ಅಜ್ಞಾನದ ಕಸದ ಕುರಿತು ಅಲಭೈರಿ ಸ್ವಗತದ ಮಾತಂತೆ ಲೋಕಕ್ಕೆ ಅದ್ಭುತವಾದ "ಅರುವಿಲ್ಲ ನಿನಗೆ" ಎಂಬ ತಿಳವಳಿಕೆಯ ಕರೆಯೊಂದನ್ನು ನೀಡುತ್ತಾನೆ.

'ಸತ್ಸಂಪರ್ಕ ಬೇಗ ಮಾಡು' ತತ್ವಪದದಲ್ಲಿ ಸತ್ಸಂಗದ ಮಹತ್ವ ಹೇಳುತ್ತಾನೆ.

"ಮೂರ್ಖತನದ ಮಾತನಾಡಿ। ತರ್ಕಮಾಡಬೇಡ ನಿನಗೆ
ನರ್ಕವಿದೆ ನೋಡ। ಸತ್ಸಂಪರ್ಕ ಬೇಗ ಮಾಡ ॥ಪ॥
ವಿದ್ಯೆಯೊಳು ಬ್ರಹ್ಮವಿದ್ಯೆ। ಬುದ್ಧಿವಂತಗಾಯ್ತು ಸಾಧ್ಯ
ಬದ್ಧ ಜನರಿಗೆ। ಅಸಾಧ್ಯ
ನರ್ಕವಿದೆ ನೋಡ। ಸತ್ಸಂಪರ್ಕ ಬೇಗ ಮಾಡ ।
ಹಾರೂಗೇರಿ ಮಹಾತ್ಮಾ। ಸಾರಿದಂಥ ಬೋಧ ಮಹಿಮಾ

ಸಾರ ತಿಳಿಯದವನೇ। ಅಧಮಾ

ನರ್ಕವಿದೆ ನೋಡ। ಸತ್ಸಂಪರ್ಕ ಬೇಗ ಮಾಡ ।"೧೭

ಸುಗುಣವಾದ ಜ್ಞಾನ ಬೇಕೆಂದರೆ ಸಜ್ಜನರ ಸಂಪರ್ಕ ಮಾಡಬೇಕು. ವಾದಮಾಡಿ ಮುನ್ನಡೆದರೆ ನರಕ ತಪ್ಪದು. ಅದಕ್ಕೆ ಈಗಲೇ ಎಚ್ಚರದಿಂದ ಇರು ಎಂದು ಸಾರಿ ಹೇಳುತ್ತಾನೆ. ಹಾರೂಗೇರಿಯೊಳು ಮಹಾತ್ಮಾ ಸಾರಿದಂಥ ಬೋಧ ಮಹಿಮೆಯ ಸಾರ ತಿಳಿಯದವನೇ 'ಅಧಮಾ'. ನರಕವಿದೆ ಬೇಗ ಸತ್ಸಂಪರ್ಕ ಮಾಡು ಇಲ್ಲದಿರೆ ದುಃಖ ತಪ್ಪಲಾರದು ಎಂದು ಹೇಳುತ್ತಾನೆ.

ಕವಿ ಇಲ್ಲಿ ಶರೀರವನ್ನು 'ಕಾಯ' ವೆಂದು ಸಂಭೋಧಿಸುತ್ತಾನೆ. ಕಾಯವೇ ಇವರಿಗೆ ಶ್ರೇಷ್ಠ ಅದರಲ್ಲಿಯೂ ಅಂತರಂಗ ಅತ್ಯಂತ ಅವಶ್ಯಕ. ಮನುಷ್ಯನ ಜೀವನವನ್ನು ಸಂತೆಗೆ ಹೋಲಿಸುತ್ತಾನೆ. ಸಂತೆಯಲ್ಲಿ ಪ್ರತಿಯೊಬ್ಬರು ತಮ್ಮ ವ್ಯಾಪಾರ ಮುಗಿಸಿಕೊಂಡು ಮನೆ ಸೇರುವಂತೆ. ಹಾಗೆಯೇ ಮನುಷ್ಯನ ಜೀವನವು ಮೂರು ದಿನದ ಸಂತೆಯಂತೆ. ನಾವೆಲ್ಲರೂ ನಮ್ಮ ನಮ್ಮ ಮನೆಯನ್ನು ಸೇರಲೇಬೇಕು. ಅಂದರೆ ಈ ಶರೀರ ಅಶಾಶ್ವತವಾದದ್ದು. ಕವಿ ಬ. ಗಿ. ಯಲ್ಲಟ್ಟಿಯವರು ಹೇಳುವಂತೆ "ದೇವನ ಮನೆಯಿದು ಈ ಜಗವೆಲ್ಲ ಬಾಡಿಗೆದಾರರು ಜೀವಿಗಳೆಲ್ಲ". ಹಾಗೆಯೇ ದಾಸರು ಸಹ ಈ ಶರೀರದ ಅಲ್ಪತೆಯನ್ನು "ನೀರ ಮೇಲಿನ ಗುರುಳೆ ನಿಜವಲ್ಲವೊ ಹರಿಯೇ" ಎಂಬ ಮಾತಿನಲ್ಲಿ ಕಾಣಬಹುದು. ಮನುಷ್ಯ ಇಂದು ಅಲ್ಪತೆಗೆ ಬಲಿಯಾಗಿ ಲೌಕಿಕ ಸುಖವೇ ಶ್ರೇಷ್ಠವೆಂದು ಶಾಶ್ವತವಾದ ಅಲೌಕಿಕ ಸುಖಕ್ಕೆ ಬಲಿಯಾಗದೆ ತನ್ನ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾನೆ. ಶಾಶ್ವತವಲ್ಲದ ಈ ಶರೀರ ಅಂತಿಮವಾಗಿ ಬಯಲಲ್ಲಿ ಬಯಲಾಗಿ ವ್ಯರ್ಥವೇ ಹೋಗುತ್ತದೆ. ಅದಕ್ಕಾಗಿ "ಅಲ್ಲಿದೆ ನಮ್ಮನೆ ಇಲ್ಲಿ ನಾ ಸುಮ್ಮನೆ" ಎನ್ನುವಂತೆ ಸುಮ್ಮನೆ ಕಾಲಗತಿಸದೆ ಮುಕ್ತಿಯ ಮಾರ್ಗವನ್ನು ಪಡೆಯಲು ಕೇಳಿಕೊಳ್ಳುವನು.

"ಕಾಯಾಪುರದ ಸಂತೆ" (೪೮).

ಕಾಯಾಪುರದ ಸಂತಿ ಕೂಡಿತಲ್ಲಾ

ಮಾಯವಾಯಿತು ತೋರಿ ಬೈಲಿಗೆ ಬೈಲಾ ॥ಪ॥

ಕಾಯಾಪುರದೊಳು ಮುಖ್ಯ ಕಲ್ಪತ ಪುರುಷನ

ಛಾಯಾರೂಪದ ಚಮತ್ಕಾರಲೀಲಾ ।

ಮನೋರಾಯನಧಿಕಾರ ಅದಕೆ ಮೂಲಾ ।

ಸಮುದಾಯದೊಡನೆ ಸರ್ವ ನಡೆಸಿದಮೇಲಾ"೧೮

ಈ ದೇಹ ಪರಮಾತ್ಮನ ಅಂಶರೂಪ. ಇಲ್ಲಿ ನಡೆಯುವ ಸ್ಥಿಮಿತ ಇಲ್ಲದ ಮನದ ರಾಯಭಾರದಿಂದ ಎಲ್ಲವೂ ನಾಶವಾಗುವುದು. ಭವದಲ್ಲಿ ಹುಟ್ಟಿ ಬಂದವರೆಲ್ಲ ಶಿವನ

ಅವತಾರಿಗಳು. ಆದರೆ ಅವನ ನಿಜದ ರೂಪು, ತಾವು ಯಾರೆಂದು ಬಲ್ಲದಿದರಿಂದ ಇವರಾರೂ ನಿಜದ ಅವಧೂತ ಮಾರ್ಗಕೆ ಹತ್ತಲಿಲ್ಲ. ಅಂತರಂಗದಲ್ಲಿ ಭೇದ ಭ್ರಾಂತಿಯ ವೊಂದಿರುವ ಇವರು ಅಡವಿ ಪಾಲದಂತೆ ಎಂದು ಚಿಂತಿಸುತ್ತಾನೆ. ತತ್ವ ಅರಿಯುವುದೇ ಮೇಲೂ, ಬುದ್ಧಿವಂತರಿಗೆ.

ಜ್ಞಾನಿಗೆ ಮಾತ್ರ ಭವಬಂಧನದ ಭಯ ಕಾಡುವುದಿಲ್ಲ. ಈ ಸಂತೆ ಬಯಲಲ್ಲಿ ಬಯಲಾಗುವುದು. ಈ ತತ್ವ ತಿಳಿಯದಿದ್ದರೆ ಮಾತ್ರ ಸಾರ್ಥಕ್ಯ ಎಂದು ಸಾರಿ ಹೇಳುತ್ತಾನೆ ಕವಿ.

'ದೇಹಾ ತೊಗಲಿನದು' (೫೧)

"ತೊಗಲಿನದು ದೇಹಾ ತೊಗಲಿನದು
ಬಗೆಯಲು ಬ್ರಹ್ಮ ಸೃಷ್ಟಿ ತೊಗಲಿನದು ಸರ್ವ
ತೊಗಲಿನದೊಂದು ಗಂಡು
ತೊಗಲಿನದೊಂದು ಹೆಣ್ಣು
ತೊಗಲಿನೊಳಗೆ ತೊಗಲು ಕೂಡಿ
ಮಗನು – ಮಗಳಾದದ್ದು ತೊಗಲಿನದು – ನಾನು" ॥೧॥[೧೯]

ಇದು ಸಂಪೂರ್ಣ ಶಿಶುನಾಳ ಶರೀಫರ "ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ ಶೀಲ ಮಾಡುತಿರಿ ನಾಡೆಲ್ಲ" ಎಂಬ ತತ್ವ ಪದದಂತೆ ಇದ್ದರೂ ಸ್ವಲ್ಪ ತನ್ನದೇ ಸ್ವಂತಿಕೆ ಉಳಿಸಿಕೊಂಡು ಬಂದಿದೆ. ಈ ತತ್ವಪದದಲ್ಲಿ ಸಮಾಜದಲ್ಲಿನ ಜಾತಿ ಪದ್ಧತಿಗೆ ಚಾಟಿ ಏಟು ಕೊಟ್ಟಿದೆ.

"ತೊಗಲಿನ ರಾಜ ಪ್ರಜಾ
ತೊಗಲಿನ ನ್ಯಾಯಾಧೀಶಾ
ತೊಗಲಿನ ಮೇಲೆ ಹುಕುಂ
ತೊಗಲೇ ನಡೆಸಿತು ತಮ್ಮಾ ... ತೊಗಲಿನದು."[೨೦]

ಎಂದು ಹೇಳುತ್ತವೆ. ಈ ತೊಗಲ ಒಳಗಿರುವ ಬ್ರಹ್ಮ ಚೈತನ್ಯ ಅರಿಯಬೇಕು ಎಂದು ಹೇಳುತ್ತಾನೆ.

"ತೊಗಲಿನ ಹಾರೂಗೇರಿ
ತೊಗಲಿನ ಅಲಭೈರಿ
ತೊಗಲಿನ ಒಳಗೊಂದು
ಮಿಗಿಲಾದ ವಸ್ತು ತಿಳಿಯೊ ... ತೊಗಲಿನದು"[೨೧]

ಈ ದೇಹದ ಒಳಗಿರುವ ಬ್ರಹ್ಮವ ತಿಳಿಯಬೇಕೊ ಎಂದು ಅಲಭೈರಿ ಸಾಮಾಜಿಕ ನ್ಯಾಯ ಹೇಳುವುದರ ಜೊತೆಗೆ ನಾಶವಾಗುವ ದೇಹದ ಕುರಿತು ಹೇಳುತ್ತಾನೆ.

ಅಲಭೈರಿಯು, ಅಜ್ಞಾನಿಯಾದರೆ ಬ್ರಹ್ಮವೇನೆಂದೇ ತಿಳಿಯದೇ ಹೋಗುವೆ ಎಂದು ಹೇಳುತ್ತಾನೆ. ಅನುಭಾವ ನೀತಿ ತಿಳಿಯದೆ ಹೋದರೆ ನೀನು ಪ್ಯಾಲಿ (ಮೂರ್ಖ) ಎಂದು ಹೇಳುತ್ತಾನೆ. "ತಿಳಿಯದಿದ್ದರೆ ನೀ ಪ್ಯಾಲಿ"(೫೨) ಅನುಭಾವ ಬೇಗ ಎಲ್ಲರಿಗೂ ತಿಳಿಯದು ಅದಕ್ಕೆ ನಿರ್ಮಲ ಮನಸ್ಸು ಬೇಕು ಎನ್ನುವನು. "ಹ್ಯಾಂಗ ತಿಳಿದೀತು ಅನುಭಾವಾ" (೫೩). ಒಂದರ್ಥದಲ್ಲಿ ಅವಧೂತ ಪಂಥವೆಲ್ಲ ಹಾಗೆಯೇ ಗಾಂಜಾ ಸೇದುವುದು, ಸಾರಾಯಿ ಕುಡಿಯುವುದು ಇವೆಲ್ಲ ಸಹಜ, ಮದ್ಯಪಾನ-ಧೂಮಪಾನ ಮಾಡುವದು. ಇವರು ಅಂತರಂಗದ ನಿರ್ಮಲಕ್ಕೆ ಹೆಚ್ಚಿನ ಆದ್ಯತೆ ನೀಡಿ ಬದುಕುವರು. ಆದರೂ ಅಲಭೈರಿಗೆ ಅವಧೂತ ಪಂಥದ "ಭಂಗಿಸೇದುವ ವ್ಯಸನ ಬೇಡವೆಂದೇ ಪ್ರತಿಪಾದಿಸುತ್ತಾನೆ.

ಇಂಗಿತ ಅರಿಯದೆ ಭಂಗಿಸೇದದಿರು (೫೯)

"ಭಂಗಿ ಸೇದುವಂಥ ಮಂಗ ಅನುಭಾವಿಗಳು
ಗುಂಗಿನೊಳಗೆ ಜನುಮ ಕಳೆಯುವರಯ್ಯಾ
ಭಂಗಾರದಂಥ ಭಜನಿ ದಂಗಾದಿಂಗಿನ ಕುಣಿದು
ಸಂಗತಿಲ್ಲದ ಕೆಡಸಿ ಬಿಡತಾರಯ್ಯ ||೧||
ಗಾಂಜಿಯ ಪುಡಿ ನೀರ ಹೂಜಿಯ ನೋಡಿದರ
ವಾಜಮಿ ಎಂದು ತಲೆ ಅಲಗಾಡಿಸುವರಯ್ಯಾ
ಮೋಜಿನೊಳಗೆ ದಮ್ಮಡಿ ಬಾಜವು ಬಾರಿಸುತ
ಫಾಜಿರರೆಲ್ಲರು ಕೂಡಿ ಕುಣಿಯವರಯ್ಯಾ ||೨||"[೨]

ನಿಜವಾದ ಭಕ್ತಿಯಿಲ್ಲದೆ ಅನ್ಯರನ್ನು ನೋಡಿ ಡಾಂಬಿಕತನದಿಂದ ನಟಿಸುವ ಅವಧೂತ ಪಂಥದವರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಅವಧೂತರೆಲ್ಲ ಗಾಂಜಾ ಸೇದುವವರೆ. ಆದರೆ ಅವರ ಭಕ್ತಿಯ ಅನಂತತೆಯು ವಿಶೇಷ ಆನಂದದ್ದು. ಬ್ರಹ್ಮದ ಆನಂದದಲ್ಲಿ ಸೇರುವುದು. ಆದರೆ ಅದನ್ನು ಚಟಕ್ಕೆ ಬಳಸಿಕೊಂಡು ನೀಚತನದಿಂದ ವರ್ತಿಸಿದರೆ ಇಡೀ ಮನುಷ್ಯ ಜನ್ಮವೇ ವ್ಯರ್ಥ. ಒಳ್ಳೆಯ ಗುಣವಂತರಾಗಬೇಕು, ಅದು ಬಿಟ್ಟು ಗಾಂಜಾ ಸೇದಿ ಆ ಮತ್ತಿನಲ್ಲಿ ಶಾಸ್ತ್ರ ದೈವವನ್ನು ಅವಹೇಳನ ಮಾಡುವುದು ಸರಿಯಲ್ಲ. ಅವರನ್ನು ಅಮಲಿನ ಅವಧೂತರೆಂದು, ಡಾಂಬಿಕರೆಂದು ವ್ಯಂಗಿಸುವನು.

ಚಿಲಿಮಿಯ ನೋಡಿದಿರಾ (೧೧೪), ಇಲ್ಲಿಯೂ ಕೂಡಾ ಅಲಭೈರಿ ದೇಹವನ್ನು ಚಿಲಿಮಿ ಮಾಡಿರುವನು. ಇದು ಸಿದ್ದ ಚಿಲಿಮಿ ಗುರುವಿನ ಬಳಿಯಲ್ಲಿ ಬೆರೆತು ಮೋಕ್ಷಕ್ಕೆ

ಅರ್ಹವಾದ ಚಿಲಿಮಿ ಎಂದು ಹೇಳುತ್ತಾನೆ. ಕವಿ ಒಂದು ಕಡೆ ಗಾಂಜಾದ ವಿರುದ್ಧ ಮಾತನಾಡಿದರೆ ಮತ್ತೊಂದೆಡೆ ಗಾಂಜಾ ಸೇದುವ ಪರವೂ ಮಾತನಾಡುತ್ತಾನೆ.

ಸೇದಲೆ ಗಾಂಜಿ (೮೧),

“ಸೇದು ಸೇದು ಸೇದಲೆ ಗಾಂಜಿ ಸೇದರೆ ನೋಡು
ಸಿದ್ಧನ ಸೇದರೆ ನೋಡು ಬಂಧನ ಸಂಹಾರ ಮಾಡು ॥ಪ॥
ಹಾಕು ಚಿಲಿಮಿಗೆ ಹಳ್ಳ ಬೇಕು
ಬೆಂಕಿ ಒಣಕಾಕುಳ್ಳ
ಪಾಕ ಮಾಡಿ ಮನ ಜೋಕ ಜುರುಕಿ ಹೊಡಿ
ಸಾಕ ಸಂಸಾರಿದ ಸುಳ್ಳ ಸೇದು ಸೇದು ಸೇದಲೆ ಗಾಂಜಿ ॥೧॥”[೨೩]

ಗಾಂಜಾದ ಮತ್ತಿನ ಅಮಲು ಭವ ಬಂಧನದಿಂದ ಬಿಡುಗಡೆ ಮಾಡುತ್ತದೆ. ಮನಸ್ಸನ್ನು ಶುದ್ಧಗೊಳಿಸಿ ಸುಳ್ಳ ಸಂಸಾರದಿಂದ ಮುಕ್ತಿಯನ್ನು ತೋರಿಸುತ್ತದೆ ಎಂದು ಅವಧೂತರ ಅಭಿಪ್ರಾಯ.

“ಆದಿ ಅನಾದಿ ತಿಳಿ-ಅಧಮಾ
ಭೇದ ಭಾವನಾ ಅಳಿ
ಸಾಧು ಸಜ್ಜನರ ಪಾದಕ ಹೊಂದಿ
ನಾದ ಬ್ರಹ್ಮದಲಿ ಸುಳಿ ಸೇದು ಸೇದು ಸೇದಲೆ ಗಾಂಜಿ ॥೨॥
ಓಂ ನಮಃ ಶಿವಾಯ ನುಡಿ । ಸದ್ಗುರು ಚನ್ನವೃಷಭಗ ನಡಿ ।
ಸನ್ನುತ ಮಂತ್ರಕೆ ಧನ್ಯನಾಗ ನೀ
ಮುನ್ನವೆ ಮುಕ್ತಿಯ ಪಡಿ ಸೇದು ಸೇದು ಸೇದಲೆ ಗಾಂಜಿ ॥೩॥”[೨೪]

ಆದಿ-ಅನಾದಿ ಭಾವಗಳನ್ನು ಅಳಿದು ಸಾಧು ಸಜ್ಜನರ ಸಹವಾಸಗಳನ್ನು ಪಡೆಯಲು ಅರವುನು. ಶ್ರೀ ಚನ್ನವೃಷಭೇಂದ್ರನ ಒಡಗೂಡಿ ಓಂ ನಮಃ ಶಿವಾಯ ಮಂತ್ರವನ್ನು ಜಪಿಸುತ್ತ ಮುಕ್ತಿಯ ಪಡೆಯಲು ಈ ತತ್ವಪದ ತಿಳಿಸುತ್ತದೆ.

ಭಂಗಿ ಮುಕ್ಕರ ಸಂಗ ಬೇಡ (೯೨), ಈ ತತ್ವಪದವೂ ಕೂಡಾ ಭಂಗಿ ಸೇದುವವರನ್ನು ತರಾಟೆಗೆ ತೆಗೆದುಕೊಂಡಿದೆ.

“ಭಂಗಿ ಮುಕ್ಕರ ಸಂಗ ಸಾಕಣ್ಣ! ಯಾ ಹೊತ್ತು ಇವರಿಗೆ
ಭಂಗಿತನದ ಡಂಗ ಬೇಕಣಾ ॥ಪ॥
ಭಂಗಿ ಸೇದಿದ ಗೂಂಗಿನೊಳು ಪರ

ಹಂಗು ಇಲ್ಲದೆ ಪೊಂಗ ಬಡೆದವರು
ಮಂಗ ಮೂಳರು ನುಂಗಿ ಹೊಗೆಯನು
ದಿಂಗ ವರೆದತಿ ಜಿಂಗನಾರುವ ॥ಅನುಪಲ್ಲ॥
ಹೆಸರಿಗೆ ಗುರು–ಪುತ್ರ ನೋಡಣ್ಣಾ।
ತಾಮಸದಿ ಅನುದಿನ ಅಸುರಕರ್ಮದಿ ಮಸಣಿಸುವರಣ್ಣಾ।
ಕೆಡಕಾರು ಗುಣಗಳ ಕೆಸರಿನೊಳು ಬಿದ್ದಾಗುವರು ಸಣ್ಣಾ।
ಗುರು ಹಿರಿಯರನು ಕೊಸರಿ ನಡೆದು ಕಿಸಿವರೊ ಕಣ್ಣಾ।
ಮತಿ ಭ್ರಷ್ಟರಣ್ಣಾ ॥೧॥
ವ್ಯಸನಗಳಿಗೆ ಹಸರ ತಂಬಾಕ
ಮುಸಿಯ ಚಹಾ ಬಸಿಯ ಭ್ರಮೆಯೊಳು
ಅಸಲ ಅನುಭವ ರಸವು ತಿಳಿಯದೆ
ಹೇಸಿಗಾಸಿವ ಪಿಸುಣರಾದ ॥೨॥
ಕೊಳಕ ಸೂಳೆಯ ಮಕ್ಕಳೆಳಣ್ಣಾ।
ಮೂಡಾತ್ಮಕೇಳು ಮುಳ್ಳ ಗೊಳಕಿ ಮುಳ್ಳಂತಿವರು ನೋಡಣ್ಣಾ।
ಕಾಮಾದಿ ಅರಿಗಳ ತಳಕು ಮಳಕಿನ ಸುಳಕಿ ಮಲ್ಲಣ್ಣ।
ತತ್ವಾರ್ಥ ಸಾಧನಗಳಿಕೆ ಮಾಡುವ ಬಳಕೆ ಇಲ್ಲಣ್ಣಾ ।
ಅರೆಮರುಳಣ್ಣಾ ॥೩॥"[೨೫]

ಅವಧೂತರಲ್ಲಿ ಭಂಗಿ ಒಂದು ಅಂಶ ಮಾತ್ರ. ಅದೇ ಅವರ ತತ್ವವಲ್ಲ. ಅದಕ್ಕೆಂದೆ ಅಲಭ್ಯೆರಿ ಟೀಕಿಸುತ್ತಾನೆ. ಹೆಸರಿಗೆ ಗುರು ಪುತ್ರರು, ತಾಮಸಗುಣ ಹೊಂದಿ ಅನುದಿನವು ಅಸುರ ಕರ್ಮದ ಮಸಣಿಸುತ್ತಿರುವರು. ಅರಿಷಡ್ವರ್ಗಗಳಲ್ಲಿ ಬಿದ್ದು ಅರಿಷಡ್ವರ್ಗವೆಂಬ ಕೆಸರಲ್ಲಿ ಬಿದ್ದು ಗುರು ಹಿರಿಯರ ಮರೆದು ಮತಿ ಭ್ರಷ್ಟರಾಗಿದ್ದಾರೆ. ಭಂಗಿಯ ವ್ಯಸನದಲ್ಲಿ ಚಹಾ ಬಸಿಯ ಭ್ರಮೆಯಲ್ಲಿ ಅಸಲಿಯಾದ ಅನುಭಾವದ ರಸವ ತಿಳಿಯ ಹೇಸಿಗೆಯಲ್ಲಿಯೇ ತೇಲಿದ್ದಾರೆ. ಇವರು ನೀಚರು ಸೂಳೆಯ ಮೂಡಾತ್ಮರೊಳು ಮುಳುಗುಳಕಿ ಮಳ್ಳಂತಿರುವರು. ಕಾಮಾ ಪಿಪಾಸಕರಾಗಿ ತತ್ವಾರ್ಥ ಸಾಧನ ಮಾಡುವ ಬಯಕೆ ಇವರಿಗಿಲ್ಲ ಎಂದು ಖಂಡ–ತುಂಡವಾಗಿ ಜರಿಯುತ್ತಾನೆ.

"ಸಿದ್ಧನ ಸೇದೆರೆ ನೋಡು
ಬಂಧನ ಸಂಹಾರ ಮಾಡು
ಸೇದು ಸೇದು ಸೇದಲೆ ಗಾಂಜಿ ಸೇದರೆ ನೋಡು ॥೪॥"[೨೬]

ಗಾಂಜಿ ಸಂಕೇತವೂ ಹೌದು. ಸಾಧ್ಯ-ಸಾಧಕವೂ ಹೌದು. ಸಾಧಿಸುವ ಸಾಧಕನಿಗೆ ಸಿದ್ಧತನದ ಫಲ ದೊರಕಿಸುವ ವಿಧಾನವೂ ಹೌದು. ಅವಧೂತ ಪಂಥದವರು ಭೌತಿಕವಾಗಿ ದೇಹವನ್ನು ಬಹಳ ಸದೃಢವಾಗಿಟ್ಟುಕೊಂಡವರಿರುತ್ತಾರೆ. ಗಾಂಜಾ ದುರ್ಬಲ ದೇಹಿಗಳು ಸೇದಿ ದಕ್ಕಿಸಿಕೊಳ್ಳುವಂತಹದಲ್ಲ. ಭಕ್ತಿಯಲ್ಲಿಯೂ ಅಷ್ಟೇ ಯಾರು ಬೇಕಾದರೂ ಭಕ್ತರಾಗಬಹುದು. ಆದರೆ ಅನುಭಾವಿಗಳಾಗುವುದು ಕಷ್ಟ. ಭವ ಬಂಧನಗಳ ಕೊಂಡಿ ಕಳಚಿಕೊಳ್ಳುವುದು ಕಠಿಣ. ಸಂಸಾರದ ಪಾಶಗಳನ್ನು ಕಳಚಿಕೊಳ್ಳುವುದು ಅಂದುಕೊಂಡಷ್ಟು ಸುಲಭವಲ್ಲ. ಅದರ ನೆನಪು ಎದೆಯ ಬೆನ್ನತ್ತಿ ಕಾಡುತ್ತದೆ. ಆದರೆ ಆ ಭಗವಂತನ ಭಕ್ತಿಯ ಮುಕ್ತಿ ಆರಾಧಕ. ಎಲ್ಲ ಇಹಲೋಕದ ಬಂಧನ ತೊರೆಯುವವನಿಗೆ ಗಾಂಜಾ ಮೈಮರೆಸಿ ಭಗವದ್‌ಲೀನವಾಗಿಸುವ ಪರಿ ಎನಿಸಿದರೂ ಇಹಲೋಕದ ಎಲ್ಲ ಬಾಧೆಗೆ ನಿವಾರಣದ ಉತ್ತಮವಾಗುತ್ತದೆ. ಏಕೆಂದರೆ ಇವರೂ ಕೂಡ ಬಂಧು ಬಳಗದಿಂದ ಬೇರ್ಪಟ್ಟು ಬಂದವರೇ ಆಗಿರುತ್ತಿದ್ದರು.

ಈಗಿನಂತೆ Drug edict ಆದವರಿಗೆ ಹೋಲಿಕೆ ಸಲ್ಲದು, ಏಕೆಂದರೆ ಇವರು ಯೋಗ ಪ್ರಾಣಾಯಾಮಾ ಸಾಧನದಿಂದ ದೇಹ ಮನಸ್ಸುಗಳ ಮೇಲೆ ಹಿಡಿತ ಹೊಂದಿದವರಾಗಿರುತ್ತಾರೆ. ಇವರು ಧೂಮಪಾನ ಮಧ್ಯಪಾನ ವ್ಯಸನಿಗಳಂತಲ್ಲ. ಎಲ್ಲದರ ಮೇಲೂ ಹಿಡಿತ ಸಾಧಿಸಿದ ಸಾಧಕರು.

ಕವಿಯ ತತ್ವಪದಗಳು ಅದೆಷ್ಟು ತಿಳುವಳಿಕೆಯ ತತ್ವಸಾರವೆಂದರೆ ಸಾಮಾಜಿಕವಾದ ಉನ್ನತ ಬದುಕಿಗೆ ಪ್ರತಿ ಹೆಜ್ಜೆಗೂ ಹೇಳುವ ಬುದ್ಧಿಮಾತಿನಂತಿವೆ. ತತ್ವಪದಗಳು "ಪರನಾರಿ ಎನ್ನ ತಾಯಿಯೇ ಸರಿ" (೮೨) ಅವರು ಸಮಾಜದಲ್ಲಿ 'ಪರನಾರಿಗೆ' ಕೊಡುವ ಗೌರವ ಎಂತಹ ಸಂಸ್ಕಾರದಿಂದ ಕೂಡಿತ್ತು ಎಂಬುದನ್ನು ತಿಳಿಸುತ್ತದೆ.

ಇಂಚಗೇರಿಯ ಪಂಚರತ್ನಗಳು (೮೩), ಸಿದ್ಧಾಟಿಕೆಯ ಸಿದ್ಧಯ್ಯ ಸ್ವಾಮಿ (೮೪), ಮಲ್ಲಿಕಾರ್ಜುನ ಸ್ವಾಮಿ (೮೭), ಗುರುಭಕ್ತ ಭೀಮಪ್ಪ (೮೬), ಸಂಕೋನಹಟ್ಟಿ ಸಿದ್ಧಯ್ಯ ಸ್ವಾಮಿ, ಜೈನಾಪುರದ ಮಠಾದೀಶ (೮೯), ಸಂತಶ್ರೀ ರಾಮನಗೌಡರು(೯೦), ಮುಂತಾದವರು ಅಲಭ್ಯೆರಿಗೆ ಸಮಕಾಲೀನ ಅಧ್ಯಾತ್ಮ ಜೀವಿಗಳಿರಬಹುದು. ಅದಕ್ಕಾಗಿಯೇ ಅವರ ಕುರಿತಾಗಿ ವೈಯಕ್ತಿಕ ತತ್ವ ಪದಗಳನ್ನು ರಚಿಸಿದ್ದಾನೆ. ಇದರಿಂದ ಆತನ ಸಾಮಾಜಿಕ ಸೌಹಾರ್ದತೆ ಸ್ನೇಹ ಜೀವಿಯ ಮನೋಭಾವ ವ್ಯಕ್ತಿವಾಗುತ್ತದೆ.

"ಮಾನವ ಜನ್ಮಕೆ ಏನು ಬೇಕು? (೯೩), ಈ ತತ್ವಪದದಲ್ಲಿ ಮಹತ್ವದ ತಿಳುವಳಿಕೆಯನ್ನು ಹೇಳುತ್ತಾನೆ. ಮಾನವ ಜನ್ಮಕೆ ಏನು ಬೇಕು? ಮೊದಲು ಮೋಕ್ಷದ ಇಚ್ಛಾಬೇಕು, ಸ್ವಾನುಭವದಿಂದ ಬ್ರಹ್ಮಜ್ಞಾನ ತಿಳಿಯಲು ಮನನಿಷ್ಠವಾದ ಶೃತಿ ಎಂಬ ಗುರುಬೇಕು. ಮುಕ್ತಿಯಲ್ಲಿ ದೃಢನಂಬಿಕೆ ಇರಬೇಕು. ನಿರ್ಮಲವಾದ ಸಾಧುಗಳು ಎದುರು

ಇರಬೇಕು. ಅಧಮರ ಸಂಗ ಪೂರ್ಣ ಬಿಟ್ಟಿರಬೇಕು. ಶಾಸ್ತ್ರೋಕ್ತ ಸಂಸಾರ ಮಾಡಬೇಕು. ಅಂದರೆ ಜ್ಞಾನದ ಜೊತೆಗೆ ಸಂಸಾರ ಬೆಸೆದುಕೊಂಡಿರಬೇಕು. ಅಶಾಸ್ತ್ರೀಯ (ಅಜ್ಞಾನದ) ಸಂಸಾರವನ್ನು ತ್ಯಜಿಸಬೇಕು. ಪಾತ್ರವಾಗುವ ಅಪಾತ್ರವಾಗುವ ಸೂಕ್ಷ್ಮತೆಯನ್ನು ಜ್ಞಾನ ನೇತ್ರದಿಂದ ತಿಳಿದಿರಬೇಕು ಎಂದು ಕವಿ ಹೇಳುತ್ತಾನೆ.

ಹೀಗೆ ಅಲಭ್ಯೆರಿ ಶ್ರೀ ಸದ್ಗುರು ಚನ್ನವೃಷಬೇಂದ್ರರ ಶಿವ ಲಹರಿ ರಚಿಸಿದ್ದಾನೆ. "ಶ್ರೀ ಸದ್ಗುರು ಚನ್ನವೃಷಭೇಂದ್ರ ಸಹಜಾನಂದ ಶಿವಲಹರಿಯನ್ನು ರಚಿಸಿರುವನು. ಸಾಮಾಜಿಕ, ಧಾರ್ಮಿಕ, ಸಹಬಾಳ್ವೆ ಬದುಕಿಗೆ ಬೇಕಾಗುವ ಎಲ್ಲ ಸದ್ ವಿಚಾರವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ್ದಾನೆ. ಮನುಷ್ಯನ ಬದುಕಿನ ಅಂತಿಮ ಗುರಿಯಾದ ಮುಕ್ತಿಯನ್ನು ಹಾಡಿದ್ದಾನೆ.

"ಕೊನೆ ಮುಟ್ಟುವ ದಾರಿ ಹಿಡಿ" (೭೨), ಈ ತತ್ವದಲ್ಲಿ ಮುಕ್ತಿಯ ದಾರಿಯನ್ನು ತಿಳಿಸುತ್ತಾನೆ.

"ಗಾಡಿ ಹೊಡಿಯೊ ಮೂಢ ಮನುಜಾ
ನೋಡದೆ ಕೊಳ್ಳದಲ್ಲಿ ಬಿದ್ದಿಯೊ ಸಹಜಾ
ಆರು-ಮೂರು ಸಾರಿಗಿ ಮಾಡಿದಿ ಲೆಕ್ಕಾ
ಅಷ್ಟರೊಳಗೆ ನಿಂದ ತಪ್ಪಿತು ದಿಕ್ಕಾ ॥೧॥
ಹೆರವರ ಬಾಡಿಗೆ ಹಚ್ಚಿತು ಆಶಿ
ತಿಳಿಯದಕಾ ನೀ ಆದೆಲ್ಲೋ ಫಾಸಿ
ಕೊನೆಗೆ ಮುಟ್ಟುವ ದಾರಿಯ ಮರತಿ
ಅದರಿಂದಲೆ ನೀ ತಿಂದಿಯೋ ಲತ್ತಿ ॥೨॥
ಸತ್ವನೆಂಬುವ ಕೀಲ ಜಡಿಯೊ
ಮದಗಳೆಂಬ ರಾಡಿ ತೊಳಿಯೊ
ಹಾರೂಗೇರಿ ಗ್ರಾಮದ ಮಠಕೆ ನೀ ಓಡೊ
ಗುರುರಾಯ ಹೇಳಿದ ದಾರಿಯ ಕೂಡೊ ॥೩॥"[೨೭]

ಅವಧೂತರು ಮಾತನಾಡಲು ಆರಂಭಿಸುವುದೇ ಆರು, ಮೂರು ಅಂಕಿಯಿಂದಲೆ. ಅವರ ತತ್ವಪದಗಳು ಮಾತನಾಡುವುದೇ ಅಂತರಂಗ ಶುದ್ಧಿಯ ಕುರಿತು. "ಸಾಹಿತ್ಯ ಕೇವಲ ಸಾಹಿತ್ಯಿಕ ರಚನೆಗಳು ಮಾತ್ರವಾಗಿರದೆ ಸಾಂಸ್ಕೃತಿಕವಾಗಿಯೂ ಮಹತ್ವವನ್ನು ಪಡೆದಿವೆ. ಸಮಾನತೆ, ಸೌಹಾರ್ದತೆ, ಸಾಮರಸ್ಯಗಳನ್ನು ಪ್ರತಿಪಾದಿಸುವ ಇವು ವ್ಯಕ್ತಿಯಲ್ಲಿ ಬದಲಾವಣೆಯನ್ನು ತರಲು ಯತ್ನಿಸಿವೆ. ವ್ಯಕ್ತಿಯಿಂದ ಸಮಾಜ ಎಂಬ ನಿಲುವನ್ನು ತತ್ವಪದಕಾರರು ತಳೆದಿದ್ದಾರೆ. ಹೀಗೆ ಅನುಭಾವಿಕ ತಳಹದಿಯ ಮೇಲೆ ರಚಿತವಾದ ಈ ಸಾಹಿತ್ಯವು ಸಾಮಾಜಿಕ ಕಳಕಳಿಯನ್ನು ಹೊಂದಿದೆ. ಬಹುಭಾಷಿಕತೆ, ಬಹುಧಾರ್ಮಿಕತೆ ಮತ್ತು ಬಹು ಸಂಸ್ಕೃತಿಗಳನ್ನು ಪ್ರತಿಪಾದಿಸುವ ತತ್ವಪದಕಾರರು ದೊಡ್ಡ ಅನುಭಾವಿಗಳಾಗಿರುವ

ಜೊತೆಗೆ ಮಾನವತಾವಾದಿಗಳು ಸಹ ಆಗಿದ್ದಾರೆ" ಎಂದು ಅವರನ್ನು ಒಪ್ಪಿಕೊಳ್ಳುವದರ ಜೊತೆಗೆ ಅವರ ಸಾಹಿತ್ಯ ಸೇವೆ ಅನುಭಾವತನ, ಮಾನವೀಯ ಮೌಲ್ಯ ಶ್ರೇಷ್ಠವೆಂದು ಗುರುತಿಸಬಹುದು.

೫.೫. ಸ್ತೋತ್ರ ಪದಗಳು :

ಸ್ತೋತ್ರ ಸಾಹಿತ್ಯವನ್ನು ಸ್ತುತಿ ಸಾಹಿತ್ಯವೆಂದೂ ಕರೆಯುತ್ತಾರೆ. ತಮ್ಮ ಪ್ರಾದೇಶಿಕ ದೈವ ಸಂತ ಮಹಂತರ ಕುರಿತು ಭಕ್ತಿಯಿಂದ ಹಾಡಿಕೊಂಡು ಭಜಿಸುವ ಸಾಹಿತ್ಯವೇ ಸ್ತೋತ್ರ ಸಾಹಿತ್ಯ. ಇದು ಪ್ರಶಂಸೆಯ ಸಾಹಿತ್ಯವೆನ್ನಬಹುದು. ವ್ಯಕ್ತಿ ತನ್ನ ದೈವವನ್ನು ಭಕ್ತಿ ಪೂರ್ವಕವಾಗಿ ಬೇಡಿಕೊಳ್ಳುವುದು. ವ್ಯಕ್ತಿಗೆ ಸ್ತೋತ್ರ ಅಥವಾ ಪ್ರಾರ್ಥನೆಯಿಂದ ಅವನ ಬದುಕಿನಲ್ಲಿ ಅಜ್ಞಾನ ಮಾಯವಾಗಿ ಸುಜ್ಞಾನ ನೆಲೆಸುವುದು. ಇದರಿಂದ ಮನುಷ್ಯನಿಗೆ ಆತ್ಮವಿಶ್ವಾಸ ವೃದ್ಧಿಸಿ ಜೀವನದಲ್ಲಿ ಬಲವಾದ ನಂಬಿಕೆ ಒಡಮೂಡುತ್ತದೆ.

ಇದು ಪ್ರತಿಯೊಂದು ಧರ್ಮದಲ್ಲಿಯೂ ಕಂಡು ಬರುತ್ತದೆ. ಇಷ್ಟ ದೇವತಾ ಪ್ರಾರ್ಥನೆ, ಸ್ತೋತ್ರಗಳು ಇಲ್ಲದ ಮತವೂ ಇಲ್ಲ. ಈ ಪ್ರಾರ್ಥನೆಗಳು ಮೊದ ಮೊದಲು ನೆಲೆಸಿದ್ದು ಜನಪದರಲ್ಲಿ. ಜನಪದ ಸಾಹಿತ್ಯದಲ್ಲಿ ಸ್ತೋತ್ರ ಸಾಹಿತ್ಯ ಮಹತ್ವ ಪಡೆದುಕೊಂಡಿದೆ. ಈಗಲೂ ಜನಪದರು ಯಾವುದೇ ಕೆಲಸವನ್ನು ಆರಂಭಿಸುವುದಕ್ಕಿಂತ ಪೂರ್ವದಲ್ಲಿ ಇಷ್ಟದೈವವನ್ನು ಪ್ರಾರ್ಥಿಸುತ್ತಾರೆ.

ಬಾಗೆ ಪರಿಸರದ ಜನಪದ ಕವಿಗಳು ತಮ್ಮ ಅಧಿದೈವವನ್ನು ಸ್ಮರಿಸದೆ ಯಾವ ಕೆಲಸವನ್ನು ಮಾಡುತ್ತಿರಲಿಲ್ಲ. ಹಾರೂಗೇರಿಯ ತತ್ವಪದಕಾರ ಅಲಭ್ಯೆರಿ ಸಾಕ್ಷಿ. ಈತನ ತತ್ವಪದಗಳಲ್ಲಿ ಇಂತಹ ಸಾಕಷ್ಟು ಉದಾಹರಣೆಗಳನ್ನು ಕಾಣುತ್ತೇವೆ. ದೊರೆತ ಕೆಲವು ಪ್ರಕಟಿತ ಹಾಗೂ ಅಪ್ರಕಟಿತ ಸ್ತೋತ್ರ ಪದಗಳನ್ನು ಇಲ್ಲಿ ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗಿದೆ. ಅಲಭ್ಯೆರಿ ಕವಿಯ ಭಜನೆಯ ಪದಗಳು ಎಂಬ ಕೃತಿಯು ಡಾ. ಆರ್. ಬಿ. ಚಿಲಮಿ ಇವರಿಂದ ಪ್ರಕಟಿತಗೊಂಡಿದ್ದು, ಇದರಲ್ಲಿ ೧೧೯ ಪದಗಳಿವೆ. ಪ್ರಸ್ತುತ ಸಂಕಲನವು ವಿಘ್ನಗಳನ್ನು ದೂರಗೊಳಿಸುವ ವಿನಾಯಕನ ಪ್ರಾರ್ಥನಾ ಪದ್ಯದೊಂದಿಗೆ ಆರಂಭಗೊಂಡು ವಂದಿಪೆ ಶೇಷಾದ್ರಿವಾಸ ಹರಿ ಎಂಬುದಾಗಿ ಶ್ರೀ ಕೃಷ್ಣ ಪರಮಾತ್ಮನ ಸ್ತುತಿಯೊಂದಿಗೆ ಮುಕ್ತಾಯಗೊಳ್ಳುತ್ತದೆ.

ಈ ಕೃತಿಯ ಅಂತಿಮ ಭಾಗವಾದ ಮಂಗಲಾಚರಣಗಳುಳ್ಳ ಮಂಗಳಾರತಿಯ ಏಳು ಪದಗಳು ಮೆರಗು ತಂದಿವೆ. ನಮ್ಮ ಹಿಂದೂ ಪರಂಪರೆಯಂತೆ ಅಲಭ್ಯೆರಿಯು ಸಂಪ್ರದಾಯಶೀಲ ಶರಣನೆಂಬುದು ಇದರಿಂದ ತಿಳಿದುಬರುತ್ತದೆ. ಯಾವುದೇ ಸತ್ಕಾರ್ಯಕ್ಕೆ ಸ್ತುತಿಗೀತೆಗಳು, ಮಂಗಳಾರತಿ ಪದಗಳು ಅವಶ್ಯ. ಜನಪದರಂತೆ ಕವಿಯೂ ತನ್ನ ನಿತ್ಯದ

ಕೆಲಸ ಕಾರ್ಯದಲ್ಲಿ ಸ್ತುತಿಸಿಯೇ ಕಾರ್ಯತತ್ಪರನಾಗುತ್ತಿದ್ದನೆಂಬುದಕ್ಕೆ ಇವು ನಿದರ್ಶನ. ವಚನಕಾರರಂತೆ, ದಾಸವರೇಣ್ಯರ ಕೀರ್ತನೆಗಳಂತೆ ಈ ಪದಗಳಲ್ಲಿ ಭಕ್ತಿ, ಶ್ರದ್ಧೆ, ವಿಶ್ವಾಸ, ನೀತಿಬೋಧೆ, ಸಮಾಜ ನಿಂದನೆ, ಸಮಾಜ ವಿಮರ್ಶೆ, ಇಷ್ಟು ಗುಣಗಳನ್ನು ಅಳವಡಿಸಿಕೊಂಡು ಈ ಮುಂತಾದ ತಾತ್ವಿಕ ಚಿಂತನೆಗಳು ತತ್ವಪದಗಳಲ್ಲಿ ಹರಳುಗಟ್ಟಿವೆ.

ಅಲಭ್ಯೆರಿಯ ಅಪ್ರಕಟಿತ ಸ್ತುತಿಗಳು ಸಾಕಷ್ಟಿವೆ. ಗುರುಸ್ತುತಿ, ಶ್ರೀ ನಿರಂಜನ ಸ್ತುತಿ, ಹಾಗೂ ಶಕ್ತಿ ಸ್ತುತಿಗಳನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ.

"ಶ್ರೀ ಗುರುಸ್ತುತಿ" ಈ ಪ್ರಾರ್ಥನೆಯಲ್ಲಿ ಶ್ರೀಗುರು ಚನ್ನವೃಷಭೇಂದ್ರರರ ವಿವಿಧ ರೂಪಗಳನ್ನು ಅಲಭ್ಯೆರಿ ಗುರುತಿಸಿದ್ದಾನೆ.

"ಶ್ರೀಗುರು ಚನ್ನ ವೃಷಭಾರೂಢ ಶಿವ
ಯೋಗಿಶ್ವರನಿಗೆ ನಮೋ ನಮೋ ॥ಪ॥
ಜಗದಾದಿಕರಣ ನಿಗಮ ಗಮ ವಂದ್ಯ
ಸಗುಣ ಶಿವನಿಗೆ ನಮೋ ನಮೋ ॥೧॥
ದೇವಾದಿ ದೇವನ ದೇವಿ ಜಗದಾಂಬೆಯ
ಪಾವನ ಪಾದಕೆ ನಮೋ ನಮೋ ॥೨॥
ಪ್ರಣವಾದಿ ಪುರುಷ ಸದ್ಗುಣಮಣಿ ಗಣಪಂಗೆ
ಮಣಿದು ನಾ ಮಾಡುವೆ ನಮೋ ನಮೋ ॥೩॥
ಅಂದೇನು ಇಂದೇನು ಎಂದಿಗಾದರು ಶಿವನ
ಹೊಂದಿದ ಪ್ರಮಥರಿಗೆ ನಮೋ ನಮೋ "॥೪॥[೧]

ಕವಿ ಇಲ್ಲಿ ಚನ್ನವೃಷಭೇಶನ ಅನಂತ ರೂಪಗಳನ್ನು ವರ್ಣಿಸಿದ್ದಾನೆ. ಕೊನೆಯ ಚರಣದಲ್ಲಿ ಗಣಪ ಹಾಗೂ ಶಿವ ಎಂದು ಸಂಭೋದಿಸಿದ್ದನ್ನು ಕಾಣುತ್ತೇವೆ. ಇದರಿಂದ ಕವಿ ಚನ್ನವೃಷಭೇಂದ್ರನಲ್ಲಿ ಗಣಪ ಹಾಗೂ ಶಿವನ ರೂಪವನ್ನು ಕಾಣುತ್ತಾನೆ. "ಶ್ರೀ. ನಿರಂಜನ ಸ್ತುತಿ" ಪದ್ಯದಲ್ಲಿ ಸಹ ಕವಿ ನಿರಂಜನನ ಗುಣಗಾನವನ್ನು ಕಾಣಬಹುದು.

"ಶ್ರೀ ಶಕ್ತಿಯ ಸ್ತುತಿ" ಈ ಸ್ತುತಿ ಪದ್ಯದಲ್ಲಿ ಕವಿ ದುರ್ಗೆಯನ್ನು, ಅವಳ ಅನಂತ ಮಹಿಮೆಯನ್ನು ಪ್ರಶಂಸಿಸುತ್ತಾನೆ.

"ಹಿಮಕರಣಿ ಭವದನೆ ವಿಮಲಕುಂದರ ವದನೆ ಅಂಬಾ ।ಪ।
ಸುಮಶರ ಜನಕ ಸಹೋದರಿ ಸುಂದರೀ ಶಾರದೇಶ್ವರಿ

ಸಮರ ವಿಜಿತ ನಿಖಿಲಾಂಬರಿ ಸಾಧು ಶಂಕರಿ ಶುಭಕರಿ ।೧।
ಕಮಲಜಾತ ಸುರಪಾಲಿನಿ ಘನತರ ಶುಭಗುಣಶಾಲಿನಿ
ಸಮಗನಿ ಸಮಗಾಮಿ ಸಂಗೀತಸರಗಾಮಿನಿ ದೇವಿ ।೨।"[೨]

ಅಲಭೈರಿಯ ಪ್ರಕಟಿತ ಕೃತಿಯಲ್ಲಿ ಗಣನಾಥನ, ಶಾರದೆಯ, ಮಹಾವೀರ ಹಾಗೂ ಅರಹಂತನ ಸ್ತೋತ್ರ ಪದಗಳಲ್ಲಿ ಅವರವರ ದೈವವನ್ನು ಸ್ಮರಿಸಿದ್ದಾನೆ.

"ಗಣನಾಥನೆ ಪಾಲಿಸೆನ್ನನು
ಪಣಿ ಧರಿಸುತ ಸದ್ಗುಣಮಣಿ
ಶ್ರೀ ದಯಾನಿಧೆ ॥ಪ॥
ಕರಿಮುಖ ನಿಮ್ಮ ಚರಣಪೂಜಿಸಿ। ವರವ ಬೇಡುವೆ
ದುರಿತ ನಾಶನೆ। ಪರಮ ತೋಷ ತೋರಿಯೋ ಬೇಗನೆ॥
ಸುರನರನುತ ಕರುಣಾಕರ ಶ್ರೀ ದಯಾನಿಧೆ ॥೧॥"[೩]

ಗಣಪತಿಗೆ ಹಲವಾರು ಹೆಸರುಗಳು ಉಂಟು. ಗಣೇಶ, ಗಜಾನನ, ಕರಿಮುಖ, ಲಂಬೋಧರ, ವಿಘ್ನ ವಿನಾಶಕ ಇನ್ನೂ ಅನೇಕ ನಾಮಗಳುಂಟು. ಗಣಪತಿಯ ಪೂಜೆ ಯಾವುದೇ ಕೆಲಸವನ್ನು ಆರಂಭಿಸುವುದಕ್ಕಿಂತ ಪೂರ್ವದಲ್ಲಿ ಯಾವುದೇ ವಿಘ್ನಗಳು ಬರದಿರಲೆಂದು ಪೂಜಿಸುವರು. ಗಣಪತಿಯ ಮಹಿಮೆಯನ್ನು ಗುಣಗಾನ ಮಾಡುವ, ವರವ ಕೇಳುವ ಸ್ತುತಿವಿದು.

ಶಾರದೆಯ ಸ್ತೋತ್ರದಲ್ಲಿ ಶಾರದೆಯ ವಿವಿಧ ರೂಪಗಳನ್ನು ಕಾಣುತ್ತೇವೆ.

"ತ್ವರೆ ಬಾರೆ ಶಾರದಾಂಬೆ। ಕರುಣಾಕರೆ ಜಗದಾಂಬೆ
ಪರಮ ದಯಾಘನ ದುರಿತ ವಿನಾಶಿನಿ ॥ಪ॥
ಛಂದದಿ ಸಭೆಯೊಳು ಬಂದು ಸುಲಲಿತೆ ।
ಕಂದನ ಮನದನು ತಾಪದ ಚಿಂತೆ।
ಬಂಧನ ಬಿಡಿಸೇ ನಿರುಪದಿ ಮಾತೆ ।
ಸುಂದರ ಹಾರೂಗೇರಿ ಮಂದಿರ ಕಾಂತೆ"[೪]

ಶಾರದೆ ವಿದ್ಯಾದೇವತೆ. ಮನದ ಅಂಧಕಾರವನ್ನು ದೂರ ಮಾಡುವ ಸುಂದರ ಕಾಂತೆ. ಕವಿ ಅಲಭೈರಿ ಶಾರದೆಯ ವಿವಿಧ ರೂಪಗಳನ್ನು ಬಣ್ಣಿಸಿದ್ದಾನೆ. ಮನಸ್ಸಿನ ಚಿಂತೆಯನ್ನು ದೂರ ಮಾಡಿ ಭವ ಬಂಧನದಿಂದ ಪಾರು ಮಾಡು ಎಂದು ಕವಿ ಶಾರದೆಯಲ್ಲಿ ಕೇಳಿಕೊಳ್ಳುತ್ತಾನೆ.

"ಯೋಗಿವರನಲ್ಲಿ ಆಕ್ರಂಧನ" ಎನ್ನುವ ಪ್ರಾರ್ಥನೆಯಲ್ಲಿ ಮಹಾವೀರನನ್ನು ವಿವಿಧ ರೀತಿಯಲ್ಲಿ ಸ್ತುತಿಸಿರುವುದನ್ನು ಕಾಣುತ್ತೇವೆ. ಮಹಾವೀರ ತೀರ್ಥಂಕರರಲ್ಲಿಯೇ ಅಪ್ರತಿಮನು, ಮಹಾಯೋಗಿಯೂ ಹೌದು.

"ಯೋಗಿವರಾ ಸುಖಸಾರಾ ಧೀರಾ ಮಹಾವೀರ
ತ್ವರೆ ಬಾರೈ ಗತಿದೋರಲೆನಗೆ ಅವಿನ್ಯಾಶಾ ॥ಪ॥
ಶತಕೋಟಿ ಜನ್ಮದೋಳು। ಪತಿತನು ಆಗಿ ನಿಮ್ಮ
ಸ್ತುತಿಯನು ಗೈಯದೆ ಬೆರೆದು ಕೆಟ್ಟಿದುರ್ರ್ಯಾಶಾ ॥೧॥
ಧೀರಾ ಮಹಾವೀರಾ ತ್ವರೆ ಬಾರೈ-ಗತಿದೋರಲೆನಗೆ ಅವಿನ್ಯಾಶಾ ।ಬ।"[೨]

ಕವಿ ತೀರ್ಥಂಕರನನ್ನು ಯೋಗಿವರಾ ಸುಖನಿಧಿ, ಧೀರ ಹಾಗೂ ಮಹಾವೀರ ಎಂದು ಸಂಭೋದಿಸುತ್ತಾನೆ. ವಿನಾಶವಾಗದ ಶಾಶ್ವತ ನೆಲೆಯನ್ನು ತೋರಲು ವಿನಂತಿಸಿಕೊಳ್ಳುವನು. ನೂರುಕೋಟಿ ಜನ್ಮದಲ್ಲಿ ಒಡೆಯನಾದ ನಿನ್ನನ್ನು ಸ್ಮರಿಸದೆ ಕೆಟ್ಟು ಹೋಗಿದ್ದೇನೆ. ನನ್ನ ಮನದ ಅಂತರಾಳದ ಇಂಗಿತವನ್ನು ಅರಿತು ನನಗೆ ದಾರಿಯನ್ನು ತೋರು ಎಂದು ಕವಿ ೨೪ ನೆಯ ತೀರ್ಥಂಕರನಾದ ಮಹಾವೀರನಲ್ಲಿ ಬೇಡಿಕೊಳ್ಳುತ್ತಾನೆ.

"ಅರಹಂತನೆ ದಯವನ್ನು ತೋರು" ಎಂಬ ಸ್ತುತಿ ಪದ್ಯದಲ್ಲಿ ಅರಹಂತನನ್ನು ಕೊಂಡಾಡಿದ್ದಾನೆ.

"ಪೊರೆಯೊ ಬೇಗನೆ – ಅರಹಂತನೆ
ಬಾರೊ ಬೇಗನೆ – ಅರಹಂತನೆ ।ಪ।
ಭೇದಮಯನಾಗಿ
ಸ್ವಧರ್ಮವು ನೀಗಿ
ಶೋಧಿಸ–ದಾದಿಯ–ನಾದಿ ಸಿದ್ಧಾಂತವನ್ನು
ಹದಗೆಟ್ಟೆನೈ ಅರಹಂತನೆ ।
ಕಡುಪಾಪಿಯು ನಾನು
ಬೇಡಿಕೊಂಬುವೆನು
ಮೂಢನ ನೋಡಿ ಕಾಪಾಡು ಹಾರೂಗೇರಿಯೊಳ್
ಎಡಬಿಡದೆ ಅರಹಂತನೆ"[೩]

ಈ ರೀತಿ ಅಲಭ್ಯೆರಿ ಹಲವಾರು ಸ್ತುತಿ ಪದ್ಯಗಳನ್ನು ರಚಿಸಿದ್ದಾನೆ. ಗಣಪತಿ, ದುರ್ಗೆ, ಜನಸ್ತುತಿ, ಮಹಾವೀರಸ್ತುತಿ, ಗುರುಸ್ತುತಿ ಹಾಗೂ ನಿರಂಜನ ಸ್ತುತಿ ಪದ್ಯಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ.

೫.೬ ಅಭಂಗ ಪದಗಳು:

ಅಭಂಗ ಇದು ಮರಾಠಿ ಭಾಷೆಯಲ್ಲಿ ವಿಶೇಷವಾಗಿ ಬೆಳೆದ ಸಾಹಿತ್ಯದ ಪ್ರಕಾರ. ಇದು ಮರಾಠಿ ದಾಸ ಗೀತೆಗಳ ಪ್ರಕಾರ. ಇದರ ಅರ್ಥ ಅಖಂಡ, ಒಡೆಯದ ಎಂಬ ಅರ್ಥವನ್ನು ನೀಡುತ್ತದೆ. ಅಭಂಗ ಸಾಹಿತ್ಯ ಮರಾಠಿ ಸಾಹಿತ್ಯದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಅಭಂಗ ಸಾಹಿತ್ಯದಲ್ಲಿ ಪಾಂಡುರಂಗ ವಿಠ್ಠಲನ ಸ್ತುತಿಯನ್ನು ಕಾಣುತ್ತೇವೆ. ಪಂಡರಪುರ ಬಹಳ ಪ್ರಾಚೀನವಾದ ಒಂದು ಪುಣ್ಯ ಕ್ಷೇತ್ರ

"ಪಂಢರೀ ಮಹಾತ್ಮರ" ಎಂಬ ಗ್ರಂಥವೊಂದರಲ್ಲಿ,

"ಪೌಂಡರಿಕಮೀತೀ ಖ್ಯಾತ ತೀರ್ಥಕ್ಷೇತ್ರ ಚ ಪೂಜಿತಂ ।

ಪಾಂಡುರಂಗಶ್ಚ ತತ್ರಾಸ್ತೇ ಮೂರ್ತಿಮಾನ್ ದೇವತೋತ್ತಮಃ ।"[೧]

ಎಂದು ವರ್ಣಿಸಲಾಗಿದೆ. ಅಂದರೆ ಪೌಂಡರಿಕ ಎಂಬ ಹೆಸರಿನ ಕ್ಷೇತ್ರ ಮತ್ತು ತೀರ್ಥವೊಂದಿದೆ. ಆ ಕ್ಷೇತ್ರದಲ್ಲಿ ಸರ್ವಶ್ರೇಷ್ಠ ದೇವನಾಗಿರುವ ಪಾಂಡುರಂಗನು ಮೂರ್ತಿ ರೂಪದಲ್ಲಿ ನೆಲೆಸಿದ್ದಾರೆ.

ಶ್ರೀ ವಿಠ್ಠಲನ ಅರ್ಥಾತ್ ಪಾಂಡುರಂಗನ ದರ್ಶನ ಮಾಡಿದರೆ ಕಷ್ಟಗಳು ದೂರವಾಗುತ್ತವೆ ಎಂಬುದು ಭಕ್ತ ಜನರ ನಂಬಿಕೆಯಾಗಿದೆ.

ಇಂತಹ ಆರಾಧ್ಯ ದೇವನನ್ನು ಅನೇಕ ಸಂತರು, ಶರಣರು, ಕವಿಗಳು, ಅಧ್ಯಾತ್ಮವಾದಿಗಳು ಸ್ತುತಿಸಿದ್ದಾರೆ. ಕೆಲವರು ಇವನ ಕುರಿತು ಕೃತಿಗಳನ್ನು ರಚಿಸಿದರೆ ಮತ್ತೆ ಕೆಲವರು ಅಭಂಗ ಪದಗಳ ಮೂಲಕ ಆರಾಧಿಸುತ್ತಾರೆ. ಕನ್ನಡದಲ್ಲಿಯೂ ಅಭಂಗ ಸಾಹಿತ್ಯದ ಮೂಲಕ ಹಾಗೂ ಕೃತಿಗಳ ಮೂಲಕ ಪಾಂಡುರಂಗನನ್ನು ಸ್ತುತಿಸಿಲಾಗಿದೆ.

ಅಲಭ್ಯೆರಿಯು ಅಭಂಗ ಸಾಹಿತ್ಯ (ಪದಗಳನ್ನು) ರಚಿಸಿದ್ದಾನೆ. ಕ್ಷೇತ್ರಕಾರ್ಯ ಕೈಗೊಂಡಾಗ ೨೦ ಅಭಂಗಗಳು ದೊರೆಕಿದ್ದು ಇವು ಅಪ್ರಕಟಿತವಾಗಿವೆ. ಹಸ್ತ ಪ್ರತಿಯಲ್ಲಿರುವ ಅಭಂಗಗಳನ್ನು ಇಲ್ಲಿ ಚರ್ಚಿಸಲು ಬಳಸಿಕೊಳ್ಳಲಾಗಿದೆ.

ಅಲಭ್ಯೆರಿಯ ೨೦ ಅಭಂಗ ಪದಗಳನ್ನು ಗಮನಿಸಿದಾಗ ಈತನ ಒಟ್ಟು ಅಭಂಗ ಪದಗಳ ತಿರುಳು ಪಾಂಡುರಂಗನ ಗುಣಗಾನ ಹಾಗೂ ಸಮಾಜದ ಅಂಧಕಾರವನ್ನು ಹೋಗಲಾಡಿಸಲು ಹಾಗೂ ತನ್ನಲ್ಲಿರುವ ಅವಿವೇಕವನ್ನು ಕಳೆಯಲು ಪಾಂಡುರಂಗನಲ್ಲಿ ಇಟ್ಟಿರುವ ಅನನ್ಯ ಭಕ್ತಿ ಕಾಣುತ್ತದೆ. ಈ ಎಲ್ಲ ವಿಚಾರಗಳನ್ನು ಗಮನಿಸಿದಾಗ ಅಲಭ್ಯೆರಿಯ ಮೇಲೆ ಶರಣರ ಹಾಗೂ ದಾಸರ ಸಾಹಿತ್ಯದ ಪ್ರಭಾವ ಸಾಕಷ್ಟಾಗಿದೆ ಎಂದು

ತಿಳಿದುಬರುವುದು. ಅಭಂಗ ಪದ ೪ ರಲ್ಲಿ ಕವಿ ಅಂಧಕಾರವನ್ನು ತೊಲಗಿಸಿ ಸುಜ್ಞಾನಿಯನ್ನಾಗಿ ಮಾಡಲು ಕೇಳಿಕೊಳ್ಳುತ್ತಾನೆ.

"ಸಂಸಾರ ಸುಖಕ್ಕೆ ಮೆಚ್ಚಿ ಮರುಳಾಗಿ
ವಿವೇಕವು ನೀಗಿ ಕೆಟ್ಟೆನಯ್ಯಾ
ಬಂದೆ ನಾನಾ ಯೋಗಿಗಳು ಹುಟ್ಟಿ
ಸತ್ತು ಬಂದೆನಾ ಬೇಸತ್ತು ರಕ್ಷಿಸಯ್ಯಾ"[೨]

ಮನುಷ್ಯ ಸಂಸಾರ ಸುಖಕ್ಕೆ ಅತಿಯಾಗಿ ಮೆಚ್ಚಿಕೊಂಡು ವಿವೇಕ ಶೂನ್ಯನಾಗಿದ್ದಾನೆ. ನಾನಾ ಜನ್ಮದಲ್ಲಿ ತಿರುಗಿ ಕೊನೆಗೆ ಮಾನವ ಜನ್ಮ ತಾಳಿದರೂ ಸಹ ತನ್ನ ಅಂಧಕಾರದಲ್ಲಿ ಮುಳುಗಿ ಜೀವನ ವ್ಯರ್ಥವಾಗಿ ಕಳೆದು ಕೊನೆಗೆ ಭವ ಬಂಧನದಿಂದ ಪಾರಾಗಲು ಕೇಳಿಕೊಳ್ಳುತ್ತಾನೆ.

ಅಭಂಗ ೮, ರಲ್ಲಿ ಅರಿಷಡ್ವರ್ಗಗಳಿಗೆ ಒಳಗಾಗಿ ವಿವೇಕವನ್ನು ಕಳೆದುಕೊಂಡು ಕೆಟ್ಟು ಹೋಗಿದ್ದೇನೆ. ಆದ್ದರಿಂದ ನನ್ನ ಅಪರಾಧವನ್ನು ಮನ್ನಿಸಿ ಸತ್ಸಂಗದ ದಾರಿಯನ್ನು ತೋರಿಸು ಪಾಂಡುರಂಗನೇ ಎಂದು ಬೇಡಿಕೊಂಡಿರುವನು.

"ಸಾಕು ಸಾಕೆನೆಗೆ ಸಂಸಾರಲಂಪಟನಾಗಿ ಬಹುಕಷ್ಟ ತಾಳಲಾರೆ
ಅರಿಯಲು ನಿಮ್ಮ ಅನಾದಿ ಮಾಯೆಯ ಲೀಲೆಯು ಹರಿಯ ವಿಚಿತ್ರವು
ಅನೇಕ ಜನ್ಮವು ತಿರುಗಿದೆ ನಾನು ನಿಮ್ಮ ಪಾದವನ್ನು ಕಾಣದಲೆ
ಇನ್ನು ಮೇಲೆನೆಗೆ ಸತ್ಸಂಗವನಿತ್ತು ರಕ್ಷಿಸುವೆಯಾ ಹೊತ್ತು ಪಾಂಡುರಂಗನೆ"[೩]

ಭವ ಬಂಧನದಲ್ಲಿ ಸಿಲುಕಿ ಸಾಕಷ್ಟು ಕಷ್ಟವನ್ನು ಅನುಭವಿಸಿದ್ದೇನೆ. ನಿಮ್ಮ ಮಹಿಮೆಯನ್ನು ಮರೆತು ಅರ್ಥವಿಲ್ಲದ ಜೀವನ ಸಾಗಿಸಿ ಅಂಧಕಾರದಲ್ಲಿ ಮುಳುಗಿದ್ದೇನೆ. ಇನ್ನು ಮುಂದೆ ರಕ್ಷಿಸು ಪಾಂಡುರಂಗನೆ ಎಂದು ಅಂಗಲಾಚಿಸುವನು. ಅಭಂಗ ೬, ರಲ್ಲಿ ಕವಿ ಪಾಂಡುರಂಗನ ಗುಣಗಾನ ಮಾಡಿದ್ದಾನೆ.

"ದೀನರಕ್ಷಕನು ಇರುವಿ ನೀನೆಂದು ಬೇಡಿಕೊಂಬೆ ಬಂದು ಕೃಪೆಮಾಡು
ನೀವೆನ್ನ ಹರಿಯೆ ಅನಾಥ ಬಂಧುವೆ ಕಾರುಣಶಿಂಧುವೆ ಸಹಾಯವಾಗು
ನಿನ್ನ ಹೊರತಾರು ಗತಿಯು ಎನಗೆ ಹಾಕಲಿ ಯಾರಿಗೆ ಭಾರವನ್ನು
ಅಲ್ಲಮನ ಚಿಂತೆ ನಿವಾರಿಸು ನೀನೆ ಪಾಲಿಸು ಬೇಗನೆ ಶ್ರೀ ಪಾಂಡುರಂಗಾ"[೪]

ಎಲ್ಲ ಜಾತಿ ವರ್ಗದವರನ್ನು ಒಪ್ಪಿಕೊಂಡು ಜಾತ್ಯಾತೀತ ಸ್ವರೂಪನಾದ ಪಾಂಡುರಂಗನು ದೀನ ರಕ್ಷಕನಾಗಿ ನಿಂತಿದ್ದಾನೆ. ವಿಠ್ಠಲನ ಆರಾಧನೆಯಿಂದ ಈ ಹೊತ್ತು ನೆರೆಯ ಆಂದ್ರ, ಮಹಾರಾಷ್ಟ್ರ ಹಾಗೂ ಕರ್ನಾಟಕ ಈ ಮೂರು ರಾಷ್ಟ್ರಗಳು ಸಾಂಸ್ಕೃತಿಕವಾಗಿ ಒಗ್ಗೂಡುವಲ್ಲಿ ಸಹಾಯವಾಗಿದೆ. ಅನಾಥರ ಬಂಧು, ಕಾರುಣ್ಯ ಸಿಂಧೂ ಎಂದು ಗುಣಗಾನಿಸುತ್ತ ತನ್ನ ಚಿಂತೆ ಪರಿಹರಿಸಲು ಬೇಡಿಕೊಂಡಿದ್ದಾನೆ. ಅಭಂಗ ೯ ರಲ್ಲಿ ಅಲಭೈರಿ ಪಾಂಡುರಂಗನ ನೆಲೆ(ಸ್ಥಳ) ಗುರುತಿಸುತ್ತಾನೆ.

"ಅಣು ರೇಣು ತ್ರಣ ಕಾಷ್ಟದೊಳು ನೀನೆ ತುಂಬಿ ವಿಠಲನೆ ತುಳುಕುವೆ
ಭೇದಾಭೇದ ಮತವು ಕಾರಣ ಭ್ರಾಂತಿಗೆ ಸರ್ವಥಾಬೇಡೆನಗೆ ಭಾದಿಸುವದು"[೫]

ಈ ಸೃಷ್ಟಿಯ ಚರಾಚರ ಜೀವರಾಶಿಗಳಲ್ಲಿಯೂ ಪಾಂಡುರಂಗ ತುಂಬಿಕೊಂಡಿದ್ದಾನೆ. ಪಾಂಡುರಂಗನ ಅನುಗ್ರಹವಿಲ್ಲದೆ ಒಂದು ಹುಲ್ಲುಕಡ್ಡಿಯೂ ಸಹ ಅಲುಗಾಡಲಾರದು. ಅಂದರೆ ಜಾತ್ಯಾತೀತ ಸ್ವರೂಪನಾಗಿ ಪ್ರತಿಯೊಬ್ಬರಲ್ಲಿಯೂ ನೆಲೆಸಿದ್ದಾನೆ. ಇದರಿಂದ ಪಾಂಡುರಂಗನು ಸರ್ವ ಜನರ ಲೇಸನ್ನು ಬಯಸಿದ್ದಾನೆ.

ಅಭಂಗ ೧೨ ಮತ್ತು ೨೩ ರಲ್ಲಿ ಕವಿ ಅಲಭೈರಿಯು ಪಾಂಡುರಂಗನನ್ನು ನಾರಾಯಣನೆಂದು ಸಂಭೋದಿಸುತ್ತಾನೆ. ಮತ್ತು ತನ್ನನ್ನು ಅಂಧಕಾರನನ್ನಾಗಿ ಮಾಡಿ ಯಾವುದೇ ಸುಖ ಸಿಗದಂತೆ ಮಾಡು ಎಂದು ಬೇಡಿಕೊಳ್ಳುತ್ತಾನೆ.

"ಎನ್ನ ಹೃದಯದೊಳು ನೀನೆ ವಾಸಮಾಡು ನಾರಾಯಣನೆ
ವಿಷಯವಾಸನೆ ಹಿಡಿದು ಮನವು ಹರಿದಾಡುವದು
ಕಟ್ಟಿ ಹಾಕಿ ಎನ್ನ ಮನವು ಅದಕೆ ಹಚ್ಚರಿ ನಿಮ್ಮಧ್ಯಾನವು
ಕೇಳಿರಿ ಎನ್ನ ವಿನಂತಿ ಕಲಿಸಿರಿ ಮೊದಲು ಸಗುಣಭಕ್ತಿ
ಪಾಂಡುರಂಗಾ ನಿನ್ನ ಹೊರತು ಕಾಯುವರಾರು ಜಗದೊಳು"[೬]

ಈ ಜಗತ್ತಿನಲ್ಲಿ ಕೊಡುವವನು ಶಿವನೆ, ಕಸಿದುಕೊಳ್ಳುವವನು ಶಿವನೆ, ಆದ್ದರಿಂದ ನಿನ್ನ ಹೊರತು ನಮ್ಮನ್ನು ಕಾಯುವರು ಯಾರೂ ಇಲ್ಲ. ಲೌಕಿಕ ಸುಖದ ದಾಸ್ಯದಲ್ಲಿ ಬಿದ್ದು ಮನಸ್ಸು ಅಂಧಕಾರದಲ್ಲಿ ಮುಳುಗಿದೆ. ಅದಕ್ಕಾಗಿ ಎನ್ನ ಮನವನ್ನು ಕಟ್ಟಿಹಾಕಿ ಎನ್ನಲ್ಲಿ ನೀನೆ ನೆಲೆಸು ಎನ್ನುವಲ್ಲಿ ಆರ್ತಧ್ವನಿ ಗೋಚರಿಸುತ್ತದೆ.

"ಧರೆಯಭೋಗ ಸೌಖ್ಯಸರ್ವಧಾ।
ಬೇಡವೆನಗೆ ಪಂಢರಿನಾಥಾ।ಪ।
ಸರಿಕದವರು ದ್ವೇಷಮಾಡಿ। ಸೇರದೆನ್ನ ಒದೆಯಲಿ

ಕೂಡಿ ಮಡದಿ ಮಕ್ಕಳೆಲ್ಲ ಸಾಯಲಿ ।
ಪಡದ ದ್ರವ್ಯ ಮಣ್ಣಗೂಡಲಿ
ತುತ್ತು ಅನ್ನ ಸಿಗದೆ ಹೋಗಲಿ ।
ಥುಥು ಎಂದು ಮಾರಿಗುಗಳಲಿ
ಕಂಡವರೆಲ್ಲರು ಎನ್ನನು ಕಾಡಲಿ ।
ಭಂಡಮಾಡಿ ಬೈಲಿಗೆಳೆಯಲಿ
ಮಿತ್ರರೆಲ್ಲ ಶತ್ರುವಾಗಲಿ ।
ಮಥನಮಾಡಿಕುಟ್ಟಿಕೊಲ್ಲಲಿ.
ಹಿರಿಯ ಬೇನೆ ಬಂದು ಅಡರಲಿ।
ಊರ ಬಿಡಿಸಿ ಹೊರಗೆ ಹಾಕಲಿ
ಸತತ ಎನ್ನ ಕಾಡಿದವರಿಗಿಲ್ಲಿ
ಆತುಳೈಶ್ವರ್ಯ ದೊರೆಯಲಿ
ಅಲ್ಲಮನ ಭವ ಭಯ ಭಂಗಾ ।
ಸಲಹು ಮಾಡಿ ಪಾಂಡುರಂಗಾ।"[೭]

ಈ ಪದ್ಯವನ್ನು ನೋಡಿದಾಗ ಬಸವಣ್ಣನವರ "ಅನ್ಯ ವಿಷಯಕ್ಕೆಳಸದಿರು" ಎಂಬ ವಚನವನ್ನು ಇಲ್ಲಿ ಗುರುತಿಸಬಹುದು.

"ಅತ್ತಲಿತ್ತ ಹೋಗದಂತೆ; ಹೆಳವನ ಮಾಡಯ್ಯ ತಂದೆ;
ಸುತ್ತಿ ಸುಳಿದು ನೋಡದಂತೆ ; ಅಂಧಕನ ಮಾಡಯ್ಯ ತಂದೆ
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ,
ಅನ್ಯ ವಿಷಯಕ್ಕೆಳೆಸದಂತೆ ಇರಿಸು ಕೂಡಲಸಂಗಮದೇವಾ"[೮]

ಬಸವಣ್ಣ ಧರೆಯ ಸೌಖ್ಯಗಳು ಅಳಿದು ಕೂಡಲ ಸಂಗಮದೇವನ ಶರಣರ ಪಾದವನ್ನೇ ಶ್ರೇಷ್ಠ ಎಂದು ನಂಬಿರುವಂತೆ ಕವಿ ಅಲಭೈರಿಯೂ ಸಹ ವಿಷಯ ಸುಖಗಳು ಮಾಯವಾಗಿ ಪಾಂಡುರಂಗನ ದಯವೊಂದೆ ಇರಲಿ. ಅದೇ ಶಾಶ್ವತ ಶಾಂತಿ ಮಾರ್ಗ ಅಂತ ತಿಳಿದು ತನ್ನನ್ನು ನಿರ್ಗತಿಕನನ್ನಾಗಿ ಮಾಡಲು ಕೇಳಿಕೊಳ್ಳುತ್ತಾನೆ.

ಅಭಂಗ ಪದ ೨೪ ರಲ್ಲಿ ಪಾಂಡುರಂಗನಲ್ಲಿ ಅನನ್ಯ ಬೇಡಿಕೆಯಿದೆ.

"ಜಯಪಾಂಡುರಂಗಯ್ಯಾ ದಯಭಾವ ತೋರಯ್ಯ
ನಿನ್ನ ಪಾದಕ್ಕೀಕಾಯವನ್ನು ನೀಡಿದೆನ್ನನುಪೇಕ್ಷಿಸದಾಶ್ರಯಮಾಡಿ
ಮನ್ನಿಸು ಬೇಗನೆ ಜೀಯಾ-ದಯಾಭಾವ ತೋರಯ್ಯಾ"[೯]

ರಜತಮಗುಣಗಳನ್ನು ಹೋಗಲಾಡಿಸಿ ನಿಜವಾದ ಸತ್ವದ ಸಮರವನ್ನು ಅಳವಡಿಸಲು ಕೇಳುತ್ತಾನೆ. ಲೌಕಿಕ ಉಪಟಳವನ್ನು ಸಹಿಸಲಾರೆನು. ನನ್ನ ಮೇಲೆ ಕರುಣೆ ಇಟ್ಟು ಪಾಲಿಸು. ಬಂಧನದಿಂದ ಬಿಡಿಸು ದಯಾಭಾವ ತೋರಿಸು ಎಂದು ಪ್ರಾರ್ಥಿಸಿಕೊಳ್ಳುತ್ತಾನೆ.

"ಪಾಂಡುರಂಗ ತಾಯಿ ಪಾಂಡುರಂಗ ತಂದೆ ಪಾಂಡುರಂಗನಿಂದೆ ಪಾವನನಾದೆ
ಅಕ್ಕನಾದ ತಂಗಿ ಚಿಕ್ಕ ತಮ್ಮ ಅಣ್ಣ-ಕಕ್ಕ ದೊಡ್ಡಪ್ಪನ್ನ ಪಾಂಡುರಂಗನೆ"[೧೦]

ಈ ಒಂದು ಅಭಂಗದಲ್ಲಿ ಸರ್ವ ಬಳಗವೇ ಪಾಂಡುರಂಗ ಎಂಬ ವಿಶಾಲ ಭಾತೃತ್ವದ ಕಲ್ಪನೆಯಿದೆ. ಮಿತ್ರ-ಶತ್ರು ಎಂಬ ಬೇಧಭಾವವಿರದೆ ಸರ್ವ-ಜೀವರಿಗೆ ಸೂತ್ರ ರೂಪನಾದವನು ರಾಜಪ್ರಜನು ಪಾಂಡುರಂಗ ಎಂದು ಕವಿ ಪಾಂಡುರಂಗನ ಅನಂತ ಗುಣಗಾನ ಮಾಡಿದ್ದಾನೆ.

ಅಭಂಗ ೨೧, ರಲ್ಲಿ ಅಲಭೈರಿ ಪಾಂಡುರಂಗನನ್ನು ಬಿಡದೆ ಸ್ಮರಿಸಲು ಹೇಳುತ್ತಾನೆ.

"ರಕುಮಾದೇವಿಯ ವಲ್ಲಭ ವಿಠ್ಠಲ-ಜಯ ಶ್ರೀವಿಠಲ ವಿಠಲೆನ್ನಿರಿ
ಕುಳಿತಾಗ ನಿಂತಾಗ ಮಾತನಾಡುವಾಗಲು ಯಾತಕೆ ಹೋಗಲು"
ಆಡುತನೋಡುತ ಹಾಡುತ ಕೇಳುತ ನಡೆಯುತ್ತೆಡವುತ ವಿಠಲೆನ್ನಿರಿ
ಕುಟ್ಟುತ ಬೀಸುತ ಅಡಿಗೆ ಮಾಡುತ ಊಟಕೆ ಬಡಿಸುತ ವಿಠಲೆನ್ನಿರಿ
ಏಕಾಂತವಾಗಲಿ ಲೋಕಾಂತವಾಗಲಿ ಸುಖದುಃಖದಲ್ಲಿ ವಿಠಲೆನ್ನಿರಿ
ಸರ್ವಕಾರ್ಯವನ್ನು ಮಾಡುತ್ತ ಅಂತ್ಯಕೆ ಸಾಯುವ ಕಾಲಕೆ ವಿಠಲೆನ್ನಿರಿ
ಅಲಭೈರಿ ಹೇಳುವುದ ಅಲಕ್ಷ ಮಾಡದೆ ಬಹು ಪ್ರೀತಿಯಿಂದ ವಿಠಲೆನ್ನಿರಿ"[೧೦]

ಈ ರೀತಿ ಅಲಭೈರಿಯು ಪಾಂಡುರಂಗನ ಅನಂತ ಸ್ತುತಿ, ಗುಣನಾನ ಹಾಗೂ ಪಾಂಡುರಂಗನೆ ಸರ್ವಶ್ರೇಷ್ಠನೆಂದು ಬಣ್ಣಿಸಿರುವನು. ಒಟ್ಟು ಇವನ ಅಭಂಗಗಳಿಂದ ತಾತ್ವಿಕತೆಯ ಭಾವ ಎದ್ದು ಕಾಣುತ್ತದೆ. ಭಕ್ತಿಯ ಮಹಾಪೂರ ಹರಿದು ಬಂದಂತಿದೆ.

೫.೭ ಚೌಡಕಿ ಪದಗಳು :

ಚೌಡಕಿ ಒಂದು ತಂತಿ ವಾದ್ಯ. ಇದನ್ನು ನುಡಿಸುವವರು ಜೋಗಮ್ಮಾ ಅಥವಾ ಜೋಗಪ್ಪರು. ಇವರು ರೇಣುಕೆ ಅಥವಾ ಎಲ್ಲಮ್ಮಳ ಆರಾಧಕರು. ಉತ್ತರ ಕರ್ನಾಟಕದಲ್ಲಿ ಚೌಡಕಿ ಪದಗಳು ತುಂಬಾ ಪ್ರಸಿದ್ಧ ಧಾರ್ಮಿಕ ಪದಗಳು. ಇದು ಎಲ್ಲಮ್ಮದೇವಿ ಮಹಿಮಾವಳಿಯನ್ನು ಸ್ತುತಿಸುತ್ತವೆ. ಚೌಡಕಿ ಎಂಬ ಚರ್ಮವಾದ್ಯವನ್ನು ಬಳಸಿ ಹಾಡುವುದರಿಂದ ಇವುಗಳನ್ನು ಚೌಡಕಿ ಪದಗಳೆಂದು ಕರೆಯುವರು. ಇವರು ಮೇಳಗಳನ್ನು ಕಟ್ಟಿಕೊಂಡು ಹಾಡುವರು. ಬಾಗೆನಾಡಿನಲ್ಲಿ ಎಲ್ಲಮ್ಮಳ ಆರಾಧಕರು ಅಸಂಖ್ಯಾತರಿರುವರು.

ಬೆಳಗಾವಿ ಜಿಲ್ಲೆಯ ಸವದತ್ತಿ ಒಂದು ಪವಿತ್ರ ಯಾತ್ರಾ ಸ್ಥಳ. ಇಲ್ಲಿ ನಾಡಿನ, ಅಷ್ಟೇ ಏಕೆ ನೆರೆಯ ಮಹಾರಾಷ್ಟ್ರದ ಭಕ್ತರು ಆಗಮಿಸುತ್ತಾರೆ. ಪೌರಾಣಿಕ ಕಥೆಗಳ ಪ್ರಕಾರ ಸವದತ್ತಿ ರೇಣುಕೆ ನೆಲೆಸಿದ ಪುಣ್ಯ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ರೇಣುಕೆಯ ಅವತಾರವೇ ಎಲ್ಲಮ್ಮ. ಜೋಗತಿಯರು ಎಲ್ಲಮ್ಮಳ ಪೂಜೆಯ ಸಂದರ್ಭದಲ್ಲಿಯೂ ಈ ಚೌಡಕಿಯನ್ನು ನುಡಿಸುತ್ತಾರೆ.

ಬಾಗೆನಾಡಿನ ಪ್ರತಿ ಹಳ್ಳಿಯಲ್ಲೂ ಎಲ್ಲಮ್ಮ ದೇವಿ ಗುಡಿಗಳಿವೆ. ಭಕ್ತರು ದೇವಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಚೌಡಕಿ ಬಾರಿಸುತ್ತ, ಹಾಡುತ್ತ ಚವುರ ಬೀಸುತ್ತ ಹಾಗೂ ಗಂಟೆಯ ಸಪ್ಪಳದೊಂದಿಗೆ ದೇವಿಯನ್ನು ಒಯ್ಯುತ್ತಾರೆ. ರಾತ್ರಿಯಿಡಿ ಹಾಡುತ್ತ ಕುಣಿಯುತ್ತ ದೇವಿಯ ಆರಾಧನೆ ಮಾಡುವರು. ಈಗ ರಾತ್ರಿಯ ಬದಲಿಗೆ ಹಗಲು ವೇಳೆಯಲ್ಲಿ ಎಲ್ಲಮ್ಮದೇವಿಯ ಆರಾಧನೆ ನಡೆಯುತ್ತಿದೆ. ಇವರು ಮನೆ-ಮನೆಗೆ ತಿರುಗಾಡಿ ಭಿಕ್ಷೆಯನ್ನು ಬೇಡುತ್ತಾರೆ. ಈ ಕಲಾವಿದರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರು. ಒಂದು ಮೇಳದಲ್ಲಿ ಕನಿಷ್ಟ ಮೂರು-ನಾಲ್ಕು ಜನ ಕಲಾವಿದರಿರುತ್ತಾರೆ. ಒಬ್ಬ ಪುರುಷ ಅಥವಾ ಜೋಗಪ್ಪ ಒಂದು ಮೇಳದಲ್ಲಿ ಇರುತ್ತಾನೆ. ಜೋಗಪ್ಪ ಹಲವಾರು ಕಸರತ್ತುಗಳನ್ನು ಮಾಡುತ್ತಾರೆ. ತಲೆಯ ಮೇಲೆ ಜಗವನ್ನು ಹೊತ್ತು ಕೈ ಹಿಡಿಯದೆ ಕುಣಿಯುತ್ತಾರೆ. ನಾಲಿಗೆಯಿಂದ ನೆಲದ ಮೇಲಿನ ದುಡ್ಡು ತೆಗೆದುಕೊಳ್ಳುವುದು, ಒಮ್ಮೊಮ್ಮೆ ಜಗದ ಬದಲಿಗೆ ತುಂಬಿದ ಕೊಡವನ್ನು ಹೊತ್ತು ಕುಣಿಯುವುದು.

ಜೋಗತಿಯರು ಬೌದ್ಧಿಕ ಕಸರತ್ತು ತೋರಿದರೆ ಜೋಗಪ್ಪರು ಬೌದ್ಧಿಕ ಜೊತೆಗೆ ಶಾರೀರಿಕ ಕಸರತ್ತು ತೋರಿಸುವರು. ಚೌಡಕಿ ಮೇಳದಲ್ಲಿ ಮುಮ್ಮೇಳ ಹಾಗೂ ಹಿಮ್ಮೇಳವೆಂದು ಭಾಗಗಳು. ಮಂಗಳವಾರ ಹಾಗೂ ಶುಕ್ರವಾರ ಎಲ್ಲಮ್ಮದೇವಿಯ ವಾರಗಳೆಂದು ಆರಾಧಿಸುತ್ತಾರೆ. ಪ್ರತಿ ಹುಣ್ಣಿಮೆ ಅದರಲ್ಲೂ ಹೊಸ್ತಿಲು ಹುಣ್ಣಿಮೆ ಹಾಗೂ ಭಾರತ ಹುಣ್ಣಿಮೆಯ ದಿನದಂದು ಲಕ್ಷೋಪ ಲಕ್ಷ ಜನ ಭಕ್ತರು ಸವದತ್ತಿ ಹಾಗೂ ಕೊಕಟನೂರ ಗ್ರಾಮದಲ್ಲಿ ಸೇರುತ್ತಾರೆ. ದೇವದಾಸಿ ಪದ್ಧತಿ ಅನಿಷ್ಟವೆಂದು ಇಂದು ಸರಕಾರ ಜಾಗೃತಿ ಮೂಡಿಸುತ್ತಿದೆ. ಇದರಿಂದಾಗಿ ಇಂದು ದೇವದಾಸಿಯರು ಹಾಗೂ ಚೌಡಕಿ ಮೇಳಗಳೂ ಕಣ್ಮರೆಯಾಗುತ್ತಿವೆ.

ಹಾರೂಗೇರಿ ಅಲಭೈರಿಯೂ, ಚೌಡಕಿಯ ಹಾಡುಗಳನ್ನು ರಚಿಸಿದ್ದಾನೆ. ಆದರೆ ಇಂದು ಹಾಡುಗಾರರಿಲ್ಲದೆ ಅಲಭೈರಿ ಸಾಹಿತ್ಯವೂ ಸಹ ನಶಿಸಿದೆ. ದೊರೆತ ಪದವೊಂದನ್ನು ಇಲ್ಲಿ ಚರ್ಚಿಸಲಾಗಿದೆ.

"ಎಲ್ಲಮ್ಮನ ಜಾತ್ರೆಗೆ ಹೋಗೋಣ" ಚೌಡಕಿ ಪದ್ಯದಲ್ಲಿ

"ನಡಿರೆ ನಡಿರೆ ಹೋಗುನು ಎಲ್ಲಮ್ಮನ ಜಾತ್ರೆಗೆ ॥ಪ॥
ಬಲ್ಲದೇವರೊಳು ಎಲ್ಲವ್ವ ತಾಯಿ ಬಲ್ಲಿದ ಶಿವಮಾಯಿ

ಎಲ್ಲಿ ನೋಡಿದರ ಕಲ್ಲೋಳು ಮರದೊಳು ಸಲ್ಲಿದ ಮಹಾಮಾಯಿ ॥೧॥
ಹಮ್ಮನಳಿದು ಎಲ್ಲಮ್ಮನ ಭಜಿಸಲು ಬ್ರಹ್ಮವಿಷ್ಣು ರುದ್ರಾ
ಒಮ್ಮೆ ಹೊಂದಿದರು ನಿರ್ಮಳ ಮುಕ್ತಿಯ ಸುಮ್ಮನೆ ಸುಖನಿದ್ರಾ ॥೨॥
ನಡಿರೆ ನಡಿರೆ ಒಡಗೂಡಿ ಸಖಿಯರು ಹಿಡಿದೊಡಲೊಳು ಭಕ್ತಿ
ಸಡಗರದಿಂದಲಿ ಕೊಡುವಳು ಬಿಡದಲೆ ವೊಡವಿಗಧಿಕ ಶಕ್ತಿ ॥೩॥
ಕಳ್ಳ ಭಕ್ತರಾ ಹಳ್ಳಿ ಮುರ್ಖರೆಲ್ಲಾ ಸುಳ್ಳಿನ ಬೆನ್ಹತ್ತಿ
ಒಳ್ಳೆಯ ದೇವರ ಎಳ್ಳಷ್ಟು ಬೇಟಿಲ್ಲಗೊಳ್ಳ ಕೆಲಸಗೊತ್ತಿ ॥೪॥
ಆಚಾರ ಹೇಳಾವ್ರ ಮತ್ಸರ ಬಿಡರಿ ನಿಶ್ಚಯದೊಳು ಸೇರಿ
ಸಚ್ಚಾ ಹಾರೂಗೇರಿ ಹುಚ್ಚಲಭೈರಿಗೆ ತುಚ್ಛ ಮಾಡದಿರಿರಿ ॥೫॥"[೧]

ಎಲ್ಲ ದೇವರೊಳು ಎಲ್ಲಮ್ಮದೇವಿ ಸರ್ವಶಕ್ತಳು. ಪ್ರತಿಯೊಂದು ವಸ್ತುವಿನಲ್ಲಿ ಅವಳ ಸ್ವರೂಪವನ್ನು ಕಾಣುತ್ತೇವೆ. ಕಳ್ಳ ಭಕ್ತರಾದ ಎಷ್ಟೋ ಹಳ್ಳಿಯ ಜನ ಸುಳ್ಳಿನ ಬೆನ್ನಹತ್ತಿ ತಿರುಗುತ್ತಿದ್ದಾರೆ. ಒಳ್ಳೆಯ ದೇವರನ್ನು ಸ್ವಲ್ಪವೂ ನೆನೆಸದೆ ಗೊಳ್ಳ ಕೆಲಸ ಮಾಡುತ್ತ ಕಾಲ ಕಳೆಯುತ್ತಿರುವರು.

೫.೮ ಹಂತಿ ಹಾಡುಗಳು :

ಭಾರತ ಹಳ್ಳಿಗಳಿಂದ ತುಂಬಿದ ಶ್ರೀಮಂತ ದೇಶ. ಕೃಷಿ ಹಳ್ಳಿಗರ ಮುಖ್ಯ ಕಸುಬು. ಕರ್ನಾಟಕವು ಭಾರತದ ಬಹುಮುಖ್ಯ ರಾಜ್ಯಗಳಲ್ಲಿಯೆ ಒಂದು. ಕರ್ನಾಟಕದ ಸಂಸ್ಕೃತಿ, ಭಾಷೆ ಹಾಗೂ ಗಡಿ ಹಲವಾರು ರೀತಿಯ ಕಷ್ಟ ಕೊಟಲೆಗಳಿಗೆ ಒಳಗಾಗಿ ನಮ್ಮ ಹಿರಿಯರ ಕೃಪೆಯಿಂದ ಒಂದಾಗುತ್ತ ತನ್ನತನವನ್ನು ಈ ಹೊತ್ತಿಗೂ ಉಳಿಸಿಕೊಂಡು ಬಂದಿದೆ. ಕ್ರಿ ಶ. ಪೂರ್ವದಲ್ಲಿಯೇ ಕೃಷಿ ಕರ್ನಾಟಕದಲ್ಲಿ ಬಳಕೆಯಲ್ಲಿದ್ದದ್ದು ಗಮನಾರ್ಹವಾದ ಸಂಗತಿ.

ಇತಿಹಾಸ ಪುಟಗಳನ್ನು ಹೆಕ್ಕಿ ತೆಗೆದಾಗ ಕನ್ನಡಿಗರು ಪ್ರಾಚೀನ ಕಾಲದಲ್ಲಿ ಅಲೆಮಾರಿ ಜೀವನವನ್ನು ನಡೆಸುತ್ತಿದ್ದರೆಂಬುದು ತಿಳಿದು ಬರುತ್ತದೆ. ಮುಂದೆ ಕರ್ನಾಟಕ ಅರಸು ಮನೆತನಗಳು ರಾಜ್ಯವನ್ನು ವಿಸ್ತರಿಸಿಕೊಂಡು ತಮ್ಮದೆ ಆದ ಕಾಣಿಕೆಯನ್ನು ಈ ನಾಡಿಗೆ ನೀಡಿದ್ದಾರೆ. ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ವಿಜಯ ನಗರ ಹೀಗೆ ಅನೇಕ ರಾಜಮನೆತನಗಳ ಇತಿಹಾಸವನ್ನೇ ನಮ್ಮ ಕರ್ನಾಟಕದ ಗತ ವೈಭವ ತಿಳಿಸುತ್ತದೆ.

ಕರ್ನಾಟಕದಲ್ಲಿ ಜಾನಪದ ಸಂಸ್ಕೃತಿ ವೈವಿಧ್ಯ ಹಾಗೂ ಉತ್ಕೃಷ್ಟವಾದದ್ದು. ಈ ಜಾನಪದ ಸಂಸ್ಕೃತಿಯೇ ನಮ್ಮನ್ನೆಲ್ಲ ಒಗ್ಗೂಡಿಸಿದ ಶ್ರೀಮಂತ ಸಂಸ್ಕೃತಿ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ನಾಡಿದು. ಈ ನಿಟ್ಟಿನಲ್ಲಿ ಜಾನಪದ ತಾಯಿ ಬೇರಾಗಿ ಮರವಾಗಿ, ಹೆಮ್ಮರವಾಗಿ ಈ ಹೊತ್ತಿಗೂ ಅದು ಫಲ ನೀಡುತ್ತಿದೆ.

ಪರಕೀಯರ ದಾಸ್ಯಕ್ಕೆ ಒಳಗಾದ ಗಳಿಗೆಗಳನ್ನು ನೆನಸಿಕೊಂಡರೆ ನಮಗೆಲ್ಲ ಹೇಸಿಗೆಯಾಗದೇ ಇರದು. ಅವರು ನಮ್ಮಲ್ಲಿಯ ಸಂಪತ್ತನ್ನು ಲೂಟಿ ಮಾಡಿದರು. ನಮ್ಮವರ ಮನಸ್ಸು, ಕನಸನ್ನು ಛಿದ್ರಗೊಳಿಸಿದರು. ಆದರೂ ಸಹ ನಮ್ಮ ಕೃಷಿ ಸಂಸ್ಕೃತಿ ಇಂದಿಗೂ ಉಳಿದುಕೊಂಡು ಬಂದಿದೆ. ರಾಷ್ಟ್ರಕವಿ ಕುವೆಂಪುರವರ ನೇಗಿಲಯೋಗಿ ಎಂಬ ಪದ್ಯದಲ್ಲಿ "ಉಳುವಾ ಯೋಗಿಯ ನೋಡಲ್ಲಿ" ಎಂಬ ಸಾಲವನ್ನು ನಾವು ಕೃಷಿಗೆ ಹಾಗೂ ಕೃಷಿಕನಿಗೆ ತೋರುವ ಗೌರವ ಎದ್ದುಕಾಣುತ್ತಗೆ. ಕೃಷಿ ಸಂಸ್ಕೃತಿ ಕೈ ಕೆಸರನ್ನು ಬಾಯಿ ಮೊಸರನ್ನಾಗಿ ಮಾಡುವ ತಿಳುವಳಿಕೆಯನ್ನು ತಿಳಿಸುತ್ತದೆ.

ಕೃಷಿಕರು (ರೈತರು) ಮಣ್ಣನ್ನು ಭೂತಾಯಿಯೆಂದು ಆರಾಧಿಸುತ್ತಾರೆ. ರೈತರು ಮಣ್ಣಿನಲ್ಲಿ ಮಣ್ಣಾಗಿ ದುಡಿಯುವ ಕಾಯಕವನ್ನು ಮೈಗೂಡಿಸಿಕೊಂಡಿರುತ್ತಾರೆ. ಮುಂಗಾರು ಬೆಳೆ, ಹಿಂಗಾರು ಬೆಳೆ ಇತ್ತೀಚಿಗೆ ಮಿಶ್ರ ಬೆಳೆಗಳನ್ನು ಬೆಳೆಯುವ ವೈಜ್ಞಾನಿಕ ಕಲೆಯನ್ನು ಅನುಸರಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ರೈತರು ತಾವು ಬೆಳೆದ ಬೆಳೆಯ ಫಲವನ್ನು ಕಾಣುವುದು ಖಣಗಳಲ್ಲಿ. ಖಣಗಳು ರೈತರ ಸಂಪತ್ತಿನ ಆಗರವಾಗಿ, ಕೃಷಿಕರ ಶ್ರಮ ಜೀವನದ ಸಂತೋಷವನ್ನು, ಅವರ ಹಿಗ್ಗನ್ನು ಪ್ರದರ್ಶಿಸುವ ರಂಗಭೂಮಿಯಾಗಿ ಪರಿಣಮಿಸುತ್ತಿದ್ದವು

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು" ಎಂಬ ಗಾದೆಯಂತೆ ಕೃಷಿ ಸಂಪತ್ತಿಗೆ ಕೊಡುವ ಗೌರವವಾಗಿದೆ. 'ಮೇಟಿ' ಎಂದರೆ ಧಾನ್ಯವನ್ನು ಒಕ್ಕಲು ಕಣದ ನಡುವೆ ನೆಟ್ಟ ಕಂಬ. 'ಕಣ' ಎಂದರೆ ಧಾನ್ಯವನ್ನು ತೆನೆಯಿಂದ ಬೇರ್ಪಡಿಸಲು ನಿರ್ಮಿಸಿದಂತಹ ವಿಶಾಲವಾದ ಸ್ಥಳ[೧]

ಹಂತಿ ಪದಗಳ ರಚನೆಕಾರರನ್ನು ಉತ್ತರ ಕರ್ನಾಟಕದಲ್ಲಿ ಕಾಣುತ್ತೇವೆ. ಅದರಲ್ಲಿ ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಹಾರೂಗೇರಿ ಅಲಭೈರಿಯೂ ಒಬ್ಬ. ಈತ ಸಾಕಷ್ಟು ಹಂತೀ ಪದಗಳನ್ನೂ ರಚಿಸಿದ್ದಾನೆ, ಅಧ್ಯಯನದ ಅನುಕೂಲಕ್ಕಾಗಿ ಈ ರೀತಿಯಾಗಿ ಅವುಗಳನ್ನು ವರ್ಗೀಕರಿಸಿಕೊಳ್ಳಲಾಗಿದೆ.

ದೊರೆತ ಪದಗಳನ್ನು ಇಲ್ಲಿ ನೀಡಲಾಗಿದೆ. ಹಂತಿ ಪದಗಳಿಗೆ ಆಗಮಗಳ ಉಲ್ಲೇಖವಿರುವುದಿಲ್ಲ.

"ಪಂಡರಪುರದವರಾ। ಭಂಡಾರ ಕಳಿವಾರಾ।
ಪುಂಡ ಹಾರೂಗೇರಿ ರೈತಗೊ॥
ಪುಂಡ ಹಾರೂಗೇರಿ ರೈತರ ಹಾಡಿದ ಮಾತ।
ಎದಿಯಾಗ ಗುಂಡ ಬಡಿದಂಗೊ॥"[೨]

ಇಲ್ಲಿ ಹಾರೂಗೇರಿ ರೈತರ ಶ್ರೇಷ್ಠತೆ ಹಾಗೂ ಎದೆಗಾರಿಕೆಯನ್ನು ತಿಳಿಸುತ್ತದೆ.

"ಸಿಂಧೂರ ಲಕ್ಷ್ಮಣ ಹಿಂದಿಲ್ಲ – ಮುಂದಿಲ್ಲ
ಬಂದೂಕದ ಬಾಣ ಬಗಲಿಗೊ॥
ಬಂದೂಕದ ಬಾಣ ಬಗಲಿಗೆ ಹಾಕೊಂಡೊ
ಬೆಳಗಾಂವ ಜೈಲಿಗೆ ಜಿಗಿದಾನೊ"[೩]

ಇದು ಸಿಂಧೂರ ಲಕ್ಷ್ಮಣನ ಶೌರ್ಯವನ್ನೂ, ಸಾಹಸವನ್ನೂ ತಿಳಿಸುತ್ತದೆ.

"ಚಿಂಚಲಿ ಹಾದಿಲಿ ಮಿಂಚುವದು ಅದು ಏನ
ಕಂಚಗಾನರ ತಿದಿ ಹುಡಿ
ಕಂಚಗಾರನ ತಿದಿಹುಡಿ ಮಾಡಿ
ಚಿಂಚಲಿ ಮಾಯವ್ವನ ಗುಡಿ ಕಳಸ"[೪]

ಚಿಂಚಲಿ ಮಾಯಕ್ಕ ಈ ಭಾಗದ ಜನರ ಆರಾಧ್ಯ ದೇವತೆ. ಅವಳ ಗುಡಿಯ ಕಳಸ ಹಾದಿ ಉದ್ದಕ್ಕೂ ಮಿಂಚುವುದು. ಅಂದರೆ ದಾರಿ ಉದ್ದಕ್ಕೂ ಅವಳ ಭಕ್ತ ಜನರ ಸಾಲು ಕಿಕ್ಕಿರಿದು ತುಂಬಿರುತ್ತದೆ ಎಂದರ್ಥ. ಹೀಗೆ ಕವಿ ಅನೇಕ ಹಂತಿ ಪದಗಳನ್ನು ರಚಿಸಿರುವನು. ಆದರೆ ಇಂದು ಒಕ್ಕಲಿಗರಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣುತ್ತೇವೆ. ಅವರಲ್ಲಿ ಮೈಗಳ್ಳತನ ಆಲಸ್ಯ ತುಂಬಿದೆ. ಡಾಂಬರು ರಸ್ತೆಗಳ ಮೇಲೆ ತೆನೆಗಳನ್ನು ಸುರುವಿ ವಾಹನಗಳ ಓಡಾಟದಿಂದ ತೆನೆಯಿಂದ ಕಾಳು ಹೊರ ತೆಗೆಯುತ್ತಿದ್ದಾರೆ. "ರಸ್ತೆಗೆ ತೆನೆ ಚೆಲ್ಲುವುದೆಂದರೆ ನಮ್ಮ ಸಂಸ್ಕೃತಿಯ ವಿಪರ್ಯಾಸವೇ ಸರಿ" ಎಂಬ ಡಾ. ನಿಂಗಣ್ಣ ಸಣ್ಣಕ್ಕಿಯವರ ಮಾತು ಸ್ವಾಗತಾರ್ಹ.

೫.೯ ಬಯಲಾಟ: ವೈರಾಗ್ಯ ವಿಜಯ

ಭರತನು "ಕಾವ್ಯೇಷು ನಾಟಕಂ ರಮ್ಯಂ" ಎಂದು ನಾಟಕದ ಮಹತ್ವವನ್ನು ವ್ಯಕ್ತಪಡಿಸಿದ್ದಾನೆ, ಸಾಹಿತ್ಯದಲ್ಲಿ ಕಾವ್ಯಕ್ಕಿಂತಲೂ ಗದ್ಯ ಎಂದೂ ಹಿನ್ನಡೆ ಕಂಡಿಲ್ಲಾ. ಅದಕ್ಕೆ ಗದ್ಯದ ಪರಂಪರಯೇ ಸಾಕ್ಷಿ. ಗದ್ಯ ಪ್ರಕರಣಗಳಲ್ಲಿ 'ನಾಟಕ'ವಂತೂ ಅನನ್ಯವೇ ಸರಿ. ಶ್ರವ್ಯ-ದೃಶ್ಯ ಮಾಧ್ಯಮವಾಗಿ ಅದರ ಪರಿಣಾಮ ಪ್ರಭಾವ ಅಗಾಧವಾದುದು.

ಅಲಭ್ಯೆರಿಯು ಜಾನಪದ ಸೊಗಡಿನೊಂದಿಗೆ ಹೊರಟು ದೇಶಿಯತೆಯನ್ನು ಉಳಿಸಿಕೊಂಡು ತತ್ವಪದ, ಲಾವಣಿ, ಮೊಹರಂ, ಹಾಡು, ಡೊಳ್ಳಿನ ಪದ..... ಹೀಗೆ ಇತ್ಯಾದಿ ರಚಿಸಿದ್ದಾನೆ. ಆತನ ಸಾಹಿತ್ಯದ ವಿಭಿನ್ನ ನೆಲೆಗಳನ್ನು ಗುರುತಿಸಬಹುದು. ಅಲಭ್ಯೆರಿಯ ಪಾಂಡಿತ್ಯಪೂರ್ಣ ಜ್ಞಾನದ ತೇಜೋಮಯತೆಯೇ ಇದಕ್ಕೆ ಕಾರಣವಾಗಿರಬಹುದು. ಪಾಂಡಿತ್ಯ ಹೊಂದಿದ ಅಧ್ಯಾತ್ಮದ ಅತಿಶಯ ಶಕ್ತಿಯ ಕವಿಯು ಸಾಹಿತ್ಯಲೋಕದ ಸೃಷ್ಟಿಕ್ರಿಯೆಯಲ್ಲಿ ವಿಶಿಷ್ಟವಾದುದನ್ನು ರೂಪಿಸುತ್ತಾನೆ.

ಅಂದು ಈಗಿನಂತೆ ಮನೋರಂಜನ ಮಾಧ್ಯಮ, ಟಿ.ವಿ. ಸಿನಿಮಾ ಇಲ್ಲದ ಸಂದರ್ಭದಲ್ಲಿ ಜನಪದ ಸಾಹಿತ್ಯದಲ್ಲಂತೂ ಕೋಲಾಟ, ಡೊಳ್ಳು, ಗೊಂದಲಿಗರ ಪದ, ಹಗಲು ವೇಷ..... ಹೀಗೆ ಜನಪದ ಕಲಾ ವೈವಿಧ್ಯಗಳು ಬಗೆದಷ್ಟು ಸಿಗುವ ಗಣಿರತ್ನಗಳು. ಅಂದು ರಂಗಭೂಮಿಯು ಮುಗ್ಧರನ್ನು, ಜ್ಞಾನಿಗಳನ್ನು ಬೇಗನೆ ಬರಸೆಳೆಯುತ್ತಿತ್ತು. ಹಾಗಾಗಿ ಇಲ್ಲಿ ನಾಟಕ ಪರಂಪರೆಗೆ ಒಂದು ಇತಿಹಾಸವೇ ಇದೆ. ಅದರ ಚರ್ಚೆ ಇಲ್ಲಿ ಅನಗತ್ಯ.

ಉತ್ತರ ಕರ್ನಾಟಕದಲ್ಲಿ ಬಯಲಾಟ ಪ್ರಕ್ರಿಯೆ ಮಹತ್ತರವಾದುದು, ಅದರಲ್ಲಿ ಸಣ್ಣಾಟದಲ್ಲಂತೂ "ಶ್ರೀ ಕೃಷ್ಣ ಪಾರಿಜಾತ" ಅದ್ವಿತೀಯ. ಇದೊಂದು ಅಮೋಘ ಪೌರಾಣಿಕ ನಾಟಕವೆಂದು ನಿಸ್ಸಂಶಯವಾಗಿ ಹೇಳಬಹುದು. ಅದರ ದಟ್ಟವಾದ ಛಾಯೆ ಅಧ್ಯಾತ್ಮ ಕವಿಯ ಮೇಲೆ ಆಗಿದ್ದರಿಂದ ಆತ ಅಲ್ಲಿಯ ಪೌರಾಣಿಕ ಕಥಾವಸ್ತುವನ್ನು ಬದಿಗಿರಿಸಿ ತಮ್ಮದೇ ಆದ ಅಧ್ಯಾತ್ಮದ ಪಥ "ಅದ್ವೈತ" ಸಿದ್ಧಾಂತದ ಮೂಲತೆಯನ್ನು ಹಿಡಿದು ಹಲವಾರು ತತ್ವಜ್ಞಾನದ ವಿಷಯವನ್ನು ಈ ನಾಟಕದಲ್ಲಿ ಚಿತ್ರಿಸಿದ್ದಾನೆ.

"ವೈರಾಗ್ಯ ವಿಜಯ" ಹೆಸರೇ ಸೂಚಿಸುವಂತೆ ವಿಜಯವೆಂಬುದು ವೈರಾಗ್ಯಕ್ಕಲ್ಲದೆ, ಅಹಂಕಾರಕ್ಕೆ, ಭೋಗಕ್ಕೆ, ವಿಷಯಕ್ಕೆ, ಅರಿಷಡ್ವರ್ಗಕ್ಕೆ, ಸಿಗಲು ಸಾಧ್ಯವೇ?! ಇಂತಹ ನಾಟಕದಲ್ಲಿ ಅದೆಷ್ಟು ತಾತ್ವಿಕ ವಿಷಯ, ವಿಚಾರ, ಇಲ್ಲಿ ಚರ್ಚೆಗೆ ಗ್ರಾಸವಾಗುತ್ತವೆ ಎಂಬುದು ಬಹು ಅಚ್ಚರಿ. ಅಲಭ್ಯೆರಿ ಆಳವಾದ ಪಾಂಡಿತ್ಯ ಗಳಿಸಿದ ಶಕ್ತಿಯೇ ಸರಿ. ಏಕೆಂದರೆ ನಾಟಕದಲ್ಲಿ ಚರ್ಚಿತವಾದ ವಸ್ತು, ವಿಚಾರ ಅವರ್ಣನೀಯ. ಇಲ್ಲಿಯ ಕಥಾ ವಸ್ತುವಿಗೆ ಸರಿಯಾಗಿ ಇಂತಿಷ್ಟು ಪಾತ್ರಗಳು ಬರುತ್ತವೆ.

೧] ಪರಮಾತ್ಮ

೨] ನಟ

೩] ಮಹಾದೇವಿ

೪] ನಾರದಮುನಿ

೫] ವ್ಯಾಸ

೬] ಶುಕಮುನಿ

೭] ವಟು

೮] ಯೋಗಾನಂದ

ಸಂಪ್ರದಾಯದಂತೆ ಪ್ರಾರ್ಥನೆಯೊಂದಿಗೆ ಆರಂಭವಾಗುವ ಈ ನಾಟಕ ವಿಶೇಷ ಕುತೂಹಲದೊಂದಿಗೆ ಸಾಗುವುದು. ಜನಸಾಮಾನ್ಯರು ದೇವರನ್ನು ಅದೆಷ್ಟು ಪ್ರೇಮಿಸುವರೆಂದರೆ, ಅವನೊಡನೆ ಆತ್ಮೀಯ ಸಂಬಂಧದ ಕಲ್ಪನೆ ಸೃಷ್ಟಿಸಬಲ್ಲರು. ಇಲ್ಲಿಯೂ ಹಾಗೆ ಸಾಮಾನ್ಯ ನಟ ಸೂತ್ರಧಾರ – ಭಗವಂತನೊಂದಿಗೆ ನೇರ ಚರ್ಚೆಗೆ, ಇಳಿದು

ಮಾತಾಡಿ ತನ್ನಲ್ಲಿನ ಅಧ್ಯಾತ್ಮದ ಗೊಂದಲಗಳ ಬಗ್ಗೆ ಪ್ರಶ್ನೆ ಮಾಡಿ ಪರಿಹಾರ ಕಂಡುಕೊಳ್ಳುತ್ತಾನೆ. ನಟ ಮತ್ತು ಪರಮಾತ್ಮನ ಸಂಭಾಷಣೆ ಅಭೂತಪೂರ್ಣವಾಗಿದೆ.

"ಓ ಸರ್ವೇಶನೇ ನಿನ್ನ ದೃಷ್ಟಿ ಮಾತ್ರದಿಂ ಸೃಷ್ಟಿಸಿದ ಈ ಸೃಷ್ಟಿಯಲ್ಲಿ ನಿನ್ನ ಅಗಾಧ ಮಹಿಮೆಯನ್ನರಿಯದೆ ಮಾನವರು ಸುಖಲೋಲುಪ ವಿಷಯಲಂಪಟರಾಗಿ ಭಜನೆ ಕೀರ್ತನೆ ನಾಮ ಸ್ಮರಣೆಗಳನ್ನು ಮಾಡದೆ, ದ್ವೈತ–ಅದ್ವೈತವೆಂದು ನ್ಯಾಯಮಾಡುತ್ತ ಕಾಲ ಕಳೆಯುವರು".

ಅದಕ್ಕಾಗಿ ನಟ, 'ತಂದೆಯೇ ಈ ಭೂಲೋಕದ ಮಾನವರಿಗೆ "ಅದ್ವೈತ" ಎಂದರೇನು? ಅದರ ಮಹತ್ವವೇನು? ಕೊನೆಗೆ ಅದರಿಂದಾಗುವ ಪ್ರಯೋಜನಗಳನ್ನು ತಿಳಿಸಿಕೊಡಬೇಕಾಗಿದೆ' ಎಂಬ ಚರ್ಚೆ ಅಧ್ಯಾತ್ಮದ ಗಂಭೀರತೆಗೆ ನಾಂದಿ ಹಾಡುತ್ತದೆ.

ಈ ವಿಷಯವನ್ನು ಭವಿಗಳಾದ ಜನರಿಗೆ ತಿಳಿಸುವ ಬಗೆಯನ್ನು, ನಟನು ಪರಮಾತ್ಮನಲ್ಲಿ ಚರ್ಚಿಸುತ್ತ, "ಇದನ್ನು ಕಥಾರೂಪ ಕೀರ್ತನೆ ಹೇಳಿದರೆ ಬೇಸರಪಟ್ಟುಕೊಳ್ಳುತ್ತಾರೆ. ಕವಿತಾ ರೂಪ ಪ್ರೌಢಿಮೆ ನಡೆದರೆ ಮಲಗಿಕೊಳ್ಳುತ್ತಾರೆ. ಈ ಮಂದ ಜನ ನಾವು ತಿಳಿಸುವ ವಿಷಯ ವಿವೇಚನೆ ಮಾಡಬೇಕಾದರೆ ಕಲೆಯಿಂದಲೇ ಸಾಧ್ಯ" ಎಂದು ಹೇಳುತ್ತಾ ನಟ ಇದನ್ನು ಕಲೆಯ ಮೂಲಕ ರಸವತ್ತಾಗಿ ತಿಳಿಸುವ ಬಗೆ ಕೇಳಿದಾಗ ಅದಕ್ಕೆ ಪರಮಾತ್ಮನು "ಭೂಲೋಕದಲ್ಲಿ ವ್ಯಾಸ ಮಹರ್ಷಿಗಳ ಮಗನಾದ ಶುಕಮುನಿ ನಾಮಾಂಕಿತ ಪುರುಷನಿರುವನು. ಅವನಿಗೆ ನನ್ನ ಮಗನಾದ ಷಣ್ಮುಖನ ಪ್ರೇರಣೆಯನ್ನು ನೀಡುವೆ ಮತ್ತು ಮಾಯಾದೇವಿಯ ಪ್ರೇರಣೆಯನ್ನು ನೀಡುವೆ ಹಾಗೂ ನಿಮ್ಮ ಕಾಯಕವು ನಿರ್ವಿಘ್ನವಾಗಿ ಸಾಗಲಿಕ್ಕೆ ಗಣಾದಿಪನನ್ನು ಪ್ರಾರ್ಥಿಸು. ನಿನ್ನ ಕಾರ್ಯ ಯಥಾಸಾಂಗವಾಗಿ ಸಾಗಲಿಕ್ಕೆ ನಾರದ ಮಹರ್ಷಿಯನ್ನು ಕಳುಹಿಸಿಕೊಡುತ್ತೇನೆ. ನಿನ್ನ ಕಾರ್ಯಕ್ಕೆ ಸಂಪೂರ್ಣ ಆಶೀರ್ವಾದವಿರುತ್ತದೆ" ಎಂದು ಆಶೀರ್ವದಿಸುತ್ತಾನೆ. ಇಲ್ಲಿ ಪರಮಾತ್ಮನೊಂದಿಗೆ ನಟ ಸಪ್ರೇಮದಿಂದ ಮಾತನಾಡುವ ಕಲ್ಪನೆ ಅದ್ಭುತವಾದದ್ದು.

ನಂತರ 'ಮಾದೇವಿ'ಯೊಂದಿಗೆ ನಟ ಚರ್ಚೆಗೆ ತೊಡಗುತ್ತಾನೆ. ನೋಡುವವರಿಗೆ ಬೇಸರವಾಗದಂತೆ ಬ್ರಹ್ಮಜ್ಞಾನದ ಮಹತ್ತನ್ನು ವಿವರಿಸುತ್ತ ಸಾಗುತ್ತಾನೆ. ಮನುಷ್ಯನು ಅಪೇಕ್ಷಿಸುವುದು 'ಸುಖ'ವನ್ನೇ. ಸುಖದಲ್ಲಿ ನಿಷ್ಫಲಸುಖ, ಸಫಲ ಸುಖವೆಂದು ತಿಳಿಸುತ್ತ, ಅದರ ಮಹತ್ವ, ಅಷ್ಟಕ್ಕೂ ಇಹಲೋಕದ ಸುಖವು ಶೂನ್ಯವೇ ಎಂದು ಚರ್ಚಿಸುತ್ತಾರೆ". ಈ ಗೋಲಾಕಾರ ಬ್ರಹ್ಮಾಂಡ ಶೋಧನದಿಂದ ಶೋಧಕರಿಗೆ ಸುಖವು ಗೋಲಾಗಿದೆ. ಸುಖವು ಗೋಲ, ಶೂನ್ಯ ಎಂದೇ ಅರ್ಥೈಸುತ್ತಾನೆ.

ಮಾದೇವಿ-ನಟರಿಗೆ, ಮನುಷ್ಯನ ಹುಟ್ಟಿನ ಮೂಲದ ಕುರಿತು ಜಿಜ್ಞಾಸೆಯ ಚರ್ಚೆ ನಡೆಯುತ್ತದೆ. ನಾನು-ನೀನು ಹೇಗೆ ಹುಟ್ಟಿದೆವು "ತಂದೆ-ತಾಯಿಗಳಿಂದಾ" ಅಂದರೆ ತಂದೆಯ ರೇತು ತಾಯಿಯ ರಕ್ತದಿಂದ, ಹಾಗಾದರೆ ರೇತು + ರಕ್ತ ಹೇಗೆ ಹುಟ್ಟಿದವು ? ಅನ್ನದಿಂದ, ಅನ್ನ? ಭೂಮಿಯಲ್ಲಿ, ಭೂಮಿ ಅಂದರೆ ಮಣ್ಣು ಮಣ್ಣಿನೊಡನೆ ನೀರು, ಗಾಳಿ, ಬಿಸಿಲು, ಆಕಾಶ, ಈ ಐದು ಪಂಚಭೂತಗಳು ಅಹಂಕಾರದಲ್ಲಿ ಅಹಂಕಾರವು, ಮಾಯೆಯಲ್ಲಿ ಮಾಯೆ, ಮಹತ್ತಿನಲ್ಲಿ ಮಹತ್ತು ಇವೆಲ್ಲವನ್ನು ನೀಗಿದವನೇ ಪರಮಾತ್ಮ. ಹೀಗೆ ಅಂತಿಮ ಮೂಲವನ್ನು ಪರಮಾತ್ಮನೆಂದು ಹೇಳಿದ ವಾದವು ಅಚ್ಚರಿ ಮೂಡಿಸುತ್ತದೆ.

ಹಾಗೆಯೇ ಮುಂದೆ ಸತ್ವ ರಜ ತಮೋಗುಣಗಳ ಬಗ್ಗೆ ತಿಳಿಸುತ್ತ ಸತ್ವಗುಣದ ಶ್ರೇಷ್ಠತೆಯನ್ನು ಎತ್ತಿ ತೋರಿಸಿದ್ದಾನೆ. ಮಗುವು ತನ್ನ ತಾಯಿಯ ಹಾಲು ಕುಡಿಯುವಾಗ ಅವಳ ಇನ್ನೊಂದು ಕುಚವನ್ನು ಮರ್ಧಿಸುವ ಕ್ರಿಯೆ ಮುಗ್ಧತನದು. ಅದೇ ಮಗು ದೊಡ್ಡವನಾಗಿ ತನ್ನ ಸತಿಯೊಂದಿಗೆ ಬೆರೆತು ಕುಚ ಮರ್ಧನ ಕಾಮದ್ದು, ಅಲ್ಲಿನ ಮುಗ್ಧತೆಯೇ ಬೇರೆ ಇಲ್ಲಿನ ಸ್ಥಿತಿಯೇ ಬೇರೆ ಎಂದು ಮುಗ್ಧತೆ ಹಾಗೂ ಚಪಲತೆಯನ್ನು ಅರ್ಥೈಸಿ ಹೇಳುತ್ತಾನೆ. ನಂತರ ಮತ್ತೆ ನಾಟಕದ ಪ್ರಸಂಗವು ನಟ ಮತ್ತು ನಾರದರ ಮಾತುಕತೆಯ ಕಡೆಗೆ ಹೊರಳುತ್ತ ಹಲವು ತಾತ್ವಿಕ ವಿಚಾರಗಳ ವಿಶ್ಲೇಷಣೆ ನಡೆಯುತ್ತದೆ.

ಮನುಷ್ಯ ಜನ್ಮದ ಶ್ರೇಷ್ಠತೆ, ಅದರೊಳಗಿನ ಅರಿವು, ಸಾಮಾನ್ಯ ಅರಿವು, ವಿಶೇಷ ಅರಿವು ಕುರಿತು ಮಾತನಾಡುತ್ತಾರೆ. ಸತ್ಕರ್ಮ ಮಾಡಲು ಹಣೆ ಬರಹದ ಮೇಲೆ ಹಾಕುವ ತಿಳಿಗೇಡಿಗಳ ಕುರಿತು ಟೀಕಿಸುತ್ತದೆ. "ಲಲಾಟ ಲಿಖಿತಾರೇಖಾ ಪ್ರಯಾಷ್ಠ ನ ಶಕ್ಯತೆ" ಅಂದರೆ ಹಣೆಯಲ್ಲಿ ಬರೆದದ್ದನ್ನು ತಪ್ಪಿಸಲಿಕ್ಕಾಗುವದಿಲ್ಲ. ಹಣೆಬರಹ ಬದಲಾವಣೆ ದೇವರ ಕೈಯಲ್ಲಿಯೇ ಸರಿ. ಆದರೂ ಇಲ್ಲಿ ಮನುಷ್ಯ ಪ್ರಯತ್ನದ ಮಹತ್ವದ ಬಗ್ಗೆ ಚರ್ಚಿಸುತ್ತಾನೆ.

ನಂತರ ವ್ಯಾಸ ಶುಕಮುನಿಯರ ಚರ್ಚೆ ಶುರುವಾಗುತ್ತದೆ. ಪರಬ್ರಹ್ಮ ಸ್ವರೂಪವೆಂದರೇನು? ಈಶ-ಜೀವ-ಜಗತ್ತು-ಪರಬ್ರಹ್ಮ. ಸಾಧನ-ಸಾಧನ ಸಾಧ್ಯತೆಯ ಫಲ. "ಪರಬ್ರಹ್ಮ ಸ್ವರೂಪವನ್ನು ನಿಶ್ಚಯಗೊಳಿಸಲಿಕ್ಕೆ ಸಾಧನವಾವುದು? ಸಾಧನ ಸಾಧ್ಯವಾಗಲು ಫಲವೇನು? ನಾನು ಯಾರು? ನನಗೆ ಸಂಸಾರವು ಎಲ್ಲಿಂದ ಬಂತು? ಎನ್ನುವ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. ಹಾಗೆಯೇ ಒಂದೇ ಆಕಾಶವು, ಘಟಾಕಾಶ, ಮಠಾಕಾಶ, ಜಲಾಕಾಶ, ಮೇಘಾಕಾಶವೆನಿಸಿದಂತೆ ಒಂದೇ ನಿರ್ಬೈಲು-ಕೊಡದೊಳಗಿನ ಬೈಲು, ಮನೆಯೊಳಗಿನ ಬೈಲು, ನೀರೊಳಗಿನ ಬೈಲು,- ಹೀಗೆ ಉಪಾಧಿಯೊಳಗಿನ ಬಯಲುಗಳು ನಾಶ ಹೊಂದದೆ ಇರುವಂತೆ ನಿರ್ವಿಕಾರದ ಬ್ರಹ್ಮಸ್ವರೂಪ ಕುರಿತು ಹೇಳುತ್ತಾನೆ. ನೀನು ನಿನ್ನ ಚೈತನ್ಯ ಸಾಮರ್ಥ್ಯವನ್ನು ಪಡೆದು ಈಶ ಸೃಷ್ಟಿ ಮತ್ತು ಜೀವಸೃಷ್ಟಿ ಬೆಳೆಸಿದ್ದೇ ಸಂಸಾರಬಳ್ಳಿ. ಆ ಸಂಸಾರರೂಪ ಜಗತ್ತು ಜನನ ಮರಣವೆಂಬ ಸೇಡಿಗೆ ಕಾರಣವಾದದ್ದು. ಇದಕ್ಕೆ ಅಧಿಷ್ಠಾನವಾದ ಬ್ರಹ್ಮಸ್ವರೂಪವೇ ನೀವೆಂದು ನಿಶ್ಚಯ ಮಾಡು ಎಂಬಂತಹ ವಿಚಾರವಿದೆ

ಹಾಗೂ ಬ್ರಹ್ಮಸ್ವರೂಪಕ್ಕೆ ಶ್ರೇಷ್ಠ ಮತ್ತೊಂದಿಲ್ಲ. ಆ ಬ್ರಹ್ಮ ಸ್ವರೂಪ ತಿಳಿಯಲು ಸಾಧನೆ ಗುರುಶೃತಿ ಮತ್ತು ಸ್ವಾನುಭವ ಈ ಮೂರು ಮುಖ್ಯ ಅಂಶಗಳನ್ನು ಶುಕಮುನಿ ಹೇಳುತ್ತಾರೆ.

ಒಮ್ಮೆ ಶುಕಮುನಿಗೆ ಅಹಂಕಾರ ಬರುತ್ತದೆ. ಆಗ ವ್ಯಾಸರು ಆತನನ್ನು ಶ್ರೀ ಜನಕ ಗುರುಗಳ ಬಳಿಗೆ ಕಳಿಸಿ ಆತ ಮತ್ತೆ ವಿನೀತವಾಗಿ ತಪಸ್ಸಿಗೆ ಹೋಗುವ ಪ್ರಸಂಗ ಅದ್ಭುತವಾಗಿ ಮೂಡಿ ಬಂದಿದೆ. ವ್ಯಾಸರು ಶುಕಮುನಿಗೆ ನಾಲ್ಕು ಯೋಗಗಳನ್ನು ಕುರಿತು ಹೇಳುತ್ತಾರೆ. (ರಾಜಯೋಗ, ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ) ಅದರಲ್ಲಿಯೂ ರಾಜಯೋಗ ಕುರಿತು ಅದ್ಭುತವಾದ ವಿವರಣೆ ನೀಡುತ್ತ ಹಠಯೋಗ ಚರ್ಚಿಸುತ್ತಾ "ಲಯಯೋಗ" ಕುರಿತು ಅದ್ಭುತ ವಿವರಣೆ ನೀಡುತ್ತಾನೆ.

ಹಾಗೆಯೇ ಯೋಗಾನಂದ ಹಾಗೂ ಮಹಾದೇವಿಯರ ಪ್ರಸಂಗ ಬಲು ಸೊಗಸಾಗಿ ಮೂಡಿ ಬಂದಿದೆ. ಮನುಷ್ಯ, ಪ್ರಾಣಿ, ಪಕ್ಷಿ, ಗಿಡ-ಮರಗಳ ಜನನದ ಬಗೆಗೆ ವಿವೇಚಿಸುವ ಕವಿ ಯಾವ ಯಾವ ಜೀವಿಗಳು ಅಥವಾ ಗಿಡ-ಮರಗಳು ಯಾವ ರೀತಿಯಾಗಿ ಜನ್ಮ ತಳೆಯುತ್ತವೆ, ಪಿಂಡಜ, ಅಂಡಜ, ಸ್ವೇದಜ ಹಾಗೂ ಉದ್ಭೀಜವಾಗುವಂತಹವು ಯಾವುವು? ಅದರಲ್ಲಿಯೂ ಮಾನವ ಜನ್ಮದ ಶ್ರೇಷ್ಠತೆ ಕುರಿತು ಮಹತ್ತರವಾದ ವಿಶ್ಲೇಷಣೆ ನಡೆಸುತ್ತಾನೆ. ಈ ನಾಟಕ ಇಂದಿನ ಆಧುನಿಕ ಮಾನವನಿಗೂ ಈ ನರಜನ್ಮದ ಶ್ರೇಷ್ಠತೆ ಏನು, ಅದರ ಹೊಣೆ ಎಷ್ಟು ಎಂಬುದನ್ನು ತಿಳಿಸಿಕೊಡುತ್ತದೆ. ಅಂದಹಾಗೆ ಈ ನಾಟಕ ಇಂದಿನ ವಾಸ್ತವತೆಯನ್ನು ಕುರಿತು ವಿವರ ನೀಡುತ್ತದೆ. ಸ್ತ್ರೀ ಭ್ರೂಣ ಹತ್ಯೆಯಂತಹ ಈ ಕಾಲದಲ್ಲಿ ಸ್ತ್ರೀ ಅಸಮಾನತೆ ಲಿಂಗ ಭೇದ ಖಂಡಿಸುತ್ತದೆ. ಸ್ತ್ರೀತ್ವದ ಘನತೆಯ ಬಗ್ಗೆಯೂ ಎತ್ತಿ ಹಿಡಿಯುತ್ತದೆ. ವಚನಕಾರರ ಪ್ರಭಾವ ಇವರ ಮೇಲಾದ ಪರಿಣಾಮವನ್ನು ನೋಡಬಹುದು.

"ಅನಿತ್ಯಾಣಿ ಶರೀರಾಣಿ ವಿಭವೊನ್ನೈವ ಶಾಶ್ವತಃ
ನಿತ್ಯಂ ಸನ್ನಿಹಿತೋ ಮೃತ್ಯು; ಕರ್ತವ್ಯೋ ಧರ್ಮ ಸಂಗ್ರಹಾ"

ಎಂಬ ಉಪನಿಷತ್ತಿನ ವಾಕ್ಯದಂತೆ 'ಸತ್ಯಂ ಮಾತಾ ಪಿತಾಜ್ಞಾನಂ। ಧರ್ಮೋ ಭ್ರಾತ್ರು ದಯಾ ಸಖಾ। ಶಾಂತಿಂ ಪತ್ನಿ ಕ್ಷಮಾ ಪುತ್ರ ಷಡೈತೇ ಮಮ ಬಾಂಧವಃ॥' ಎಂಬುದಾಗಿ ಭಾವಿಸಿಕೊಂಡು, ಭವ ಬಂಧನ ಬಿಟ್ಟು ಭಗವಂತನೊಡನೆ ಭಾವ ಬಂಧನದಲ್ಲಿ ತೊಡಗುವಂತೆ, ಹಾಗೂ ಬರೀ ಉಪದೇಶ ಸಾಲದು ಸಾಧನೆಯೂ ಬೇಕು ಎಂದು ಮಾರ್ಮಿಕವಾಗಿ ಹೇಳುತ್ತದೆ.

ಅಲಭ್ಯೆರಿ, ಉಪನಿಷತ್ತಿನ ಅಧ್ಯಯನ ಹಾಗೂ ವಚನ ಸಾಹಿತ್ಯದ ಸಮಗ್ರ ಅಧ್ಯಯನ ಕೈಗೊಂಡಿರಬೇಕು. ಇಲ್ಲದಿದ್ದರೆ ಇಂತಹ ಮಹಾ ತಾತ್ವಿಕ ವಿಚಾರವನ್ನು ಬ್ರಹ್ಮಜ್ಞಾನದ ತಿಳಿವನ್ನು ತಿಳಿಯಪಡಿಸಲು ದುಸಾಧ್ಯ. ಒಂದು ಪ್ರಸಂಗದಲ್ಲಿ "ಕಾಮಾತುರಾಣಾಂ ನ ಭಯ

ನ ಲಜ್ಜಾ: ಎಂದು ಸೂಕ್ಷ್ಮವಾಗಿ ಹೇಳುತ್ತಾನೆ. ವಿದ್ಯಾತುರಾಣಾಂ ನಸುಖಂ ನ ನಿದ್ರಾ" ಹೌದು ಅಪೇಕ್ಷಿತ ಸುಖ ಹಾಗೂ ನಿದ್ರೆಯನ್ನು ತೊರೆದಾಗಲೆ ಆತನಿಗೆ ವಿದ್ಯೆಯಿಂದ ಜ್ಞಾನ ಪ್ರಾಪ್ತಿ ಸಾಧ್ಯ. ಕಾಮಕ್ಕೂ ವಿದ್ಯೆಗೂ ವ್ಯತ್ಯಾಸವನ್ನು ರಸವತ್ತಾಗಿ ಚಿತ್ರಿಸುತ್ತದೆ.

ಅಕ್ಷರಜ್ಞಾನ ಹಾಗೂ ಅನುಭವ ಜ್ಞಾನ ಕುರಿತು ವಿಶ್ಲೇಷಿಸುತ್ತದೆ. ಅಕ್ಕಮಹಾದೇವಿಯ ವಚನ, ಸರ್ವಜ್ಞನ ತ್ರಿಪದಿಗಳ ಅಂಶಗಳು ಇದರಲ್ಲಿ ಕಾಣಸಿಗುತ್ತವೆ. ಜ್ಞಾನದ ಹಿರಿಮೆಯನ್ನು ಎತ್ತಿಹಿಡಿಯುವ ಪ್ರಸಂಗಗಳು ಯಥೇಚ್ಛವಾಗಿವೆ. ಗುರುವಿನ ಮಹಿಮೆ, ಹಿರಿಮೆಯನ್ನು ಮನೋಜ್ಞವಾಗಿ ತಿಳಿಸುತ್ತದೆ. "ಗುರುವನ್ನು ಅಗಲಿದವರು ಕೈಯೊಳಗೆ ಸಿಕ್ಕಂಥ ಸಕ್ಕರೆ ಉಂಡಿಯನ್ನು ಒಕ್ಕೊಟ್ಟು ಬೊಟ್ಟು ಸೀಪಿದಂತಾಗುತ್ತದೆ. ಮತ್ತೆ ಬೇಡಿದ್ದನ್ನು ಕೊಡುವ ಕಾಮಧೇನುವನ್ನು ಕೊಟ್ಟು ಗೊಡ್ಡಾಕಳ ಬೆನ್ನು ಹತ್ತಿದಂತಾಗುತ್ತದೆ" ಎಂಬ ಮಾತುಗಳಂತೂ ಗುರು ಮಹಿಮೆ ತಿಳಿಸಲು ಸರ್ವತ್ರ ಸತ್ಯವಾಗಿ ಉಳಿಯುತ್ತದೆ.

"ಹಿಂದೆ ಯೋಗ ಭ್ರಷ್ಟರಾದವರೇ ಮುಂದೆ ಉತ್ತಮ ಕುಲದಲ್ಲಿ ಅವತರಿಸಿ ಚಿಕ್ಕಂದಿನಲ್ಲಿಯೇ ಜ್ಞಾನವನ್ನು ಪಡೆದು ಆರೂಢ ಪಥಕ್ಕೆ ಮುಟ್ಟಿದ ಪ್ರಮಾಣಗಳು ಅನಂತ ಉಂಟು" ಎಂಬ ಮಾತು ಯೋಗಿಗಳಿಗೆ ಪುನರ್ಜನ್ಮ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. "ಅದ್ವೈತ ಪ್ರತಿಪಾದಕರಾದ ಶಂಕರಾಚಾರ್ಯರ ಪುನರ್ಜನ್ಮ ಸ್ವಾಮಿ ವಿವೇಕಾನಂದರದು" ಎಂದು ಹಲವರು ಹೇಳುವ ಒಂದು ನಂಬಿಕೆಯೂ ನಮ್ಮಲ್ಲಿದೆ. ವಾಸ್ತವದ ನೆಲೆಯಲ್ಲೆಗಿಂತಲೂ ಅಧ್ಯಾತ್ಮದ ನಂಬಿಕೆಗಳು ಭಿನ್ನವಾಗಿರುತ್ತವೆ. ಅಲ್ಲಿ ಸಾಧ್ಯಾ-ಸಾಧ್ಯತೆಗಳು ಹೆಚ್ಚು.

ಯೋಗಾನಂದ – ಮಹಾದೇವಿಯರು ಪ್ರಶ್ನಾರ್ಥಿಗಳಾಗಿ ಶುಕಮುನಿಗಳ ಹತ್ತಿರ ಬರುವ ಪ್ರಸಂಗ, ಅದರಲ್ಲಿನ ಚರ್ಚೆ ಅಮೋಘ. ಅಲ್ಲಿ ಸ್ಪಷ್ಟವಾಗುವ ಅದ್ವೈತ ಸಿದ್ಧಾಂತದ ಮಹತ್ವ ಅರ್ಥಪೂರ್ಣವಾಗಿದೆ. ಅತಿ ಸರಳವಾದ ರೀತಿಯಲ್ಲಿ ಸ್ಪಷ್ಟಪಡಿಸಿ ಬಿಡುತ್ತಾನೆ. ಇದು (ನಾಟಕ) 'ಮಲ ವಿಕ್ಷೇಪಗಳಿಂದ ಕೂಡಿದ ಬುದ್ಧಿಯನ್ನು ಕಳೆದುಕೊಳ್ಳುದಕ್ಕೊಸ್ಕರ ಜ್ಞಾನಿಗಳ ಸಂಗಲೇಸು' ಎಂದು ಮನಮುಟ್ಟುವಂತೆ ಹೇಳುತ್ತದೆ. ಸ್ವರೂಪದ ಸ್ಮೃತಿ – ವಿಸ್ಮೃತಿಯ ಬಗ್ಗೆ ತಿಳಿಸಿಕೊಡುತ್ತದೆ.

ಸದ್ಗುರುವಿನ ಲಕ್ಷ್ಮಣವನ್ನು ಹೀಗೆ ಹೇಳಿಕೊಡುತ್ತದೆ. "ಯಾರ ಮನಸ್ಸು ದುಃಖಿಗಳನ್ನು ಕಂಡು ದಯಾಭಾವದಿಂದ ಕೂಡಿಕೊಂಡು ನೇತ್ರದ್ವಾರ ಹೊರಗೆ ಹೋಗಿ ದುಃಖಗಳನ್ನು ಕಳೆಯುವುದೋ ಮತ್ತು ಯಾರ ವಾಣಿಯು ಏನನ್ನಾದರೂ ಹೇಳಿದರೆ ಪಾರಮಾರ್ಥಿಕವಾದ ಪರಬ್ರಹ್ಮವನ್ನು ತಿಳಿಸಿಕೊಡುವಂಥಾ ಶಕ್ತಿ ಉಳ್ಳುದೋ, ಯಾರ ಶರೀರವು ಶಮ ಧಮ ಧ್ಯಾನಾದಿ ಪುಣ್ಯಗಳಿಂದ ಉತ್ಪನ್ನವಾಗಿದ್ದು, ಸಕಲರಿಗೂ ಪೂಜ್ಯ ಭಾವಕ್ಕೆ

ಯೋಗ್ಯವಾಗಿರುವುದೋ ಅಂಥಾ ದೃಷ್ಟಿ ವಾಣಿ – ಶರೀರ – ಉಳ್ಳವರೇ ಸದ್ಗುರುಗಳು ಎಂದು ತಿಳಿಯಿರಿ" ಎಂದು ಅದನ್ನು ವಾಸ್ತವದಲ್ಲಿಯೂ ಅರಿತುಕೊಳ್ಳುವಂತೆ ಸೂಚಿಸಲಾಗಿದೆ.

ಅಂದು ಒಂದು ಕುಗ್ರಾಮವಾಗಿದ್ದ ಹಾರೂಗೇರಿ ಗ್ರಾಮಕ್ಕೆ ಆಧುನಿಕತೆಯ ಲವಲೇಷದ ಗಂಧವೂ ಗೊತ್ತಿರಲಿಲ್ಲ. ಪಕ್ಕಾ ಹಳ್ಳಿಯಾಗಿದ್ದ ಈ ಗ್ರಾಮದಲ್ಲಿ ಯಾವ ಅಕ್ಷರಾಭ್ಯಾಸವನ್ನೂ ಮಾಡದ, ಆಶುಕವಿಯಾಗಿದ್ದ ಅಲಭೈರಿಯು ಇಂದಿನ ವೈಜ್ಞಾನಿಕ ಯುಗದಲ್ಲಿ ವಿಜ್ಞಾನಿಗಳು ಕಂಡುಹಿಡಿದ ಅನೇಕ ವೈಜ್ಞಾನಿಕ ವಿಷಯಗಳನ್ನು ತನ್ನ ನಾಟಕ "ವೈರಾಗ್ಯ ವಿಜಯ"ದಲ್ಲಿ ಚರ್ಚಿಸಿದ್ದಾನೆ. ಹಳ್ಳಿಯ ಹೈದನಾಗಿದ್ದ ಕವಿ ಜಗತ್ ಸೃಷ್ಟಿ, ಗೋಲಾಕಾರವಾಗಿರುವ ಆಕಾಶಗಂಗೆ ಇವುಗಳ ಬಗ್ಗೆ ಪರಿಜ್ಞಾನ ಹೊಂದಿದಂತೆ ಕಾಣುತ್ತದೆ. ಅಂತೆಯೇ ತನ್ನ ನಾಟಕದಲ್ಲಿ ವೈಜ್ಞಾನಿಕವಾದ ವಿಷಯಗಳನ್ನು ಅಧ್ಯಾತ್ಮದೊಂದಿಗೆ ಸಮೀಕರಿಸಿ, ವಿಜ್ಞಾನದಲ್ಲಿರುವ ಅಧ್ಯಾತ್ಮ ಹಾಗೂ ಅಧ್ಯಾತ್ಮದಲ್ಲಿರುವ ವಿಜ್ಞಾನವನ್ನು ತುಂಬ ವಿವರವಾಗಿ, ಸ್ಪಷ್ಟವಾಗಿ ಚರ್ಚಿಸಿದ್ದಾನೆ.

ಎರಡು ಪಾತ್ರಗಳ ನಡುವೆ ನಡೆಯುವ ಚರ್ಚೆ, ಮನುಷ್ಯ ಜೀವನದ ಸಾರ್ಥಕತೆಯ ಬಗೆಗೆ ಇದ್ದರೂ ಕೂಡ ಪುನರ್ಜನ್ಮದ ವಾಸನೆಯನ್ನು ಹೊಂದಿ ಬೇರೆಯದೇ ಲೋಕಕ್ಕೆ ಪ್ರೇಕ್ಷಕರನ್ನು ಕೊಂಡೊಯ್ಯುತ್ತದೆ. ಅಂತೆಯೇ ಕೆಲವು ವೈಜ್ಞಾನಿಕ ಅಂಶಗಳನ್ನು ಚರ್ಚಿಸುತ್ತ ಕೊನೆಗೆ ವಿಜ್ಞಾನವನ್ನು ಅಧ್ಯಾತ್ಮದಲ್ಲಿ ವಿಲೀನಗೊಳಿಸಿ, ಸೃಷ್ಟಿಯ ರಹಸ್ಯ ಭೇದಿಸುವಲ್ಲಿ ಪಡುವ ಪ್ರಯತ್ನ ಯಾವ ಓದುಗನನ್ನಾದರೂ ಬೆರಗುಗೊಳಿಸುತ್ತದೆ.

ನಾಟಕವು ಅದ್ವೈತ ಸಿದ್ಧಾಂತದ ಪ್ರತಿಪಾದನೆಯಲ್ಲಿಯೇ ಸಾಗುತ್ತ ಗುರು ಶ್ರೇಷ್ಠತೆ ಹೇಳುತ್ತ ಸಾಧನೆ, ಸ್ವಾನುಭದ ಬಗ್ಗೆ ಮಹತ್ತರ ಜಾಗ್ರತಿ ಮೂಡಿಸುವಲ್ಲಿ ಯಶಸ್ವಿಯಾಗುತ್ತದೆ. ಈ ನಾಟಕ ಪೂರ್ಣ ಸಿಗದೇ ಅರ್ಧ ಮಾತ್ರ ದೊರೆತಿರುವುದು ಒಂದು ವಿಷಾದದ ಸಂಗತಿ.

ಟಿಪ್ಪಣಿಗಳು:

೫.೧. ಡೊಳ್ಳಿನ ಪದಗಳು:

೧. ರಾಮು ಡಾಂಗೆ ಹಾರೂಗೇರಿ ಸಂಗ್ರಹಿತರಿಂದ ಪಡೆದ ಅಲಭ್ಯೆರಿಯ ಅಪ್ರಕಟಿತಡೊಳ್ಳಿನ ಪದ.

೨. ಅದೇ,

೩. ಅದೇ,

೪. ಅದೇ,

೫. ಅದೇ,

೬. ಅದೇ,

೭. ಆರ್. ಬಿ. ಚಿಲಮಿ ಇವರು ಸಂಗ್ರಹಿಸಿದ ಅಲಭ್ಯೆರಿ ವಿರಚಿತ ಅಪ್ರಕಟಿತ ಡೊಳ್ಳಿನ ಪದ.

೮. ಅದೇ,

೯. ಅದೇ,

೧೦. ಅದೇ,

೧೧. ಸಿದ್ದಪ್ಪ ಹುಲಗಬಾಳಿ ಹಾರೂಗೇರಿ ಇವರು ಸಂಗ್ರಹಿಸಿದ ಅಲಭ್ಯೆರಿ ರಚಿತ ಅಪ್ರಕಟಿತ ಡೊಳ್ಳಿನ ಪದ.

೧೨. ಅದೇ,

೧೩. ಅದೇ,

೧೪. ಅದೇ,

೧೫. ಅದೇ,

೧೬.ಅದೇ,

೧೭. ಅದೇ,

೧೮. ಮಹಾದೇವ ಪಡಚಿ ಅಳಗವಾಡಿ ಇವರ ಮೌಖಿಕ ಸಂದರ್ಶನದಿಂದ

ಪಡೆದ   ಅಲಭ್ಯೆರಿ ವಿರಚಿತ ಅಪ್ರಕಟಿತ ಡೊಳ್ಳಿನ ಪದ.

೧೯. ಅದೇ,

೨೦.ರಾಮು ಡಾಂಗೆ ಇವರಿಂದ ಪಡೆದದ್ದು.

೨೧. ಅದೇ,

೨೨. ಅದೇ,

೨೩. ಅದೇ,

೨೪. ಸಿದ್ದಪ್ಪ ಹುಲಗಬಾಳಿ ಹಾರೂಗೇರಿ ಇವರು ಸಂಗ್ರಹಿಸಿದ ಅಲಭ್ಯೆರಿ ರಚಿತ ಅಪ್ರಕಟಿತ ಡೊಳ್ಳಿನ ಪದ.

೨೫. ಅದೇ,

೨೬. ಅದೇ,

೨೭. ಅದೇ,

೨೮.ಅದೇ,

೨೯.ರಾಮು ಡಾಂಗೆ ಇವರ ಸಂಗ್ರಹಿತ ಅಲಭ್ಯೆರಿ ವಿರಚಿತ ಡೊಳ್ಳಿನ ಪದ.

೩೦.ಅದೇ,

೩೧. ಅದೇ,

೩೨. ಅದೇ,

೩೩. ಅದೇ,

೫.೨. ಕರ್ಬಲ್/ರಿವಾಯತ್ ಪದಗಳು:

೧) ಪ್ರೊ॥ ಹಸನ್‌ಬಿ ಬೀಳಗಿ; ರಿವಾಯತ್‌ಗಳ ಅನುಸಂಧಾನ.

ಪುಟ-ಪ್ರಾಸ್ತಾವಿಕ ನುಡಿಯಿಂದ.

೨) ಲಿಂಗಣ್ಣ ಸಣ್ಣಕ್ಕಿ (ಸಂ), ಜಾನಪದ ಪ್ರಚಾರ. ಪುಟ-೭೭

೩) ದಯಾನಂದ ಸುಬ್ಬಣ್ಣವರ ಇವರ ಮನೆಯಿಂದ ಪಡೆದ ಅಲಭ್ಯೆರಿ ವಿರಚಿತ

ಅಪ್ರಕಟಿತ ರಿವಾಯತ್ ಪದ.

೪) ಅದೇ,

೫) ಅಪ್ರಕಟಿತ ರಿವಾಯತ್ ಪದಗಳ ಸಂಗ್ರಹದಿಂದ.

೬) ಅದೇ,

೭) ಅದೇ,

೮) ಅದೇ,

೯) ಅದೇ,

೧೦) ಅದೇ,

೧೧) ಪ್ರಶಾಂತ ಗೌಡರ, ಬೆಳಗಾವಿ ಇವರು ಸಂಗ್ರಹಿಸಿದ ಅಲಭ್ಯೆರಿ ರಚಿತ ಅಪ್ರಕಟಿತ ರಿವಾಯತ್ ಪದ.

೧೨) ಅದೇ,

೧೩) ಅದೇ,

೧೪) ಅದೇ,

೧೫) ಅದೇ,

೧೬) ಅದೇ,

೧೭) ಅಪ್ಪಣ್ಣ ಹಳ್ಳೂರ ಹಾರೂಗೇರಿ ಇವರು ಸಂಗ್ರಹದಿಂದ ಪಡೆದ ಅಲಭ್ಯೆರಿ ರಚಿತ ಅಪ್ರಕಟಿತ ರಿವಾಯತ್ ಪದ.

೧೮) ಅದೇ.

೧೯) ಪ್ರಶಾಂತ ಗೌಡರ, ಬೆಳಗಾವಿ ಇವರು ಸಂಗ್ರಹಿಸಿದ ಅಲಭ್ಯೆರಿ ರಚಿತ ಅಪ್ರಕಟಿತ ಕರ್ಬಲಾ ಪದದಿಂದ.

೨೦) ಅದೇ, ಸಂಗ್ರಹಿತ ಪದದಿಂದ.

೨೧) ಅದೇ, ಸಂಗ್ರಹಿತ ಪದದಿಂದ

೨೨) ಅದೇ, ಸಂಗ್ರಹಿತ ಪದದಿಂದ

೨೩) ಅದೇ, ಸಂಗ್ರಹಿತ ಪದದಿಂದ

೨೪) ಅದೇ, ಸಂಗ್ರಹಿತ ಪದದಿಂದ

೨೫) ಅದೇ, ಸಂಗ್ರಹಿತ ಪದದಿಂದ

೨೬) ಅದೇ, ಸಂಗ್ರಹಿತ ಪದದಿಂದ

೨೭) ಅದೇ, ಸಂಗ್ರಹಿತ ಪದದಿಂದ

೨೮) ಅದೇ, ಸಂಗ್ರಹಿತ ಪದದಿಂದ

೨೯) ಅದೇ, ಸಂಗ್ರಹಿತ ಪದದಿಂದ

೩೦) ಅವ್ವಣ್ಣ ಹಳ್ಳೂರ ಹಾರೂಗೇರಿ ಇವರು ಸಂಗ್ರಹದಿಂದ ಪಡೆದ ಅಲಭ್ಯೆರಿ ರಚಿತ ಅಪ್ರಕಟಿತ ರಿವಾಯತ್ ಪದ.

೩೧) ಅದೇ, ಸಂಗ್ರಹಿತ ಪದದಿಂದ

೩೨) ಸಿದ್ದಣ್ಣ ಲಂಗೋಟಿ (ಸಂ), ಬಸವಣ್ಣನವರ ವಚನಗಳು, ಪುಟ-೯೦.

೩೩) ಸಂಗ್ರಹಿತ ರಿವಾಯತ್ ಪದದಿಂದ

೫.೩ ಲಾವಣಿಗಳು:

೧) ಸೋಮಶೇಖರ ಇಮ್ರಾಪೂರ: ಜಾನಪದ ವ್ಯಾಸಂಗ, (ವಿಮರ್ಶಾ ಲೇಖನ ಭಾಗ-೨). ಪುಟ-೩೧.

೨) ಅದೇ, ಪುಟ-೩೦.

೩) ಮಹಾದೇವ ಪಡಚಿ ಅಳಗವಾಡಿ ಇವರ ಮೌಖಿಕ ಸಂದರ್ಶನದಿಂದ ಪಡೆದ ರಾಜೋಟಿ ಕವಿಯ ಅಪ್ರಕಟಿತ ಲಾವಣಿ.

೪) ಸೋಮಶೇಖರ ಇಮ್ರಾಪೂರ: ಜಾನಪದ ವ್ಯಾಸಂಗ (ವಿಮರ್ಶಾ ಲೇಖನ ಭಾಗ-೨). ಪುಟ-೭೨.

೫) ಬೆಟಗೇರಿ ಕೃಷ್ಣಶರ್ಮ: ಕರ್ನಾಟಕ ಜನಜೀವನ, ಪುಟ-೧೧೦.

೬) ಅಲಭ್ಯೆರಿ ಮನೆಯಿಂದ ಪಡೆ ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೭) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೮) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೯) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೦) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೧) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೨) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೩) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೪) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೫) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೬) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೭) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೮) ಅಲಭ್ಯೆರಿ ವಿರಚಿತ ಅಪ್ರಕಟಿತ ಲಾವಣಿ ಪದ.

೧೯) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೦) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೧) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೨) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೩) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೪) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೫) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೬) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೭) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೮) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೨೯) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೩೦) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೩೧) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೩೨) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೩೩) ಅಲಭೈರಿ ವಿರಚಿತ ಅಪ್ರಕಟಿತ ಲಾವಣಿ ಪದ.

೩೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೩೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೩೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೩೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೩೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೩೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೩) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೪೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೩) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೩) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೬೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೩) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೭೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೩) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೪) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೫) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೬) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೭) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೮) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೮೯) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೯೦) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೯೧) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೯೨) ಅಪ್ರಕಟಿತ ಲಾವಣಿ ಪದಗಳ ಸಂಗ್ರಹದಿಂದ

೫.೪ ತತ್ವ ಪದಗಳು:

೧) ಎನ್. ಪ್ರವೀಣಚಂದ್ರ: ಅರಿವಿನ ದೀವಿಗೆ, ಪುಟ–೧೨, ೧೩.

೨) ಆರ್. ಬಿ. ಚಿಲಮಿ (ಸಂ), ಅಲಭ್ಯೈರಿ ವಿರಚಿತ ತತ್ವ ಪದಗಳು, ಪುಟ–೫೧.

೩) ರಹಮತ್ ತರಿಕೇರಿ: ಕತ್ತಿಯಂಚಿನ ದಾರಿ, ಪುಟ–೨೨೨.

೪) ಅದೇ, ಪುಟ–೨೨೧.

೫) ಅಲಭ್ಯೈರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೬) ಅಲಭ್ಯೈರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೭) ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೮) ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೯) ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೧೦) ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೧೧) ಸಿದ್ದಪ್ಪ ನಾಗನೂರ ಹಾರೂಗೇರಿ ಇವರು ಸಂಗ್ರಹಿಸಿದ ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವ ಪದ.

೧೨) ಅದೇ,

೧೩) ಅ.ರಾ.ಸೇ (ಸಂ), ಶಿಶುನಾಳ ಶರೀಫರ ನೂರಾರು ತತ್ವಪದಗಳು, ಪುಟ–೪೩.

೧೪) ಸಂಗ್ರಹಿತ ತತ್ವ ಪದದಿಂದ.

೧೫) ಸಂಗ್ರಹಿತ ತತ್ವ ಪದದಿಂದ.

೧೬) ಸಂಗ್ರಹಿತ ತತ್ವ ಪದದಿಂದ.

೧೭) ಸಂಗ್ರಹಿತ ತತ್ವ ಪದದಿಂದ.

೧೮) ಸಂಗ್ರಹಿತ ತತ್ವ ಪದದಿಂದ.

೧೯) ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೭.

೨೦) ಅದೇ,

೨೧) ಅದೇ,

೨೨) ಅಲಭ್ಯೆರಿ ವಿರಚಿತ ಅಪ್ರಕಟಿತ ತತ್ವಪದಗಳ ಸಂಗ್ರಹದಿಂದ ಪಡೆದದ್ದು.

೨೩) ಅದೇ,

೨೪) ಅದೇ,

೨೫) ಅದೇ,

೨೬) ಅದೇ,

೨೭) ಅದೇ,

೫.೫ ಸ್ತೋತ್ರ ಪದಗಳು:

೧) ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೫೧.

೨) ಅಲಭ್ಯೆರಿ ವಿರಚಿತ ಅಪ್ರಕಟಿತ ಸ್ತುತಿ ಪದಗಳ ಸಂಗ್ರಹದಿಂದ.

೩) ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೧.

೪) ಅದೇ, ಪುಟ–೨.

೫) ರಾಮು ಸುಬ್ಬಣ್ಣವರ (ಸಂ), ಶ್ರೀ ಜಿನಭಕ್ತಿ ಗೀತೆಗಳು, ಪುಟ-೩.

೬) ಅದೇ, ಪುಟ-೫.

೫.೬ ಅಭಂಗಗಳು:

೧) ವಿಠ್ಠಲರಾವ ಗಾಯಕವಾಡ; ವಿಠ್ಠಲ ಸಂಪ್ರದಾಯ, ಪುಟ-೧.

೨) ಅಲಭೈರಿ ಮನೆಯಿಂದ ಪಡೆದ ಅಲಭೈರಿ ರಚಿತ ಅಪ್ರಕಟಿತ ಅಭಂಗದಿಂದ.

೩) ಅದೇ,

೪) ಅದೇ,

೫) ಅದೇ,

೬) ಅದೇ,

೭) ಅದೇ,

೮) ಸಿದ್ದಣ್ಣ ಲಂಗೋಟಿ (ಸಂ), ಬಸವಣ್ಣನವರ ವಚನಗಳು, ಪುಟ-೫.

೯) ಸಂಗ್ರಹಿತ ಅಭಂಗ ಪದದಿಂದ.

೧೦) ಅದೇ,

೧೧) ಅದೇ,

೫.೭ ಚೌಡಕಿ ಪದಗಳು.

೧) ಅಲಭೈರಿ ವಿರಚಿತ ಅಪ್ರಕಟಿತ 'ಯಲ್ಲಮ್ಮನ ಜಾತ್ರೆಗೆ ಹೋಗೂನ' ಎಂಬ ಚೌಡಕಿ ಪದದಿಂದ

೫.೮ ಹಂತಿ ಪದಗಳು:

೧) ನಿಂಗಣ್ಣ ಸಣ್ಣಕ್ಕಿ: ಜಾನಪದ ಪ್ರಚಾರ, ಪುಟ-೫೩.

೨) ಸಂಗಪ್ಪ ಮಲ್ಲಪ್ಪ ಸದಲಗಿ ಹಾರೂಗೇರಿ, ಇವರ ಮೌಖಿಕ ಸಂದರ್ಶನದಿಂದ ಪಡೆದ ಅಲಭೈರಿ ರಚಿತ ಅಪ್ರಕಟಿತ ಹಂತಿ ಪದ.

೩) ಅದೇ,

೪) ಅದೇ,

ಅಧ್ಯಾಯ: ಆರು

ಮೌಲ್ಯ ವಿವೇಚನೆ

ಅಧ್ಯಾಯ: ಆರು

ಮೌಲ್ಯ ವಿವೇಚನೆ

"ಮೌಲ್ಯ" ಎಂದರೆ ಬೆಲೆ ಎಂದರ್ಥ. ಯಾವುದೇ ಒಬ್ಬ ವ್ಯಕ್ತಿ, ವಸ್ತು, ಕೃತಿ ಮುಂತಾದವುಗಳನ್ನು ಕುರಿತು ಅವುಗಳ ರೀತಿ ನೀತಿಗಳನ್ನು ಅರಿತು ಅವುಗಳ ಗುಣಾವಗುಣಗಳನ್ನು ಗುರುತಿಸಿ ಬೆಲೆ ಕಟ್ಟುವುದೇ ಮೌಲ್ಯ ಮಾಪನ. ಬದಲಾಗುತ್ತಿರುವ ಇಂದಿನ ವಿದ್ಯಮಾನಗಳಲ್ಲಿ ಮಾನವನ ಬದುಕು ತುಂಬಾ ಸಂಕೀರ್ಣ ಸ್ಥಿತಿಯಲ್ಲಿದೆ. ಮಾನವನಲ್ಲಿ ಮೌಲ್ಯಗಳಿಲ್ಲದೆ ಅವನ ವ್ಯಕ್ತಿತ್ವ ಇಂದು ಶೋಚನೀಯ ಹಂತದಲ್ಲಿದೆ. ಇಂಥ ಮೌಲ್ಯಗಳನ್ನು ತುಂಬುವಲ್ಲಿ ಕವಿಗಳು ಸಾಹಿತಿಗಳು ತಮ್ಮ ಭಾವನೆಗಳನ್ನು ಹಾಡಿನ ಮೂಲಕವಾಗಲೀ ಅಥವಾ ಕೃತಿಗಳ ಮೂಲಕವಾಗಲೀ ಹಿಡಿದಿಡಲು ಪ್ರಯತ್ನಿಸುತ್ತಿದ್ದಾರೆ. ಹೀಗೆ ಶಬ್ದಗಳ ಮೂಲಕ ಹಿಡಿದಿಡುವ ಕಲೆಯೇ ಸಾಹಿತ್ಯ. ಸಾಹಿತ್ಯವು ಅನುಭವಗಳ, ವಿಚಾರಗಳ ಸುಂದರ ಅಭಿವ್ಯಕ್ತಿ. ಸಾಹಿತ್ಯ ನಿಂತ ನೀರಾಗಿರದೆ ಅದು ನಿರಂತರ ಹರಿಯುವ ವಾಹಿನಿ. ನಿತ್ಯ ಹೊಸತನ ಕಂಡುಕೊಳ್ಳುವುದೇ ಸಾಹಿತ್ಯದ ಪ್ರಮುಖ ಲಕ್ಷಣ. ಸಾಹಿತ್ಯವು ಒಳ್ಳೆಯ ಉದ್ದೇಶ, ಕವಿಯ ವ್ಯಕ್ತಿತ್ವ, ಸಾಮಾಜಿಕ ಕಳಕಳಿ, ವಿಚಾರ ಪರ ಚಿಂತನೆ, ಕಲ್ಪನಾ ಶಕ್ತಿ, ಶಬ್ದಸಂಪತ್ತು, ಭಾಷಾ ಸಂಪತ್ತು, ಪದರಚನಾಶೈಲಿ, ಮುಂತಾದ ತಂತ್ರಗಳನ್ನು ಒಳಗೊಂಡಿರುತ್ತದೆ. ಇಂಥ ಅನೇಕ ಅಂಶಗಳನ್ನು ಒಳಗೊಂಡಿರುವ ಸಾಹಿತ್ಯ ರಚನೆ ತನ್ನದೆ ಆದ ವಿಶಿಷ್ಟ ಮೌಲ್ಯಗಳನ್ನು ಒಳಗೊಂಡಿರುತ್ತದೆ.

ಈ ದೃಷ್ಟಿಯಿಂದ ಅಲಭ್ಯೆರಿಯ ಸಾಹಿತ್ಯದಲ್ಲಿ ಮಾನವ ಜೀವನಕ್ಕೆ, ಸಮಾಜಕ್ಕೆ ಹಾಗೂ ಸಾಹಿತ್ಯಕ್ಕೆ ಸಂಬಂಧಪಟ್ಟ ಮೌಲ್ಯಗಳನ್ನು ಗುರುತಿಸಲಾಗಿದೆ. ಅಲಭ್ಯೆರಿ ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ, ನೈತಿಕತೆ, ಅಧ್ಯಾತ್ಮಿಕ, ರಾಷ್ಟ್ರೀಯ, ಸ್ವಾತಂತ್ರ್ಯ, ದೇಶ ಪ್ರೇಮ, ಸ್ತ್ರೀಪರ ಕಾಳಜಿ ಮುಂತಾದವುಗಳ ಕುರಿತು ಮೌಲ್ಯವನ್ನು ನಿರ್ದೇಶಿಸುವಲ್ಲಿ "ಕವಿ ಅಲಭ್ಯೆರಿ: ಜೀವನ ಮತ್ತು ಸಾಹಿತ್ಯ" ವಿವೇಚನೆ ಸಹಕಾರಿಯಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಈತನ ಸಾಹಿತ್ಯದ ಮೌಲ್ಯ ನಿರ್ಣಯಿಸುವಲ್ಲಿ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

೧] ಸಾಮಾಜಿಕ ಮೌಲ್ಯ

೨] ಸಾಂಸ್ಕೃತಿಕ ಮೌಲ್ಯ

೩] ತಾತ್ವಿಕ ವಿವೇಚನೆ

೪] ಸಾಹಿತ್ಯಿಕ ಮೌಲ್ಯ

೬.೧ ಸಾಮಾಜಿಕ ಮೌಲ್ಯ :

ಸಮಾಜವನ್ನೇ ಮುಖ್ಯ ವಸ್ತುವನ್ನಾಗಿಸಿಕೊಂಡು ಕವಿ ಸಾಕಷ್ಟು ಪದಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಸ್ತ್ರೀಪರ ಕಾಳಜಿ, ಸಮಾಜ ಪರಿವರ್ತನೆ, ಅನಿಷ್ಟ ಸಂಪ್ರದಾಯಗಳು, ಮುಂತಾದ ವಿಷಯಗಳನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ.

ಸ್ತ್ರೀಪರ ಸಾಂಪ್ರದಾಯಿಕ ನಿಲುವು :

ನಮ್ಮ ರಾಷ್ಟ್ರದಲ್ಲಿ ಸ್ತ್ರೀಯರಿಗೆ ಅಪಾರವಾದ ಗೌರವ ಸ್ಥಾನಮಾನಗಳನ್ನು ಕೊಟ್ಟಿದ್ದುಂಟು. "ಯತ್ರ ನಾರ್ಯ್ಯಸ್ತು ಪೂಜ್ಯಂತೇ ತತ್ರದೇವತಾ" ಅಂದರೆ ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆಂಬ ಮಾತೂ ಉಂಟು. "ಜನನಿ ಜನ್ಮ ಭೂಮಿಶ್ಚಃ ಸ್ವರ್ಗಾದಪಿ ಗರಿಯಸೆ" ಅಂದರೆ ಜನನಿ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ಎಂಬ ಶ್ಲೋಕವಿದೆ. ಇನ್ನು ಸಂಚಿ ಹೊನ್ನಮ್ಮ, ಕುಮಾರ ಕಕ್ಕಯ್ಯ ಇವರು ಹೆಣ್ಣಿನ ಮಹತ್ವವನ್ನು ಸಾರಿದ್ದುಂಟು. ಇಷ್ಟೆಲ್ಲ ಹೆಣ್ಣಿನ ಕುರಿತು ಗುಣಗಾನವಿದ್ದರೂ ಸಹ ಅವಳಿಗೆ ಕೆಲವೊಂದು ಕಟ್ಟು ಪಾಡುಗಳನ್ನು ಹಾಕಿರುತ್ತಾರೆ. ಅದಕ್ಕನುಗುಣವಾಗಿಯೇ ಅವಳು ತಾಯಿ, ತಂಗಿ, ಅಕ್ಕ, ಹೆಂಡತಿಯಾಗಿ ತನ್ನ ಸ್ಥಾನಮಾನಗಳನ್ನು ತುಂಬಬೇಕು. ಕವಿ ಸಹ ಸ್ತ್ರೀ ಪರ ಕಾಳಜಿಯಿಂದ ಸ್ತ್ರೀಯರ ಗುಣಸ್ವಭಾವ, ಪಾವಿತ್ರ್ಯ ಪತಿಭಕ್ತಿ ಮುಂತಾದ ವಿಷಯಗಳನ್ನು ಕುರಿತು ಹಲವು ಪದಗಳನ್ನು ರಚಿಸಿದ್ದಾನೆ. ಅವಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸಿದ್ದಾನೆ.

"ಪತಿಯ ಸೇವಾ ಮಾಡಿ ಗತಿಯ
ಹೊಂದದಿದ್ರೆ ಹೆಣ್ಣಿನ ಜನ್ಮ ಬಂದೋ ವ್ಯರ್ಥಾ ।
ಪುರುಷನ ಬಿಟ್ಟು ಹೆಣ್ಣಿಗೆ ಅಧಿಕಾರ ಇಲ್ಲ
ಪದವಿ ಹೊಂದುವುದು ತನ್ನ ಸ್ವತಾ ।
ಗಂಡಿಗೆ ಹೆಣ್ಣಿನ ಅಗತ್ಯವಿಲ್ಲಾ
ಧರಿಸಿಕೊಂಡು ಬ್ರಹ್ಮಚರ್ಯ ವ್ರತಾ ।
ಶುಕ್ರಾಚಾರ್ಯರಂತೆ ಪಾರಗಾಣವದಕ್ಕೆ
ಸ್ವಾಧೀನ ಇರುವುದು ಕಿಮ್ಮತ್ತಾ"[೧]

ಪತಿಯ ಸೇವೆಯನ್ನು ಮಾಡಿ ಮುಕ್ತಿಯನ್ನು ಹೊಂದದಿದ್ದರೆ ಹೆಣ್ಣಿನ ಜನ್ಮ ವ್ಯರ್ಥ. ಪುರುಷನ ಹೊರತು ಹೆಣ್ಣಿಗೆ ಸ್ವತಂತ್ರವಾದ ಅಧಿಕಾರವಿಲ್ಲ. ಅದಕ್ಕಾಗಿ ಹೆಣ್ಣು ನಯ-ವಿನಯದಿಂದ ಗಂಡನ ಮನೆಯಲ್ಲಿ ಜೀವನ ನಡೆಸಬೇಕು ಎಂದು ಅವಳ ಕರ್ತವ್ಯವನ್ನು ತಿಳಿಸುತ್ತಾನೆ.

"ಬಲ್ಲೆನೇಳ ನಿನ್ನ ಬಡಿವಾರೆಲ್ಲಾ
ಬಲ್ಲ ಗುಲ್ಲಾಗಂಟಿಯಾ
ಹಲ್ಲುಕಿಸಿವ ಸಲಿಗಿ ಸಾಕು
ಸಲ್ಲದೆನಗೆ ಸರಿಯ ದೂರಾ॥"

ಹೆಣ್ಣಿಗೆ ಬಡಿವಾರ ಒಳ್ಳೆಯದಲ್ಲ, ಹಲ್ಲು ಕಿಸಿಯುವ ಸಲುಗೆ ಅವಳಿಗೆ ಯೋಗ್ಯವಾದದ್ದಲ್ಲ ಎನ್ನಲಾಗಿದೆ. ಒಟ್ಟಿನಲ್ಲಿ ಕವಿಗೆ ಸ್ತ್ರೀ ಪರವಾದ ಸಾಂಪ್ರದಾಯಕ ದೃಷ್ಟಿಯೇ ಮುಖ್ಯವಾಗಿದೆ; ಹೊಸತನ ಕಾಣಿಸುವುದಿಲ್ಲ.

ಸಮಾಜ ಪರಿವರ್ತನೆ :

ಸಮಾಜದಲ್ಲಿ ನಿತ್ಯ ನಡೆಯುವ ಘಟನೆಗಳನ್ನು, ಜನರ ಪರಿವರ್ತನೆಯನ್ನು ಮನಗಂಡು ಕವಿ ಹಲವಾರು ಪದಗಳನ್ನು ರಚಿಸಿ, ಸಮಾಜ ತಿದ್ದುವ ಪ್ರಯತ್ನ ಮಾಡಿದ್ದಾನೆ. ಮಾನವ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ತಪ್ಪು ಮಾಡುವುದು ಸಹಜ. ಬುದ್ಧಿಯುಳ್ಳ ಈ ಮನುಷ್ಯ ಮಾಡುವ ತಪ್ಪುಗಳನ್ನು ಕಂಡು ಕವಿ ಸಮಾಜ ಸುಧಾರಣೆಗೆ ಮುಂದಾಗಿದ್ದಾನೆ. ನಮ್ಮ ಸಮಾಜದಲ್ಲಿ ಪುರುಷರು ತಮ್ಮ ಪತ್ನಿಯನ್ನು ಬಿಟ್ಟು ಪರನಾರಿಯರ ಬೆನ್ನು ಹತ್ತಿ ತಿರುಗುವುದನ್ನು ಕವಿ ಕಂಡು ಪುರುಷರ ಗುಣ ಸ್ವಭಾವವನ್ನು ತಿದ್ದಲು ಪ್ರಯತ್ನಿಸಿದ್ದಾನೆ.

"ಪರ ನಾರಿಯನಾ ತಾಯಿಯ ಸರಿ ಕಾಣು ।ಪ।
ಸಾರಿ ಹೇಳಿದ ಶಾಸ್ತ್ರದ ಪ್ರಮಾಣಾ
ಮರಿಯದೆ ಪುನಾಃ ಪುನಾಃ ।
ಸ್ಥಿರ ಮಾಡಿಕೊಂಡು ಮನಾ ।
ಗುರುವಿನ ಮೊರೆ ಹೋಗಿ ಶಿರಬಾಗಿ ಮರಿಯದೇ।
ಕ್ಷುಲ್ಲ ಬುದ್ಧಿ ಕೂಡಿದ ಅವಿಚಾರಿ
ಬಲೆಯೊಳು ಬಿದ್ದು ಜಾರಿ
ಬಲ್ಲಿದನು ಹಾರೂಗೇರಿ ಅಲಭ್ಯೆರಿ
ಸಲೆ ತೋರಿ ಕಲುಪಾರಿ ಶಂಕರನ"

ಪ್ರತಿಯೊಬ್ಬರೂ ತಮ್ಮಲ್ಲಿಯ ದುಷ್ಟ ಗುಣಗಳಿಂದ, ಅವಿವೇಕ ಕಲ್ಪನೆಯಿಂದ ದಾರಿ ತಪ್ಪುವದು ಸಹಜ. ಅಂಥ ದುಷ್ಟ ಗುಣಗಳನ್ನು ಬಿಟ್ಟು ಏಕ ಪತ್ನಿವೃತಸ್ಥನಾಗಿ ಪರನಾರಿಯರನ್ನು ತಾಯಿಯ ಸಮಾನ ಎಂದು ತಿಳಿಯಬೇಕು. ಶಾಸ್ತ್ರಗಳು ಇದನ್ನೇ ಸಾರಿ ಸಾರಿ ಹೇಳುತ್ತವೆ. ಆದ್ದರಿಂದ ಶ್ರೀ ಗುರುವಿನಲ್ಲಿ ಅಚಲವಾದ ನಂಬಿಕೆ (ಭಕ್ತಿಯನ್ನು) ಇಟ್ಟು ಮುಕ್ತಿಗೆ ಭಾಜನನಾಗಬೇಕೆಂದು ಕವಿ ಅಭಿಪ್ರಾಯ ಪಡುತ್ತಾನೆ.

ಒಟ್ಟಿನಲ್ಲಿ ಮಾನವ ತನ್ನ ಜೀವನದಲ್ಲಿ ಯಾವುದು ಕೆಟ್ಟದ್ದು ಯಾವುದು ಒಳ್ಳೆಯದು ಎನ್ನುವುದನ್ನು ಅರಿತು ತನ್ನ ಜೀವನ ನಡೆಸಬೇಕು. ದುಷ್ಟ ಗುಣಗಳನ್ನು ಬಿಟ್ಟು ದೇಶಾಭಿಮಾನ, ರಾಷ್ಟ್ರಾಭಿಮಾನ ಹಾಗೂ ಮುಖ್ಯವಾಗಿ ಸ್ವಾಭಿಮಾನಿಯಾಗಿ ನಡೆದು ತಮ್ಮ ಜೀವನವನ್ನು ಪವಿತ್ರಗೊಳಿಸಬೇಕೆಂದು ಕವಿ ಬಯಸುತ್ತಾನೆ. ಇಂಥ ಸಾಕಷ್ಟು ಘಟನೆಗಳು ದಿನಂಪ್ರತಿ ನಮ್ಮ ಸಮಾಜದಲ್ಲಿ ಜರುಗುತ್ತವೆ. ಇವುಗಳನ್ನೇ ಎತ್ತಿಕೊಂಡು ಕವಿ ಸಮಾಜ ತಿದ್ದುವ ಕಾರ್ಯವನ್ನು ತನ್ನ ಕಾವ್ಯಗಳ ಮೂಲಕ ಮಾಡಿದ್ದಾನೆ.

ಅನಿಷ್ಟ ಸಂಪ್ರದಾಯಗಳು :

ಕನ್ನಡದ ಅನೇಕ ಸಂತ, ಶರಣರ ಹಾಗೂ ಕವಿಗಳು ದೇಶಕ್ಕೆ ಅಂಟಿದ ಅನಿಷ್ಟ ಪದ್ಧತಿಗಳ ಕುರಿತು ಗೀತೆಗಳನ್ನು ರಚಿಸಿದ್ದಾರೆ. ಒಬ್ಬ ವ್ಯಕ್ತಿಯ ದುರ್ನನಡತೆಯಿಂದ ದೇಶದ ಪ್ರಗತಿಗೆ ಹೇಗೆ ಮಾರಕವಾಗುತ್ತದೆ ಎಂಬುದನ್ನು ತಮ್ಮ ಕಾವ್ಯಗಳ ಮೂಲಕ ಚಿತ್ರಿಸಿದ್ದಾರೆ.

ಇಂತಹ ದುಷ್ಟ ಗುಣಗಳಿಂದ ಜನರನ್ನು ದೂರ ಮಾಡಲು ಪ್ರಯತ್ನಿಸಿದ್ದಾರೆ. ಸಮಾಜಕ್ಕೆ ಅಂಟಿದ ಇಂತಹ ಸಂಪ್ರದಾಯಗಳನ್ನು ಕಿತ್ತೊಗೆಯಲು ಅಲಭೈರಿ ಸಾಕಷ್ಟು ಪದಗಳನ್ನು ರಚಿಸಿದ್ದಾರೆ. "ಹೊಲೆಯರು ಯಾರು?" ಎನ್ನುವ ಪದ್ಯದಲ್ಲಿ "ಅಸ್ಪೃಶ್ಯತೆ" ಯನ್ನು ಕುರಿತು ಚಿತ್ರಿಸಿದ್ದಾನೆ.

"ಹೊಲೆಯರು ಇವರು ಹೊಲೆಯರು
ಹೊಲೆಯ ಕುಲದೊಳು ಹುಟ್ಟಿ ಬಂದವರು ॥ಪ॥
ಪಂಚ ಭೂತಕದೊಳು ಜಾತವಾದ
ಸಪ್ತ ಧಾತುಗಳಿಗೆ ಮನ ಸೋತು ತಿರುಗುವರೆಲ್ಲಾ ॥೧॥
ಹಾರೂಗೇರಿಯೊಳು ಧೀರ ಸದ್ಗುರು ರಾಜಾ ತೋರಿದ
ಅನುಭವ ಸೇರಲಾರದವರು ಹೊಲೆಯರು
ಇವರು ಹೊಲೆಯರು ॥೨॥"[೪]

ಅಲಭೈರಿಯ ದೃಷ್ಟಿಯಲ್ಲಿ ಹೊಲೆಯರ ಕುಲದಲ್ಲಿ ಹುಟ್ಟಿದವರು ಹೊಲೆಯರಲ್ಲ. ವಿಷಯಾದಿ ಸುಖಗಳಿಗೆ ಮನ ಸೋತು ತಿರುಗುವರೆಲ್ಲ ಹೊಲೆಯರು. ಹಾರೂಗೇರಿಯ ಅಲಭೈರಿ ತೋರಿದ ಅನುಭವವನ್ನು ಸೇರಲಾರದವರು ಹೊಲೆಯರು ಎಂದು ನುಡಿಯುವನು. ಈ ಪದ್ಯ ದಾಸರ "ಹೊಲಸು ತಿನ್ನುವವನೆ ಹೊಲೆಯ" ಎನ್ನುವ ಕೀರ್ತನೆಯನ್ನು ಸ್ಮರಿಸುತ್ತದೆ. ಅದಕ್ಕಾಗಿ ಪ್ರತಿಯೊಬ್ಬ ಪ್ರಜೆಯು ಆ ಜಾತಿ ಶ್ರೇಷ್ಠ ಈ ಜಾತಿ ಶ್ರೇಷ್ಠವೆಂದು ಜಗಳವಾಡದೆ ಮಾನವೀಯತೆಯಿಂದ ಬಾಳಬೇಕು. ಸಾಮರಸ್ಯದ ತತ್ವದ ಅಡಿಯಲ್ಲಿ "ಸರ್ವರಿಗೂ

ಸಮಪಾಲು ಸರ್ವರಿಗೂ ಸಮಬಾಳು" ಎಂದು ನಡೆದು ದೇಶದ ಪ್ರಗತಿಗೆ ಕಾರಣರಾಗಬೇಕು ಎಂದು ಕವಿ ತಿಳಿಸುತ್ತಾನೆ.

೬.೨ ಸಾಂಸ್ಕೃತಿಕ ಮೌಲ್ಯ :

ಅಲಭ್ಯೆರಿ ರಚಿಸಿದ ಸಾಹಿತ್ಯದಲ್ಲಿ ಸಾಂಸ್ಕೃತಿಕ ಮೌಲ್ಯಗಳಿವೆ. ಇವುಗಳಲ್ಲಿ ದೈವದ ಆರಾಧನೆ, ಸೃಷ್ಟಿಯ ಹುಟ್ಟು, ರಾಷ್ಟ್ರಪ್ರೇಮ, ಭಕ್ತಿ ನಿರೂಪಣೆ, ಶಿಕ್ಷಣದ ಮಹತ್ವ, ಪೌರಾಣಿಕ ದಾಖಲೆ ಇನ್ನೂ ಅನೇಕ ಬಗೆಗಳಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ.

ದೈವದ ಆರಾಧನೆ :

ಮಾನವನ ದಿನನಿತ್ಯದ ಚಟುವಟಿಕೆಗಳು ಆರಂಭವಾಗುವುದು ದೈವದ ಆರಾಧನೆಯಿಂದಲೇ ದೇವರ ಸ್ತುತಿಗಳನ್ನು, ಸ್ತೋತ್ರಗಳನ್ನು ಪಠಿಸುವುದು ಸಾಮಾನ್ಯವಾಗಿತ್ತು. ಇದರ ಮುಖ್ಯ ಉದ್ದೇಶ ತಾವು ಕೈಗೊಳ್ಳುವ ಯಾವುದೇ ಕಾರ್ಯವು ವಿಘ್ನರಹಿತವಾಗಿರಲೆಂದೆ. ಹಾಗೆಯೇ ಅಲಭ್ಯೆರಿಯ ಸಾಹಿತ್ಯವೂ ಕೂಡಾ ಶಿವ-ಪಾರ್ವತಿ, ಗಣಪತಿ, ಶಕ್ತಿದೇವತೆ, ದುರ್ಗೆ, ಶಾರದೆ, ಆದಿಶಕ್ತಿ, ಜಿನಪತಿ ಮುಂತಾದ ದೇವಾನುದೇವತೆಗಳನ್ನು ಕುರಿತು ಪ್ರಾರ್ಥನಾ ಪದ್ಯಗಳನ್ನೂ ಒಳಗೊಂಡಿದೆ.

"ಗಣನಾಥನೆ ಪಾಲಿಸೆನ್ನನು ಫಣಿಧರಸುತ
ಸದ್ಗುಣ ಮಣಿ ಶ್ರೀ ದಯಾನಿಧೆ ।ಪ।
"ಕರಿಮುಖ ನಿಮ್ಮ ಚರಣ ಪೂಜಿಸಿ। ವರವ ಬೇಡುವೆ
ದುರಿತ ನಾಶನೆ। ಪರಮ ತೋಷ ತೋರಿಸೊ ಬೇಗನೆ
ಸುರನರನುತ ಕರುಣಾಕರ ಶ್ರೀ ದಯಾನಿಧಿಯೇ।೧।"[೨]

ಈ ನುಡಿಯಲ್ಲಿ ಅಲಭ್ಯೆರಿ ಗಣಪತಿಯ ವಿವಿಧ ರೂಪಗಳನ್ನು ಚಿತ್ರಿಸಿದ್ದಾನೆ. ವಿಘ್ನವಿನಾಶಕನಾದ ವಿಘ್ನೇಶ್ವರನನ್ನು ಅನನ್ಯ ಭಕ್ತಿಯಿಂದ ಆರಾಧಿಸುತ್ತ ನೆಮ್ಮದಿಯ ಬದುಕು ದಯಪಾಲಿಸು ಎಂದು ಬೇಡಿಕೊಳ್ಳುತ್ತಾನೆ.

"ತ್ವರೆಬಾರೆ ಶಾರದಾಂಬೆ। ಕರುಣಾಕಾರೆ ಜಗದಾಂಬೆ
ಪರಮ ದಯಾಘನ ದುರಿತ ವಿನಾಶಿನಿಯೆ ॥ಪ॥
ತೋರಿಸು ಬೇಗನೆ ತ್ರಿಗಜ ಭರಿತೆ।
ವರವನ್ನೀಯುತ ಪ್ರೇಮದಿ ಸುಮತೆ।
ಚರಣವು ಪೂಜಿಪೆ ವರ ಗುಣ ಮಾತೆ ।
ನಿರಾಭಾರಿಯೆ ನಿರುಪಮ ಚರಿತೆ ।೧।"[೩]

ವಿದ್ಯಾದೇವತೆಯಾದ ಶಾರದೆಯ ಸ್ತುತಿ ಇಲ್ಲಿದೆ. ಭಕ್ತಿಯಿಂದ ನಿನ್ನ ಪಾದ ಪೂಜೆ ಮಾಡಿ ವರವ ಕೇಳುವೆ ದಯಪಾಲಿಸು ಎಂದು ಕೇಳಿಕೊಳ್ಳುತ್ತಾನೆ. ಹೀಗೆ ಅಲಭ್ಯೆರಿ ತತ್ವ ಪದಗಳಲ್ಲಿ ತಮ್ಮ ಇಷ್ಟ ದೇವತೆ, ಶಾರದಾಂಬೆ, ಪಾಂಡುರಂಗ, ಜಗದಾಂಬಾ ಇನ್ನೂ ಹಲವು ದೇವತೆಗಳ ಕುರಿತು ವಿವಿಧ ಸ್ತುತಿ ಪರ ಪದಗಳನ್ನು ರಚಿಸಿದ್ದಾನೆ.

ಕನ್ನಡಾಭಿಮಾನ :

ಕನ್ನಡದ ಅನೇಕ ಕವಿಗಳು ಕನ್ನಡ ಭಾಷೆಯ ಶ್ರೇಷ್ಠತೆಯನ್ನು ಸಾರುವ ಅನೇಕ ಗೀತೆಗಳನ್ನು ರಚಿಸಿದ್ದಾರೆ. ಅಲಭ್ಯೆರಿಯೂ ಸಹ ಕನ್ನಡ ಭಾಷೆಯ ಶ್ರೇಷ್ಠತೆ ಭಾಷೆ ಬೆಳೆದು ಬಂದ ಬಗೆ, ಅದರ ಗಡಿ, ಕವಿ ಪರಂಪರೆ, ಗ್ರಂಥ ಸಂಪತ್ತು ಮುಂತಾದ ಸಂಗತಿಗಳನ್ನು ತನ್ನ ಪದ್ಯದಲ್ಲಿ ವರ್ಣಿಸಿದ್ದಾನೆ. ಈತನ "ಹಾರಿಸಿರಿ ಕನ್ನಡ ಧ್ವಜವನು" ಈ ಗೀತೆ ಕವಿಯ ಕನ್ನಡಾಭಿಮಾನವನ್ನು ಮೆರೆದ ಪದ್ಯ

"ಹಿಂದು ಮಾತೆಯ ದಿವ್ಯ ಮಂದಿರದೊಳು ಮೂಲ
ಬಂಧುಗಳೆನ್ನದ ದ್ರಾವಿಡರು
ಒಂದೇ ಕನ್ನಡ ವಾಙ್ಮಯ ನಿಷ್ಠರು
ಅಂದಿನಿಂದಿಗೆರಡು ಸಹಸ್ರವರ್ಷಾದವು।
ಅಂದವಗೆಡದೆಂದು ಬಂದಿಹುದು । ಕೇಳರಿ ಸುಜ್ಞರೆ ಗುಣ ಪ್ರಜ್ಞರೆ॥"[೭]

ಕನ್ನಡ ಭಾಷೆಗೆ ದ್ರಾವಿಡರೇ ಮೂಲ ಪುರುಷರು. ಕನ್ನಡ ಸಾಹಿತ್ಯ ಶ್ರೇಷ್ಠವಾದದ್ದು. ಇದಕ್ಕೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಅಷ್ಟು ಗಟ್ಟಿತನವನ್ನು ಪಡೆದುಕೊಂಡ ಭಾಷೆ ಕನ್ನಡ. ಕನ್ನಡ ನಾಡಿನ ಬಂಧುಗಳೇ ಕೇಳಿರಿ ಕನ್ನಡ ಭಾಷೆ ಅಷ್ಟು ಸಂಪದ್ಭರಿತವಾದ ಸಾಹಿತ್ಯ ರಾಶಿಯನ್ನು ಪಡೆದುಕೊಂಡಿದೆ. ಅದು ಮೌಲ್ಯವನ್ನು ಕಳೆದುಕೊಳ್ಳುವುದಿಲ್ಲ ಎಂದು ಕವಿ ವಿವರಿಸುತ್ತಾನೆ.

"ರಾಮೇಶ್ವರದಿಂದ ಸಹ್ಯಾದ್ರಿಯವರೆಗೈದದು।
ಪೂರ್ಣ ಭರಿತ ಕನ್ನಡ ಸಾಮ್ರಾಜ್ಯವಿದು ।
ವರ ಕರ್ನಾಟಕವೆಂಬ ಬಿರುದವ
ಧರಿಸಿದ್ದು ಸುಜ್ಞರೆ ಗುಣ ಪ್ರಜ್ಞರೆ"[೮]

ಕವಿ ಕನ್ನಡ ನಾಡಿನ ಸೀಮೆಯನ್ನು ರಾಮೇಶ್ವರದಿಂದ – ಸಹ್ಯಾದ್ರಿಯವರೆಗೆ ಗುರುತಿಸಿ ಇದು ಕರ್ನಾಟಕ ಎಂಬ ಹೆಸರು ಧರಿಸಿಕೊಂಡು ಖ್ಯಾತಿ ಪಡೆದಿದೆ ಎನ್ನುವನು. ಚಾಲುಕ್ಯರು

ಈ ನಾಡಿನ ಮಹಾಪುಣ್ಯವಂತ ಅರಸರು. ಕನ್ನಡ ಕವಿಗಳಿಗೆ ಆಶ್ರಯಕೊಟ್ಟು ಗೌರವಿಸಿದವರು ಎಂದು ಕನ್ನಡದ ಕಳಕಳಿಯನ್ನು ಹಾಗೂ ಪ್ರೇಮವನ್ನು ವ್ಯಕ್ತಪಡಿಸಿದ್ದಾನೆ.

ಕನ್ನಡಕ್ಕೆ ಒದಗಿದ ದುರ್ದೆಸಿ, ಅಪಾಯ, ಅನ್ಯಾಯಗಳನ್ನು ಇಲ್ಲಿ ಸೂಚಿಸಲಾಗಿದೆ.

"ಮುರಿದು ಕನ್ನಡ ಭಾಷೆಯ ತುರುಕಿದರು
ಮರಾಠಿಯ ಸುಜ್ಞರೆ ಗುಣ ಪ್ರಜ್ಞರೆ
ಇದು ಉತ್ತರ ಕರ್ನಾಟಕ್ಕಿದಕೆ ಮಹಾರಾಷ್ಟ್ರವೆಂಬ
ಬದಲಿನಾಮವನ್ನಿಟ್ಟುಕೊಂಡವರು"[೯]

ಭಾಷಾವಾರು ಪ್ರಾಂತದ ಮೇಲೆ ಅಖಂಡವಾದ ಕನ್ನಡ ನೆಲವನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ಎಂದು ವಿಭಾಗಿಸಿದ್ದರು. ಮರಾಠಿ ಭಾಷೆಯನ್ನು ಮಾತನಾಡುವವರನ್ನು ಮರಾಠಿಗರೆಂದೂ, ಅವರ ರಾಜ್ಯವನ್ನು ಮಹಾರಾಷ್ಟ್ರವೆಂದು ಕರೆದರು. ಹಾಗೆ ಕನ್ನಡ ಭಾಷೆಯನ್ನು ಮಾತನಾಡುವವರು ಕರ್ನಾಟಕದವರೆಂದು ವಿಭಾಗ ಮಾಡಿ ಆಳತೊಡಗಿದರು.

"ಸ್ವಭಾವ ಕನ್ನಡದಭಿಮಾನವಿಲ್ಲದ।
ಅಭಿರುಚಿ ಅನ್ಯದೇಶಿಕರೊಳಗೆ ಹುಟ್ಟಿ
ಶುಭಗೇಡಿಗಳು ನಮ್ಮ ನಮ್ಮೊಳಗೆ ಇಟ್ಟು
ಅಭಿಲಾಷೆ ಇಂಗ್ಲೀಷ ಮರಾಠಿಗಳಿಗೆ।"[೧೦]

ಕೆಲ ಕಿಡಗೇಡಿಗಳು ಕನ್ನಡ ಅಭಿಮಾನವನ್ನು ಬಿಟ್ಟು ಇಂಗ್ಲೀಷ ಹಾಗೂ ಮರಾಠಿ ಭಾಷೆಗಳಿಗೂ ಸೇರಿಕೊಂಡರು. ಆದರೆ ಇದರಿಂದ ಅವರು ಯಾವ ಲಾಭವು ಪಡೆಯದೆ ಹೋದರು.

"ಇಂದು ಹಾರೂಗೇರಿ ಶಾಲೆಗೊಂದೊಲವಿರಲಿ
ಗೋವಿಂದ ಮಹಮ್ಮದ ಪ್ರಭು ಮಾಸ್ತರರಿಗೆ।
ಧನ್ಯವಾದನರ್ಪಿಸುವೆ ನಾನಿಂದಿಗೆ।
ನಮ್ಮ ಸುಂದರ ಕನ್ನಡ ತಾಯಿಯಮಗೆ ಬಂದು
ರಕ್ಷಿಸಬೇಕೆಂದು ಬೇಡಿಕೊಂಬೆ ಸುಜ್ಞರೆ ಗುಣ ಪ್ರಜ್ಞರೆ."[೧೧]

ಕೊನೆಗೆ ಅಲಭೈರಿ ಹಾರೂಗೇರಿಗೆ ಶಿಕ್ಷಕರಾಗಿ ಆಗಮಿಸಿದ ಗೋವಿಂದ, ಮಹಮ್ಮದ ಹಾಗೂ ಪ್ರಭು ಮಾಸ್ತರರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಾನೆ. ನಮ್ಮ ಸುಂದರ ಕನ್ನಡ ತಾಯಿ

ನಮಗೆ ಬಂದು ನಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾನೆ. ಹೀಗೆ ಕವಿ ತನ್ನ ಸಾಹಿತ್ಯದಲ್ಲಿ ಕನ್ನಡ ಅಭಿಮಾನವನ್ನು ವ್ಯಕ್ತಪಡಿಸಿರುವನು.

೬.೩ ತಾತ್ವಿಕ ವಿವೇಚನೆ :

ತತ್ವಕ್ಕೆ ಸಂಬಂಧಿಸಿದ ಮೌಲ್ಯಗಳು ತಾತ್ವಿಕ ಮೌಲ್ಯಗಳು. ಅವು ಅಂತರಂಗದ ಸುಚಿತ್ವಕ್ಕೆ ಸಂಬಂಧ ಪಟ್ಟವುಗಳು. ತಾತ್ವಿಕತೆ ಅನುಭಾವವನ್ನು ಹೊಂದಿರುವಂತಹದ್ದು. ಅಲಭ್ಯೆರಿಯ ಅನೇಕ ಪದಗಳನ್ನು ಗಮನಿಸಿದಾಗ ಒಂದೊಂದು ನೀತಿಯನ್ನು ತಿಳಿಸುತ್ತವೆ. ಕವಿಯ ಮುಖ್ಯ ಉದ್ದೇಶವೆ ಶುಚಿಯಾದ ಸಮಾಜದ ನಿರ್ಮಾಣ. ಕವಿ ಮಾನವೀಯ ಬದುಕನ್ನು ಸಾಗಿಸಿದವರು ಹಾಗೂ ಬಯಸಿದವರು. ಮನುಷ್ಯನ ದೌರ್ಬಲ್ಯಗಳನ್ನು ಕವಿ ಕಂಡವನು.

> "ತೊಗಲ ಮಲ್ಯಾಗಿನ ಹಾಲು ಕುಡಿದು ನೀವು
> ಶೀಲ ಮಾಡತೀರಿ ಸರ್ವರೆಲ್ಲಾ
> ತೊಗಲಿನ ಆಟಾ ತಿಳಿಯದು ತಮ್ಮಾ
> ತಗಲ ಮಾತ ತುಸು ಚೂರಿಲ್ಲಾ
> ತೊಗಲಿನೊಳಗ ತೊಗಲು ಹುಟ್ಟಿತಲ್ಲಾ
> ಕಾಮನಾಟ ಕೇಳೋ ಕಡೆ ಮೊದಲಾ॥"[೧೨]

ಮನುಷ್ಯ ಇಂದು ಹೊಂದಾಣಿಕೆ ಇಲ್ಲದ ಬದುಕನ್ನು ಸಾಗಿಸುತ್ತಿರುವನು. ಶ್ರೇಷ್ಠ ಕನಿಷ್ಠ ಎಂಬ ವಾದದಲ್ಲಿ ಹೋರಾಡುತ್ತಿರುವನು. ತೊಗಲ ಮಲಿಯ ಹಾಲನ್ನು ಕುಡಿದು ಒಂದು ತೊಗಲು ಇನ್ನೊಂದು ತೊಗಲನ್ನು ಕಡೆಗಣಿಸುತ್ತದೆ. ಅದಕ್ಕಾಗಿ ಅಲಭ್ಯೆರಿ ಮನುಕುಲಕ್ಕೆ ಈ ತೊಗಲ ನಂಬಿ ಕೆಡುಕರಾಗಬೇಡಿರಿ ಎಂದು ಸಲಹೆ ನೀಡಿರುವನು. ಶರೀಫರ ಈ ಕೆಳಗಿನ ಪದ್ಯ ಅಲಭ್ಯೆರಿಯ ಮೇಲೆ ಗಾಢ ಪ್ರಭಾವ ಬೀರಿದಂತೆ ಕಾಣುತ್ತದೆ.

> "ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ
> ಶೀಲ ಮಾಡತೀರಿ ನಾಡೆಲ್ಲಾ ತೊಗಲಿನ ಆಟಾ
> ತಿಳಿಯದು ತಮ್ಮಾ ತಗಲು ಮಾತು ಒಂದು ಚೂರಿಲ್ಲಾ । ಅ.ಪ॥"[೧೩]

ಪದ (೭೪), ರಲ್ಲಿ

> "ಮೂರು ಲೋಕಕ್ಕೆ ಗುರುವೆ ಆಧಾರಾ
> ಅಲ್ಲಾಮೌಲಾಲಿ ಮುಖ್ಯ ಫೀರಾ ॥ಪ॥
> ಸರ್ವ ಸಾಕ್ಷಿ ಒಬ್ಬ ದೇವರಾ
> ಏಕ ಅಲ್ಲಾ ನಾಮ ಹಜಾರಾ॥೧॥"[೧೪]

ಕವಿ ಬಹುದೇವೋಪಾಸನೆಯನ್ನು ಖಂಡಿಸುತ್ತಾನೆ. ಮನುಷ್ಯ ಇಂದು ನೂರೆಂಟು ದೇವರುಗಳನ್ನು ಪೂಜಿಸುತ್ತ ವ್ಯರ್ಥ ಕಾಲ ಕಳೆಯುತ್ತಿರುವನು. ಮುಸಲ್ಮಾನರು ಅಲ್ಲಾ ಎಂದು ಹಿಂದುಗಳು ಈಶ್ವರ ಎಂದು ಪೂಜಿಸುವರು. ಎಲ್ಲ ದೇವರುಗಳ ತಿರುಳು ಒಂದೆಯಾಗಿರುವುದರಿಂದ ಕವಿ ಬಹುದೇವರನ್ನು ಪೂಜಿಸದಿರಲು ಹೇಳುವನು.

"ಏತಕ್ಕೆ ಜಪತಪ ಸಾಧನ ಮಾಡುವಿ
ಸೂತಕ ರೂಪವನತಿಗಳೆದು
ಅನಂತ ಕ್ಷೇತ್ರ ತಿರುಗುವದೇತಕೆ
ಸ್ವಾನುಭವದ ಸುಖವನು ಸವಿದು"[೧೫]

ಇಲ್ಲಿ ಡಾಂಬಿಕ ಭಕ್ತಿಯನ್ನು ಕವಿ ವಿಡಂಬಿಸುವನು. ಮನಸ್ಸಿನಲ್ಲಿ ಕಲ್ಮಶವನ್ನು ತುಂಬಿಕೊಂಡು ಜಪತಪ ಮಾಡಿದರು ಪ್ರಯೋಜನವಿಲ್ಲ. ಹಲವಾರು ತೀರ್ಥಕ್ಷೇತ್ರಗಳನ್ನು ಸುತ್ತಿ ದೇವರ ದರ್ಶನ ಮಾಡಿದರೂ ಉಪಯೋಗವಿಲ್ಲ. ಮನಸ್ಸನ್ನು ನಿರ್ಮಲಗೊಳಿಸಿಕೊಂಡು ಹರಗಿರಿಯ ಗುರು ಚನ್ನವೃಷಭನನ್ನು ಪೂಜಿಸಲು ಹೇಳುವನು. ಹೀಗೆ ಕವಿ ಇನ್ನೂ ಅನೇಕ ಪದಗಳು ತಾತ್ವಿಕ ಮೌಲ್ಯಗಳನ್ನು ನಿರ್ಧರಿಸುವಲ್ಲಿ ಸಾಕ್ಷಿಗಳಾಗಿವೆ.

೬.೪ – ಸಾಹಿತ್ಯಿಕ ಮೌಲ್ಯ :

ಅಲಭ್ಯೆರಿ ರಚಿಸಿದ ಒಟ್ಟು ಸಾಹಿತ್ಯವನ್ನು ಆ ಸಾಹಿತ್ಯದ ವಸ್ತು ತಂತ್ರ, ರಸ, ಭಾಷೆ, ಅನುಕರಣವಾಚಿ, ಅನ್ಯಭಾಷಾ ಪದಗಳು ..... ಎಂದು ವರ್ಗೀಕರಿಸಿಕೊಂಡು ಈತನ ಸಾಹಿತ್ಯಿಕ ಮೌಲ್ಯವನ್ನು ಗುರುತಿಸಲಾಗುತ್ತದೆ.

ವಸ್ತು : – ಯಾವುದೇ ಒಂದು ಸಾಹಿತ್ಯ ತನ್ನದೇ ಆದ ಗುರಿ – ಉದ್ದೇಶಗಳನ್ನು ಒಳಗೊಂಡಿರುತ್ತದೆ. ಆ ಗುರಿ – ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಆ ಪರಿಸರದಲ್ಲಿ ದೊರೆಯುವ ಹಲವಾರು ವಸ್ತುಗಳನ್ನೇ ಸ್ವೀಕರಿಸುತ್ತದೆ. ಹೀಗೆ ಅಲಭ್ಯೆರಿ ರಚಿಸಿದ ಸಾಹಿತ್ಯವು ಜನರಲ್ಲಿ ರಾಷ್ಟ್ರ ಪ್ರೇಮ, ಅಧ್ಯಾತ್ಮದ ಒಲುವು ಹಾಗೂ ಜಿಡ್ಡುಗಟ್ಟಿದ ಸಮಾಜವನ್ನು ಪುನಃ ನಿರ್ಮಿಸುವ ಕನಸನ್ನು ಕಂಡು ಆ ನಿಟ್ಟಿನಲ್ಲಿ ಸಾಹಿತ್ಯ ಕೃಷಿಗೈದಿದ್ದಾನೆ.

ದೈವ ಭಕ್ತಿಗೆ ಪೂರಕವಾಗಿ ಪ್ರಾರಂಭದಲ್ಲಿ ಕವಿ ಶಕ್ತಿ, ದುರ್ಗೆ, ಗಣಪತಿ, ಶಿವ, ಅಂಬೆ ಮುಂತಾದ ದೇವಾನುದೇವತೆಗಳನ್ನು ಕುರಿತಾದ ಲಾವಣಿಗಳನ್ನು, ತತ್ವಪದಗಳನ್ನು ಹಾಗೂ ಜಿನಸ್ತುತಿಗಳನ್ನು ರಚಿಸಿದ್ದಾನೆ. ಅವುಗಳ ಮೂಲಕ ಜನರನ್ನು ದೈವಿ ಭಕ್ತಿಯಲ್ಲಿ ಲೀನಗೊಳಿಸುವುದು ಅವನ ಉದ್ದೇಶವಾಗಿರಬೇಕು. ಜೊತೆಗೆ ಜನರಲ್ಲಿ ನೈತಿಕ ಹಾಗೂ ಅಧ್ಯಾತ್ಮಿಕ ಅಂಶಗಳನ್ನು ತುಂಬುವುದು ಕವಿಯ ಆಶೆಯೂ ಇರಬಹುದು.

"ಕರಿಮುಖ ನಿಮ್ಮ ಚರಣ ಪೂಜಿಸಿ ।
ವರವ ಬೇಡುವೆ ದುರಿತ ನಾಶನೆ॥
ಪರಮ ತೋಷ ತೊರಿಯೋ ಬೇಗನೆ
ಸುರನರಸುತ ಕರುಣಾಕರ ಶ್ರೀ ದಯಾನಿಧೆ।"೧೭

ಇನ್ನು ಹರದೇಶಿ – ನಾಗೇಶಿ ಲಾವಣಿಗಳಲ್ಲಿ ಅಲಭೈರಿ ಪ್ರಕೃತಿ ಪುರುಷ ಶಿವ–ಪಾರ್ವತಿ ಗಂಡು–ಹೆಣ್ಣು, ಬ್ರಹ್ಮಾಂಡ–ಪಿಂಡಾಂಡಗಳ ವಸ್ತುವಿನಿಂದ ಈ ಸೃಷ್ಟಿ ನಿರ್ಮಾಣದ ಮೂಲವನ್ನು ತಿಳಿಸಿರುವನು. ಪೌರಾಣಿಕ, ಐತಿಹಾಸಿಕ ಘಟನೆಗಳ ಮೂಲಕ ನೀತಿ – ಭಕ್ತಿಯ ಅಂಶಗಳನ್ನು ಚಿತ್ರಿಸಿರುವನು. ಅಜ್ಞಾನ, ಅಂಧಕಾರ ಹಾಗೂ ಅನೀತಿಗಳಿಂದ ಸಮಾಜದ ಸ್ವಾಸ್ಥ್ಯ ಹದಗೆಟ್ಟಿತು. ಕವಿ ತನ್ನ ಸಾಹಿತ್ಯದ ಮೂಲಕ ಸಮಾಜದ ಮೌಢ್ಯತೆಯನ್ನು ಕಿತ್ತೊಗೆಯಲು ಪ್ರಯತ್ನಿಸಿರುವನು.

ಬ್ರಿಟಿಷರ ದಾಸ್ಯಕ್ಕೆ ಒಳಗಾದ ಭಾರತ ಹಲವಾರು ವರ್ಷ ತತ್ತರಿಸಿತು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮಿಸಿದ ಮಹಾತ್ಮಾ ಗಾಂಧಿಜಿ ಸತ್ಯಾಗ್ರಹ ಹಾಗೂ ಸ್ವಾತಂತ್ರ್ಯದ ಕಲ್ಪನೆಯನ್ನು ಜನರಲ್ಲಿ ಬಿತ್ತಿದರು. ಅವರ ಕಲ್ಪನೆಗೆ ಪುಷ್ಟಿಕೊಡುವ ನಿಟ್ಟಿನಲ್ಲಿ ಹಲವಾರು ಕವಿಗಳು ಸ್ವಾತಂತ್ರ್ಯವನ್ನು ಮುಂದಿಟ್ಟುಕೊಂಡು ಜನತೆಯಲ್ಲಿ ರಾಷ್ಟ್ರಪ್ರಜ್ಞೆ ಹಾಗೂ ದೇಶಿಯತೆಯನ್ನು ಒಡಮೂಡಿಸಲು ಪ್ರಯತ್ನಿಸಿರುವರು. ಆ ನಿಟ್ಟಿನಲ್ಲಿ ಕವಿ ಅಲಭೈರಿಯೂ ಸಹ ಅಸ್ಪೃಶ್ಯತಾ ನಿವಾರಣೆ, ತಂಬಾಕು, ಗುಟಕಾ, ಚಹಾಚಾಳಿ, ಮೂಲೋದ್ಯೋಗ, ಶಿಕ್ಷಣ ಮುಂತಾದ ವಸ್ತುಗಳನ್ನು ತಮ್ಮ ಸಾಹಿತ್ಯ ರಚನೆಗೆ ಬಳಸಿರುವನು. ಜನರ ಮೌಢ್ಯತೆ ದೇಶದ ಪ್ರಗತಿಯನ್ನು ಮುಖ್ಯವಾಗಿ ಇಟ್ಟುಕೊಂಡು ತನ್ನ ಕಣ್ಣ ಮುಂದೆ ಕಾಣುವ ವಸ್ತುಗಳನ್ನೇ ಆಯ್ದುಕೊಂಡು ಸಾಹಿತ್ಯ ರಚಿಸಿ ತಮ್ಮ ಉದ್ದೇಶ ಸಾಧಿಸಿರುವನು.

- **ತಂತ್ರ :–** ಜನಪದ ಗೀತ ಪ್ರಕಾರಗಳಲ್ಲಿ ಲಾವಣಿ ರಚನೆಯ ತಂತ್ರಗಾರಿಕೆಯನ್ನು ಅನುಸರಿಸುವುದು ಗೋಚರವಾಗುತ್ತದೆ. ಅಲಭೈರಿ ಲಾವಣಿಯನ್ನು ಮುಖ್ಯವಾಗಿ ಪಲ್ಲ ಚೌಕುಗಳೆಂದು ವಿಭಾಗಿಸುತ್ತಾನೆ. ಪಲ್ಲ ಮುಕ್ತಾಯಗೊಂಡ ತರುವಾಯ ಪ್ರಾರಂಭವಾಗುವುದು. ಚೌಕ ಒಂದೊಂದು ಲಾವಣಿ ೬–೭ ಚೌಕುಗಳ ವರೆಗೆ ವ್ಯಾಪಿಸುತ್ತದೆ. ಅನುಭಾವನ್ನು ನೇರವಾಗಿ ಬಿಂಬಿಸುವ ಲಾವಣಿಗಳು ಮಾತ್ರ ಮೂರು ಚೌಕುಗಳಲ್ಲಿ ಮುಕ್ತಾಯಗೊಳ್ಳುವುದು. ಸಾಮಾನ್ಯ ಕತೆಯಂಥ ದೀರ್ಘ ಕ್ರಿಯೆ ಇದ್ದರೆ ಒಂದೊಂದು ಚೌಕೂ ಸುದಿರ್ಘವಾಗಿ ವಿವರಣೆಗೆ ಅವಕಾಶ ನೀಡುತ್ತದೆ. ಪ್ರತಿಯೊಂದು ಚೌಕದಲ್ಲಿ ಚಾಲ, ಕೂಡಪಲ್ಲ [ಕೂಡ್ನುಡಿ] ದುಡುಕಿ, ಶ್ಲೋಕ ಎಂಬ ಹಂತಗಳನ್ನು ಗುರುತಿಸುತ್ತಾರೆ. ಈ ಎಲ್ಲ ಅಂಗಗಳು ಪ್ರತಿಯೊಂದು ಲಾವಣಿಯಲ್ಲಿ ಬರಬೇಕೆಂಬ ನಿಯಮವಿದ್ದಂತೆ ತೋರುವುದಿಲ್ಲ .

ಕವಿಯು ತನ್ನ ಲಾವಣಿಗಳಲ್ಲಿ ಪಲ್ಲವನ್ನು ಪ್ರಮುಖವಾಗಿ ಬಳಸಿರುವುದನ್ನು ಕಾಣುತ್ತೇವೆ. ಚೌಕದ ಅಂಗಗಳಾದ ಕೂಡ್ನುಡಿ ಮತ್ತು ಆಗಮಗಳನ್ನು ತಪ್ಪದೆ ಬಳಸಿರುವನು. ಪ್ರತಿಯೊಂದು ಅಂಗಕ್ಕೂ ಒಂದೊಂದು ಉದಾಹರಣೆ ನೋಡಬಹುದು.

"ನರಜನ್ಮವೆಂಬುದು ಕೇಳ। ದೊಡ್ಡದಿರುವದು ಬಹಳ ।
ವೇದಾಗಮಗಳ । ಹೇಳುವುವು ಸಾರಿ।
ಚಿತ್ತಿಟ್ಟು ಕೇಳದಕ್ಕೆ ಕೆಟ್ಟು ಹೋದಿ ಮಿತಿಮೀರಿ ॥ಪಲ್ಲ॥"[೧೭]

ಪಲ್ಲವು ಹೆಚ್ಚಾಗಿ ಸಭಿಕರನ್ನು ಉದ್ದೇಶಿಸಿಯೇ ಇರುವದು. ವಚನಕಾರರ ವಚನ ಹಾಗೂ ದಾಸರ ಕೀರ್ತನೆಗಳಂತೆ ಲಾವಣಿಯ ಪಲ್ಲದಲ್ಲಿಯೇ ಇಡೀ ಲಾವಣಿಯ ಭಾವ ಒಳಗೊಂಡಿರುವುದು. ಜೊತೆಗೆ ಹಾಡುಗಾರನ ನಮ್ರತೆಯು ಇರುವುದು. ಪಲ್ಲ ಯಾವಾಗಲೂ ಹಾಡಿನ ಪ್ರಾರಂಭಕ್ಕೆ ಬರುವುದು.

(ಚಾಲ) : – ಲಾವಣಿ ಹಾಡಿನ ಪೂರ್ಣ ಸತ್ವವನ್ನು ಹಿಡಿದಿಟ್ಟು ಕೇಳುಗರ ಮನೋಲ್ಲಾಸ ಗಳಿಸುವುದೇ ಚಾಲ. ತುಂಬಿ ತುಂಬಿ ಹರಿಯುವ ನದಿ ಎದುರಿಗೆ ಶಿಖರ ಬಂದಾಗ ಥಟ್ಟನೆ ನಿಂತು ಬೇರೆ ಗತಿ ಪಡೆದಾಗಿನ ರೀತಿಯೇ ಚಾಲವನ್ನು ಪ್ರತಿಬಿಂಬಿಸುತ್ತದೆ." ಪಾದಗಳು ಕಿರಿದಾಗಿರುವುದರಿಂದ ಪ್ರಾಸ ಮೋಡಿ ಬಹು ಬೇಗ ಮನ ಸೆಳೆದುಕೊಳ್ಳುವುದು ಎಂಥ ಸನ್ನಿವೇಶ ಭಾವವನ್ನಾದರೂ ಸತ್ವಯುತವಾಗಿ ನಿರೂಪಿಸಬಲ್ಲದು"[೧೮] ಇದು ಚೌಕದ ಒಂದು ಅಂಗ. ಚಾಲದಿಂದಲೇ ಲಾವಣಿಗೆ ಮೆರಗು ಬರುವುದು.

(ಚಾಲ) "ಹೆಂಣು ಮಂಣು ಹೊನ್ನಿಗೆ ಆಶಾ ಮಾಡಿ।
ತೃಪ್ತಿಹೊಂದಲಿಲ್ಲವೆಂದು ಕೈಗೂಡಿ ॥೧॥
ಅಡವಿಯೊಳು ರಣ ಆಡುವದು ನೋಡಿ।
ನೀರವೆಂದು ಹೋದಿತ ಚಿಗರಿ ಓಡಿ ॥೨॥
ಅಲ್ಲಿ ಸಿಗದಕ್ಕೆ ನೀರು ಮುಖಮಾಡಿ।
ಪ್ರಾಣವೆ ಬಿಟ್ಟಿತು ಬಿಸಲೊಳು ವದರ್‍ಯಾಡಿ॥೩॥"[೧೯]

ಹೀಗೆ ಚಾಲದಲ್ಲಿ ಮೂರು ಸಾಲುಗಳು ಇರಬಹುದು.

ಏರು : – ಅಲಭ್ಯೆರಿ ಕೆಲವೊಂದು ಲಾವಣಿಗಳಲ್ಲಿ ಮಾತ್ರ ಏರು ಬಳಸಿರುವುದನ್ನು ಕಾಣುತ್ತೇವೆ. ಹಾಡನ್ನು ಏರುಗತಿಯಲ್ಲಿ ಹಾಡುವುದರಿಂದ 'ಏರು' ಎಂದು ಕರೆಯುವರು.

(ಏರ) "ಕಳ್ಳ ಭಕ್ತಿಯನು ಕಡೆಗೆ ಮಾಡಿದರೆ ಒಳ್ಳೆ ದೇವರ

ಮೆಚ್ಚೋಣಿಲ್ಲದಕಾ। ಸುಳ್ಳ ಕಷ್ಟ ಪಡಿಯುದು ಸಾಯುತನಕಾ।
ಖೊಟ್ಟಿಗುಣಾ ತಗಿಯಲಿಲ್ಲ ಕಡೆ ತನಕಾ।
ಬಿಟ್ಟ ಕೆಲಸನೆದರಿಟ್ಟ ವ್ಯಸನಕಾ।
ಶಿವ ಶಿವ ಅಂತ ಒಳೆ ಚೀರುದಕಾ। ಶಿವಾಸಿಗೊಣ್ಣಿಲ್ಲದಕಾ।"[೨೦]

೪. ಕೂಡುಪಲ್ಲ : – ಚೌಕದ ಕೊನೆಯ ಹಂತವೇ ಕೂಡ, ಕೂಡ್ನುಡಿ ಅಥವಾ ಕೂಡು ಪಲ್ಲ. ಇದು ಯಾವುದೇ ಅಂಗಕ್ಕೆ ಅಂಟಿಕೊಳ್ಳದೆ ಪ್ರತ್ಯೇಕವಾಗಿ ಪಲ್ಲವನ್ನು ಅನುಸರಿಸುತ್ತದೆ. ಕೂಡು ಪಲ್ಲದ ಸ್ಥಾನ ಯಾವಾಗಲೂ ಚೌಕದ ಕೊನೆಗೆ ಭದ್ರವಾಗಿರುತ್ತದೆ. ಚೌಕದ ಕೊನೆಯ ಸಾಲುಗಳ 'ಪಲ್ಲ' ಕ್ಕೆ ಕೂಡುವುದರಿಂದ 'ಕೂಡುಪಲ್ಲ' ಎಂಬ ಹೆಸರು ಬಳಕೆಯಲ್ಲಿದೆ. ಕೂಡುಪಲ್ಲವು ಸಾಮಾನ್ಯವಾಗಿ ಪಲ್ಲದ ಅರ್ಧದಷ್ಟಿರುತ್ತದೆ.

(ಕೂಡ್ನುಡಿ) "ಅನುಭವದಿಂದಲೆ ಘನ ಗುರು ಪಾದಕ್ಕೆ ಮಣಿಯದ ಜನ್ಮವು ಕನಿಷ್ಠಾ।
ಗುಣವಿಲ್ಲದೆ ಬರೆ ಹಣವುಳ್ಳವನು ಹೆಣದ ಸಮಾನವನತಿ ಭ್ರಷ್ಟಾ (ಚೌಕ)"[೨೧]

ಆಗಮ : ಕವಿ ಅಲಭೈರಿ ತನ್ನ ಪ್ರತಿಯೊಂದು ಪದ್ಯದ (ಲಾವಣಿ, ತತ್ವಪದ, ಕರ್ಬಲ್ / ರಿವಾಯತ್, ಡೊಳ್ಳಿನ ಪದ ...) ಕೊನೆಯಲ್ಲಿ ತನ್ನ ಹೆಸರು, ಊರು, ಗುರು ಹಾಗೂ ಅಧಿದೈವನನ್ನು ಸ್ಮರಿಸಿರುವುದನ್ನು ಕಾಣುತ್ತೇವೆ. ಇದಕ್ಕೆ ಆಗಮ (ಅಂಕಿತ) ಎಂದು ಹೆಸರು. ಇದು ಕೆಲವು ಸಲ ಚಾಲ ಅಥವಾ ಕೂಡುಪಲ್ಲದಲ್ಲಿಯೂ ಬರಬಹುದು.

(ಚಾಲ) "ಅದರಿಂದಲೇ ಸದ್ಗುಣ ಮಹಿಮಾ।
ಮುದದಿಂದೆ ಹೇಳಿದ ಅಲ್ಲಮಾ ॥೧॥
ಅಲಭೈರವನ ಮಾತು ಕೇಳಿ ತಮ್ಮಾ।
ಬಲ್ಲವನು ಆದ ಬಹು ಪ್ರೇಮಾ ॥೨॥
ಹಾರೂಗೇರಿಯೊಳಿರುವದ ನೇಮಾ।
ಸ್ಮರಿಸುತ್ತಲೆ ಸದ್ಗುರು ನಾಮಾ॥೩॥"[೨೨]

➢ **ಏರು – ಇಳು :**

ಅಲಭೈರಿ ಕೆಲವು ಕರ್ಬಲ್ / ರಿವಾಯತ್ ಪದಗಳಲ್ಲಿ 'ಏರು' ವನ್ನು ಕೆಲವು ಪದಗಳಲ್ಲಿ ಏರು ಹಾಗೂ ಇಳು ಎರಡನ್ನೂ ಬಳಸಿರುವುದನ್ನು ಕಾಣುತ್ತೇವೆ. ಕೆಲವು ಪದಗಳಲ್ಲಿ ಏನನ್ನು ಬಳಸದೆ ಇರುವವು. ಇವು ಎಲ್ಲ ಪದಗಳಲ್ಲಿ ಇರಬೇಕೆಂಬ ನಿಯಮವಿದ್ದಂತೆ ಕಾಣುವುದಿಲ್ಲ.

"ಮೂರ್ತಿ ಪೂಜಾ ಮಾಡುವುದಿಲ್ಲ ಮುಸಲ್ಮಾನಾ।
ಡೋಲಿಕಟ್ಟಿ ಕುಣಸಿದ ಯಾವ ದೇವರಂಣಾ॥ಪಲ್ಲ॥
(ಏರ) ಬೈಲರೂಪಕನಂಬಿ ಮಾಡಿದ ಶರಣಾ।
ಬರಿದೆ ದಣಕೊಂಬವಗೆ ಏನು ತೋರದಂಣಾ॥
(ಇಳು) ಹಿಂದು ಧರ್ಮದೊಳಗೆ ಅಲ್ಲ ಮುಸಲ್ಮಾನಾ। ಡೋಲಿ... ॥೧॥"[೨೩]

➢ ಪ್ರಾಸ : –

"ಪ್ರಾಸವಿಲ್ಲದ ಪದವ ತಾಸು ಹಾಡಿದರೇನು ಫಲ" ಎಂಬ ಮಾತು ಪ್ರಾಸಕ್ಕಿರುವ ಮಹತ್ವವನ್ನು ತಿಳಿಸುತ್ತವೆ. ಸಾಮಾನ್ಯವಾಗಿ ಕನ್ನಡದ ಲಾವಣಿಕಾರರು ಲಾವಣಿಯಲ್ಲಿ ಆದಿ ಪ್ರಾಸವನ್ನು ಬಳಸಿರುವುದಿಲ್ಲ. ಅವರು ಹೆಚ್ಚಾಗಿ ಬಳಸಿದ್ದು ಅಂತ್ಯ ಪ್ರಾಸ. ಪಲ್ಲದ ಸಾಲುಗಳಲ್ಲಿದ್ದ ಅಂತ್ಯ ಪ್ರಾಸ, ಚೌಕದಲ್ಲಿಲ್ಲ. ಚೌಕದಲ್ಲಿದ್ದ ಪ್ರಾಸ ಚಾಲದಲ್ಲಿ ಇಲ್ಲ. ಪ್ರತಿ ಘಟ್ಟದಲ್ಲಿಯೂ ಹೊಸದರ ಪ್ರಯೋಗವನ್ನು ಮಾಡಿ ಸಾಹಿತ್ಯದ ಸೊಬಗನ್ನು ಹೆಚ್ಚಿಸಿರುವರು. ಕವಿ ಲಾವಣಿಗಳಲ್ಲಿ ಇದೆ ನಿಲುವನ್ನು ಕಾಣುತ್ತೇವೆ. ಅವನ ಇನ್ನಿತರ ಸಾಹಿತ್ಯ ಪದಗಳಲ್ಲಿ ಆದಿ ಮತ್ತು ಅಂತ್ಯ ಪ್ರಾಸದ ಬಳಕೆ ಹೆಚ್ಚಾಗಿದೆ. ಮಧ್ಯ ಪ್ರಾಸದ ಬಳಕೆ ಕಾಣುವುದಿಲ್ಲ.

ಆದಿ ಮತ್ತು ಅಂತ್ಯ ಪ್ರಾಸಕ್ಕೆ ಉದಾಹರಣೆ : –

"ಗುರುವಿನ ಹೊಂದಿ ಗುಣಗಳ ತಿಳಿಯೊ
ಮರವಿನ ಮಾಯಾ ಪ್ರಪಂಚವು ಅಳಿಯೊ
ಅರವಿನ ಅರಮನೆಯೊಳು ಸುಳಿಯೊ
ಶರಣ ಸೇವಾದಲ್ಲಿ ಹೊತ್ತಗಳಿಯೊ
ಹಾರೂಗೇರಿ ವಾಸನು ಹೀರಿ ಹೊಳಿಯೊ"[೨೪]

ಈ ಪದ್ಯದ ಪ್ರತಿ ಚರಣದ ಎರಡನೆಯ ಅಕ್ಷರ "ರ" ಅನುಕ್ರವಾಗಿ ಬಂದಿರುವುದರಿಂದ ಆದಿ ಪ್ರಾಸವೆಂದೂ, ಪ್ರತಿ ಚರಣದ ಅಂತ್ಯಕ್ಕೆ "ಯೊ" ಇರುವುದರಿಂದ ಅಂತ್ಯ ಪ್ರಾಸವೆಂದು ಗುರುತಿಸುತ್ತೇವೆ.

ಇದಕ್ಕೆ ಭಿನ್ನವಾಗಿ ಕೆಲವು ಪದಗಳಲ್ಲಿ ಕವಿ ಕೇವಲ ಅಂತ್ಯ ಪ್ರಾಸವನ್ನು ಮಾತ್ರ ಅನುಸರಿಸಿರುವನು.

"ಹಿಂದು ಜನರಿಗೆ ಅನಸಿದ ಈಶ್ವರಾ ।
ಮುಸಲ್ಮಾನರಿಗಾದಾನೊ ಫೀರಾ ।

ಹೇಳಿದ ಅಲಭೈರಿ ಆನಂದದಲಹರಾ ।
ಆತನಿರುವುದು ಹರಿಗಿರಿ ಊರಾ।"[೨೫]

ರಸ :

ಜಿಡ್ಡುಗಟ್ಟಿದ ಸಮಾಜವನ್ನು ಸುಧಾರಿಸುತ್ತಾ ಜನಸಾಮಾನ್ಯರಿಗೆ ಮಾನವ ಧರ್ಮದ ತಿಳುವಳಿಕೆ, ಅಧ್ಯಾತ್ಮ ಅರಿಕೆ ಹಾಗೂ ಜನರಿಗೆ ರಾಷ್ಟ್ರ ಪ್ರಜ್ಞೆ ಮೂಡಿಸುವುದು ಅಲಭೈರಿಯ ಉದ್ದೇಶವಾಗಿತ್ತು. ಅದು ಸಹಜವೂ, ಆಕರ್ಷಕವೂ ಆಗಬೇಕೆಂಬ ಇಚ್ಛೆ ಆತನಲ್ಲಿತ್ತು. ಅದಕ್ಕಾಗಿಯೆ ತನ್ನ ಪದಗಳಲ್ಲಿ ರಸವನ್ನ ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಅವನ ಒಟ್ಟು ಸಾಹಿತ್ಯ ಅಧ್ಯಾತ್ಮಿಕವಾಗಿರುವುದರಿಂದ ವಿಶೇಷವಾಗಿ ಭಕ್ತಿರಸ ವೀರರಸ ರಸವನ್ನು ಆತ ಬಳಸಿರುವನು.

೧] ಭಕ್ತಿರಸ (ಶಾಂತ):

ನವರಸಗಳಲ್ಲಿ ಒಂದಾದದ್ದು, ಶಾಂತರಸ. ಇದು ಮುಕ್ತಿಯ ಸನ್ಮಾರ್ಗವನ್ನು ತಿಳಿಸುವದು. ಮುಕ್ತಿ ಸಿಗುವುದು ಭಕ್ತಿಯಿಂದ, ಭಕ್ತಿ ಸಿಗುವುದು ಶಾಂತಿಯಿಂದ. ಇಂತಹ ಶಾಂತಿಯ ಮಾರ್ಗವನ್ನು ಶಾಂತರಸ ನೀಡುವುದು. ಅಲಭೈರಿ ತನ್ನ ಹಲವಾರು ಅಧ್ಯಾತ್ಮ ಪದಗಳಲ್ಲಿ ಇದನ್ನು ಹೇಳುತ್ತಾನೆ. ಕವಿ ಪದಗಳು ಮೇಲ ನೋಟಕ್ಕೆ ಕಟು ಟೀಕೆಯಂತೆ ಕಂಡರೂ ಅವು ಅಂತಿಮವಾಗಿ ಗುರುವಿನ ಮುಕ್ತಿಯ ಪಥವನ್ನು ತಿಳಿಸುತ್ತವೆ.

"ಭಕ್ತಿಯಿಂದ ಭಜಿಸುವವರಿಗೆ ಮುಕ್ತಿಯು ದೂರಿಲ್ಲಾ" ಈ ಜನಗೀತೆಯಲ್ಲಿ ವಿಷಯ ಸುಖಗಳಿಗೆ ಬಲಿಯಾದರೆ ಮಾನವ ಜನ್ಮವೇ ಹಾಳು ಎಂದು ಟೀಕಿಸಿರುವನು.

"ಭಕ್ತಿಯಿಂದ ಮಾಡಿದರೆ ಜಿವಧ್ಯಾನಾ – ಬಹುಮಾನಾ
ಆಗುವದು ತಿಳಿ ಪೂರ್ಣಾ ಭಕ್ತಿಯಿಂದೆ ।ಪಲ್ಲ।
ಭಕ್ತಿ ಇಲ್ಲ ಯುಕ್ತಿಯು ಇಲ್ಲಾ
ಮುಕ್ತಿ ಹಂಬಲ ಮೊದಲೆ ಇಲ್ಲಾ
ಇಂಥವನು ಪಾಮರನಾಗಿ। ಜೀವಿಸುವಾ ವಿಷಯ ಭೋಗಿ
ನಿಜ ಧರ್ಮದ ನೀತಿಯ ನೀಗಿ। ಜಿನ ಪಾದಕ್ಕವನು ದೂರಾಗಿ
ಮಾಡಿದೆಯೊ ಮೂಳಾ । ನರ ಜನ್ಮವೆ ಹಾಳಾ ॥೧॥"[೨೬]

ಇದು ತಿರಸ್ಕಾರದ ಧೋರಣೆ ನೀಡುತ್ತಿದ್ದರೂ ಇದರಲ್ಲಿ ಮುಕ್ತಿ ಅಂಶಗಳನ್ನು ನೀಡುತ್ತದೆ.

೨] ವೀರರಸ :

ವೀರರಸ ನವರಸಗಳಲ್ಲಿ ಒಂದು ವೀರ ವೃತ್ತಿಯ ಪ್ರದರ್ಶನವನ್ನು ಕಂಡು ಸಹೃದಯನಲ್ಲಿ ತೋರುವ ಆನಂದವೇ ವೀರರಸ. ಕರ್ಬಲಾ ಕದನದಲ್ಲಿ ವೀರರಸ ಪ್ರತಿಪಾದನೆಗೆ ಅವಕಾಶವಿದೆ. ಕವಿ ವೀರ ಅಭಿಮನ್ಯುವಿನಂತೆ ಹೋರಾಡಿದ ಅಕಬರನನ್ನು ಕರ್ಬಲ್ ಪದದಲ್ಲಿ ಹೀಗೆ ಬಣ್ಣಿಸಿದ್ದಾನೆ.

"ಚಂದ ಸಭೆಗೆ ಇಂದು ಪೇಳುವೆ
ಸಂದ ಜಂಗಿನದೊಂದು ಕತನಾ॥ಪ॥
(ಏರ) ಅಕಬರ ಸಣ್ಣಾಂವಾ ಒಂಬತ್ತು ವರ್ಷದಾಂವಾ।
ಹೋಗಿ ಕೇಳಿದ ತಮ್ಮ ಕಾಕಾನಾ । ... ಚಂದ .. ॥೧॥
ತಂದೆ ಕೇಳ್ವೆ ಇಂದು ಪೋಗುವೆ
ಕಂದನಾ ನಿಮ್ಮ ಹೊಂದಿ ಚರಣಾ।
(ಏರ) ಮನ್ನಿಸಿ ನೀವಿನ್ನಾ ಕಳುವಿರಿಯನ್ನನ್ನಾ।
ತೋರಿಸಿ ಶೌರ್ಯ ಮಾಡುವೆ ಕದನಾ । – ಚಂದ .. ॥೨॥"[೨೭]

ತಂದೆ–ತಾಯಿಗಳ ಅಪ್ಪಣೆ ಪಡೆದು ವೈರಿ ಸೈನಿಕರ ರುಂಡ ಚಂಡಾಡುವ ದೃಶ್ಯ ನಿಜಕ್ಕೂ ಮೈನವಿರೇಳಿಸುವಂತಹುದು.

➢ ಭಾಷೆ :

ಯಾವುದೇ ಒಂದು ಸಾಹಿತ್ಯ ಪ್ರಕಾರದ ಅಭಿವ್ಯಕ್ತಿಗೆ ಭಾಷೆ ಪೂರಕ. ಅದು ಅಂದಂದಿನ ಕಾಲ ಯುಗಧರ್ಮಕ್ಕನುಗುಣವಾಗಿ ಬಳಸಲ್ಪಡುತ್ತದೆ. ಜನಪದ ಸಾಹಿತ್ಯದ ಭಾಷೆ ತನ್ನದೆ ಆದ ಶಕ್ತಿಯನ್ನು ಒಳಗೊಂಡಿರುತ್ತದೆ. ಜನಪದ ಭಾಷೆ ಸರಳತೆಯಿಂದ ಕೂಡಿದ್ದು ಹೇಳಬೇಕಾದದನ್ನು ನೇರವಾಗಿ ಅಭಿವ್ಯಕ್ತಿಸುವುದು. ಹಾರೂಗೇರಿ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಇರುವುದರಿಂದ ಮರಾಠಿಯ ಪ್ರಭಾವ ಕವಿಯ ಮೇಲಾಗಿದೆ. ಉತ್ತರ ಕರ್ನಾಟಕದ ಹಲವು ಭಾಗಗಳನ್ನು ಮುಸಲ್ಮಾನರು ಬ್ರಿಟಿಷರು ಹಾಗೂ ಮರಾಠಿಗರು ಆಳಿದ್ದಾರೆ. ಅವರೆಲ್ಲರ ಭಾಷೆಯ ಪ್ರಭಾವ ಈ ನಾಡಿನ ಮೇಲಾಗಿದೆ. ಹೀಗಾಗಿ ಕವಿಯು ಉರ್ದು, ಮರಾಠಿ ಹಾಗೂ ಹಿಂದಿ ಜ್ಞಾನವನ್ನು ಪಡೆದುಕೊಂಡಿರುವನು.

ಈ ಎಲ್ಲ ಲಕ್ಷಣಗಳನ್ನು ಗಮನದಲ್ಲಿಟ್ಟು ಕವಿ ತನ್ನ ಕಾವ್ಯಗಳಲ್ಲಿ ಬಳಸಿರುವ ವೈಶಿಷ್ಟ್ಯಗಳನ್ನು ಈ ಕೆಳಗಿನಂತೆ ನೋಡಬಹುದು.

೧] **ಅ, ಉ, ಎ > ಆ ವರ್ಣ ವ್ಯತ್ಯಾಸ :**

ಪ್ರಖ್ಯಾತ > ಪ್ರಖ್ಯಾತಾ, ಏಕಾಂತ > ಏಕಾಂತಾ, ನದರ > ನದರಾ, ಆಟ > ಆಟಾ, ಹಣೆಬರಹ > ಹಣೆಬರಹಾ, ಆಧಾರ > ಆಧಾರಾ, ಗಂಭೀರ > ಗಂಭೀರಾ, ಘೋರ > ಘೋರಾ, ಸಂಸಾರ > ಸಂಸಾರಾ, ಜಗಳ > ಜಗಳಾ, ಸರಸ > ಸರಸಾ, ಗೋಳ > ಗೋಳಾ, ಬೇಸರ > ಬೇಸರಾ

ಸಿಸ್ತು > ಸಿಸ್ತಾ, ನೂರು > ನೂರಾ, ಯಾರು > ಯಾರಾ, ನೀರು > ನೀರಾ, ತಮ್ಮರು > ತಮ್ಮರಾ, ಹುಲ್ಲು > ಹುಲ್ಲಾ, ಕರಾರು > ಕರಾರಾ, ಹೆಸರು > ಹೆಸರಾ, ನಿಂತು > ನಿಂತಾ, ತುಸು > ತುಸಾ, ಭಕ್ತರು > ಭಕ್ತರಾ, ಕಿಮ್ಮತ್ತು > ಕಿಮ್ಮತ್ತಾ,

ರಚನೆ > ರಚನಾ, ಚರಿತೆ > ಚರಿತಾ, ಸ್ಮರಣೆ > ಸ್ಮರಣಾ, ವಾಸನೆ > ವಾಸನಾ, ಸಭೆ > ಸಭಾ, ಮಾತೆ > ಮಾತಾ, ಕಲೆ > ಕಲಾ, ಕಾಂತೆ > ಕಾಂತಾ,

ಅನುಕರಣವಾಚಿ ಪದಗಳು : –

ಒಂದು ಭಾಷೆಯ ಶಬ್ದವನ್ನು ವಿಶೇಷಾರ್ಥ ಪಡೆಯುವುದಕ್ಕೋಸ್ಕರ ಎರಡೆರಡು ಸಲ ಉಚ್ಚರಿಸಲಾಗುವುದು. ಇಂತಹ ಹಲವಾರು ಪದಗಳನ್ನು ಅಲಭೈರಿ ತನ್ನ ಕಾವ್ಯಗಳಲ್ಲಿ ಬಳಸಿರುವನು.

ಸುಳಿಸುಳಿ, ಹಿಡಿಹಿಡಿ, ಮುಡಿಮುಡಿ, ಪಡಿಪಡಿ, ನುಡಿನುಡಿ, ಕಳಿಕಳಿ, ಕೊರಿಕೊರಿ, ಪರಿಪರಿ, ಸರಿಸರಿ, ಕುಡಿಕುಡಿ, ಕಡಿಕಡಿ, ತಿಡಿತಿಡಿ, ಪಿಳಿಪಿಳಿ, ಬಡಿಬಡಿ, ದುಡಿದುಡಿ.

ಅನ್ಯಭಾಷಾ ಪದಗಳು :

ಕವಿ ತನ್ನ ಕಾವ್ಯಗಳಲ್ಲಿ ಹಲವಾರು ಅನ್ಯಭಾಷಾ ಪದಗಳನ್ನು ಬಳಸಿರುವನು. ಅವುಗಳನ್ನು ಸಂಸ್ಕೃತ, ಮರಾಠಿ, ಉರ್ದು, ಅರಬ್ಬಿ, ಪರ್ಶಿಯನ್ ಪದಗಳೆಂದು ಗುರುತಿಸಲಾಗುವದು.

೧] **ಸಂಸ್ಕೃತ ಪದಗಳು :**

ಸತ್ಯ, ಸತಿ, ಪತಿ, ಶೃಂಗಾರ, ಋಷಿ, ಶ್ರೇಷ್ಠ, ಸ್ವರ್ಗ, ವಿಘ್ನೇಶ್ವರ, ಸ್ನಾನ, ಅಂಡಾಂಡ, ಸ್ಮರಣಿ, ಸ್ತ್ರೀ, ತ್ಯಾಗ, ಲೋಕ, ಕರ್ತವ್ಯ, ಕುಶಲ, ಸ್ತೋತ್ರ, ಪ್ರತ್ಯಕ್ಷ, ಮಂತ್ರ, ದುಷ್ಟ, ವೇದೋಕ್ತಿ, ಶ್ರೀಹರಿ, ಬ್ರಹ್ಮಾಂಡ, ಮುಕ್ತಿ, ಶಿಷ್ಟ, ಭೃಷ್ಟ, ಧರಣಿ, ಪೃಥ್ವಿ

೨] **ಉರ್ದು ಪದಗಳು :**

ನಮಾಜ, ಹತಿಯಾರ, ಡಾಲ, ಡೋಲ, ಮಸಲತ್, ಹಜರತ್, ಇಸ್ಲಾಯಿಲ್, ಪಿಸ್ತೂಲ, ನಾಜೂಖಿ, ಲಡಾಯಿ, ಅಲೆಕುಂ.

೩] ಮರಾಠಿ ಪದಗಳು : ಮಜಲ, ಮುಕ್ತ, ವಾಹಿನಿ, ಚಾಕರಿ

೪] ಅರಬ್ಬಿ ಪದಗಳು :

ಅಲ್ಲಾಹ, ಇನಾಮ, ಸಲಾಂ, ಲಡಾಯಿ, ಫೌಜ, ನಮಾಜ, ಪೈಗಂಬರ, ಜವಾಬ, ಜಾಮೀನ, ಮುಸಲ್ಮಾನ, ಶಾಹೀರ, ಉಸ್ತಾದ, ಜರೂರ, ಕುರಾನ್, ಖಿಲ್ಲಾ.

೫] ಪರ್ಶಿಯನ್ ಪದಗಳು :

ರಿವಾಯತ್, ಸಿಪಾಯಿ, ಹಿಂದೂಸ್ಥಾನ, ಸವಾಲ್, ಫೌಜದಾರ್, ಬಂದೋಬಸ್ತ, ಖೈದಿ, ಫಕೀರ್.

ಈ ರೀತಿ ಅಲಭ್ಯೆರಿ ತಮ್ಮ ಕಾವ್ಯಗಳಲ್ಲಿ ಮರಾಠಿ, ಉರ್ದು, ಪರ್ಶಿಯನ್, ಸಂಸ್ಕೃತ ಮುಂತಾದ ಭಾಷಾ ಪದಗಳನ್ನು ಬಳಸಿದ್ದಾನೆ. ಇದರಿಂದ ಕವಿಗೆ ಸರ್ವ ಭಾಷೆಗಳ ಜ್ಞಾನವಿತ್ತೆಂದು ತಿಳಿಯುತ್ತದೆ.

ಒಟ್ಟಾರೆ ಕವಿ ರಚಿಸಿದ ಸಾಹಿತ್ಯವನ್ನು ನೋಡಲಾಗಿ ಕವಿಗಿರುವ ಅನುಭವ, ವಸ್ತುವಿನ ಆಯ್ಕೆ, ಪದಕಟ್ಟುವ ಕಲೆ, ನಿರೂಪಿಸುವ ತಂತ್ರಗಾರಿಕೆ, ಭಾಷೆ, ಭಾವ, ಛಂದಸ್ಸು, ಸ್ವರ ವ್ಯತ್ಯಾಸ ಹಾಗೂ ಅನ್ಯಭಾಷಾ ಪದಗಳ ಬಳಕೆ.. ಮುಂತಾದವುಗಳು ಸಾಹಿತ್ಯಿಕ ಮೌಲ್ಯಗಳಿಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಟಿಪ್ಪಣಿಗಳು:

೧. ದಯಾನಂದ ಸುಬ್ಬಣ್ಣವರ ಇವರಿಂದ ಪಡೆದ ಅಪ್ರಕಟಿತ ಲಾವಣಿ ಪದ.

೨. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೮೮.

೩. ಅದೇ, ಪುಟ–೫೩.

೪. ಅದೇ, ಪುಟ–೬೨.

೫. ಅದೇ, ಪುಟ–೧.

೬. ಅದೇ, ಪುಟ–೨.

೭. ದಯಾನಂದ ಸುಬ್ಬಣ್ಣವರ ಇವರಿಂದ ಪಡೆದದ್ದು.

೮. ಅದೇ,

೯. ಅದೇ,

೧೦. ಅದೇ,

೧೧. ಅದೇ,

೧೨. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೯೫.

೧೩. ಅ.ರಾ.ಸೇ (ಸಂ), ಶಿಶುನಾಳ ಶರೀಫರ ನೂರಾರು ತತ್ವಪದಗಳು, ಪುಟ–೩೪.

೧೪. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೬೬.

೧೫. ಅಲಭ್ಯೆರಿ ರಚಿತ ಅಪ್ರಕಟಿತ ತತ್ವಪದ.

೧೬. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೧.

೧೭. ದಯಾನಂದ ಸುಬ್ಬಣ್ಣವರ ಇವರಿಂದ ಪಡೆದ ಅಪ್ರಕಟಿತ ಲಾವಣಿ ಪದ.

೧೮. ಶ್ರೀರಾಮ ಇಟ್ಟಣ್ಣವರ: ಲಾವಣಿ, ಪುಟ–೩೪,೩೫.

೧೯. ಅಲಭ್ಯೆರಿ ರಚಿತ ಅಪ್ರಕಟಿತ ಲಾವಣಿ.

೨೦. ಅದೇ,

೨೧. ಅದೇ,

೨೨. ಅದೇ,

೨೩. ಅಲಭ್ಯೆರಿ ರಚಿತ ಅಪ್ರಕಟಿತ ರಿವಾಯತ್ ಪದ.

೨೪. ಆರ್. ಬಿ. ಚಿಲಮಿ (ಸಂ), ಅಲಭ್ಯೆರಿ ವಿರಚಿತ ತತ್ವ ಪದಗಳು, ಪುಟ–೩೫.

೨೫. ಅದೇ, ಪುಟ–೬೬.

೨೬. ಕವಿಯ ಅಪ್ರಕಟಿತ ತತ್ವಪದದಿಂದ ತೆಗೆದುಕೊಂಡಿದ್ದು.

೨೭. ಅಲಭ್ಯೈರಿ ರಚಿತ ಅಪ್ರಕಟಿತ ಕರ್ಬಲ್ ಪದ.

ಅಧ್ಯಾಯ: ಏಳು

ಸಮಾರೋಪ

ಅಧ್ಯಾಯ: ಏಳು

ಸಮಾರೋಪ

ಮನುಷ್ಯನ ಸ್ವಭಾವ ಮತ್ತು ವರ್ತನೆಗಳನ್ನು ಅರಿಯಲು ಜಾನಪದ ತುಂಬಾ ಸಹಾಯಕಾರಿ. ಪ್ರಾರಂಭದಿಂದಲೂ ಮನುಷ್ಯನ ಎಲ್ಲ ಚಟುವಟಿಕೆಗಳು ಮೌಖಿಕವಾಗಿಯೇ ಸಾಗುತ್ತಿತ್ತು. ಹೀಗೆ ಮೌಖಿಕ ಪರಂಪರೆಯಲ್ಲಿ ಜನ ಸಾಮಾನ್ಯರ ಬದುಕಿಗೆ ಸಂಬಂಧಿಸಿದ ಎಲ್ಲ ವಿವರಗಳು ಅವಿಚ್ಛಿನ್ನವಾಗಿ ಸಾಗಿ ಬಂದ ಜ್ಞಾನವೇ ಜಾನಪದ ಅನಿಸಿಕೊಳ್ಳುವುದು. ಜಾನಪದ ಶಿಷ್ಟ ಸಾಹಿತ್ಯದಷ್ಟು ಬೆಳೆಯದಿದ್ದರೂ ಸಹ ಅದು ಶ್ರೀಮಂತವಾಗಿದೆ. ಜಾನಪದ ಸಾಹಿತ್ಯದ ಕ್ಷೇತ್ರ ವಿಶಾಲ. ಅದು ವೈವಿಧ್ಯಪೂರ್ಣವಾದ ವಿಧಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದರಲ್ಲಿ ಉತ್ತರ ಕರ್ನಾಟಕದ ಬಾಗಲಕೋಟ, ಬಿಜಾಪೂರ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಜಾನಪದ ಹುಲುಸಾಗಿ ಬೆಳೆದಿದ್ದನ್ನು ಕಾಣುತ್ತೇವೆ. ಕ್ರಿ. ಶ. ಸುಮಾರು ೧೮೦೦-೧೯೮೦ ರ ಸುಮಾರಿಗೆ ಅನೇಕ ಜನಪದ ಕವಿಗಳು ಲಾವಣಿ, ತತ್ತ್ವಪದ, ಡೊಳ್ಳಿನ ಪದ, ಚೌಡಕಿ ಪದ ಮುಂತಾದ ಕಾವ್ಯರೂಪಗಳನ್ನು ಶ್ರೀಮಂತಗೊಳಿಸಿರುವರು.

ಇದೆ ಕಾಲಾವಧಿಯಲ್ಲಿ ರಾಯಬಾಗ ತಾಲೂಕಿನಲ್ಲಿ ಅನೇಕ ಜನಪದ ಕವಿಗಳು ಕಾವ್ಯ ಕೃಷಿಗೈದುದನ್ನು ಕಾಣುತ್ತೇವೆ. ಅದರಲ್ಲಿ ಅಲಭೈರಿ ಸುಪ್ರಸಿದ್ಧ. ಈತನು ಹಲವು ಪ್ರಕಾರದ ಸಾಹಿತ್ಯ ರಚಿಸಿ ಧಾರ್ಮಿಕ ಹಾಗೂ ಭಾಷಾ ಸಾಮರಸ್ಯವನ್ನು ಸಾರಿದ್ದಾನೆ. ಅಧ್ಯಾತ್ಮದ ನಿಲುವು ಹೊಂದಿದ ಕವಿ ತನ್ನ ಅನುಭಾವವನ್ನು ಅತ್ಯಂತ ಸರಳ ಶೈಲಿಯಲ್ಲಿ ಪ್ರತಿಪಾಧಿಸುತ್ತ ಜನ ಸಾಮಾನ್ಯರ ಅಂತರಂಗವನ್ನು ತಲುಪಿದ್ದಾನೆ. ಈತನ ತತ್ವಪದಗಳು ಮೊದಲ ನೋಟಕ್ಕೆ ಕಟು ಟೀಕೆಯಿಂದ ಕೂಡಿದ ವಿಡಂಬನೆಯಂತೆ ಕಂಡರೂ ಅದರಲ್ಲಿ ಬದುಕಿನ ಶುಚಿತ್ವದ ಕಾಳಜಿಯಿದೆ. ಜೊತೆಗೆ ಅಧ್ಯಾತ್ಮದ ಅಂಶಗಳನ್ನು ಒಳಗೊಂಡಿವೆ. ಈ ಹೊತ್ತಿಗೂ ಸಹ ಅಲಭೈರಿಯ ತತ್ವಪದಗಳನ್ನು ಭಜನಾ ಮಂಡಳಿಯರು ಹಾಡುವರು. ಕವಿ ಅಲಭೈರಿ ತಮ್ಮ ಪದಗಳಲ್ಲಿ ಸಮಾಜದ ಎಲ್ಲ ಬಗೆಯ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಸೆರೆ ಹಿಡಿದಿದ್ದಾನೆ. ಸಮಾಜದಲ್ಲಿದ್ದ ಡಾಂಬಿಕತನ, ಮೋಸ, ಹಿಂಸೆ, ಕ್ರೌರ್ಯ, ಅಸಮಾನತೆ, ಅಮಾನವೀಯತೆ ಕುರಿತು ಪ್ರತಿಪಾದಿಸಿದ್ದಾನೆ. ನೀತಿ ಬೋಧನೆಯಿಂದ ಸಮಾಜ ತಿದ್ದುವ ಕಾರ್ಯ ಮಾಡಿರುವನು.

ಲೌಕಿಕ ಜೀವನದಲ್ಲಿ ಅತಿಯಾದ ಮೋಹ ಇಟ್ಟುಕೊಳ್ಳದೆ ಇರುವುದರಲ್ಲಿಯೇ ಬದುಕನ್ನು ಹಸನಗೊಳಿಸಿಕೊಳ್ಳಲು ತಿಳಿಸುವನು. ಬಹುತೇಕ ಎಲ್ಲ ಅಧ್ಯಾತ್ಮವಾದಿಗಳು ಹೇಳುವುದು ಇದನ್ನೇ. ಗೃಹಸ್ಥಾಶ್ರಮದ ಬದುಕೂ ಹಿತ. ಕವಿ ಸಂಸಾರದಲ್ಲಿದ್ದುಕೊಂಡೆ ಪಾರಮಾರ್ಥಿಕ ಜ್ಞಾನ ಪಡೆದಿದ್ದಾನೆ. ನಿಜಗುಣ ಶಿವಯೋಗಿಗಳು, ಸರ್ಪ ಭೂಷಣರು, ಬಾಲಲೀಲಾ ಮಹಾಂತ ಶಿವಯೋಗಿಗಳು, ಶರೀಫರು... ಮುಂತಾದವರು ಜನಪದ

ಸಂವೇದನೆಯಿಂದ ಬಂದವರು. ಹಳ್ಳಿಗಳಲ್ಲಿ ಅಧಿಕಾರಿಗಳಾಗಿ ಜನರನ್ನು ಮೋಸ, ವಂಚನೆಯ ದಾರಿಗೆ ಎಳೆದು ಹಣ ಕಿತ್ತುಕೊಳ್ಳುವ ಗೌಡ, ಕುಲಕರ್ಣಿ ಹಾಗೂ ಶಾನುಭೋಗರನ್ನು ಕವಿ ಅಲಭೈರಿ ತನ್ನ ರಿವಾಯತ್ ಹಾಗೂ ಲಾವಣಿಗಳಲ್ಲಿ ವಿಡಂಬಿಸಿದ್ದಾನೆ.

ಅಲಭೈರಿಯ ಒಟ್ಟು ಸಾಹಿತ್ಯದಲ್ಲಿ ಅಧ್ಯಾತ್ಮ ಕೆನೆಗಟ್ಟಿದೆ. ಆ ಮೂಲಕವೇ ಸಾಮಾಜಿಕ, ಸಾಂಸ್ಕೃತಿಕ, ತಾತ್ವಿಕ ಹಾಗೂ ಸಾಹಿತ್ಯಿಕ ನೆಲೆಗಳನ್ನು ಗುರುತಿಸುವುದು ಯೋಗ್ಯವೆನಿಸುತ್ತದೆ. ಈತನು ತನ್ನ ಸಾಹಿತ್ಯದಲ್ಲಿ ಬಹಿರಂಗ ಶುದ್ಧಿಗಿಂತ ಅಂತರಂಗ ಶುದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾನೆ. ಕವಿ ತನ್ನ ಅಧಿದೈವ ಹಾಗೂ ಗುರು ಚನ್ನವೃಷಭನ ಗಾಢ ಪ್ರಭಾವಕ್ಕೆ ಒಳಗಾಗಿದ್ದಾನೆ. ಚನ್ನವೃಷಭೇಂದ್ರರರು ಅವಧೂತ ಪರಂಪರೆಗೆ ಸೇರಿದವರು. ಕವಿ ಬಹುದೇವೋಪಾಸನೆಯನ್ನು ಖಂಡಿಸಿದ್ದಾನೆ. ಗುರು ಸನ್ನಿದಾನ ಹಾಗೂ ಅಂತರಂಗದಲ್ಲಿ ದೇವರನ್ನು ಕಾಣಲು ತಿಳಿಸಿರುವನು. ತತ್ವಪದಕಾರರು ಗುರುವಿಗೆ ಶ್ರೇಷ್ಠ ಸ್ಥಾನ ನೀಡಿದಂತೆ ಕವಿ ಅಲಭೈರಿಯೂ ಸಹ ಸದ್ಗುರುವಿನ ಸಮ್ಮುಖದಲ್ಲಿ ಮುಕ್ತಿಯ ಮಾರ್ಗವನ್ನು ತಿಳಿಸಿದ್ದಾನೆ.

ಅಲಭೈರಿಯ ಪರಿಸರ ಮಹಾರಾಷ್ಟ್ರದ ಗಡಿ ಭಾಗದಲ್ಲಿನ ಕರ್ನಾಟಕ ಪ್ರದೇಶದಲ್ಲಿರುವುದರಿಂದ ಮರಾಠಿ ಭಾಷೆಯ ಪ್ರಭಾವ ಈ ಭಾಗದಲ್ಲಿ ಅತೀ ಹೆಚ್ಚು. ಉತ್ತರ ಕರ್ನಾಟಕದ ಬಹುಭಾಗವನ್ನು ಮುಸ್ಲಿಂರು ಆಳಿರುವುದರಿಂದ ಉರ್ದುವಿನ ಪ್ರಭಾವವು ಈ ನಾಡಿನ ಮೇಲಾಗಿದೆ. ಇದರಿಂದ ಕವಿ ಬಹುಭಾಷಾ ಪರಿಣತನಾಗಿದ್ದನು. ಈತನು ಕನ್ನಡ, ಹಿಂದಿ, ಮರಾಠಿ ಹಾಗೂ ಉರ್ದು ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾನೆ. ಅಲಭೈರಿ ಭಾಷಾ ಬಳಕೆಯಲ್ಲಿ ಮಡಿವಂತಿಕೆಯನ್ನು ತೋರದೆ ಸ್ಥಳಿಯ (ಗ್ರಾಮ್ಯ) ಭಾಷೆಯನ್ನೇ ದುಡಿಸಿಕೊಂಡಿರುತ್ತಾನೆ.

ಅಲಭೈರಿ ತಮ್ಮ ಲಾವಣಿಗಳಲ್ಲಿ ಪ್ರಾಣಿಗಳನ್ನು ಬಳಸಿಕೊಂಡು ಜನರ ಗುಣ–ಸ್ವಭಾವವನ್ನು ವಿಡಂಬಿಸಿದ್ದಾನೆ.

"ತಂದಿ–ತಾಯಿ ಮಾತ ಕೇಳ್ದ ಮೀರಿ
ಮುಂದ ಹೋಗಾಂವ ಅಡವಿ ಮೊಲದ ಮರಿ ।
ಧಡ್ಡರ ಮೇಲೆ ಖಟ್ಲೆ ಬೆಳೆಸಿ
ದುಡ್ಡ ತಿನ್ನಾಂವ ಬೆಂಡಲ ನರಿ ।"

ಕ್ಲಿಷ್ಟವಾದ ಪಾರಮಾರ್ಥವನ್ನು ಸರಳ, ಸಹಜವಾಗಿ ಸುಲಿದ ಬಾಳೆ ಹಣ್ಣಿನಂತೆ ಸಮಾಜಕ್ಕೆ ತಿಳಿಸಿದನು. ಅಲಭೈರಿ ಅಧ್ಯಯನಶೀಲ ಕವಿ ಎನ್ನುವುದಕ್ಕಿಂತ ಅವಲೋಕನದ ಕವಿ ಎನ್ನುವುದು ಹೆಚ್ಚು ಸೂಕ್ತ. ಉಳಿದಂತೆ ಭೌತಿಕದ ಬದುಕನ್ನು ಕವಿ ಗಮನಿಸುವುದು ಅದು

ಅವನ ವಾಸ್ತವ ಪ್ರಜ್ಞೆಗೆ ಅವನಿಗಿರುವ ಶ್ರದ್ಧೆಯನ್ನು ತೋರಿಸುತ್ತದೆ. ಅದಕ್ಕೆಂದೆ ಅಂದಿನ ಸಮಾಜದಲ್ಲಿನ ಭಟ್ಟಂಗಿತನಗಳನ್ನೆಲ್ಲ ದೇಶಿ ಶೈಲಿಯಲ್ಲಿ ಮಾರ್ಮಿಕವಾಗಿ ಪಡೆಮೂಡಿಸಿದ್ದಾನೆ.

ಒಂದು ವೃಕ್ಷದ ಬೀಜ ತನ್ನ ಪರಿಸರದ ಸಾರ ಸತ್ವವನ್ನು ಹೀರಿ ಹೆಮ್ಮರವಾಗಿ ಬೆಳೆದು ಮರಳಿ ಪರಿಸರಕ್ಕೆ ಹಣ್ಣು, ಹೂ, ಕಾಯಿ ಹಾಗೂ ನೆರಳನ್ನು ನೀಡುವಂತೆ ಕವಿ ಅಲಭೈರಿಯು ಸಹ ಈ ಸಮಾಜದಿಂದ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಸಾರಸತ್ವಗಳನ್ನು ಹೀರಿ ಫಲರೂಪವಾಗಿ ಅನೇಕ ಜನಪದ ಗೀತೆಗಳನ್ನು ರಚಿಸಿ ನಾಡಿಗೆ ನೀಡಿರುತ್ತಾನೆ. ಆ ಸಾಹಿತ್ಯ ಕೃತಿಗಳ ಮೂಲಕ ತನ್ನ ಉದ್ದೇಶ ಈಡೇರಿಸಿಕೊಂಡಿರುವನು. ಜನಪದ ಸಾಹಿತ್ಯದ ಅಧ್ಯಯನದ ಅವಶ್ಯಕತೆ ಹಾಗೂ ಯಂತ್ರ ಸಂಸ್ಕೃತಿಯಿಂದ ಜನಪದ ಸಾಹಿತ್ಯ ಹಾಗೂ ಜನಪದ ಕವಿಗಳ ಮೇಲಾದ ಪರಿಣಾಮವನ್ನು ಮತ್ತು ಬಾಗೆನಾಡಿನಲ್ಲಿ ಇದುವರೆಗೆ ಕೈಗೊಂಡ ಅಧ್ಯಯನ, ಕವಿ ಅಲಭೈರಿ ಸಾಹಿತ್ಯ ಕುರಿತಾದ ಅಧ್ಯಯನವನ್ನು ಈ ಪ್ರಬಂಧದಲ್ಲಿ ಅಧ್ಯಯನಕ್ಕೊಡ್ಡಲಾಗಿದೆ.

ಅಧ್ಯಾಯ ಎರಡಲ್ಲಿ ಅಲಭೈರಿಯ ಸಮಕಾಲೀನ ಜನಪದ ಕವಿಗಳನ್ನು ಪರಿಚಯಿಸುವ ಪ್ರಯತ್ನವಿದೆ. ಯಮನಪ್ಪ ಛಲವಾದಿ, ನಿಡಗುಂದಿಯ ಶರಣಗುಂಡ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ಅಲಖನೂರಿನ ರಾಮು ಪೂಜೇರಿ, ಪರಮಾನಂದವಾಡಿಯ ಮೀರಾಸಾಬ ಮುಲ್ಲಾ, ಶಿರಗೂರಿನ ಕಲ್ಮೇಶ ಮಹಾರಾಜರು, ಜಲಾಲಪುರದ ರಾಚೋಟಿ, ಮುಗಳಖೋಡದ ರಾಚಯ್ಯ, ಕುಡಚಿಯ ಶಿಭೈರಿ, ಚಿಂಚಲಿಯ ಶಂಕರದಾಸ ಮುಂತಾದ ಜನಪದ ಕವಿಗಳು ಅಲಭೈರಿಯ ಸಮಕಾಲೀನರು. ಇವರು ಅಲಭೈರಿ ಸಾಹಿತ್ಯದಷ್ಟು ವೈವಿಧ್ಯಮಯ ಸಾಹಿತ್ಯ ರಚಿಸದಿದ್ದರೂ ಸಹ ಒಂದೊಂದು ಕಾವ್ಯ ಕ್ಷೇತ್ರದಲ್ಲಿ ಇವರ ಸಾಧನೆಯು ಅಮೋಘವಾಗಿದೆ. ಬಾವಾನ ಸವದತ್ತಿ ಸಿದ್ದಪ್ಪ ಡೊಳ್ಳಿನ ಹಾಡುಗಳಲ್ಲಿ ಮಾಡಿದ ಸೇವೆ ಶ್ರೇಷ್ಠ. "ಹಾಡುಗಾರ ಸಿದ್ದಪ್ಪಜ್ಜ" ಎಂದೇ ಪ್ರಸಿದ್ಧನಾಗಿದ್ದನು. ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ಕಂಚಿನ ಪದಕ ಹಾಗೂ ಕಡಗವನ್ನು ಪಡೆದುಕೊಂಡಿದ್ದಾನೆ. ಆದರೆ ಇಂದು ಈತನ ಹೆಸರು ಹಾಗೂ ಸಾಹಿತ್ಯ, ಜನತೆಯ ಮುಖ್ಯವಾಹಿನಿಯಿಂದ ದೂರ ಉಳಿದದ್ದು ದುರದೃಷ್ಟಕರ. ಇವರೆಲ್ಲರ ಸಾಹಿತ್ಯವನ್ನು ಅಲಭೈರಿ ಸಾಹಿತ್ಯದೊಂದಿಗೆ ತೌಲನಿಕ ವಿವೇಚನೆಗೆ ಒಳಪಡಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕವಿಯ ಜೀವನ ದರ್ಶನವನ್ನು ನೀಡಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಕವಿಯ ಪ್ರಕಟಿತ ಸಾಹಿತ್ಯ, ಐದರಲ್ಲಿ ಅಪ್ರಕಟಿತ ಸಾಹಿತ್ಯದ ವಿವಿಧ ಆಯಾಮಗಳನ್ನು ನೋಡಲಾಗಿದೆ. ಈ ಅಧ್ಯಾಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಅಧ್ಯಾಯ ಆರರಲ್ಲಿ ಅಲಭೈರಿ ಸಾಹಿತ್ಯದ ಒಟ್ಟು ಮೌಲ್ಯ ನಿರ್ಧರಿಸಲಾಗಿದೆ.

ಈ ಅಧ್ಯಯನ ಕ್ಷೇತ್ರ ಕಾರ್ಯ ಆಧಾರಿತವಾಗಿರುವದರಿಂದ ನನ್ನ ಅಧ್ಯಯನ ಅವಧಿಯಲ್ಲಿ ಹಲವಾರು ಕವಿಯ ಶಿಷ್ಯರನ್ನು ಭೇಟಿ ಮಾಡಿ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ಅಲಭ್ಯೆರಿಯ ಸಂಪೂರ್ಣ ಸಾಹಿತ್ಯ ನನಗೆ ದೊರಕದೆ ಉಳಿದಿರಬಹುದು. ಆದರೆ ಕವಿ ಕಾವ್ಯದ ಮೌಲ್ಯಮಾಪನಕ್ಕೆ ಇಷ್ಟು ಸಾಕೆನಿಸುತ್ತದೆ.

ಅಧ್ಯಯನದ ಫಲಿತಗಳು:

೧. ಅಲಭ್ಯೆರಿ ಒಬ್ಬ ಅಗಾಧ ಪ್ರತಿಭಾವಂತ ಆಶುಕವಿಯಾಗಿದ್ದನು. ಅಂದಾಗ ಮಾತ್ರ ವಿವಿಧ ಕಾವ್ಯ ರೂಪಗಳನ್ನು ಕಟ್ಟಲಿಕ್ಕೆ ಸಾಧ್ಯ. ಕುಂತ ಕುಂತಲ್ಲಿಯೇ ಹತ್ತಾರು ಪದ ರಚಿಸುವ ಕಾವ್ಯತ್ವ ಶಕ್ತಿ ಅವನಲ್ಲಿತ್ತು.

೨. ಅಲಭ್ಯೆರಿಯ ಅಪ್ರಕಟಿತ ಸಾಹಿತ್ಯ ಇನ್ನೂ ಸಾಕಷ್ಟಿದ್ದು ಅದನ್ನು ಹುಡುಕಬೇಕಿದೆ.

೩. ಅಲಭ್ಯೆರಿ ಒಬ್ಬ ಜನಪದ ಕವಿ ಮಾತ್ರವಾಗಿರದೇ, ಜನಪದ ಸಾಹಿತ್ಯ ಪರಂಪರೆಯ ಹರಿಕಾರ. ಬಾಗೆನಾಡಿನಲ್ಲಿಯೇ ಪ್ರಸಿದ್ಧ ಜನಪದ ಕವಿ. ಈ ಸಂದರ್ಭದಲ್ಲಿ ಬಾಗೆನಾಡಿನಲ್ಲಿ ಅನೇಕ ಜನಪದ ಪ್ರತಿಭೆಗಳನ್ನು ಕಾಣುತ್ತೇವೆ. ಇವರಲ್ಲಿ ಬಹುಸಂಖ್ಯಾತ ಜನ ಅಲಭ್ಯೆರಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಕೆಲವರು ಅಲಭ್ಯೆರಿಯನ್ನು ಗುರುವನ್ನಾಗಿ ಸ್ವೀಕರಿಸಿರುವರು.

೪. ಅಲಭ್ಯೆರಿ ಒಬ್ಬ ಅಧ್ಯಯನಶೀಲ ಕವಿ. ಅವನ ಜ್ಞಾನದಾಹ ಹಿರಿದು. ಆತನ ಸಾಹಿತ್ಯದಲ್ಲಿ ಜೈನ ಧರ್ಮ, ವಚನ ಸಾಹಿತ್ಯ, ದಾಸ ಸಾಹಿತ್ಯ, ಶಾಸ್ತ್ರ ಪುರಾಣ, ರಾಮಾಯಣ-ಮಹಾಭಾರತದ ಪ್ರಭಾವ ಸಾಕಷ್ಟಿದೆ. ಇದು ಒಬ್ಬ ನಿರಂತರ ಓದುಗನಿಗೆ ಮಾತ್ರ ಸಾಧ್ಯ

೫. ಡಾ. ಎಂ. ಬಿ. ನೇಗಿನಹಾಳರ 'ನೇಗಿನಹಾಳ ಪ್ರಬಂಧಗಳು' ಎಂಬ ಗ್ರಂಥದಲ್ಲಿ 'ತತ್ವಪದಕಾರ ಅಲಭ್ಯೆರಿ' ಎಂಬ ಲೇಖನವಿದೆ. ಇದು ಅಲಭ್ಯೆರಿ ಕುರಿತು ಪ್ರಕಟಗೊಂಡ ಪ್ರಥಮ ಲೇಖನ. ನೇಗಿನಹಾಳರು ಕೆಲವು ಮೌಲಿಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ನೇಗಿನಹಾಳರು, ಅಲಭ್ಯೆರಿ 'ಶಿವ ಪಾರಿಜಾತ' ರಚಿಸಿರುವುದಾಗಿ ಪ್ರತಿಪಾದಿಸಿರುತ್ತಾರೆ. ಆದರೆ 'ಶಿವ ಪಾರಿಜಾತ' ಅಲಭ್ಯೆರಿಯ ರಚನೆಯಲ್ಲ. ಇದನ್ನು ಅಲಭ್ಯೆರಿಯ ಶಿಷ್ಯರಲ್ಲೊಬ್ಬರಾದ ಕಾಡಾಪುರದ ಬಿ.ಎ.ಸಾಲಿ ಶಾಸ್ತ್ರಿಗಳು ರಚಿಸಿರುವರು. ಅವರು ಅಲಭ್ಯೆರಿಯ ಅನುಗ್ರಹದಿಂದ ಈ ಕೃತಿ ರಚಿಸಿರುವರು.

೬. ನೇಗಿನಹಾಳರು ಇದೇ ಲೇಖನದಲ್ಲಿ ಅಲಭ್ಯೆರಿ ಗೊಂದಲಿಗರ ಪದ ರಚಿಸಿರುವುದಾಗಿ ಪ್ರತಿಪಾದಿಸಿರುತ್ತಾರೆ. ಆದರೆ ಕ್ಷೇತ್ರ ಕಾರ್ಯದ ವೇಳೆಯಲ್ಲಿ ಒಂದೂ ಗೊಂದಲಿಗರ ಪದ ದೊರಕಿರುವುದಿಲ್ಲ.

೭. ನೇಗಿನಹಾಳರು ಧರಿಗೊಂಡನನ್ನು ಲಾವಣಿಕಾರನೆಂದು ಪರಿಚಯಿಸುತ್ತಾರೆ. ಆದರೆ ಧರಿಗೊಂಡನಿಗೆ ಅಧ್ಯಾತ್ಮದ ಗೀಳಿತ್ತು. ವಿವಿಧ ಕಸುಬುಗಳನ್ನು ಮಾಡುತ್ತಿದ್ದನೇ ವಿನಾ ಲಾವಣಿಕಾರನಲ್ಲ.

ಇವು ಅಧ್ಯಯನದ ಫಲಿತಗಳು.

ಮೌಲ್ಯಮಾಪನ:

೧. ಅಲಭ್ಯೆರಿ ಜೈನ ಧರ್ಮೀಯನಾಗಿದ್ದರೂ, ಸಮನ್ವಯ ಸಮದೃಷ್ಟಿಯ ಕವಿ.

ಆತನ ಶ್ರೀ ಜಿನಭಕ್ತಿ ಗೀತೆಗಳಲ್ಲಿ ಜೈನಧರ್ಮವನ್ನು, ಡೊಳ್ಳಿನ ಹಾಡುಗಳಲ್ಲಿ ಹಾಲುಮತವನ್ನು, ಕರ್ಬಲ್/ರಿವಾಯತ್‌ಗಳಲ್ಲಿ ಇಸ್ಲಾಂ ಧರ್ಮವನ್ನು, ತತ್ವಪದ ಹಾಗೂ ಲಾವಣಿಗಳಲ್ಲಿ ವೀರಶೈವ ಹಾಗೂ ದಾಸ ಸಂಪ್ರದಾಯ ತತ್ವಗಳನ್ನು ಪ್ರತಿಪಾದಿಸಿರುವನು.

೨. ಅಲಭ್ಯೆರಿ ಸಾಹಿತ್ಯ ಮೌಲ್ಯಮಾಪನ ಬಾವುಕ ನೆಲೆಯಲ್ಲಿ ನಡೆದಿದ್ದು, ವಸ್ತು ನಿಷ್ಠ ಅಧ್ಯಯನವನ್ನು ಇಲ್ಲಿ ಪೂರೈಸಲಾಗಿದೆ.

೩. ಅವನ ಕೃತಿಗಳನ್ನು ಗಂಭೀರ ಅಧ್ಯಯನಕ್ಕೊಳಪಡಿಸಿದಾಗ ಸಾಧಾರಣವೆನಿಸುತ್ತವೆ. ಕೆಲವು ಮೌಲಿಕವಾಗಿವೆ. ಆದರೆ ಬಹಳಷ್ಟು ಸ್ತೋಪಜ್ಞತೆಯಿಂದ ಕೂಡಿಲ್ಲ. ಅವನಿಗೆ ಕವಿತೆ ಕಟ್ಟುವ ಕಲೆ ಕರಗತವಾಗಿತ್ತು. ಹೀಗಾಗಿ ಅಲ್ಲಿ ವಸ್ತು ಮುಖ್ಯವಾಗದೇ, ತಂತ್ರ ಅಥವಾ ರೂಪ ಪ್ರಾಧಾನ್ಯತೆ ಪಡೆಯುತ್ತದೆ.

ಅಧ್ಯಯನದ ಹೊಸ ಸಾಧ್ಯತೆಗಳು :

೧. ವೈವಿಧ್ಯಮಯ ಸಾಹಿತ್ಯ ಸೇವೆ ಸಲ್ಲಿಸಿದ ಕವಿ ಅಲಭ್ಯೆರಿ ಸಮಗ್ರ ಸಾಹಿತ್ಯದ ಪ್ರಕಟಣೆಯ ಅಗತ್ಯವಿದೆ.

೨. ಅಲಭ್ಯೆರಿ ಸಾಹಿತ್ಯದ ಅಧ್ಯಯನದ ಮಾದರಿಯಲ್ಲಿಯೇ ರಾಚೋಟಿ, ಮೀರಾಮುಲ್ಲಾ, ಮುಗಳಖೋಡದ ರಾಚಯ್ಯ ಮೊದಲಾದ ಕವಿಗಳ ಕುರಿತು ಸಂಶೋಧನೆ ನಡೆಯಬೇಕು.

೩. ಕವಿ ಅಲಭ್ಯೆರಿ "ವೈರಾಗ್ಯ ವಿಜಯ" ಎಂಬ ಜನಪದ ಬಯಲಾಟವನ್ನು ಬರೆದಿದ್ದಾನೆ. ಆದರೆ ಅದು ಅಪೂರ್ಣವಾಗಿದೆ. ಅಲಭ್ಯೆರಿಯ ಬಯಲಾಟವನ್ನು ಹುಡುಕಬೇಕಿದೆ.

ಅಲಭ್ಯೆರಿ ಕವಿಯು ಜೀವನದಲ್ಲಿ ಸಾಧಿಸಿದ ಅಧ್ಯಾತ್ಮಿಕ ನೋಟದ ಒಳನೋಟಗಳನ್ನು ಅವರ ತತ್ತ್ವಪದ, ಮತ್ತಿತರ ಸಾಹಿತ್ಯಕ ಕೊಡುಗೆಗಳ ವಿವರಗಳು ಆರನೇ ಅಧ್ಯಾಯದಲ್ಲಿವೆ. ಯಾವುದೇ ಅಧ್ಯಯನಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಅದರಲ್ಲಿಯೂ ಜನಪದ ಕವಿಗಳ ಕುರಿತ ಅಧ್ಯಯನದ ಆಕರಗಳು ನೆಲದ ಮರೆಯ ನಿಧಾನದಂತೆ ಕಾಲದಲ್ಲಿ ಅಡಗಿಕೊಂಡಿದ್ದು ಯಾವುದೇ ಸಂದರ್ಭದಲ್ಲಿ ಹೊರಬರುತ್ತವೆ. ಆದ್ದರಿಂದ ಈಗ ನಮ್ಮ ಮುಂದಿರುವ ಅಲಭ್ಯೆರಿಯ ಸಾಹಿತ್ಯವನ್ನು ಗಮನಿಸಿ, ಅನೇಕ ಮೌಲ್ಯಮಾಪನ ಮಾಡಬೇಕಿದೆ. ಈ ಎಲ್ಲ ಇತಿ–ಮಿತಿಗಳ ನಡುವೆ ಪ್ರಸ್ತುತ ಮಹಾಪ್ರಬಂಧವನ್ನು ಕಟ್ಟಿಕೊಡಲು ಯತ್ನಿಸಲಾಗಿದೆ.

****

ಅನುಬಂಧಗಳು

೧. ವಂಶಾವಳಿ

೨. ಸಂದರ್ಶನ

೩. ಭಾವಚಿತ್ರಗಳು


೪. ಅಪ್ರಕಟಿತ ಸಾಹಿತ್ಯ


೫. ಪರಾಮರ್ಶನ ಗ್ರಂಥಗಳು

ಅನುಬಂಧ-೧

ವಂಶಾವಳಿ

ರಾಯಗೊಂಡ [ಅಜ್ಜ]





ಅನುಬಂಧ–೨


ಕ್ಷೇತ್ರ ಕಾರ್ಯದಲ್ಲಿ ಸಂದರ್ಶಿಸಿದ ವ್ಯಕ್ತಿಗಳ ವಿವರ

ಅ.ನಂ	ಸಂದರ್ಶಕರ ಹೆಸರು	ಸಂದರ್ಶನದ ಸ್ಥಳ	ವಯಸ್ಸು	ವೃತ್ತಿ
೦೧.	ಸತ್ಯಪ್ಪಾ ಶಿವಪ್ಪ ಸರಿಕರ	ಹಾರೂಗೇರಿ	೮೫	ಕೃಷಿ
೦೨.	ಸೈದು ಹಣಮಂತ ಉಪ್ಪಾರ	ಹಾರೂಗೇರಿ	೬೮	ಕೃಷಿ
೦೩.	ಅಪ್ಪಾಸಾಬ ಆಲಗೂರ [ಸರ್]	ಹಾರೂಗೇರಿ	೪೫	ಶಿಕ್ಷಕರು
೦೪.	ಬಾಮು ರುಸ್ತುಂ ಜಮಾದರ	ಹಾರೂಗೇರಿ	೪೩	ಕೃಷಿ
೦೫.	ಬಾಸ್ಕರ್ ಪತ್ತಾರ	ಹಿಡಕಲ್	೬೬	ಉಪನ್ಯಾಸಕರು
೦೬.	ಗುರುಪಾದ ಬಾಬು ವಾಳಕೆ	ಪರಮಾನಂದವಾಡಿ	೭೬	ಕೃಷಿ
೦೭.	ಸಿದ್ಧಪ್ಪ ಹುಲಗಬಾಳ	ಹಾರೂಗೇರಿ	೪೦	ವ್ಯಾಪಾರಸ್ಥರು
೦೮.	ಗುಲಾಬ ಜಮಾದಾರ	ಹಾರೂಗೇರಿ	೭೦	ವ್ಯಾಪಾರಸ್ಥರು
೦೯.	ಬಸಲಿಂಗಪ್ಪ ಗೋ. ಕರಿಬಸಪ್ಪಗೋಳ	ಸಂಕೋನಹಟ್ಟಿ	೯೦	ಕೃಷಿ
೧೦.	ಸಿದ್ದಪ್ಪಣ್ಣಾ ನಾಗನೂರ [ಭಜನಾ]	ಹಾರೂಗೇರಿ	೬೦	ಸಾಮಾಜಿಕ ಕಾರ್ಯಕರ್ತರು
೧೧.	ರಾಮು ಸುಬ್ಬಣ್ಣವರ	ಹಾರೂಗೇರಿ ಕ್ರಾಸ್	೬೫	ಕೃಷಿ
೧೨.	ಮಲ್ಲಪ್ಪ ನಾಗನೂರ	ಹಾರೂಗೇರಿ	೫೦	ಕೃಷಿ
೧೩.	ರಾಮಪ್ಪ ರಬಕವಿ	ಹಾರೂಗೇರಿ	೫೨	ಕೃಷಿ
೧೪.	ಅವಣ್ಣಾ ಹಳ್ಳೂರ	ಹಾರೂಗೇರಿ	೭೦	ಕೃಷಿ
೧೫.	ಎ.ಕೆ. ಜಯವೀರ	ಖೇಮಲಾಪೂರ	೩೬	ಉಪನ್ಯಾಸಕ
೧೬.	ಟಿ.ಎಸ್. ವಂಟಗೂಡಿ	ಹಿಡಕಲ್	೩೭	ಉಪನ್ಯಾಸಕ
೧೭.	ಸುರೇಶ ಮಲಕಾರಿ ರಬಕವಿ	ಹಾರೂಗೇರಿ	೩೫	ಶಿಕ್ಷಕ

೧೮.	ಮಹಾದೇವ ಪಡಚಿ	ಅಳಗವಾಡಿ	೭೦	ಗಾಯಕ ಕಲಾವಿದ
೧೯.	ಶಂಭಾಜಿ ನಿಂಬಾಳ್ಕರ [ಸರ್]	ಜಲಾಲಪುರ	೪೪	ಶಿಕ್ಷಕ
೨೦.	ದಯಾನಂದ ರಾ. ಸುಬ್ಬಣ್ಣವರ	ಹಾರೂಗೇರಿ	೩೫	ವ್ಯಾಪಾರಸ್ಥರು
೨೧.	ಅಣ್ಣಪ್ಪಾ ರಾ. ಸುಬ್ಬಣ್ಣವರ	ಹಾರೂಗೇರಿ	೫೦	ವ್ಯಾಪಾರಸ್ಥರು
೨೨.	ರಾಮು ಡಂಗಿ [ಜನತಾ ಪ್ಲಾಟ್]	ಹಾರೂಗೇರಿ	೫೦	ಕೃಷಿ
೨೩.	ಶಾಸಪ್ಪಾ ಸರಿಕರ [ಜೋಗಮ್ಮಾ]	ಹಾರುಗೇರಿ	೭೦	ಸಾಮಾಜಿಕ ಕಾರ್ಯಕರ್ತರು
೨೪.	ಸಂಗಪ್ಪಾ ಮಲ್ಲಪ್ಪಾ ಸದಲಗಿ	ಹಾರೂಗೇರಿ	೫೮	ಕೃಷಿ
೨೫.	ಕರೆಪ್ಪಾ ಶಿವರಾಯಿ ಪೂಜೇರಿ	ಹಾರೂಗೇರಿ	೪೮	ಕೃಷಿ
೨೬.	ಭೀಮಪ್ಪಾ ಶಿಡ್ಲೆಪ್ಪಾ ಪೂಜೇರಿ	ಹಾರೂಗೇರಿ [ಜನತಾ ಪ್ಲಾಟ್]	೧೧೦	ದುರ್ಗಾ ದೇವಿ ಮಂದಿರದ ಅರ್ಚಕರು
೨೭	ರಾಮಪ್ಪ ಭೀಮಪ್ಪ ಚೌಗಲಾ	ಅಲಖನೂರ	೬೫	ಕೃಷಿ
೨೮	ಷರೀಫ ಮೀರಾಸಾಬ ಮುಲ್ಲಾ	ಪರಮಾನಂದವಾಡಿ	೬೨	ಕೃಷಿ
೨೯	ಗುರುಸಿದ್ಧ ನಿಂಗಪ್ಪ ದಳವಾಯಿ	ಶಿರಗೂರ	೫೮	ಕೃಷಿ
೩೦	ಅಪ್ಪಯ್ಯ ಸಿದ್ದಪ್ಪ ಸವದತ್ತಿ	ಸವದತ್ತಿ	೭೫	ಕೃಷಿ
೩೧	ಶರಮುದ್ದೀನ ತುರಾಬ ಜಮಾದಾರ	ದಿಗ್ಗೇವಾಡಿ	೬೦	ಕೃಷಿ
೩೨	ಸಿದ್ರಾಮ ಎತ್ತಿನಮನಿ	ಮುಗಳಖೋಡ	೬೪	ಕೃಷಿ
೩೩	ಮೈನುದ್ದೀನ ತುರಾಬ ಜಮಾದಾರ	ದಿಗ್ಗೇವಾಡಿ	೬೨	ಕೃಷಿ
೩೪	ಮಹಮ್ಮದ್‌ಹನೀಫ್ ಜಮಾದಾರ	ಪರಮಾನಂದವಾಡಿ	೫೮	ಕೃಷಿ
೩೫	ಸದಾಶಿವ ಬಡಿಗೇರ	ನಿಡಗುಂದಿ	೪೮	ಬಡಿಗತನ
೩೬	ಶಿವಪ್ಪ ಲಕ್ಷ್ಮಣ ಪೂಜೇರಿ	ಅಲಖನೂರ	೮೦	ಕೃಷಿ

ಅನುಬಂಧ-೩

ಭಾವಚಿತ್ರಗಳು



ಕವಿ : ಅಲಭ್ಯೆರಿ



ಅಲಭ್ಯೆರಿ ಗುರು : ಶ್ರೀ ಚನ್ನವೃಷಭೇಂದ್ರ ಮಹಾಸ್ವಾಮಿಗಳು



ಶ್ರೀ ಚನ್ನವೃಷಭೇಂದ್ರ ಲೀಲಾಮಠ, ಹಾರೂಗೇರಿ



ಲೀಲಾಮಠದ ಮುಂದಿರುವ ಅಗ್ನಿ ಕುಂಡ



ಕವಿ ಗೆಳೆಯ : ಪಾಂಡುರಂಗ ಶ್ರೀನಿವಾಸ ಕಟ್ಟಿ



ವಗ್ಗರ ಮಠ, ಹಾರೂಗೇರಿ

ಅನುಬಂಧ – ೪

:: ಅಲಭ್ಯೆರಿಯ ಅಪ್ರಕಟಿತ ಸಾಹಿತ್ಯ ::

	ಸಾಹಿತ್ಯದ ರೂಪ	ಸಂಖ್ಯೆ
೧.	ಜನಪದ ಬಯಲಾಟಗಳು [ವೈರಾಗ್ಯ ವಿಜಯ]	ಅಪೂರ್ಣ
೨.	ಸತ್ಯಹರಿಶ್ಚಂದ್ರ [ಬಯಲು ನಾಟಕ]	ಅಪೂರ್ಣ ?
೩.	ಹೇಮರಡ್ಡಿ ಮಲ್ಲಮ್ಮ [ಬಯಲು ನಾಟಕ]	ಅಪೂರ್ಣ ?
೪.	ಅಭಂಗ	೨೦
೫.	ಸ್ತೋತ್ರ ಪದ	೦೮
೬.	ಚೌಡಕಿ ಪದ	೦೩
೭.	ಹಂತಿಪದ	೦೬
೮.	ಡೊಳ್ಳಿನ ಪದ	೪೫
೯.	ಕರ್ಬಲ್ / ರಿವಾಯತ್ ಪದ	೧೨೦
೧೦.	ಲಾವಣಿ	೭೦
೧೧.	ತತ್ವಪದ / ಭಜನಾ ಪದ	೧೧೦

ಅನುಬಂಧ–೫

ಪರಾಮರ್ಶನ ಗ್ರಂಥಗಳು

ಕ್ರ.ಸಂ	ಕೃತಿಗಳ ಹೆಸರು	ಲೇಖಕರು	ಪ್ರಕಾಶಕರು	ವರ್ಷ
೦೧	ಅರಿವಿನ ದೀವಿಗೆ	ಡಾ. ಎನ್. ಪ್ರವೀಣಚಂದ್ರ	ಐಬಿಹೆಚ್ ಪ್ರಕಾಶನ, ಬೆಂಗಳೂರು	೨೦೧೨
೦೨	ಅಮೂಲ್ಯ ಜಾನಪದ	ಡಾ. ಬಸವರಾಜ ಪೋಲಿಸ್ ಪಾಟೀಲ	ಅಮರ ಪ್ರಕಾಶನ, ಗುಲಬರ್ಗಾ	೨೦೦೬
೦೩	ಉತ್ತರ ಕರ್ನಾಟಕದ ಜಾನಪದ ಪದ್ಯ ಸಾಹಿತ್ಯ	ಡಾ. ಶಿವಾನಂದ ಗುಬ್ಬಣ್ಣವರ	ಅಕ್ಷಯ ಪ್ರಕಾಶನ, ಧಾರವಾಡ	೨೦೦೧
೦೪	ಕನಕದಾಸ ಜೀವನ ವಿಚಾರ	ಪ್ರೊ॥ ಜ್ಯೋತಿ ಹೊಸೂರ	ಕಾಲಗತಿ ಪ್ರಕಾಶನ, ರಾಯಬಾಗ	೧೯೮೩
೦೫	ಕತ್ತಿಯಂಚಿನ ದಾರಿ	ಡಾ. ರಹಮತ್ ತರಿಕೇರೆ	ಅನುಭವ ಪ್ರಕಾಶನ, ಬೆಂಗಳೂರು	೨೦೦೬
೦೬	ಕನ್ನಡಲದಲ್ಲಿ ಕೈವಲ್ಯ ಸಾಹಿತ್ಯ	ಡಾ. ಎಚ್. ತಿಪ್ಪೇರುದ್ರ ಸ್ವಾಮಿ	ಚಿತ್ತರಗಿ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಳ, ಇಲಕಲ್ಲ	೧೯೮೩
೦೭	ಕರ್ನಾಟಕದಲ್ಲಿ ಜೈನಧರ್ಮ	ಕೆ.ಶಾರದಾ	ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ	೨೦೦೬
೦೮	ಕನ್ನಡ ಸಾಹಿತ್ಯ ಕೋಮು ಸೌಹಾರ್ದತೆ	ಡಾ.ವ್ಹಿ. ಜಿ. ಪೂಜಾರ	ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ	೨೦೦೬
೦೯	ಗೆಜ್ಜ ನುಡಿದಾವ [ಜನಪದ ತ್ರಿಪದಿ ಸಂಗ್ರಹ]	ಬಾಲಕೃಷ್ಣ ಜಂಬಗಿ	ಜಾನಪದ ಮಂಟಪ, ರಾಯಬಾಗ	೧೯೮೧
೧೦	ಜನಪದ ಸಿರಿ	ಡಾ. ಆರ್.ಬಿ.ಚಿಲಮಿ	ಶ್ರೀ. ವೀರಭದ್ರಶ್ವೇರ ಪ್ರಕಾಶನ, ಹಾರೂಗೇರಿ	೨೦೦೮
೧೧	ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ	ಡಾ. ವೀರಣ್ಣ ದಂಡೆ	ಕವಿಮಾರ್ಗ ಪ್ರಕಾಶನ, ಕಲಬುರ್ಗಿ	೨೦೦೪
೧೨	ಜನಪದ ಮಹಾಕಾವ್ಯ	ಡಾ. ತೀ.ನಂ. ಶಂಕರನಾರಾಯಣ	ಶೋಭಾ ಪ್ರೋಸೆಸ್ ಪ್ರಿಂಟರ್ಸ, ಡರ್ಬೆ, ಪುತ್ತೂರ, ದ.ಕ.	೧೯೯೬

೧೩	ಜಾತಿಗಾರರ ಜಾತಕ	ಪ್ರೊ|| ಜ್ಯೋತಿ ಹೊಸೂರ	ಕಾಲಗತಿ ಪ್ರಕಾಶನ, ರಾಯಬಾಗ	೧೯೮೫
೧೪	ಜಾನಪದ ವ್ಯಾಸಂಗ [ವಿಮರ್ಶಾತ್ಮಕ ಲೇಖನಗಳು] ಭಾಗ-೧	ಡಾ. ಸೋಮಶೇಖರ ಇಮ್ರಾಪೂರ	ಚೇತನಾ ಪ್ರಕಾಶನ, ಧಾರವಾಡ	೧೯೭೯
೧೫	ಜಾನಪದ ಸ್ವರೂಪ ಮತ್ತು ಸಾಹಿತ್ಯ	ಪ್ರೊ|| ಡಿ.ಲಿಂಗಯ್ಯ ಡಾ. ಕೆ.ಆರ್.ಸಂಧ್ಯಾರೆಡ್ಡಿ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೨೦೦೬
೧೬	ಜಾನಪದ ಪ್ರಚಾರ	ಡಾ. ನಿಂಗಣ್ಣ ಸಣ್ಣಕ್ಕಿ	ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು	೨೦೦೨
೧೭	ಜಾನಪದ ಭಿತ್ತಿ	ಡಾ. ವೈ.ಸಿ. ಭಾನುಮತಿ	ಶ್ರೀ. ರಾಜೇಂದ್ರ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್ , ಮೈಸೂರು	೧೯೯೬
೧೮	ಜಾನಪದ ಸಿರಿ	ಡಾ. ಬಿ.ಎಸ್.ಸ್ವಾಮಿ	ದಾಮಿನಿ ಸಾಹಿತ್ಯ, ಬೆಂಗಳೂರು	೨೦೦೬
೧೯	ಜಾನಪದ ಪರಿಚಿಂತನ	ಡಾ. ಅಂಬಳಿಕೆ ಹಿರಿಯಾಣ	ಸಿರಾ ಪಬ್ಲಿಷಿಂಗ್ ಹೌಸ್, ಮೈಸೂರು	೨೦೦೮
೨೦	ಜಾನಪದ ಸಮಾಹಿತ	ಡಾ. ಅಂಬಳಿಕೆ ಹಿರಿಯಣ	ದಾಮಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು	೨೦೦೫
೨೧	ಜಾನಪದ ವೈಭವ [ಸಂಶೋಧನಾ ಲೇಖನಗಳು]	ಡಾ. ನಿಂಗಣ್ಣ ಸಣ್ಣಕ್ಕಿ	ಪೂರ್ಣಿಮಾ ಪ್ರಕಾಶನ, ಗೋಕಾಕ	೧೯೯೧
೨೨	ಜಾನಪದ ಪರಿಭಾವನೆ [ಜಾನಪದ ಸಂಶೋಧನಾತ್ಮಕ ಲೇಖನಗಳು]	ಡಾ. ಜಿ.ಆರ್. ತಿಪ್ಪೇಸ್ವಾಮಿ	ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ	೨೦೦೧
೨೩	ಜಾನಪದ ವೈವಿಧ್ಯ	ಡಾ. ಕೆ.ಆರ್.ದುರ್ಗಾದಾಸ	ಪುಷ್ಪಾಮಾಲಿಕಾ ಪುಸ್ತಕ ಪ್ರಕಾಶನ, ಮೈಸೂರು	೨೦೦೯
೨೪	ಡೊಳ್ಳಿನ ಹಾಡುಗಳ ಸಮೀಕ್ಷೆ	ಜ್ಯೋತಿ ಹೊಸೂರ	ಕಾಲಗತಿ ಪ್ರಕಾಶನ, ರಾಯಬಾಗ	೨೦೦೩
೨೫	ತೀರ್ಥಂಕರ ಮಹಾವೀರ ಮತ್ತು ಅವರ ಸರ್ವೋದಯ ತೀರ್ಥ	ಡಾ. ಹುಕುಂ ಚಂದ್ ಭಾರಿಲ್ಲಾ ಅನು-ಡಿ ಪದ್ಮನಾಭ್ ಶರ್ಮ ಭುವನಹಳ್ಳಿ	ಶ್ರೀ. ದಿಗಂಬರ ಜೈನ ಸ್ವಾಧ್ಯಾಯ ಮಂಡಳ, ಬೆಂಗಳೂರು	೧೯೭೯

೨೮	ದಿನಕರ ದೇಸಾಯಿ : ಬದುಕು ಬರಹ [ಮಹಾಪ್ರಬಂಧ]	ಡಾ. ಶ್ರೀಪಾದ ಶೆಟ್ಟಿ	ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ	೧೯೯೫
೨೭	ದು.ನಿಂ. ಬೆಳಗಲಿ ಬದುಕು-ಬರಹ ಒಂದು ಅಧ್ಯಯನ	ಡಾ. ಎಸ್.ಬಿ. ಮಟೋಳ	ವಿಮೋಚನ ಪ್ರಕಾಶನ, ಅಥಣಿ	೨೦೦೩
೨೮	ನಾಗಲಿಂಗಸ್ವಾಮಿ ತತ್ವಪದಗಳು	ಸಂ.ಎಸ್.ಆರ್. ಚನ್ನವೀರಪ್ಪ	ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೦
೨೯	ನೇಗಿನಹಾಳರ ಪ್ರಬಂಧಗಳು	ಡಾ. ಎಂ.ಬಿ.ನೇಗಿನಹಾಳ	ಪ್ರಸಾರಂಗ, ಕನ್ನಡ ವಿ.ವಿ. ಹಂಪಿ	೧೯೯೯
೩೦	ಪರಿಪೂರ್ಣ	ಜಿ.ಟಿ. ಸ್ವಾಮಿ	ಶ್ರೀ. ಚನ್ನವೃಷಭೇಂದ್ರ ಸದ್ಭಕ್ತ ಮಂಡಳ, ಹಾರೂಗೇರಿ	೨೦೦೦
೩೧	ಬ.ಗಿ. ಯಲ್ಲಟ್ಟಿ ಸಮಗ್ರ ಸಾಹಿತ್ಯ [ಮಹಾಪ್ರಬಂಧ]	ಡಾ. ಆರ್.ಬಿ. ಚಿಲಮಿ	ಶ್ರೀ. ವೀರಭದ್ರಶ್ವೇರ ಪ್ರಕಾಶನ, ಹಾರೂಗೇರಿ	೨೦೦೭
೩೨	ಭಗವಾನ್ ಮಹಾವೀರ ಉಪದೇಶ ಮತ್ತು ಪರಂಪರೆ	ಡಾ. ವಿಧ್ಯಾದರ ಜೋಹರಾ ಪುರಕರ್ ಅನು:ಎಸ್.ಪಿ.ಪಾಟೀಲ	ಸನ್ಮತಿ ಪ್ರಕಾಶನ, ಬಾಹುಬಲಿ ಜಿಲ್ಲಾ ಕೊಲ್ಲಾಪೂರ	೧೯೭೮
೩೩	ಬಸವೋತ್ತರ ಶರಣರು	ಬಿ.ಎಸ್.ಸ್ವಾಮಿ	ನವೀನ ಪ್ರಕಾಶನ, ಬೆಂಗಳೂರು	೧೯೯೬
೩೪	ಬಂಡಾಯ ಜಾನಪದ	ಡಾ. ಬಸವರಾಜ ಸಬರದ	ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ	೨೦೦೬
೩೫	ಬಾಗೆನಾಡಿನ ಜನಪದ ಕಲಾವಿದರು [ಮಹಾಪ್ರಬಂಧ]	ಡಾ.ಸಿದ್ದು ಹುಲ್ಲೋಳ	ಸಿದ್ಧಕೀರ್ತಿ ಪ್ರಕಾಶನ, ಮುಗಳಖೋಡ	೨೦೧೧
೩೬	ಬೆರೆಸಿ ಇಟ್ಟೇನ ಬೆಲ್ಲನೆನಗಡಲಿ	ಪ್ರೊ॥ ಜ್ಯೋತಿ ಹೊಸೂರ	ಜಾನಪದ ಮಂಟಪ ಪ್ರಕಾಶನ, ರಾಯಬಾಗ	೧೯೯೬
೩೭	ಮುಕ್ತಿಯ ಪರಿಕಲ್ಪನೆ	ಡಾ. ಎಸ್.ಆರ್.ಚನ್ನವೀರಣ್ಣ	ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ	೨೦೦೬
೩೮	ರಾಷ್ಟ್ರೀಯ ಲಾವಣಿಗಳು	ಸಂ.ಡಾ. ಶಿವಾನಂದ ಗುಬ್ಬಣ್ಣವರ	ಅಕ್ಷಯ ಪ್ರಕಾಶನ, ಧಾರವಾಡ	೨೦೦೩

೩೯	ರಾಯಬಾಗ ತಾಲೂಕಿನ ಹಾಲುಮತದ ದೈವಗಳು [ಎಂ.ಫಿಲ್. ನಿಬಂಧ]	ಟಿ.ಎಸ್.ವಂಟಗೂಡಿ	ವಿದ್ಯಾ ಪ್ರಕಾಶನ, ಹಿಡಕಲ್	೨೦೧೦
೪೦	ರಿವಾಯತ್‌ಗಳ ಅನುಸಂಧಾನ	ಪ್ರೊ॥ ಹಸನ್ ಬಿ ಬೀಳಗಿ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೨೦೦೬
೪೧	ರಿವಾಯತಗಳು	ಸಂ. ಪ್ರೊ॥ ಶ್ರೀಮತಿ. ಎಚ್.ಎಂ.ಬೀಳಗಿ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೧೯೮೨
೪೨	ಲಾವಣಿ : ಸವಾಲ್ ಜವಾಬ್ ಪದಗಳು	ಡಾ. ಹರಿಶ್ಚಂದ್ರ ದಿಗ್ಸಂಗಿಕರ್	ಪ್ರಸಾರಂಗ, ಕನ್ನಡ ವಿ.ವಿ. ಹಂಪಿ	೨೦೦೫
೪೩	"ಲಾವಣಿ" ಒಂದು ಹಕ್ಕಿನೋಟ	ಕಮಲ ಹೆಮ್ಮಿಗೆ	ಲಾವಣ್ಯ ಮುದ್ರಣ, ಬೆಂಗಳೂರು	೧೯೯೬
೪೪	ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ	ಡಾ. ಶಿವಾನಂದ ಗುಬ್ಬಣ್ಣವರ	ಅಕ್ಷಯ ಪ್ರಕಾಶನ, ಧಾರವಾಡ	೧೯೯೧
೪೫	ಲಾವಣಿ	ಡಾ. ಶ್ರೀರಾಮ ಇಟ್ಟಣ್ಣವರ	ಮನೋಹರ ಮುದ್ರಣಾಲಯ, ಧಾರವಾಡ	೧೯೮೫
೪೬	ವಚನ ಸಾಹಿತ್ಯ: ವೈಚಾರಿಕ ಅಧ್ಯಯನ	ಡಾ. ಹೆಚ್. ತಿಪ್ಪೇರುದ್ರಸ್ವಾಮಿ	ಕನ್ನಡ ಅಧ್ಯಯನ ಪೀಠ, ಧಾರವಾಡ	೧೯೭೮
೪೭	ವಿಠ್ಠಲ ಸಂಪ್ರದಾಯ	ಡಾ. ವಿಠ್ಠಲರಾವ್ ಗಾಯಕ್ವಾಡ್	ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ	೨೦೦೫
೪೮	ಶರಣರ ಅನುಭಾವ ಸಾಹಿತ್ಯ	ಡಾ. ಹೆಚ್.ತಿಪ್ಪೇರುದ್ರಸ್ವಾಮಿ	ಪ್ರಕಾಶಕರು, ಡಿ.ವಿ.ಕೆ.ಮೂರ್ತಿ. ಮೈಸೂರು	೧೯೯೧
೪೯	ಶೃಂಗಾರದ ಲಾವಣಿಗಳು	ಡಾ. ಬಿ.ಬಿ. ಬಿರಾದರ	ಜ್ಯೋತಿ ಪ್ರಕಾಶನ, ಧಾರವಾಡ	೧೯೯೮
೫೦	ಹುಲಕುಂದ ಲಾವಣಿ ಸಂಪ್ರದಾಯ ಒಂದು ಅಧ್ಯಯನ [ಮಹಾಪ್ರಬಂಧ]	ಡಾ. ಬಿ.ಎಸ್. ಭಜಂತ್ರಿ	ಚೈತನ್ಯ ಪ್ರಕಾಶನ, ಪಂಚಗಾಂವ	೨೦೦೨
೫೧	ಹೆಸರ ಹೇಳ್ತನಿ ಒಡಪಕಟ್ಟಿ	ಪ್ರೊ॥ ಜ್ಯೋತಿ ಹೊಸೂರ	ಜಾನಪದ ಮಂಟಪ ಪ್ರಕಾಶನ, ರಾಯಬಾಗ	೧೯೭೧